ಜೋಕುಮಾರ : ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕ
ನಾಗವರ್ಮ ಜೆ.ಎಚ್.

ಮಾರ್ಗದರ್ಶಕರು
ಡಾ. ಹೆಬ್ಬಾಲೆ ಕೆ.ನಾಗೇಶ್
ಹಿ.ಶ್ರೇ.ಅಧ್ಯಾಪಕರು

ಜಾನಪದ ಅಧ್ಯಯನ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸೆಪ್ಟೆಂಬರ್ ೨೦೦೬

185

ಜೋಕುಮಾರ : ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕ
ನಾಗವರ್ಮ ಜಿ.ಎಚ್.

ಮಾರ್ಗದರ್ಶಕರು
ಡಾ. ಹೆಬ್ಬಾಲೆ ಕೆ.ನಾಗೇಶ್
ಹಿ.ಶ್ರೇ.ಅಧ್ಯಾಪಕರು

ಜಾನಪದ ಅಧ್ಯಯನ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸೆಪ್ಟೆಂಬರ್ ೨೦೦೬

ಸಂಶೋಧಕರ ಪ್ರಮಾಣ ಪತ್ರ

ಜೋಕುಮಾರ : ಒಂದು ಅಧ್ಯಯನ ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ.ಪದವಿಗಾಗಿ ಡಾ.ಹೆಬ್ಬಾಲೆ ಕೆ.ನಾಗೇಶ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಜಾನಪದ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ನಾಗವರ್ಮ ಜಿ.ಎಚ್.
ಸಂಶೋಧಕ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : ೦೪.೦೯.೨೦೦೬
ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರ ಪ್ರಮಾಣ ಪತ್ರ

ನಾಗವರ್ಮ ಜಿ.ಎಚ್. ಅವರು ಜೋಕುಮಾರ : ಒಂದು ಅಧ್ಯಯನ ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ.ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಜಾನಪದ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಪ್ರಬಂಧವು ಅವರ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಹೆಬ್ಬಾಳೆ ಕೆ.ನಾಗೇಶ್
೧/೯/೦೬.

ಡಾ. ಹೆಬ್ಬಾಲೆ ಕೆ.ನಾಗೇಶ್
ಮಾರ್ಗದರ್ಶಕರು ಮತ್ತು ಹಿ.ಶ್ರೇ.ಅಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : ೦೪.೦೯.೨೦೦೬
ಸ್ಥಳ : ವಿದ್ಯಾರಣ್ಯ

ಪರಿವಿಡಿ

ಪ್ರಸ್ತಾವನೆ ೧-೨೫

ಅಧ್ಯಾಯ ಒಂದು ೨೬-೩೮

ಅಧ್ಯಯನದ ಉದ್ದೇಶ, ಮಹತ್ವ ಮತ್ತು ವ್ಯಾಪ್ತಿ

ಅಧ್ಯಾಯ ಎರಡು ೩೯-೫೦

ಪದಸೃಷ್ಟಿ, ಸಮಷ್ಟಿ ಪ್ರಜ್ಞೆ-ಕನ್ನಡ ಸಾಹಿತ್ಯ ಕೃತಿಗಳಲ್ಲಿ
ಜೋಕುಮಾರನ ಉಲ್ಲೇಖ

ಅಧ್ಯಾಯ ಮೂರು ೫೧-೭೭

ಜೋಕುಮಾರನ ಹುಟ್ಟು, ಸ್ವರೂಪ ಮತ್ತು ಅಂತ್ಯ

ಅಧ್ಯಾಯ ನಾಲ್ಕು ೭೮-೧೩೪

ಅ. ಜೋಕುಮಾರನ ಪರಿಕಲ್ಪನೆ, ಜೀವನಾವರ್ತನ, ವಾರ್ಷಿಕಾವರ್ತನ

ಆ. ಜೋಕುಮಾರನ ಆಚರಣೆ, ಸಂಪ್ರದಾಯ, ಧಾರ್ಮಿಕತೆ

ಇ. ಜೋಕುಮಾರನ ಮತ್ತು ಇತರ ದೈವಗಳ ಸಂಬಂಧ-ತೌಲನಿಕ ಅಧ್ಯಯನ

ಅಧ್ಯಾಯ ಐದು ೧೩೫-೧೯೦

ಅ. ಜೋಕುಮಾರನ ಹಾಡುಗಳು

ಆ. ಕಥೆಗಳು

ಇ. ನಂಬಿಕೆಗಳು

ಈ. ನಿಷೇಧಗಳು

ಉ. ಪಡೆನುಡಿಗಳು

ಅಧ್ಯಾಯ ಆರು ೧೯೧-೨೧೧

ಮೌಖಿಕ ಚರಿತ್ರೆ

ಸಮಾಕಾಲೀನತೆ, ಸ್ಥಿತ್ಯಂತರ

ಅಧ್ಯಾಯ ಏಳು ೨೧೨-೨೧೫

ಸಮಾರೋಪ

ಅನುಬಂಧ ೨೧೬-

ನಕ್ಷೆಗಳು

ವಕ್ತೃಗಳ ವಿವರ

ಗ್ರಂಥಋಣ

ಛಾಯಾಚಿತ್ರಗಳು

ಪ್ರಸ್ತಾವನೆ

ಪ್ರಸ್ತಾವನೆ

ಪಾಶ್ಚಾತ್ಯ ವಿದ್ವಾಂಸರಿಂದ ಮಾನ್ಯತೆಯನ್ನು ಪಡೆದ ಜಾನಪದವು ಇಂದು ಎಲ್ಲೆಡೆ ತನ್ನ ಅಸ್ತಿತ್ವವನ್ನು ಗುರುತಿಸಿಕೊಂಡಿದೆ. ಅದು ತನ್ನದೇ ಆದ ದೃಷ್ಟಿಕೋನವನ್ನು ಹೊಂದಿದೆ. ಜಾನಪದಕ್ಕೆ ಇಂದು ವಿಶ್ವಾದ್ಯಂತ ಮನ್ನಣೆದೊರಕಿದೆ. ಒಂದು ಕಾಲದಲ್ಲಿ ಜಾನಪದವನ್ನು ನಿರ್ಲಕ್ಷಿಸುವ ಪರಿಪಾಠವನ್ನಿಟ್ಟುಕೊಂಡಿದ್ದರು. ಜಾನಪದವು ಹಳೆಯ ಕಾಲದ ವಿಷಯಗಳನ್ನು ತಿಳಿಸುತ್ತದೆ. ಅದು ಅಧ್ಯಯನಕ್ಕೆ ಯೋಗ್ಯವೆ? ಅಧ್ಯಯನದ ಅವಶ್ಯಕತೆ ಇದೆಯೆ? ಮುಂತಾದ ಪ್ರಶ್ನೆಗಳೂ ಸಹ ಉದ್ಭವಿಸಿದ್ದವು. ಶ್ರೇಷ್ಠ ಪಂಡಿತರೂ ಸಹ ಇದರ ಬಗ್ಗೆ ಅನಾದರಣೀಯ ಧೋರಣೆಯನ್ನು ತಳೆದಿದ್ದರು. ಕಾರಣ ಅದು ಸಮಾಜದ ನಿಮ್ನ ವರ್ಗಗಳಿಂದ ಬೆಳೆದು ಬಂದ ಸಾಹಿತ್ಯ ಪ್ರಕಾರ ಎಂಬ ನಿಲುವಿನಿಂದ.

ಕಾಲಘಟ್ಟಗಳು ಉರುಳಿದ ಹಾಗೆ ಅಧ್ಯಯನಾಸಕ್ತಿಯನ್ನು ರೂಢಿಸಿಕೊಳ್ಳತೊಡಗಿದರು. ಅಷ್ಟಾಗಿ ಪ್ರಭಾವ ಬೀರದ ಈ ಕ್ಷೇತ್ರದ ಮೇಲೆ ಪಾಶ್ಚಾತ್ಯ ವಿದ್ವಾಂಸರು ಭಾರತಕ್ಕೆ ನಾನಾ ಕಾರ್ಯ ನಿಮಿತ್ತವಾಗಿ ಬಂದರು. ಅವರ ಆಸಕ್ತಿ ಇಂಡಿಯಾದ ಸಂಸ್ಕೃತಿ, ಆಚಾರ-ವಿಚಾರ, ಪದ್ಧತಿ, ರೂಢಿ-ನಂಬಿಕೆ, ಸಂಪ್ರದಾಯ-ಆಚರಣೆಗಳ ಮೇಲೆ ತಿರುಗಿತು. ಅದರ ಪರಿಣಾಮವಾಗಿ ಅವೆಲ್ಲವುಗಳನ್ನು ರಕ್ಷಿಸಿ, ಉಳಿಸಿ-ಬೆಳೆಸುವ ಕ್ರಮಕೈಗೊಂಡರು. ಅವರಿಗೆ ನಿಜವಾಗಿ ಭಾರತದಲ್ಲಿರುವ ಜಾನಪದದ ಮಹತ್ವ ತಿಳಿದಿತ್ತು. ಆ ಕಾರಣಕ್ಕಾಗಿ ಅವರು ಅವುಗಳನ್ನು ಸಂರಕ್ಷಿಸುವ ಕಾರ್ಯಕೈಗೊಂಡರು. ಭಾರತೀಯರಿಗೆ ಈ ವಿಷಯ ತಿಳಿದಿದ್ದು ಪಾಶ್ಚಾತ್ಯರಿಂದಲೇ ಎಂದು ಹೇಳಿದರೆ ತಪ್ಪಾಗುವುದಿಲ್ಲ. ನಮ್ಮಲ್ಲಿರುವ ಜಾನಪದ ಸಾಮಗ್ರಿಗಳ ಮಹತ್ವವನ್ನು ತಿಳಿಸಿಕೊಟ್ಟ ಆ ವಿದ್ವಾಂಸರಿಗೆ ಭಾರತೀಯರ ನಮನಗಳು ಸಲ್ಲಬೇಕು.

ಇಂದು ಈ ಕ್ಷೇತ್ರ ಬೃಹದಾಕಾರವಾಗಿ ಬೆಳೆದ ಹೆಮ್ಮರವಾಗಿದೆ. ಅದರ ಒಂದೊಂದು ರೆಂಬೆ-ಕೊಂಬೆಗಳೂ ಸಹ ಜ್ಞಾನದ ದಿಗಂತವನ್ನು ಸೂಚಿಸುತ್ತವೆ. ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲೂ ಇದು ಅವಿಭಾಜ್ಯ ಅಂಗದಂತೆಯೇ ಇದೆ. ನಮ್ಮ ಅರಿವಿಗೆ ಬಂದೋ-ಬಾರದೆಯೋ ಇದು ಕೆಲಸ ನಿರ್ವಹಿಸುತ್ತದೆ. ಜಾನಪದವು ಮಾನವನ ಸಮಸ್ತ ಜೀವನದಲ್ಲಿ ಸಮ್ಮಿಲನಗೊಂಡಿದೆ. ಯಾವುದೇ ವಿಷಯದಲ್ಲಿ ಅದು ತನ್ನ ಪ್ರಭಾವವನ್ನು ಬೀರುತ್ತದೆ. ಅಂದ ಮೇಲೆ ಇದರ ಪ್ರಭಾವ ಪರಿಣಾಮ ಎಷ್ಟರ ಮಟ್ಟಿಗೆ ಇದೆಯೆಂದು ನಾವು ತಿಳಿದುಕೊಳ್ಳಬಹುದು.

ಇದು ಎಲ್ಲ ಶಾಸ್ತ್ರಗಳಿಗೆ ತಾಯಿಬೇರು. ಮನುಷ್ಯನ ಉಗಮದೊಂದಿಗೆ ಇದರ ಉಗಮವಾಯಿತು. ಕಾಲಕಾಲಕ್ಕೆ ತಕ್ಕಂತೆ ಇದು ವಿಕಾಸವನ್ನು ಹೊಂದಿತು. ಪ್ರಾರಂಭದ ದಿನಗಳಲ್ಲಿ ಬೆರಳೆಣಿಕೆಯಷ್ಟು

ವಿದ್ವಾಂಸರು ಈ ಕ್ಷೇತ್ರದಲ್ಲಿ ಕೆಲಸಗಳನ್ನಾರಂಭಿಸಿದರು. ಅವರು ಸಾಕಷ್ಟು ಜನರಿಗೆ ಇದರ ಅಧ್ಯಯನದ ಅವಶ್ಯಕತೆಗಳನ್ನು ತಿಳಿಹೇಳಿದರು. ದಕ್ಷಿಣ ಕರ್ನಾಟಕದಲ್ಲಿ ಜಾನಪದ 'ಮೇರುಪರ್ವತ', 'ಜಾನಪದ ಜಂಗಮ', 'ಜಾನಪದ ದಿಗ್ಗಜ' ಎಂಬ ಅನೇಕ ಬಿರುದುಗಳನ್ನು ಪಡೆದುಕೊಂಡ ಡಾ.ಜಿ.ಶಂ.ಪರಮಶಿವಯ್ಯ ಹಾಗೂ ಉತ್ತರ ಕರ್ನಾಟಕದಲ್ಲಿ ಡಾ.ಚಂದ್ರಶೇಖರ ಕಂಬಾರ, ಡಾ.ಬಿ.ಎಸ್ .ಗದ್ದಗಿ ಮಠ ಅವರಂತಹ ಪ್ರಕಾಂಡ ಪಂಡಿತರು, ವಿದ್ವಾಂಸರುಗಳಿಂದ ಜಾನಪದ ಅಧ್ಯಯನ ಕ್ಷೇತ್ರ ಹೆಚ್ಚು ಶ್ರೀಮಂತಗೊಂಡು ದೇಶದೆಲ್ಲೆಡೆ ನಾನಾ ಸಂಶೋಧನಾಸಕ್ತರ ಗಮನ ಸೆಳೆಯುವಲ್ಲಿ ಸಹಕಾರಿಯಾಯಿತು. ಈ ಕ್ಷೇತ್ರವೂ ಸಹ ಉಳಿದ ಕ್ಷೇತ್ರಗಳಂತೆ ಫಲವತ್ತಾದುದು. ಇದರಲ್ಲಿ ಅಧ್ಯಯನ ನಡೆಸಲು ಅನೇಕ ಸಂಗತಿಗಳಿವೆ ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಟ್ಟರು.

ಮೊದಮೊದಲು ಜನಪದದ ಒಂದೆರಡು ಪ್ರದರ್ಶನ ಕಲೆಗಳಲ್ಲಿ ಅಧ್ಯಯನ ಮಾಡಲು ತೊಡಗಿದರು. ಆ ನಂತರ ದಿನಗಳಲ್ಲಿ ಜಾನಪದದ ಸಮಗ್ರ ವಿಷಯಗಳಾದ ಆಚಾರ-ವಿಚಾರ, ರೂಢಿ ನಂಬಿಕೆ, ಸಂಪ್ರದಾಯಗಳನ್ನೂ ಒಂದು ಸಮುದಾಯದ ಅಧ್ಯಯನ ಅವರ ರೀತಿ, ರಿವಾಜುಗಳನ್ನು ಅಧ್ಯಯನದ ಚೌಕಟ್ಟಿಗೆ ಒಳಪಡಿಸಿದರು. ಒಂದು ಸಣ್ಣ ವಿಷಯವನ್ನು ಆಯ್ದುಕೊಂಡು ಅದರಲ್ಲಿ ಹುದುಗಿರುವ ಸಮಸ್ತ ಜಾನಪದವನ್ನು ಸೂಕ್ಷ್ಮ ಅಧ್ಯಯನ (micro-study) ಮಾಡುವುದರ ಮೂಲಕ ಹೊರಜಗತ್ತಿಗೆ ತಿಳಿಸಿಕೊಟ್ಟರು.

ಒಂದು ಕಾಲದಲ್ಲಿ ಅವಜ್ಞೆಗೆ ಗುರಿಯಾಗಿದ್ದ ಜಾನಪದ ಅಧ್ಯಯನ ಕ್ಷೇತ್ರವು ಇಂದು ಅತ್ಯಂತ ಪ್ರಾಚುರ್ಯತೆಯನ್ನು ಪಡೆದಿದೆ. ೭೦ ರ ದಶಕದಲ್ಲಿಂದ ಇದು ವಿಕಾಸವನ್ನು ಹೊಂದಿ ಇಂದು ಬೃಹದಾಕಾರವಾಗಿ ಬೆಳೆದ ಹೆಮ್ಮರವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಪ್ರತಿಯೊಂದು ವಿಚಾರದಲ್ಲಿ ಹೊರನೋಟಕ್ಕೆ ಕಾಣುವ ಅಂಶಗಳಿರುತ್ತವೆ. ಅಂತಹ ಅಂಶಗಳನ್ನು ಶಿಸ್ತುಬದ್ಧ ಅಧ್ಯಯನಕ್ಕೊಳಪಡಿಸಿದಾಗ ಹೊರನೋಟದಲ್ಲಿ ಕಾಣಸಿಗುವ ಅಂಶಗಳಲ್ಲಿ ಅನೇಕಾನೇಕ ಮಹತ್ವಪೂರ್ಣ ವಿವರಗಳು ಹುದುಗಿರುತ್ತವೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ವಿದೇಶೀ ವಿದ್ವಾಂಸರು ಭಾರತವು ಜಾನಪದದ ಶ್ರೀಮಂತ ಕಣಜ ಇಲ್ಲಿರುವಷ್ಟು ಸಂಶೋಧನಾವಕಾಶವು ಜಗತ್ತಿನ ಬೇರೆ ಕಡೆಯಲ್ಲಿಲ್ಲ ಎನ್ನುವ ಮಾತನ್ನು ಇಲ್ಲಿ ನೆನಪಿಸಿಕೊಳ್ಳುವುದು ಅವಶ್ಯವಾಗಿದೆ. ಇಲ್ಲಿನ ಜನರ ಬದುಕು, ಆಹಾರ, ಪಾನೀಯ, ವೇಷ-ಭೂಷಣಗಳು, ಆಚರಣೆ, ಸಂಪ್ರದಾಯಗಳು ಎಲ್ಲವೂಗಳು ಸಹ ಪ್ರಾಮುಖ್ಯತೆಯನ್ನು ಪಡೆದಿವೆ. ನಾನಾ ವಿಧದ ಸಮುದಾಯದ ಜನರು ಬದುಕನ್ನು ನಡೆಸುತ್ತಿರುವ ಕ್ರಮ ಎಲ್ಲವೂ ಸಹ ಇದರಲ್ಲಿ ಒಳಗೊಳ್ಳುತ್ತವೆ. ಅಂದು ಪಾಶ್ಚಾತ್ಯ ವಿದ್ವಾಂಸರು ಹಾಕಿಕೊಟ್ಟ ಭದ್ರ ಬುನಾದಿಯ ಮೇಲೆ, ಅವರು ತೋರಿದ ಮಾರ್ಗದರ್ಶನದಲ್ಲಿ ಭಾರತೀಯರು ಈ ಕ್ಷೇತ್ರದಲ್ಲಿ

ಮುಂದುವರಿಯುತ್ತಿದ್ದಾರೆ. ಜಾನಪದ ಅಧ್ಯಯನ ಎನ್ನುವುದು ಕೇಲವ ಮೌಖಿಕ ಮಾಹಿತಿಗಳ ಸಂಗ್ರಹ ಮತ್ತು ವಿಶ್ಲೇಷಣೆ ಅಷ್ಟೇ ಅಲ್ಲ ಎಂಬುದರಿಂದ ಅದು ವರ್ತಮಾನದ ಬದುಕಿಗೆ ಸಂಗತವಾಗುವ ಮತ್ತು ಮಾರ್ಗದರ್ಶಕವಾಗುವ ಶಾಸ್ತ್ರವೂ ಹೌದು ಎಂಬುದರಿಂದ ಪಾಶ್ಚಾತ್ಯ ವಿದ್ವಾಂಸರೊಬ್ಬರ ಮಾತನ್ನು ಸ್ಮರಿಸಿಕೊಳ್ಳುವುದಾದರೆ Folklore is an echo of the past, but at the same time it is also the vigorous voice of the present"

ಇದು ಮೌಖಿಕ ಪರಂಪರೆಯಿಂದ, ಕರ್ಣಾಕರ್ಣಿಕೆಯಾಗಿ ಅವ್ಯಾಹತವಾಗಿ ಸಾಗಿ ಬಂದಿದೆ. ಇದರಲ್ಲಿ ಸಾಕಷ್ಟು ಅಲಕ್ಷಿತ ಸಾಂಸ್ಕೃತಿಕ ಧಾರೆಗಳೂ ಇವೆ. "ಪರಂಪರೆಯಲ್ಲಿ ಮೌಖಿಕ ಸಂಪ್ರದಾಯದ ಮೂಲಕ ಹರಿದುಬಂದ ವಸ್ತುಗಳ ಮೊತ್ತ"ವೇ ಜಾನಪದ. ಜಾನಪದವನ್ನು ಕುರಿತು ಈಸ್ಟಿನ್ ಇವಾನ್ಸ್ ಎಂಬುವವನು "Nothing less than the whole of the past is needed to explain the present" ಎನ್ನುತ್ತಾನೆ. ಪ್ರತಿಯೊಂದು ಸಮುದಾಯದ ಜೀವಾಳವು ಇದರಲ್ಲಿ ಹುದುಗಿದೆ.

"ಕಳೆದ ಎರಡು ಶತಮಾನಗಳಿಂದಲೂ ಬೇರೆ ಬೇರೆ ಹೆಸರುಗಳಲ್ಲಿ ಅಧ್ಯಯನಕ್ಕೆ ಒಳಪಡುತ್ತಾ ಬಂದಿರುವ ಜಾನಪದ. ಇಂದು ಕಲಿಕೆಯ ಒಂದು ಹೊಸಕ್ಷೇತ್ರವಾಗಿ ಪರಿಣಮಿಸಿದೆ; ಜ್ಞಾನದ ಒಂದು ಹೊಸ ಸೆಲೆ ಹಾಗೂ ಪರಿಶೀಲನೆಯ ಹೊಸ ವಿಷಯ ಎಂದು ಅದನ್ನು ಸಮರ್ಥಿಸಿಕೊಳ್ಳಲಾಗುತ್ತದೆ. ಆರಂಭದಲ್ಲಿ ಜಾನಪದವು ಪುರಾತನ ಕಾಲದ್ದೆಂದು ನಾಗರಿಕತೆಯ ಪ್ರಭಾವದಿಂದ ಅದು ನಶಿಸಿ ಹೋಗುತ್ತದೆಂಬ ಭೀತಿಯೂ ಇತ್ತು. ಅಂತೆಯೇ ಒಂದೆಡೆ ಹಳೆಯದು ಮಾತ್ರ ಜಾನಪದ ಎಂಬ ಗ್ರಹಿಕೆಯಿಂದ ಅದನ್ನು ಪ್ರಾಚೀನ ಸಂಸ್ಕೃತಿಯ ಅತ್ಯುತ್ತಮ ಭಾಗವೆಂದು ಕೊಂಡಾಡುತ್ತಾ ಬಂದರು. ಅದನ್ನು ಆಮೇಲೆ ಸಂರಕ್ಷಿಸಿಕೊಳ್ಳಬೇಕು ಎಂಬ ಕಳಕಳಿ ತೋರುತ್ತಾ ಬಂದಿದ್ದರೆ ಮತ್ತೊಂದೆಡೆ ಅದು ನಶಿಸಿ ಹೋಗುವಂಥದಲ್ಲ; ತನ್ನನ್ನು ಉಳಿಸಬೇಕೆಂದು ಅದು ಬಯಸುವುದೂ ಇಲ್ಲ ಎಂಬುದನ್ನು ಮನಗಂಡು ಅದು ಸದಾ ಪರಿವರ್ತನಶೀಲವಾದುದು, ಜೀವಂತವಾದುದು; ಹೊಸ ಹೊಸ ಅಂಶಗಳನ್ನು ಕಾಲ ಕಾಲಕ್ಕೆ ಸ್ವೀಕರಿಸುತ್ತ ಬೆಳೆಯುತ್ತದೆ ಎಂದು ಸ್ಪಷ್ಟಪಡಿಸುತ್ತಾ ಅದು ಕೇವಲ ಹಳೆಯ ವಸ್ತು ವಿಶೇಷಗಳಿಗೆ ಸಂಬಂಧಿಸಿದ್ದಲ್ಲ; ಹಳ್ಳಿ ಗಾಡಿನದಷ್ಟೇ ಅಲ್ಲ; ನಗರ ಜೀವನದಲ್ಲೂ ಅದರ ಸೆಲೆಯನ್ನು ನೆಲೆಯನ್ನು ಗುರುತಿಸಬಹುದು ಎಂಬ ಅಭಿಪ್ರಾಯಕ್ಕೆ ಅಭಿಪ್ರಾಯಕ್ಕೆ ಬರ್ರಲಾಗಿದೆ."[೧]

ಜಾನಪದ ಒಂದು ಸ್ವತಂತ್ರ ಅಧ್ಯಯನ. ಇಂದು ವಿಶ್ವದ ನಾನಾ ಕಡೆಗಳಲ್ಲಿ ಸ್ವೀಕೃತವಾಗಿದೆ. ವಿಶ್ವವಿದ್ಯಾಲಯಗಳಲ್ಲಿ, ಸಾಹಿತ್ಯ ವಿದ್ಯಾರ್ಥಿಗಳು ಜಾನಪದದ ಕಲಾತ್ಮಕ ಶಾಸ್ತ್ರದ ಅಂಗವಾಗಿ ಅದನ್ನು ಅಭ್ಯಾಸ ಮಾಡುವ ಕ್ರಮ ಕಂಡುಬರುತ್ತದೆ. ವಾಸ್ತವವಾಗಿ ಜಾನಪದ ತನ್ನ ವ್ಯಾಪಕವಾದ ಹಿನ್ನೆಲೆಯಲ್ಲಿ ಇನ್ನೂ ಅನೇಕ ಶಾಸ್ತ್ರಗಳಿಗೆ ಸಂಬಂಧ ಪಡುತ್ತದೆ. ಅವುಗಳೆಂದರೆ ಭಾಷಾಶಾಸ್ತ್ರ, ಸಂಗಿತ, ನೃತ್ಯ, ಚಿತ್ರ, ಶಿಲ್ಪ, ಇತಿಹಾಸ, ಭೂಗರ್ಭಶಾಸ್ತ್ರ ಮುಂತಾದುವೂ. ಜಾನಪದವನ್ನು ನಿರ್ಲಕ್ಷಿಸಿ ತಮ್ಮ ಅಧ್ಯಯನಕ್ಕೆ

ಸಮಗ್ರತೆಯನ್ನು ತಂದುಕೊಳ್ಳಲಾರವು.[೨] ಜಾನಪದ ಸಾಮಗ್ರಿ ಹಾಗೂ ಅದರ ಅಧ್ಯಯನ ಇನ್ನೂ ವಿಸ್ತೃತವಾದ ಜ್ಞಾನಕ್ಷೇತ್ರಕ್ಕೂ ವ್ಯಾಪಿಸುವ ಸಾಧ್ಯತೆಯಿದೆ. ಈ ಶಾಸ್ತ್ರದ ಆಳಕ್ಕೆ ಹೋದಂತೆ ಆಧುನಿಕ ವಿಜ್ಞಾನಿಯೂ ಕೂಡ ಜಾನಪದದ ಅನೇಕ ಅಂಗಗಳಿಗೆ ಋಣಿಯಾಗುವುದರಲ್ಲಿ ಸಂದೇಹವಿಲ್ಲ.[೩]

ಜಾನಪದ ಹತ್ತು ಹಲವು ಶಾಸ್ತ್ರಗಳ ತಾಯಿಬೇರು. ಮಾನವನ ಸಮಸ್ತಜ್ಞಾನವೂ ಒಂದಲ್ಲ ಒಂದು ವಿಧದಲ್ಲಿ ಜಾನಪದದಿಂದ ಪ್ರಭಾವಿತವಾಗಿಯೇ ಇರುತ್ತದೆ. ಏಕೆಂದರೆ ಮಾನವನ ಉಗಮದೊಡನೆಯೇ ಜಾನಪದದ ಉಗಮವೂ ಆಯಿತು. ಥಾಮ್ಸ್‌ನು 'Folklore' ಎಂದು ಕರೆದ ಹೆಸರು ಹೊಸದಾದರೂ, ಜಾನಪದ ಮಾತ್ರ ದಟ್ಟವಾಗಿ ಮಾನವ ಕುಲದ ಆದಿಯಿಂದಲೂ ಅವ್ಯಾಹತವಾಗಿ ಹರಿದುಬಂದಿದೆ.[೪]

ಅಕ್ಷರ ಜ್ಞಾನ ರೂಪುಗೊಳ್ಳುವ ಮುನ್ನ ಎಲ್ಲ ಬಗೆಯ ವಿದ್ಯೆಯೂ 'ಜಾನಪದ'ದ ಮೂಲಕವೇ ತಲೆಮಾರಿನಿಂದ ತಲೆಮಾರಿಗೆ ಅರ್ಪಿಸಲ್ಪಡುತ್ತಿತ್ತು. ಸಹಸ್ರಾರು ವರ್ಷಗಳ ಮಾನವ ಜೀವನದ ಇತಿಹಾಸದಲ್ಲಿ ಗ್ರಂಥಸ್ಥ ಸಂಪ್ರದಾಯ ತೀರ ಇತ್ತೀಚೆಗೆ ತನ್ನ ಸ್ಥಾನವನ್ನು ರೂಢಿಸಿಕೊಂಡು ಶಿಷ್ಟ ಪರಂಪರೆಯೊಂದಕ್ಕೆ ಕಾರಣವಾದರೂ ಮಾನವನ ಅನಂತಕಾಲದ ಅಪಾರ ಅನುಭವ ಭಂಡಾರ ಕಂಠಸ್ಥ ಸಂಪ್ರದಾಯದಲ್ಲಿ ಇನ್ನೂ ಸಾಗಿ ಬಂದಿರುತ್ತದೆ ಎನ್ನುವುದನ್ನು ಮರೆಯಬಾರದು.

ಆದಿವಾಸಿ ಸಮಾಜದಲ್ಲಿ ಮಧ್ಯಸ್ಥ ಸಂಸ್ಕೃತಿಯ ಗ್ರಾಮಾಂತರ ಪ್ರದೇಶಗಳಲ್ಲಿ 'ಕಂಠಸ್ಥ ಸಂಪ್ರದಾಯ'ದ ಪ್ರಭಾವ ನಿಚ್ಚಳವಾಗಿದೆ. ಜಾನಪದ ಹುಲುಸಾಗಿ ಹಸನಾಗಿ ಹಬ್ಬಿ ಬೆಳೆಯುವ ಫಲವತ್ತಾದ ನೆಲೆಗಳವು. ನಗರ ಜೀವನದಲ್ಲಿಯೂ ಅದು ಉಸಿರಾಡುತ್ತದೆಯಾದರೂ ಕುಂಡದಲ್ಲಿ ಬೆಳೆದ ಹೂಗಿಡವಾಗಿ ಯಾವಗಳಿಗೆಯಲ್ಲಾದರೂ ಬತ್ತಿ ಹೋಗುವ ಸಾಧ್ಯತೆ ಹೆಚ್ಚು. ಹೀಗೆ ವಿಶಿಷ್ಟ ಅಂತಃಸತ್ವದಿಂದ ಪರಿಪುಷ್ಟವಾದ ಜಾನಪದ ತಾನೇ ಒಂದು ಸ್ವತಂತ್ರ ವಿಜ್ಞಾನವಾಗಿ ಈಗ ರೂಪುಗೊಂಡಿದೆ. ಪಾಶ್ಚಾತ್ಯ ವಿಶ್ವವಿದ್ಯಾನಿಲಯಗಳಲ್ಲಿ ಜಾನಪದ ಅಧ್ಯಯನಕ್ಕೆ ವಿಶೇಷ ಆದ್ಯತೆ ನೀಡಲಾಗಿದೆ. ಸ್ವತಂತ್ರ ಜಾನಪದ ಸಂಸ್ಥೆಗಳ ಜೊತೆಗೆ ವಿಶ್ವವಿದ್ಯಾನಿಲಯಗಳೂ ಜಾನಪದ ಸಂಶೋಧನೆಯಲ್ಲಿ ಉನ್ನತ ಪ್ರಗತಿಯನ್ನು ತೋರಿವೆ. ಅಮೆರಿಕಾಯೊಂದರಲ್ಲಿ ೧೯೬೦ರ ವೇಳೆಗೆ ೨೩೦ ವಿದ್ಯಾಕೇಂದ್ರಗಳಲ್ಲಿ ಜಾನಪದವನ್ನು ಬೋಧಿಸಲಾಗುತ್ತಿದೆ. ಎಂದು ವೆಲ್ಯಾಂಡ್ ಹ್ಯಾಂಡ್ ಅವರು ಅಮೆರಿಕನ್ ಫೋಕ್‌ಲೋರ್ ಸೊಸೈಟಿಯ ಎಪ್ಪತ್ತನೆಯ ವಾರ್ಷಿಕ ಸಭೆಯ ಅಧ್ಯಕ್ಷ ಭಾಷಣದಲ್ಲಿ ಗುರುತಿಸಿದ್ದಾರೆ.[೫]

ಡಾರ್ವಿನ್ನನ ವಿಕಾಸವಾದದಿಂದ ಪ್ರಭಾವಿತರಾಗಿ ಜಾನಪದ ವಿಜ್ಞಾನಿಗಳು ಮಾನವಕುಲದ ಪ್ರಾಚೀನ ಇತಿಹಾಸವನ್ನು ಆದಿವಾಸಿಗಳ ಸಂಪ್ರದಾಯಗಳಿಂದಲೂ, ರೈತಾಪಿವರ್ಗದ ನಡಾವಳಿಗಳಿಂದಲೂ ಅರಿಯಲು ಮಾಡಿದ ಪ್ರಯತ್ನವೇ 'ಜಾನಪದ'ಆಗಿ ಬೆಳೆಯತೊಡಗಿತು.[೬] ಜನಪ್ರಿಯ ಪಳೆಯುಳಿಕೆಗಳ (Popular Antiquities) ಅಸ್ತವ್ಯಸ್ತ ಅಧ್ಯಯನದಿಂದ ಜಾನಪದ (Folklore)ದ ವ್ಯವಸ್ಥಿತ ಅಧ್ಯಯನಕ್ಕೆ

ನಾಂದಿಯನ್ನು ಹಾಡಿದ ಮೊದಲ ದೇಶ ಇಂಗ್ಲೆಂಡ್. ೧೮೭೮ರಲ್ಲಿ ಅಲ್ಲಿ ಸ್ಥಾಪಿತವಾದ ಜಾನಪದ ಸಂಸ್ಥೆ(Folklore society) ಅನೇಕ ಪ್ರತಿಭಾವಂತರ ಜಾನಪದ ವಿದ್ವಾಂಸರ ದೊಡ್ಡ ತಂಡವನ್ನು ಪಡೆದು 'ಜಾನಪದ'(Folklore) ಎಂಬ ಪತ್ರಿಕೆಯನ್ನು ಆರಂಭಿಸಿ ಜಾನಪದದ ಕ್ರಮಬದ್ಧ ಅಧ್ಯಯನ ವಿದ್ವತ್ತಿನ ಹಾದಿಯಲ್ಲಿ ಚಾಲನೆಗೊಳ್ಳಲು ಕಾರಣವಾಯಿತು.[೯]

ಜಾನಪದ ಒಂದು ವಿಸ್ತಾರವಾದ ಕ್ಷೇತ್ರ. ಅದರ ಶಾಖೆಗಳು ಅನಂತ ಮುಖವಾಗಿ ಹಬ್ಬಿ ಜೀವನದ ಎಲ್ಲ ಮುಖಗಳನ್ನು ತನ್ನ ವ್ಯಾಪ್ತಿಗೆ ತೆಗೆದುಕೊಳ್ಳುತ್ತದೆ. ಜಾನಪದ ಕ್ಷೇತ್ರದಲ್ಲಿ ಅದರ ಸಮಸ್ತ ಅಂಗಗಳನ್ನು ಕುರಿತು ಒಬ್ಬನೇ ವಿದ್ವಾಂಸ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಏಕೆಂದರೆ ಈ ಕ್ಷೇತ್ರದಲ್ಲಿ ಕತೆಗಳಿವೆ, ಕಾವ್ಯಗಳಿವೆ, ಒಗಟು, ಲಾವಣಿ, ಗೀತೆ, ಗಾದೆಗಳೂ ಇವೆ. ಇತರ ಭಾಷಿಕ ರಚನೆಗಳಿವೆ. ಜನಪದ ನೃತ್ಯ, ಜನಪದ ನಾಟಕಗಳಿವೆ. ಮನೋರಂಜನೆ, ನಂಬಿಕೆ, ಸಂಪ್ರದಾಯ, ಕ್ರೀಡೆ, ಅಡುಗೆ, ವೈದ್ಯ ಹೀಗೆ ಹಲವಾರು ಬಗೆಗಳಿದ್ದು, ಒಂದೊಂದು ಕ್ಷೇತ್ರವನ್ನು ಆರಿಸಿಕೊಂಡಾಗ ಆಯಾ ಸಂಸ್ಕೃತಿಯಲ್ಲಿ ಕೆಲಸ ಮಾಡುವ ವಿದ್ವಾಂಸ ಗಟ್ಟಿಯಾದುದನ್ನು ಕೊಡಬಲ್ಲ.[೧೦]

ಸಾವಿರಾರು ಜೀವ ಸಂಕುಲಗಳ ನಡುವೆ ಮನುಷ್ಯ ಸೃಷ್ಟಿಯಾಗುತ್ತಾನೆ. ನಿರ್ದಿಷ್ಟಪ್ರದೇಶದಲ್ಲಿ ನಿರ್ದಿಷ್ಟ ಸಮುದಾಯವು ತಳವೂರಿದ್ದೇ ಜನಪದವೆನ್ನಬಹುದು. ಜನರಿಗೆ ಸಂಬಂಧಪಟ್ಟದ್ದೆಲ್ಲವೂ ಜನಪದ ಎಂಬುದು ಬಹಳ ವರ್ಷಗಳಿಂದ ಚಲಾವಣೆಗೆ ಬಂದಿದೆ. ಜನಪದ ಶಬ್ದ ಸರಳವೂ ಹೌದು. ಸಂಕೀರ್ಣವೂ ಹೌದು. ಇದರಲ್ಲಿ ಜನ, ಜನರಭಾಷೆ, ಅವರ ಸ್ಥಳ ಅಥವಾ ದೇಶ, ಜಾತಿ, ಪಂಗಡ, ಆಚಾರವಿಚಾರ, ಕಲೆ ಸಾಹಿತ್ಯ ಮೊದಲಾದವು ಅಡಕವಾಗಿವೆ. ಜನಪದ ನಿಂತನೀರಲ್ಲ. ಸ್ವಾರ್ಥ ಮೂಲವಾದದ್ದೂ ಅಲ್ಲ. ಸಂಚಲನೆ, ಪರಿವರ್ತನೆ, ಸ್ವೀಕಾರ, ಕೊಡು, ಕೊಡೆ ಅದರ ಮೂಲ ಮಂತ್ರವಾಗಿದೆ. ಜನಪದ ವಿಕಾಸರೂಪವಾದ ಶಿಷ್ಟಪದ ವಿಜೃಂಭಿಸಿದಾಗ ಜಾನಪದ ಹಿಂದೆ ಸರಿದರೂ ತನ್ನ ಸಂಪೂರ್ಣ ಅಸ್ತಿತ್ವವನ್ನು ಅಳಿಸಿಕೊಳ್ಳುವುದಿಲ್ಲ. ಜನಪದ ಎಂಬ ಶಬ್ದಕ್ಕೆ ಹಳ್ಳಿಗಾಡು ಎಂದು ವಾಚ್ಯಾರ್ಥವಿದೆ. ಹಳ್ಳಿಗಾಡಿನ ಜನತೆ, ಪ್ರಾಂತದ ಜನಾಂಗ ಎಂಬ ಲಕ್ಷ್ಯಾರ್ಥ ಪಡೆದರೂ, ಇದು ಪ್ರಾಚೀನ ಸಾಹಿತ್ಯದಲ್ಲಿ ಬಳಕೆಯಾಗಿದೆ.[೧೧]

ಶಾಂತಾದೇವಿ ಮಾಳವಾಡರ ಪ್ರಕಾರ "ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿ ಜನಪದ ಸಾಹಿತ್ಯವಿದೆ. ಆ ಸಂಸ್ಕೃತಿಯ ಮೂಲಕ ಅಲ್ಲಿನ ಜನರ ಸಂಸ್ಕೃತಿಯನ್ನರಿಯಬಹುದಾಗಿದೆ. ಅಲ್ಲದೆ ಜೀವನವು ಅರ್ಥಸೃಷ್ಟಿ, ಸಾಹಿತ್ಯವು ಶಬ್ದ ಸೃಷ್ಟಿ, ಜೀವನದ ಅರ್ಥವನ್ನು ಸಾಹಿತ್ಯವು ಶಬ್ದಗಳಲ್ಲಿ ಮೂಡಿಸುವುದು.[೧೨]

ಪ್ರಪಂಚದ ಪ್ರತಿಯೊಂದು ದೇಶದಲ್ಲಿಯೂ ನಾಗರಿಕತೆಯ ಪ್ರಭಾವಕ್ಕೊಳಗಾಗದ, ಸಂಸ್ಕೃತರಾಗದ ಅಶಿಕ್ಷಿತ ಜನಾಂಗಗಳಿರುತ್ತವೆ. ಅದಕ್ಕೆ ತನ್ನದೇ ಆದ ರೂಢಿ, ಸಂಪ್ರದಾಯಗಳಿರುತ್ತವೆ. ರೀತಿ-ನೀತಿ,

ವಿಧಿ-ನಿಷೇಧಗಳಿರುತ್ತವೆ. ಕಥೆ, ಹಾಡು, ಒಡಪು, ಒಗಟು, ಗಾದೆ, ಯಕ್ಷಗಾನ, ಬಯಲಾಟ, ಸಣ್ಣಾಟ, ಹಗರಣಗಳಿರುತ್ತವೆ. ವೈದ್ಯ, ಮಾಟ, ಮಂತ್ರಗಳೂ ಇರುತ್ತವೆ. ಇವೆಲ್ಲ ಗ್ರಂಥಸ್ಥವಾಗದೇ ಉಳಿದಿರುವ ಬಾಯಿಂದ ಬಾಯಿಗೆ ಹರಿದು ಬರುವಂತಹ ಕ್ರಿಯೆಗೆ ಜಾನಪದವೆನ್ನಲಾಗಿದೆ. ಇದು ಜನಸಾಮಾನ್ಯರ ಸಮಸ್ತ ತಿಳುವಳಿಕೆಗಳನ್ನು ಒಳಗೊಂಡಿರುತ್ತವೆ.[೧೩] ಬಹುಪಾಲು ಅನಕ್ಷರಸ್ಥ ಜನಸಮೂಹದಿಂದಲೇ ತುಂಬಿರುತ್ತಿದ್ದ ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ಜನತೆಯ ಸಮಗ್ರ ಅನುಭವ, ಆಲೋಚನೆಗಳ ಘನೀಭೂತ ಸ್ಥಿತಿಯ ಜಾನಪದವು ನಿತ್ಯ ನಿರಂತರವಾಗಿ ತನ್ನ ಜೀವಂತಿಕೆಯನ್ನು ಕಂಠಸ್ಥ ಸಂಪ್ರದಾಯದ ಮೂಲಕ ಆಯಾಯ ಪ್ರದೇಶ, ಭಾಷೆ ಮತ್ತು ಜನಾಂಗದ ಜೀವಾಳದ ಹಿನ್ನೆಲೆಯಲ್ಲಿ ಉಳಿಸಿಕೊಳ್ಳುತ್ತಲೇ ಬರುತ್ತಿದೆ. ಇದೇ ವಿಷಯ ಬಾಯಿಂದ ಬಾಯಿಗೆ ಅನೇಕರಲ್ಲಿ ಹರಿಯಲಾರಂಭಿಸಿತು. ಅಂದರೆ ಜನಪದರ ಒಳಸುಳಿ ಮತ್ತು ಸ್ವಭಾವಗಳು ಇದ್ದಕ್ಕಿದ್ದಂತೆ ಪ್ರಕಟಗೊಳ್ಳುವುದಿಲ್ಲ. ಅವುಗಳಿಗೆ ಒಂದು ಒಳ ಒತ್ತಡ ಇರುತ್ತದೆ. ಒಳ ಒತ್ತಡವನ್ನು ಪ್ರಚೋದಿಸುವಂತೆ ಹೊರ ಒತ್ತಡಗಳೂ ಇರುತ್ತವೆ. ಹೀಗೆ ಒಳ-ಹೊರ ಒತ್ತಡಗಳು ಒಂದು ಇತಿಹಾಸ ಜಾನಪದರ ಸ್ವಭಾವ, ಲಕ್ಷಣಗಳನ್ನು ನಿರ್ದಿಷ್ಟ ವಿನ್ಯಾಸವನ್ನಾಗಿ ಮೂಡಿಸುತ್ತವೆ. ಇಂತಹ ಜನಪದ ವಿನ್ಯಾಸ ಕೇವಲ ಒಬ್ಬ ವ್ಯಕ್ತಿಯಾದ ಸಮೂಹದ್ದಾಗಿರುತ್ತದೆ. ಜನಪದರು ತಾವು ಬದುಕುತ್ತಿರುವ ಸುತ್ತಲಿನ ಸಮಾಜ ಮತ್ತು ಸಂಸ್ಕೃತಿಯಿಂದ ಪ್ರೇರಿತರಾಗಿರುತ್ತಾರೆ. ಏಕೆಂದರೆ "ವ್ಯಕ್ತಿ, ಸಮಾಜ ಮತ್ತು ಸಂಸ್ಕೃತಿಯಿಂದ ಈ ಸಂಬಂಧಗಳು ಒಂದಕ್ಕೊಂದು ತುಂಬಾ ಗಾಢವಾದುದಾಗಿರುತ್ತವೆ" ಎಂದು ಹೇಳುವ ಬರಗೂರು ರಾಮಚಂದ್ರಪ್ಪ ಅವರ ಮಾತು ಇಲ್ಲಿ ಉಲ್ಲೇಖಾರ್ಹ[೧೪]

ಭಾರತವು ಜಾನಪದದ ಎಲ್ಲಾ ಅಂಶಗಳಿಂದ ಕೂಡಿದೆ. ಇಲ್ಲಿರುವಷ್ಟು ವೈವಿಧ್ಯಮಯ ಜಾನಪದ ಸಂಪತ್ತು ಜಗತ್ತಿನ ಯಾವುದೇ ರಾಷ್ಟ್ರದಲ್ಲಿಲ್ಲ. "ಹರಿಯ ಬಸಿರಿನಲ್ಲಿ ಬ್ರಹ್ಮಾಂಡವಡಗಿರುವಂತೆ ಜಾನಪದ ಕುಕ್ಷಿಯಲ್ಲಿ ಜಗತ್ತೆಲ್ಲ ಹುದುಗಿದೆ."[೧೫] ಎಂದು ಜಾನಪದವನ್ನು ಕುರಿತು ದೇ.ಜವರೇಗೌಡ ಅವರ ಅವರ ಅಭಿಪ್ರಾಯವನ್ನು ಮೆಚ್ಚಬೇಕು. ಈ ಜಾನಪದ ಎಂಬುದು ಹೇಗೆ ನಿಷ್ಪತ್ತಿಯಾಯಿತು? ಇದರ ಮೂಲ ಕರ್ತೃ ಯಾರೆಂಬುದಕ್ಕೆ ಒಂದು ಕುತೂಹಲಕರವಾದ ಕಥೆಯೊಂದನ್ನು ಡಾ.ಎನ್ .ಆರ್ .ನಾಯಕ್ ಅವರು ತಮ್ಮ ಜಾನಪದ ಸಿಂಹಾವಲೋಕನದಲ್ಲಿ ಹೀಗೆ ಹೇಳಿದ್ದಾರೆ; "ಬೃಹತ್ ಕಥೆಯ ಗುಣಾಢ್ಯನು ವಿಂಧ್ಯದಲ್ಲಿ ಸಂಪರ್ಕಿಸಿದ ಮಾನವೇತರ ಯಕ್ಷ, ರಾಕ್ಷಸ, ಪಿಶಾಚಿಗಳು ಇನ್ನಾರು ಆಗಿರದೇ ಸಂಸ್ಕಾರಹೀನ ಕಾಡಾಡಿಗಳಾಗಿದ್ದರಂತೆ. ಗುಣಾಢ್ಯನು ಈ ಕಾಡಾಡಿಗಳ ಪೈಶಾಚಿಗಳ ಭಾಷೆಯನ್ನು ಕಲಿತನಂತೆ, ಕಾಣಭೂತಿಯೆಂಬ (ನಿರಕ್ಷರಿ?) ಪಿಶಾಚಿಯಿಂದ ವರರುಚಿಯ ಕಥಾಸಮೂಹವನ್ನು ಇನ್ನಿತರ ವಿಂಧ್ಯವಾಸಿ ಕಾಡಾಡಿಗಳ ನಾಲಿಗೆಯ ಮೇಲಿದ್ದ ಲಕ್ಷಾಂತರ ಕಥೆಗಳನ್ನು ಸಂಗ್ರಹಿಸಿ, ಬೃಹತ್ ಕಥಾ ಸಂಹಿತೆಯನ್ನು ಸಿದ್ಧಪಡಿಸಿದನಂತೆ, ಏಳು ಲಕ್ಷ ಶ್ಲೋಕಗಳಿಂದ, ಏಳು ಸಂಪುಟದ ಗಾತ್ರ ಹಾಗೂ

ವ್ಯಾಪ್ತಿಯನ್ನು ಪಡೆದ ಗ್ರಂಥ ಇದಾಗಿತ್ತಂತೆ. ಸಂಸ್ಕಾರ ಹೀನ ಪೈಶಾಚಿಕ ಭಾಷೆಯಲ್ಲಿದ್ದುದರಿಂದ ಶಾತವಾಹನ ದೊರೆ ಈ ಗ್ರಂಥಕ್ಕೆ ಗೌರವ ನೀಡಲಿಲ್ಲವಂತೆ. ರಾಜ ಮಾನ್ಯತೆ ದೊರಕದ ಕಾರಣ ವಿಹ್ವಲಗೊಂಡ ಮನಸ್ಸಿನವನಾಗಿ ಎಲ್ಲ ಕಥೆಗಳನ್ನು ಒಂದೊಂದನ್ನಾಗಿ ತನ್ನ ಶಿಷ್ಯರಿಗೆ ಓದಿ, ಇವುಗಳನ್ನು ಮತ್ತೊಬ್ಬರಿಗೆ ತಿಳಿಸಿರೆಂದು ಹೇಳಿದನಂತೆ. ಈ ಗುಣಾಢ್ಯನ ಕಥೆಯೇ ಭಾರತದ ಪ್ರಪ್ರಥಮ ಜಾನಪದ ಕಥೆಗಳ ಸಂಕಲನ. ಇವನೇ ಪ್ರಥಮ ಜಾನಪದ ಸಂಕಲನಕಾರ.

'ಶ್ರೀ' ಅವರ ಪ್ರಕಾರ "ಜನರಿಂದ ಹುಟ್ಟಿ, ಜನರಲ್ಲಿಯೇ ಪಳಗಿ, ಜನರ ಪ್ರೇಮವನ್ನು ಸೂರೆಗೊಂಡ, ಜನರ ಜೀವನದ ಸಾರವನ್ನು ಹೆಂಗಸರ ಮಧುರ ಕಂಠದ ಗಾನವನ್ನು ಸುರಿಸುವ ಈ ಸಾಹಿತ್ಯವನ್ನು ಕೆಲವು ಒಣಕವಿಗಳು, ಅಹಂಕಾರ ಮುಗ್ಧರಾದ ಪಂಡಿತರೂ ಅಲ್ಲಗಳೆಯಬಹುದೇ ಹೊರತು ನಿಸರ್ಗಕವಿಗಳು ರಸಜ್ಞರು, ಜನತಾ ವಾತ್ಸಲ್ಯರೂ ಎಂದಿಗೂ ತಿರಸ್ಕರಿಸಲಾರರು."[೧೬]

ಶಿಷ್ಟ ಸಾಹಿತ್ಯದಲ್ಲಿ ಬಳಕೆಯಾಗಿರುವ ಜಾನಪದ ಅಂಶಗಳನ್ನು ಅನ್ವೇಷಿಸುವ, ವಿಶ್ಲೇಷಿಸುವ, ಸ್ಪಷ್ಟಪಡಿಸುವ, ಸಂಗ್ರಹಿಸುವ ಹಾಗೂ ಸಂಯೋಜಿಸುವ ಕಾರ್ಯ ಅನಿವಾರ್ಯವಾಗಿ ನಡೆಯಬೇಕಿದೆ. ಇದಕ್ಕೆ ಕಾರಣವೇನೆಂದರೆ, "ಇತಿಹಾಸ ಬರೆಯುವ ಪ್ರಸಂಗದಲ್ಲಿ ಲಿಖಿತ ಸಾಮಗ್ರಿಗಳಾದ ಶಾಸನಾದಿಗಳಿಗೆ ಪ್ರಧಾನ ಸ್ಥಾನವನ್ನೂ, ಕಾವ್ಯಾದಿಗಳಿಗೆ ಗೌಣಸ್ಥಾನವನ್ನು ಕೊಡುತ್ತಿರುವ ಕೆಲಭಾರತೀಯ ಇತಿಹಾಸಕಾರರು ಅಲಿಖಿತವಾದ ಜಾನಪದವನ್ನು ತೀರ ಉಪೇಕ್ಷಿಸುತ್ತಾ ಬಂದಿದ್ದಾರೆ. ನಿರಕ್ಷರಿಗಳ ಸಂತಾನವಾದ ಭಾರತದಲ್ಲಿ ಲಿಖಿತರೂಪದಲ್ಲಿ ಉಳಿದು ಬಂದಿರುವ ಆಧಾರವಾದ ಅನೇಕ ಸಾಮಗ್ರಿಗಳು ನೂರಕ್ಕೆ ಐದರಷ್ಟು; ಅಲಿಖಿತ ರೂಪದಲ್ಲಿ ಉಳಿದುಬಂದಿರುವ ಆಧಾರ ಸಾಮಗ್ರಿಗಳು ತೊಂಭತ್ತೈದರಷ್ಟು ಇದೆ. ಹೀಗಿರುವಾಗ ಇತಿಹಾಸ ರಚನಾ ಕಾರ್ಯದಲ್ಲಿ ಅಲಿಖಿತ ಸಾಮಗ್ರಿಯಾದ ಜಾನಪದವನ್ನು ಅಲಕ್ಷಿಸುವುದು ಪ್ರಮಾದವಾಗುತ್ತದೆ. ಇದನ್ನು ಮನಗಂಡು ಇತಿಹಾಸಕಾರರ ರಚನಾಶಾಸ್ತ್ರವು ಇಂದು ಲಿಖಿತದೊಂದಿಗೆ ಅಲಿಖಿತ ಸಾಮಾಗ್ರಿಯನ್ನು ಬಳಸಿಕೊಂಡು, ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಲಿರುವುದು ಸರಿಯಾದ ಕ್ರಮವೆಂದು ಹೇಳಬೇಕು.[೧೭] ಗ್ರಾಮಾಂತರ ಪ್ರದೇಶಗಳನ್ನು ಪ್ರವೇಶಿಸಿದ ವಿದ್ಯೆಯು ಹಾಗೂ ಆಧುನಿಕ ನಾಗರಿಕತೆಯು ತನ್ನ ತೋಳನ್ನು ಕ್ರಮಕ್ರಮವಾಗಿ ಬಾಚ ತೊಡಗುವಾಗ ಜಾನಪದ ತನ್ನ ಬಲವನ್ನು ಕಳೆದುಕೊಳ್ಳಲು ಸಾಧ್ಯತೆಗಳಿದ್ದರೂ ಇನ್ನು ಸ್ಪಷ್ಟವಾದ ರೀತಿಯಲ್ಲಿಯೇ ಸಂಪ್ರದಾಯಗಳು, ನಂಬಿಕೆಗಳು, ಲಾವಣಿ, ವೈದ್ಯ, ಮಾಟ-ಮಂತ್ರಗಳು ಜೀವಂತವಾಗಿಯೇ ಉಳಿದಿವೆ ಎನ್ನಬಹುದು.[೧೮]

ನಿಜವಾಗಿಯೂ ಜಾನಪದವು ನಮ್ಮ ಬದುಕಿನಿಂದ ಬೇರೆಯಾಗಿ ನಿಂತಿಲ್ಲ. ಅದು ಜೀವನ ವಿರೋಧಿಯಾಗಿಲ್ಲ. ಏಕೆಂದರೆ ನಿಜವಾದ ಬದುಕಿನ ದಾರಿಯನ್ನು ಮತ್ತು ಅದರ ನಿಲುವನ್ನು ನಿಚ್ಚಳಗೊಳಿಸುವುದೇ ಅದರ ಕೆಲಸ. ಜಾನಪದದ ಕಲೆ, ಸಾಹಿತ್ಯ, ಹಾಡು ಕಥೆ ಮುಂತಾದವುಗಳು

ವ್ಯಕ್ತಿಯ ಒಳ ಅರಳುವಿಕೆಯ ಮೂಲಕ ಅವನ ಹೊರವಲಯವನ್ನು ಹಿಗ್ಗಿಸುತ್ತವೆ. ಮನುಷ್ಯ ಮನುಷ್ಯ ಸಂಬಂಧಗಳ ನಡುವಿರುವ ಬೇಲಿಯನ್ನು ಕಿತ್ತೆಸೆದು ಬಾಂಧವ್ಯವನ್ನು ಬೆಸೆಯುವ ಕೆಲಸವೇ ಇದರದು. ಪಾಟರ್ ಎಂಬಾತ ಜಾನಪದದ ಬಗೆಗೆ ಹೀಗೆ ಹೇಳುತ್ತಾನೆ. "ಇದು ಒಬ್ಬ ವ್ಯಕ್ತಿಯ ಬದುಕು ಮತ್ತು ಅವನ ಸುತ್ತಲಿನ ಸಮಾಜವನ್ನು ಒಳಗೊಂಡಿರುತ್ತದೆ. ಗತಕಾಲದ ನೆನಪುಗಳ ಜೀವನದಲ್ಲಿ ಮನುಷ್ಯರಿಗಿಲ್ಲದಿದ್ದರೆ ಆತನ ವರ್ತಮಾನ ಪರಿಪೂರ್ಣವಾಗಲಾರದು.

ಅದೇ ನಾಗರಿಕತೆ ಎಂಬ ಏಣಿಯ ಮೆಟ್ಟಿಲನ್ನು ಹತ್ತಿ ಮಾನವ ಜಾನಪದ ಸಂಪ್ರದಾಯವೆಂಬ ಕೆಳಗಿನ ನೆಲವನ್ನು ಒಮ್ಮೆ ತಿರುಗಿ ನೋಡಿದಾಗ ಅದರ ಗಟ್ಟಿಯಾದ ಪಳಿಯುಳಿಕೆಯ ಬಗ್ಗೆ ಅರ್ಥವಾಗುತ್ತದೆ." ಎಂದಿದ್ದಾನೆ. ಒಂದು ಜನಾಂಗ ಅಥವಾ ಜನಸಮೂಹವನ್ನು 'ಜಾನಪದ' ಎಂದು ಕರೆಯಲಾಗುತ್ತದೆ. ಆಯಾ ದೇಶದಲ್ಲಿನ ಜನಾಂಗಗಳಿಗೆ ನಾಗರಿಕತೆಯ ಸಂಪರ್ಕವಿಲ್ಲದ್ದರಿಂದ ಅದರ ಪ್ರಭಾವವಿಲ್ಲದ್ದರಿಂದ ಅಜಗಜಾಂತರವುಂಟಾಯ್ತು. ಇಂತಹ ಜನಾಂಗಗಳಲ್ಲಿರುವ ಸಾಹಿತ್ಯವನ್ನು ಅಧ್ಯಯನ ಮಾಡುವುದೇ 'ಜಾನಪದ' ಅಂದರೆ 'ಜನಪದ' ಒಂದು ಜನಾಂಗವನ್ನು ಸೂಚಿಸುವ ನಾಮಪದವಾದರೆ 'ಜಾನಪದ' ಅಂತಹ ಜನಾಂಗದ ಜೀವನ ವಿಧಾನವನ್ನು ಹೇಳುವ ಸಂಸ್ಕೃತಿಯಾಗಿದೆ.[೧೯]

ಒಬ್ಬ ವ್ಯಕ್ತಿ ಅಕ್ಷರದ ಅರಿವಿನಿಂದ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾ ಸಾಗುತ್ತಾನೆ. ಹೀಗೆ ಅವನ ಜ್ಞಾನದ ಹಸಿವು ಹೆಚ್ಚಾದಂತೆ ನಾಗರಿಕನಾಗಿ ಪರಿವರ್ತನೆಗೊಳ್ಳುತ್ತಾನೆ. ಆದರೆ ಪ್ರತಿಯೊಬ್ಬ ನಾಗರಿಕ ವ್ಯಕ್ತಿಯ ಹಿಂದೆ ಜನಪದ ಸಂಸ್ಕೃತಿಯೆಂಬುದು ಅವನ ಜೀವನದಲ್ಲಿ ಹಾಸುಹೊಕ್ಕಾಗಿರುತ್ತದೆ. ಜಾನಪದ ಅಧ್ಯಯನವನ್ನು ಬ್ರಿಟಿಷರು ಹುಟ್ಟುಹಾಕಿದರು. ಅಮೆರಿಕಾದವರು ಅದನ್ನು ಬೆಳೆಸಿದರು. ೧೮೪೬ರಲ್ಲಿ ಡಬ್ಲ್ಯು.ಜೆ.ಥಾಮ್ಸ್ ಎಂಬ ವಿದ್ವಾಂಸ ವಿಶಾಲವಾದ ಅರ್ಥದಲ್ಲಿ "Folklore" ಶಬ್ದವನ್ನು ಸೃಷ್ಟಿಸಿದ ಮೇಲೆ ಜಗತ್ತಿನ ವಿದ್ವಾಂಸರು ಈ ಶಬ್ದದ ಸೂತ್ರ ಪ್ರಾಯವಾದ ವ್ಯಾಖ್ಯೆಗೆ ಪ್ರಯತ್ನಿಸಿದರು. ಪ್ರಾತಿನಿಧಿಕವಾಗಿ ಕೆಲವು ವಿದ್ವಾಂಸರ ವ್ಯಾಖ್ಯೆಗಳನ್ನು ಪರಿಭಾವಿಸಲಾಗಿದೆ.

ಜೋನಾಸ್ ಬೇಲೀಸ್ ಎಂಬ ವಿದ್ವಾಂಸರು "Folklore is not a science about a folk, but the traditional folk science and folk poetry"(ಜಾನಪದ, ಜನ ಪದವನ್ನು ಕುರಿತ ಜ್ಞಾನವಲ್ಲ, ಅದು ಪರಂಪರಾಗತ ಜನಪದ ವಿಜ್ಞಾನ ಮತ್ತು ಜನಪದ ಕಾವ್ಯ) ಎಂದಿದ್ದಾರೆ.

ಮೇರಿಯಸ್ ಬಾರ್ಬೇ ಅವರು "ಗ್ರಂಥಸ್ಥ ಮೂಲಕ್ಕೆ, ಮುದ್ರಣಕ್ಕೆ, ಶಾಲಾ ಉಪಾಧ್ಯಾಯರಿಗೆ ಸಂಬಂಧ ಪಡದೇ ತಲೆಮಾರಿನಿಂದ ತಲೆಮಾರಿಗೆ, ಹಿರಿಯರಿಂದ ಕಿರಿಯರಿಗೆ, ನಿದರ್ಶನಗಳ ಮೂಲಕ ಅಥವಾ ಮಾತಿನ ಮೂಲಕ ಸಾಗಿ ಬರುವ ಹಿಂದಿನ ಜ್ಞಾನ, ಅನುಭವ ಜಾಣ್ಮೆ, ಕೌಶಲ, ಹವ್ಯಾಸ ಹಾಗೂ ಆಚರಣೆಗಳೆಲ್ಲಾ ಜಾನಪದ"[೨೦] ಎಂದು ಹೇಳಿದ್ದಾರೆ.

ರಿಚರ್ಡ್ ಎಂ ಡಾರ್ಸನ್ ಅವರು "ಜಾನಪದ ಭೂತಕಾಲದ ಪ್ರತಿಧ್ವನಿಯಾಗಿರುವಂತೆ, ವರ್ತಮಾನ ಕಾಲದ ಕಸುವುಳ್ಳ ಧ್ವನಿಯೂ ಆಗಿದೆ." ಜಾನಪದ ಪರಿಕಲ್ಪನೆಯ ಬಗೆಗೆ ಸ್ಪಷ್ಟವಾಗಿ ತಿಳಿದುಕೊಂಡಿದ್ದ ಇವರ ಪ್ರಕಾರ ಜಾನಪದ ಜೀವಂತವಾದ, ಸ್ವತಂತ್ರವಾದ, ಪರಿಷ್ಕೃತವಾದ ಅಧ್ಯಯನಕ್ಕೆ ಯೋಗ್ಯವಾದ ಅತ್ಯಾಧುನಿಕವಾದ ಜ್ಞಾನದ ಕ್ಷೇತ್ರವಾಗಿದೆ ಎಂದಿದ್ದಾರೆ.

ಜಾರ್ಜ್ ಎಂ. ಫಾಸ್ಟರ್ ಅವರು "ಅಲಿಖಿತ ರೂಪದ ಸಾಹಿತ್ಯ ಶಿಕ್ಷಿತ ಜನಾಂಗದಲ್ಲಿರಲಿ ಅಶಿಕ್ಷಿತ ಜನಾಂಗದಲ್ಲಿರಲಿ ಅದು ಅರ್ಥವಾದುದೇ" ಎಂದು ಹೇಳುತ್ತಾ, ಅದೇ ಜಾನಪದವೆಂದು ವ್ಯಕ್ತಪಡಿಸಿದ್ದಾರೆ.[೨೧] ದೇ.ಜವರೇಗೌಡ ಅವರು ಜಾನಪದದ ಸಮಗ್ರ ಸ್ವರೂಪದ ಬಗೆಗೆ ಈ ರೀತಿ ತಿಳಿಸುತ್ತಾ; "ಜಾನಪದ ಸಂಪ್ರದಾಯ ಒಂದು ಜನಸಮುದಾಯದ ಸಮಷ್ಟಿ ಸೃಷ್ಟಿ, ಸಾಮಾಜಿಕ ಜೀವನದ ಸಂಕೇತ, ರಾಷ್ಟ್ರೀಯ ಸಂಸ್ಕೃತಿಯ ತಾಯಿಬೇರು. ಅದು ಜನ ಸಾಮಾನ್ಯರ ಸ್ಮೃತಿಯೂ ಹೌದು, ಶ್ರುತಿಯೂ ಹೌದು. ಅದು ಬಾಯಿಯಿಂದ ಬಾಯಿಗೆ ಊರಿಂದೂರಿಗೆ, ಯುಗದಿಂದ ಯುಗಕ್ಕೆ ಹರಿದುಬರುತ್ತದೆ."[೨೨] "ಜಾನಪದವು ಜನಪದರದ್ದಾಗಿದ್ದ ಜನಪದರಿಂದಲೇ ಜನಪದರಿಗಾಗಿ ಸೃಷ್ಟಿಯಾದಂತಹುದು" ಎಂದು ಡಾ.ಅಂಬಳಿಕೆ ಹಿರಿಯಣ್ಣ ಅವರು ಹೇಳಿದ್ದಾರೆ.[೨೩]

ಜಾನಪದವೆಂಬುದು ಕೇವಲ ಭೌತಿಕವಾದುದಲ್ಲ. ಆಂತರಂಗಿಕವಾದದ್ದು. ಅದು ಬದುಕಿನ ರೀತಿ-ನೀತಿಯನ್ನು ತಿಳಿಸುವ ಸಾಹಿತ್ಯ. ಕೇವಲ ಶಿಷ್ಟದಂತೆ ಪುಸ್ತಕದ ಬದನೆಕಾಯಿಯಲ್ಲ. ಬಾಯಿಂದ ಬಾಯಿಗೆ ನದಿಯ ನೀರಂತೆ ಹರಿದು ಬಂದಿರುವ - ಬರುತ್ತಿರುವ ಜೀವನದಿ. ದೈನಂದಿನ ಜೀವನದಲ್ಲಿ ಅಡಗಿ ಹಾಸು ಹೊಕ್ಕಾಗಿದೆ. ಆದರೆ ಈಚೆಗೆ ಅಕ್ಷರ ಪರಂಪರೆ ಬೆಳೆದ ನಂತರ ಶಿಷ್ಟ ನಾಗರಿಕತೆ ಎಂಬ ಮಾತುಗಳು ಕೇಳಿಬರುತ್ತವೆ. ಅಂದರೆ ಅಕ್ಷರ ಪರಂಪರೆಗೆ ಸೇರದ ಈ ಜಾನಪದವು ತನ್ನದೇ ಆದ ಗಟ್ಟಿನಿಲುವನ್ನು ಈಗಾಗಲೇ ಕಂಡುಕೊಂಡಿದೆ.

ಮಾನವನಿಗೆ ಅಕ್ಷರಜ್ಞಾನ ಬರುವುದಕ್ಕಿಂತ ಮೊದಲೇ ಈ ಜಾನಪದವು ಜನ್ಮತಾಳಿದೆ.[೨೪] ಈ ಜಾನಪದ ಸಾಹಿತ್ಯ ಎಲ್ಲ ಬಗೆಯ ಸಾಹಿತ್ಯಕ್ಕೆ ತಾಯಿಬೇರಾಗಿದೆ. ಹಳೇ ಬೇರು - ಹೊಸಚಿಗುರು ಪ್ರಕೃತಿಯ ನಿಯಮದಂತೆ ಜನಪದವೂ ನಿತ್ಯ ಕಾಲಚಕ್ರದಲ್ಲಿ ಚಲಿಸುತ್ತಿದೆ. "ಜಾನಪದ ಸಾಹಿತ್ಯ ಏಳಂತಸ್ತಿನ ರಂಗ ಮಹಲಿನಲ್ಲಿ ಮಹಾರಾಣಿಯಂತೆ, ಉಯ್ಯಾಲೆಯನ್ನು ಆಡದೆ, ಕೇರಿ ಕೇರಿಗಳಿಗೂ, ಮನೆ-ಮನೆಗೂ ಲಭ್ಯವಾಗಿರುವ ಗಂಗೆಯಂತೆ, ತಿಳಿಯಾಗಿರುವ ಸುಲಭ ಸಾಹಿತ್ಯ" ಎಂದು ಪ್ರಸಿದ್ಧ ಜಾನಪದ ವಿದ್ವಾಂಸ ಸಿಂಪಿ ಲಿಂಗಣ್ಣ ಅವರ ಅಭಿಪ್ರಾಯವಾಗಿದೆ. ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯ 'ಜಾನಪದ ಇರಲು ಸಾಧ್ಯ. ಒಟ್ಟಾರೆ ಮನುಷ್ಯ ಎಲ್ಲೆಲ್ಲಿ ಇದ್ದಾನೆಯೋ ಅಲ್ಲಲ್ಲಿ ಜನಪದ ಇದ್ದೇ ಇರುತ್ತದೆ. ಇಂತಹ ಜನಪದ ಹುಟ್ಟುವುದಕ್ಕೆ ಮೂಲಕಾರಣ ಶ್ರಮ" ಮನುಷ್ಯನ ಶ್ರಮ ಎಷ್ಟೆಷ್ಟು ಬಳಕೆಯಾಗುತ್ತದೆಯೋ ಅಷ್ಟಷ್ಟು ಸಂಸ್ಕೃತಿ ವಿಕಾಸವಾಗುತ್ತದೆ.[೨೫]

ಎಷ್ಟೋ ಸಲ ಈ ಶಿಷ್ಟ ಮತ್ತು ಜಾನಪದ ಸಂಸ್ಕೃತಿಗಳ ನಡುವಣ ಗೆರೆಗಳನ್ನು ಕರಾರುವಕ್ಕಾಗಿ ಗುರುತಿಸಲು ಆಗುವುದಿಲ್ಲ. ಜನಪದ ಸಂಸ್ಕೃತಿಯ ಆವರಣದಲ್ಲಿಯೇ ಹುಟ್ಟಿ ಬೆಳೆದು, ಶಿಷ್ಟ ಸಂಸ್ಕೃತಿಯ ಪ್ರಬಲ ಸೆಳೆತಕ್ಕೆ ಒಳಗಾಗಿದ್ದು ಅನೇಕರು ತಮ್ಮ ಬದುಕಿನಲ್ಲಿ ಹೊಸ ಸಾಮರಸ್ಯವೊಂದರ ಮೂಲಕ ಸಂಮಿಶ್ರ ಸಂಸ್ಕೃತಿಯನ್ನು ಸೃಷ್ಟಿಸಬಲ್ಲರು.[೨೧] ಯಾವ ಆಸ್ಥಾನದ ಕವಿಗಳಿಗೂ ಕಡಿಮೆ ಇಲ್ಲದ ಈ ಜನಪದರು ತಮ್ಮ ಹೆಸರನ್ನು ಎಲ್ಲಿಯೂ ಹೇಳಿಕೊಳ್ಳದೆ ಕಾಡು ಕುಸುಮದಂತೆ ಅರಳಿ ಪರಿಮಳವನ್ನು ಸೂಸಿದ್ದಾರೆ. ಇವರು ಯಾರನ್ನೂ ವೈಯಕ್ತಿಕವಾಗಿ ಹೊಗಳದೆ ದೇವರ, ಶರಣರ ಮೇಲೆ ಶ್ರದ್ಧಾಭಕ್ತಿಗಳನ್ನಿರಿಸಿ ಸಹಜವಾಗಿ ಕಾವ್ಯವನ್ನು ಕಟ್ಟಿದ್ದಾರೆ. ಆದುದರಿಂದ ಅವರ ಸಾಹಿತ್ಯದಲ್ಲಿ ನಿಜವಾದ ಮಣ್ಣಿನ ವಾಸನೆ ಅಡಗಿದೆ.

ಡಾ.ಬಿ.ಎಸ್.ಗದ್ದಗಿಮಠ ಅವರು ತಮ್ಮ ಜಾನಪದ ಗೀತೆಗಳ ಪುಸ್ತಕದಲ್ಲಿ ಹೀಗೆ ಹೇಳಿದ್ದಾರೆ. "ಜಾನಪದ ಸಾಹಿತ್ಯವು ನಿರಾಭರಣ ಸುಂದರಿ. ಅದಕ್ಕೆ ಅಲಂಕಾರದ ಭಾರವಿಲ್ಲ. ಪರಂಪರೆಯ ಗುಲಾಮ ತನವಿಲ್ಲ. ಸಮಯಾದಿಗಳ ಜಂಜಾಟವಿಲ್ಲ. ಅನುಕರಣಗಳ ಮುರವತ್ತಿಲ್ಲ. ನಿತ್ಯ ನಿಸರ್ಗಕ್ಕೆ ಅದು ಸದಾ ಕಣ್ಣು ತೆರೆದಿದೆ. ಅದರಲ್ಲಿ ಸುಳಿದಾಡುತ್ತಿರುವ ಜನವಾಣಿ, ಕುಣಿದಾಡುತ್ತಿರುವ ಜನಜೀವನ, ಉಸಿರಾಡುತ್ತಿರುವುದು ನಮ್ಮ ಸಂಸ್ಕೃತಿ" ಶಿಷ್ಟ ಸಂಸ್ಕೃತಿಯಲ್ಲಿನ ಪ್ರತಿಯೊಂದು ಸಾಂಸ್ಕೃತಿಕ ಸೃಷ್ಟಿಯೂ ಸಹ ಮೇಲಿನಿಂದ ಹೇರಲ್ಪಟ್ಟದ್ದಾಗಿರುತ್ತದೆ. ರಾಜ, ಪುರೋಹಿತ, ರಾಜ ನೀತಿಜ್ಞಗಳಿಂದ ಈ ಶಿಷ್ಟ ಸಂಸ್ಕೃತಿಯೂ ನಿಯಂತ್ರಿಸಲ್ಪಟ್ಟು ವ್ಯಕ್ತಿಗಳನ್ನು ತನ್ನ ಆವರಣಕ್ಕೆ ಸೆಳೆದುಕೊಳ್ಳುತ್ತಿರುತ್ತದೆ. ಆದರೆ ಜನಪದ ಸಂಸ್ಕೃತಿಯೂ ತನ್ನ ಒಟ್ಟು ಸಮುದಾಯದ ಮೂಲಕ ಸ್ವೀಕರಿಸಿದ ಸಂಪ್ರದಾಯ, ನಂಬಿಕೆ, ಹಾಡು, ಕುಶಲ ಕೈಗಾರಿಕೆ ಮುಂತಾದ ಅರಿವಿನ ವ್ಯಾಪ್ತಿಯಲ್ಲಿ ವ್ಯಕ್ತಿಯನ್ನು ಪಳಗಿಸುತ್ತಿರುತ್ತದೆ. ಎಷ್ಟೋ ವೇಳೆ ನಮಗೆ ಶಿಷ್ಟ ರಚನೆಗಳು, ಅಭಿವ್ಯಕ್ತಿಗಳು ಮತ್ತು ಜನಪದ ಕಲಾತ್ಮಕ ಅಭಿವ್ಯಕ್ತಿಗಳ ನಡುವೆ ಸ್ಪಷ್ಟಗೆರೆ ಎಳೆಯಲು ಆಗುವುದೇ ಇಲ್ಲ. "ಜಾನಪದ ಸಾಹಿತ್ಯ ರೂಪಕಗಳು ಶಿಷ್ಟ ಸಾಹಿತ್ಯ ರೂಪಕಗಳಿಗಿಂತ ಕಳಪೆಯವು ಎಂದು ಬಗೆಯಬಾರದು. ಅಷ್ಟೇ ಅಲ್ಲ ಮಾನವೀಯ ಚಟುವಟಿಕೆಗಳಲ್ಲಿಯ ಅವರ ಮೇಲ್ಮೆಯನ್ನು ಅನಕರ್ಷಿಸಿದಂತಾಗುತ್ತದೆ.[೨೨]"

ದೇವರೇ ತಂದೆ-ತಾಯಿ ಎಂಬ ಅಲೌಕಿಕತೆಯನ್ನು ಶಿಷ್ಟಪದ ಸಾರಿದರೆ ತಾಯಿ-ತಂದೆಗಳೇ ಪ್ರತ್ಯಕ್ಷ ದೇವರು ಎಂಬಂತಹ ಮೂಲವನ್ನು ಜಾನಪದ ತಿಳಿಹೇಳುತ್ತದೆ. ಶಿಷ್ಟ ಸಂಸ್ಕೃತಿಯೆಂದರೆ ಸಿದ್ಧ ಸಂಸ್ಕೃತಿಯಾಗಿದೆ.[೨೩] ಶಿಷ್ಟ ಸಾಹಿತ್ಯ ಕಟ್ಟಿದವನ ಕೃತಿಯಾಗಿ ನಿಂತರೆ ಜನಪದ ಸಾಹಿತ್ಯ ಎತ್ತಿಕೊಂಡವನ ಕೃತಿಯಾಗಿ ನಿಲ್ಲುತ್ತದೆ.[೨೪] ಶಿಷ್ಟ ಸಾಹಿತ್ಯ ಕಟ್ಟಿದವನ ಕೃತಿಯಾಗಿ ನಿಂತರೆ, ಜನಪದ ನಡೆ-ನುಡಿಗಳಲ್ಲಿ ಪಾರದರ್ಶಿಕತೆ ಇರುವುದರಿಂದ ಅಲ್ಲಿ ಕವಿಕೃತಿಗಳ ಮಧ್ಯ ಕಂದರ ಕಡಿಮೆ. ಶಿಷ್ಟಪದದಲ್ಲಿ ಈ ಕಂದರ

ಜಾಸ್ತಿ. ಜನಪದ ಸಾಹಿತ್ಯ ಸೌಂದರ್ಯಕ್ಕಿಂತ ಸಂದೇಶಕ್ಕೆ, ಬಾಹ್ಯವೇಷಕ್ಕಿಂತ ಭಾವಾವೇಷಕ್ಕೆ ಪ್ರಾಧಾನ್ಯತೆ ನೀಡುತ್ತದೆ.

ಇಂಗ್ಲಿಷ್‌ನ Booklore ಪದಕ್ಕೆ ಕನ್ನಡದಲ್ಲಿ ಶಿಷ್ಟಪದ ಅಥವಾ ಗ್ರಂಥಪದ ಎಂಬ ಶಬ್ದವನ್ನು ಸಂವಾದಿಯಾಗಿ ಕರೆಯಲಾಗುವುದು. ಅಕ್ಷರದಿಂದಾದ ವೈಯಕ್ತಿಕ ರಚನೆಗಳನ್ನು ಶಿಷ್ಟಪದವೆಂದು ಕರೆಯಲಾಗುತ್ತಿದೆ. ಶಿಷ್ಟ ಎಂದರೆ ಸಜ್ಜನ, ಸಂಪ್ರದಾಯ ಎಂದು ಕನ್ನಡ ರತ್ನಕೋಶದಲ್ಲಿ ಕರೆಯಲಾಗಿದೆ. ಶಿಷ್ಟ ಎಂದರೆ ಒಂದು ಪರಂಪರೆಯ ಪಳೆಯುಳಿಕೆಯಲ್ಲಿ ಸ್ವಲ್ಪ ಬದಲಾವಣೆ ಪಡೆದದ್ದು ಎಂದರ್ಥ. ಹಿಂದಿನ ಕಾಲದಲ್ಲಿ ಆರ್ಯರು, ಪಂಡಿತರು, ವೈದಿಕರು ತಮ್ಮದೇ ಆದ ನೀತಿ-ನಿಯಮಗಳನ್ನು ಲೆಕ್ಕಾಚಾರದಡಿಯಲ್ಲಿ ರೂಢೀಗತಗೊಳಿಸಿ ಅವುಗಳಿಗೆ ಒಂದು ಚೌಕಟ್ಟನ್ನು ನಿರ್ಮಿಸಿದ್ದರು. ಅದರಂತೆ "ಸಾಹಿತ್ಯಕಲೆ, ನೃತ್ಯ, ಸಂಗೀತ, ಹಾಡು ಮುಂತಾದವುಗಳೆಲ್ಲ ಶಿಷ್ಟ ಸಂಸ್ಕೃತಿಯ ತಳಹದಿಯ ಮೇಲೆ ನಿರ್ಮಾಣಗೊಂಡಿವೆ. 'ಕಲೆಗಾಗಿ ಕಲೆ' ಎಂಬ ಮಾತು ಕಲೆ, ಸಾಹಿತ್ಯ, ಸಂಗೀತ ಸಾಧ್ಯತೆಗಳನ್ನು ಮೊಟಕುಗೊಳಿಸುವುದೇ ಆಗಿದೆ. ಇಂತಹ ಸಾಹಿತ್ಯ, ಕಲೆ, ಸಂಗೀತ, ನೃತ್ಯ ಮುಂತಾದವುಗಳೆಲ್ಲಾ ಶಿಷ್ಟ ಸಂಸ್ಕೃತಿಯ ಚೌಕಟ್ಟಿನೊಳಗೆ ನರಳಿ ಅನೇಕ ಇತಿ-ಮಿತಿಗಳನ್ನು ಪಡೆದುಕೊಂಡಿವೆ.[೩೦]" ಅಕ್ಷರ-ಅನಕ್ಷರ ಪರಂಪರೆಯನ್ನು ನಾವು ಶಿಷ್ಟ-ಜಾನಪದ ಎಂದು ಗುರುತಿಸುತ್ತೇವೆ. ಇದರಲ್ಲಿ ಮೊದಲನೆಯದಾದ ಶಿಷ್ಟ ಪದವು ಸ್ವಲ್ಪ ಅಪಾಯಕಾರಿಯಾಗಿದೆ. ಮಾತ್ರವಲ್ಲ ತನ್ನ ನೆಲೆಯಲ್ಲಿ ನಿಂತೇ ಅದು ಜಾನಪದವನ್ನು ವ್ಯಾಖ್ಯಾನಿಸುತ್ತದೆ. ಇದು ಅಕ್ಷರ ಪದವಾಗಿರುವಂತವರ ತರ್ಕ."[೩೧]

ಬರವಣಿಗೆಯುಳ್ಳ ಒಂದು ಭಾಷೆಯಲ್ಲಿ ಜನಪದ ಸಾಹಿತ್ಯವು ಆ ಭಾಷೆಯಷ್ಟು ಪ್ರಾಚೀನ : ಶಿಷ್ಟಪದ ಸಾಹಿತ್ಯವು ಅದರ ಬರಹದಷ್ಟು ಪ್ರಾಚೀನವೆಂದು ಹೇಳಬೇಕಾಗುತ್ತದೆ. ಯಾವುದೇ ಗ್ರಂಥಸ್ಥ ಭಾಷೆಯಲ್ಲಿ ಜನಪದ ಸಾಹಿತ್ಯ ಹುಟ್ಟಿ ಎಷ್ಟೋ ವರ್ಷಗಳು ಕಳೆದ ಬಳಿಕ ಶಿಷ್ಟಪದ ಸಾಹಿತ್ಯ ಹುಟ್ಟಿದೆ. ಹಿಂದೆ ಮಾರ್ಗ ಸಂಪ್ರದಾಯವು ಸಾಹಿತ್ಯದಲ್ಲಿ ಸಮಗ್ರತೆಯನ್ನು ತರಬೇಕೆಂದೇ ಅಷ್ಟಾದಶ ವರ್ಣನೆಗಳ ಹರಹನ್ನು ಹಾಕಿಕೊಂಡಿತು. ಆದರೆ ಮಾರ್ಗೀಯರ ಆಯ್ಕೆ ಈ ಮನೋಭಾವ ಈ ಕಡ್ಡಾಯ ವರ್ಣನೆಗಳಲ್ಲಿ ಸೋತು ಹೋಯಿತು. ನಮ್ಮ ಶಿಷ್ಟ ಕಾವ್ಯಗಳ ಸೂಳೆಗೇರಿಗಳು ಅರ್ಥವಿಲ್ಲದ ವರ್ಣನೆಗಳಾಗಿ ಗ್ರಂಥ ಭಾರವಾಗಿದ್ದು, ಇದಕ್ಕೆ ಉದಾಹರಣೆ : ಹೇಳಿಕೊಳ್ಳುವ ಒಂದು ಉತ್ತಮ ಪದ್ಯ ಸೂಳೆಗೇರಿ ವರ್ಣನೆಯಲ್ಲಿ ಬರೆಯಲು ನಮ್ಮ ಶಿಷ್ಟ ಕವಿಗಳಿಗೆ ಸಾಹಿತ್ಯದ ವಿರುದ್ಧವಾಗಿ ಜನಪದ ಸಾಹಿತ್ಯ ಮಾತ್ರ ಯಾವುದೇ ವಸ್ತುವಿನ ಕೂಡ ಮುಕ್ತವಾದ, ಮುಕ್ತಸಂವಾದ ನಡೆಸಿದೆ, ನಡೆಸಬಲ್ಲದು.[೩೨]

ಶಿಷ್ಟ ಸಾಹಿತ್ಯ ವಿದ್ವಜ್ಜನ ಸಮೂಹದಲ್ಲಿ, ಜನಪದ ಸಾಹಿತ್ಯ ಜನಸಮೂಹದಲ್ಲಿ ಪ್ರಸಾರ ಮಾಧ್ಯಮವಾಗಿ ಕೆಲಸ ಮಾಡುತ್ತದೆ. ದುಡಿಮೆ-ವಿರಾಮ, ಹಬ್ಬ-ಹುಣ್ಣಿಮೆಗಳ ನೆಪದಿಂದ ವೇಗವಾಗಿ,

ವ್ಯಾಪಕವಾಗಿ ಸಂಸ್ಕೃತಿ ಪ್ರಸಾರ ಕಾರ್ಯವನ್ನು ನಿರ್ವಹಿಸುವ ಜನಪದ ಸಾಹಿತ್ಯ ಪ್ರಬಲ ಸಮೂಹ ಮಾಧ್ಯಮವಾಗಿದೆ.[೩೩] ಶಿಷ್ಟಸಾಹಿತ್ಯದಲ್ಲಿ ಆಯಾ ಕೃತಿಗಳು ಭೌಗೋಳಿಕ ಪರಿಸರ ತಿಳಿದಿರುವುದರಿಂದ ಪಾಠಾಂತರಗಳನ್ನು ಗುರುತಿಸುವ ಸಾಧ್ಯತೆಗಳು ಹೆಚ್ಚಾಗಿ ಕಂಡುಬರುತ್ತವೆ. ಆದರೆ ಜನಪದ ಸಾಹಿತ್ಯಕ್ಕೆ ಅದರ ಭೌಗೋಳಿಕ ಪರಿಸರ ಹಾಗೂ ಕವಿ ಅನಾಮಧೇಯನಾದ್ದರಿಂದ ಪ್ರತಿಯೊಂದು ಪಾಠವನ್ನು ಭಿನ್ನ ಪಾಠವೆಂದು ಅರಿಯಬೇಕಾಗುತ್ತದೆ.

ಶಿಷ್ಟ ಸಾಹಿತ್ಯದಲ್ಲಿ ಕವಿಯೇ ಬೇರೆ, ಹಾಡುಗಾರನೇ ಬೇರೆ. ಆದರೆ ಜಾನಪದ ಸಾಹಿತ್ಯದಲ್ಲಿ ಈ ಎರಡೂ ಅವಸ್ಥೆಗಳಲ್ಲಿ ಒಬ್ಬನೇ ವ್ಯಕ್ತಿ ಇರುತ್ತಾನೆ.[೩೪] ಜಾನಪದ ಗಾಯಕ ಏಕಕಾಲಕ್ಕೆ ರಚನೆಗೈದು ಹಾಡುವುದರ ಮೂಲಕ ಪ್ರದರ್ಶನಕ್ಕೆ ಪ್ರವೃತ್ತನಾಗುವ ಪ್ರಕ್ರಿಯೆಯೇ ತುಂಬಾ ವಿಚಿತ್ರವಾಗಿರುತ್ತದೆ. ಶಿಷ್ಟ ಸಾಹಿತ್ಯದಲ್ಲಿ ಪರಂಪರೆಯ ವಸ್ತುವನ್ನು ತೆಗೆದುಕೊಂಡು ಕಾವ್ಯ ರಚನೆಯಾಗಿರುವುದನ್ನು ಕಾಣುತ್ತೇವೆ. ಅಲ್ಲಿ ಸಮಷ್ಟಿ ಸೃಷ್ಟಿಯಾಗದೇ ವ್ಯಷ್ಟಿ ಸೃಷ್ಟಿಯಾಗಿರುವುದನ್ನು ಕಾಣಬಹುದು. ಆದರೆ ಜನಪದ ಸಾಹಿತ್ಯದಲ್ಲಿ ಹೀಗಾಗಲಾರದು. ಒಬ್ಬ ಸಾಮಾನ್ಯ ವ್ಯಕ್ತಿ ತನ್ನ ಸಮಕಾಲೀನತೆಯೊಂದಿಗೆ ತನಗೆ ಕಂಡುಬಂದ ವಸ್ತುವನ್ನು ಕುರಿತು ತಕ್ಷಣ ಹಾಡಾಗಿ ಪರಿವರ್ತಿಸಿ ಅದನ್ನು ಅಭಿವ್ಯಕ್ತಿಸುವಲ್ಲಿ ಸಫಲನಾಗುತ್ತಾನೆ. ಆದ್ದರಿಂದ ಪರಂಪರಾನುಗತವಾಗಿ ಬಂದಿರುವ ವಸ್ತುವನ್ನು ನೋಡುವ ಶಿಷ್ಟಕವಿಗೂ ತಕ್ಷಣ ಪ್ರತಿಕ್ರಿಯಿಸುವ ಜಾನಪದ ಕವಿಗೂ ತುಂಬಾ ವ್ಯತ್ಯಾಸವನ್ನು ಕಂಡುಕೊಳ್ಳಬಹುದಾಗಿದೆ. ಆದರೆ ಶಿಷ್ಟರಲ್ಲಿ ಬಳಕೆಯಾಗುವ ತಂತ್ರವಾಗಲೀ ಅಭಿವ್ಯಕ್ತಿಯ ಕ್ರಮವಾಗಲೀ ಜನಪದರಲ್ಲಿ ತುಂಬಾ ಭಿನ್ನವಾಗಿರುತ್ತದೆ.

ಶಿಷ್ಟರು ಜನಪದರಿಂದ ಪ್ರೇರಣೆ ಪಡೆದಿರುವಂತೆ ಶಿಷ್ಟರಿಂದಲೂ ಜನಪದೀಯರೂ ಅನೇಕ ವಿಷಯಗಳನ್ನು ಪಡೆದಿರುವರು. ಉದಾ: ಜನಪದರು ಆಡುವ ಯಕ್ಷಗಾನ, ಬಯಲಾಟ, ರೂಪಕಗಳು ಶಿಷ್ಟರ ಸಂಗೀತ, ನೃತ್ಯಗಳಿಂದ ಪ್ರಭಾವಿತವಾಗಿದೆ. ಇದಲ್ಲದೆ ಇಂದು ಜನಪದರಲ್ಲಿ ಕಂಡುಬರುವ ವ್ರತಗಳು, ವಾರದ ಕಲ್ಪನೆಗಳು ಮತ್ತು ಶಿಷ್ಟ ದೇವತೆಗಳ ಪೂಜೆಯ ರೀತಿಗಳನ್ನು ನಾವು ನೋಡಬಹುದು. ಶಿಷ್ಟ ವ್ಯಕ್ತಿಗಳನ್ನು ತಮ್ಮ ಕಥೆಗಳ ನಾಯಕರನ್ನಾಗಿಸಿಕೊಂಡಿದ್ದಾರೆ. ಇದಲ್ಲದೆ ವೈದಿಕರಿಂದ ರೂಪಿಸಲ್ಪಟ್ಟ ಕರ್ಮಸಿದ್ಧಾಂತ ಇವರ ಜೀವನ ರೀತಿಯಲ್ಲಿ ಬಹಳ ಮುಖ್ಯ ಪಾತ್ರವಹಿಸಿದೆ.[೩೫] ಶಿಷ್ಟಪದ ಬರವಣಿಗೆಯುಳ್ಳ ಭಾಷೆಯಲ್ಲಿ ಪುಸ್ತಕಗಳ ಹಾಗೂ ಸಮೂಹ ಮಾಧ್ಯಮಗಳ ಮುಖಾಂತರ ಕಲಿತವರಿಂದ ರೂಪುಗೊಳ್ಳುತ್ತದೆ ಮತ್ತು ಶಾಶ್ವತವೆಂದು ವ್ಯಾಖ್ಯಾನಿಸಲಾಗುತ್ತದೆ. ಆದರೆ ವಾಸ್ತವವಾಗಿ "ಶಿಷ್ಟ ಸಾಹಿತ್ಯಕ್ಕೆ ಕರ್ತೃ ಇರುವಂತೆ ಜನಪದ ಅಥವಾ ಅನಕ್ಷರಸ್ಥರಲ್ಲೂ ಮೌಖಿಕ ರೂಪದಲ್ಲಿ ಅವರ ಪರಿಸರ, ಕಾಲ, ದೇಶವನ್ನು ಪತ್ತೆ ಮಾಡಬಹುದು."[೩೬] ಹಾಗೂ ಇದು ಅಶಾಶ್ವತವೇನೂ ಆಗಿರುವುದಿಲ್ಲ. ಕಂಠಸ್ಥ ರೂಪದಲ್ಲಿ ಬಹುಕಾಲ ಉಳಿದಿರುತ್ತದೆ. ಸಮಕಾಲೀನತೆಯೊಂದಿಗೆ ತನ್ನ ಹೆಜ್ಜೆ ಹಾಕುತ್ತಾ ಸಮಷ್ಟಿಯಲ್ಲಿ ಬೆರೆಯುತ್ತಿದೆ.

"ಜಾನಪದ ಮೂಲ ಸತ್ವವನ್ನು ಅಕ್ಷರ ಲೋಕದ ಚಟುವಟಿಕೆಗಳೆಲ್ಲ ಅತ್ಮಗತ್ಮವಾದ ಜೀವಧಾತು ಎಂಬಂತೆ ಸ್ವೀಕರಿಸಿವೆ."[೩೭] ಶಿಷ್ಟ ಸಾಹಿತ್ಯಕ್ಕೂ ಜನಪದ ಸಾಹಿತ್ಯಕ್ಕೂ ಅನೇಕ ವಿಷಯಗಳಲ್ಲಿ ಅಂತರವಿದೆ. ಆದರೆ ಇವು ಒಂದಕ್ಕೊಂದು ಪ್ರಭಾವ ಬೀರುತ್ತಾ, ಪ್ರೇರಣೆಯನ್ನೊದಗಿಸುತ್ತಾ ಬಂದಿವೆ. ಆದರೆ ಶಿಷ್ಟ ಸಾಹಿತ್ಯ ಬರವಣಿಗೆಯ ಸೌಲಭ್ಯದ ಮೂಲಕ ಅವಸ್ಥಾಭೇದಗಳನ್ನು ಉಳಿಸಿಕೊಳ್ಳುತ್ತದೆ ಎನ್ನುವ ಡಾ.ಎಂ.ಎಂ.ಕಲ್ಬುರ್ಗಿ ಅವರ ವಿಚಾರ ಹೆಚ್ಚು ಸೂಕ್ತವೆನಿಸುತ್ತದೆ.[೩೮] ಶಿಷ್ಟ ಸಾಹಿತ್ಯ ಬಿಡುವಿನ ವೇಳೆಯಲ್ಲಿ ಹುಟ್ಟಿದರೆ ಜನಪದ ಸಾಹಿತ್ಯ ದುಡಿವ ವೇಳೆಯಲ್ಲಿ ಹುಟ್ಟಿದೆ. ಶಿಷ್ಟ ಸಾಹಿತ್ಯ ಸಿದ್ಧ ಸಾಹಿತ್ಯ - ಶುದ್ಧ ಸಾಹಿತ್ಯವಾದರೆ, ಜನಪದ ಸಾಹಿತ್ಯ ಬದುಕಿಗೆ ಬದ್ಧವಾದ ಸಾಹಿತ್ಯವಾಗಿದೆ.[೩೯]

ಶಿಷ್ಟ ಸಂಪ್ರದಾಯವು ಸಾಹಿತ್ಯದಲ್ಲಿ ಜೀವನ ಸಮಗ್ರತೆಯನ್ನು ತರಬೇಕೆಂದೇ ಅಷ್ಟಾದಶ ವರ್ಣನೆಗಳ ಹರಹನ್ನು ಹಾಕಿಕೊಂಡಿತು. ಆದರೆ ಈ ಆಯ್ಕೆ ಈ ಮನೋಭಾವ, ಈ ಕಡ್ಡಾಯವು ವರ್ಣನೆಗಳಲ್ಲಿ ಸೋತು ಹೋಯಿತು. ಕುಮಾರ ರಾಮನ ಕಥೆ ಮೂಲತಃ ಜನಪದ ಮೂಲದ್ದು. ಆದರೆ ನಂಜುಂಡ ಕವಿ ಈ ವಸ್ತುವನ್ನು ಕುರಿತು ಕಾವ್ಯ ರಚನೆ ಮಾಡಿರುವುದರಿಂದ ಈ ವಸ್ತುವನ್ನು ನಂಜುಂಡ ಕವಿಯ ಕಾಲದಷ್ಟು ಹಳೆಯದು ಎಂದು ಮಾತ್ರ ಹೇಳಬಹುದು. ಜನಪದರು ತಮ್ಮ ದುಡಿಮೆ ಹಾಗೂ ದುಡಿಮೆಗೆ ಸಂಬಂಧಿಸಿದ ನೆಲ, ಜಲ, ಪಶು, ಪಕ್ಷಿ, ಮರ, ಗಿಡಗಳ ಸಂಪರ್ಕ ಮಾತ್ರ ಇತ್ತು. ಹೀಗಾಗಿ ಇವರಿಗೆ ಕಲ್ಪನಾ ವಿಲಾಸದ ಹಿನ್ನೆಲೆಯಲ್ಲಿ ಸೃಷ್ಟಿಸಿದ ಪುರಾಣಗಳು, ಅಷ್ಟಾದಶ ವರ್ಣನೆಗಳು, ಗಣ, ಮಾತ್ರೆ, ವೃತ್ತ ಮುಂತಾದ ತಾಂತ್ರಿಕ ಅಂಶಗಳು ಬದುಕಿನ ಅಂಶಗಳಾಗಲೇ ಇಲ್ಲ. ಅಲ್ಲದೆ ಇವರ ಸೃಷ್ಟಿ ಕ್ರಿಯೆ ಏನೂ ನಿಲ್ಲಲಿಲ್ಲ. ತಾವು ಪ್ರತಿನಿತ್ಯ ಕಾಣುವ ಪ್ರಕೃತಿಯೊಂದಿಗಿನ ಸಂಬಂಧದಿಂದಲೇ ಸಾಹಿತ್ಯ ಸೃಷ್ಟಿಗೆ ತೊಡಗಿದರು. ಇದು ಪ್ರಜ್ಞಾಪೂರ್ವಕವಾದ ತೊಡಗುವಿಕೆಯಾಗಿರದೆ, ತಮ್ಮ ದುಡಿಮೆಯ ಸಹಜವಾಗಿ ಹಾಗೂ ಒಂದು ಅಂಶವಾಗಿ ನಡೆಯುವಂತಹ ಕ್ರಿಯೆಯಾಯಿತು. ಹೊಲಗದ್ದೆಗಳಲ್ಲಿ, ಕಾಡುಮೇಡುಗಳಲ್ಲಿ ಕೆಲಸ ಮಾಡುತ್ತಲೇ ರಾಮಾಯಣ ಮಹಾಭಾರತದ ಕಥೆಗಳನ್ನು ಹಾಡಿನ ರೂಪದಲ್ಲಿ ಹೇಳತೊಡಗಿದರು. ಇಂತಹ ಹಾಡುಗಳನ್ನೇನು ಅವರು ಸ್ವತಃ ಬರೆದಿಡದೆ, ಕೇವಲ ಬಾಯಿಂದ ಬಾಯಿಗೆ ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸಿಕೊಂಡು ಬಂದರು.[೪೦]

ಶಿಷ್ಟ ಸಾಹಿತ್ಯ ರಚನೆ ಪ್ರಾರಂಭವಾಗುವುದಕ್ಕಿಂತ ಮುಂಚಿನಿಂದಲೂ ರಾಮಾಯಣ, ಮಹಾಭಾರತದ ಕಥೆಯನ್ನೊಳಗೊಂಡ ಹಲವಾರು ಜಾನಪದ ಹಾಡು, ಲಾವಣಿಗಳು ಜನಪದರ ಬಾಯಿಯಲ್ಲಿ ಪ್ರಚಾರದಲ್ಲಿದ್ದವು. ಇಲ್ಲಿ ಈಗ ಗಮನಿಸಬೇಕಾದ ಮುಖ್ಯ ಅಂಶವೇನೆಂದರೆ, ಜನಪದ ರಾಮಾಯಣ, ಮಹಾಭಾರತದಂತಹ ಕಥೆಗಳಲ್ಲಿ ಸೀತೆಗೆ ಹೆಚ್ಚಿನ ಸ್ಥಾನ-ಮಾನಗಳನ್ನು ಕೊಟ್ಟಿರುವುದು. ಸೀತೆಯ ಜನ್ಮ, ಸ್ವಯಂವರ, ಸೀತಾಪಹರಣ, ಅಗ್ನಿ ಪರೀಕ್ಷೆ, ಸೀತಾಪರಿತ್ಯಾಗ ಮತ್ತು ಲವಕುಶರ ಕಾಳಗ ಮುಂತಾದ

ಪ್ರಸಂಗಗಳು ಜನತೆಯ ಅಭಿರುಚಿಗೆ ಮತ್ತು ಅಭೀಪ್ಸೆಗಳಂತೆ ವಿವಿಧ ರೀತಿಯಲ್ಲಿ ನಿರೂಪಿಸಲ್ಪಟ್ಟಿವೆ. ಯಕ್ಷಗಾನ ಬಯಲಾಟಗಳಲ್ಲಿ ರಾಮಾಯಣದ ಕಥೆಗಳನ್ನು ಬಳಸಿಕೊಂಡಿರುವುದನ್ನು ಬೇರೆ ಬೇರೆ ವಿದ್ವಾಂಸರ ಪುಸ್ತಕಗಳಲ್ಲಿ ತಿಳಿದುಬರುತ್ತದೆ. "ಕಣ್ಣಾಮುಚ್ಚೆ ಕಾಡೇ ಗೂಡೆ ಉದ್ದಿನ ಮೂಟೆ ಉರುಳೇ ಹೋಯ್ತು" ಎಂಬ ಸರಾಗವಾದ ಜಾನಪದ ಹಾಡಿನ ಆಟವಂತೂ ರಾಮಾಯಣದ ಕಥೆಯನ್ನೇ ಹೇಳುತ್ತದೆಯೆಂದು ಡಿವಿಜಿ ಅವರು ಹೇಳುತ್ತಾರೆ.[೪೧]

ಯಾವ ದೇಶ, ಭಾಷೆ, ಸಾಹಿತ್ಯವಾದರೂ, ಜನಪದದ ಸತ್ವಸಾರ, ಸಹಾಯ, ಸಹಕಾರ, ಸ್ಫೂರ್ತಿ, ಪ್ರಭಾವ ಪ್ರೇರಣೆಗಳಿಂದಲೇ ಪೋಷಿತಗೊಂಡು ಬೆಳೆದುಬಂದಿದೆ. ಕಾರಣ ಯಾವುದೇ ದೇಶದ ಮೊದಲ ಸಾಹಿತ್ಯ ಆ ದೇಶದ ಜನಪದ ಸಾಹಿತ್ಯವಾಗಿದೆ. ಆದುದರಿಂದ ಶಿಷ್ಟ ಸಾಹಿತ್ಯ ಎನ್ನುವುದೆಲ್ಲವೂ ಜನಪದ ಸಾಹಿತ್ಯದ ನೆರಳಿನಲ್ಲಿ ಆಶ್ರಯಿಸುತ್ತಾ ಬಂದಿದೆ. "ಹೋಮರ್ , ವಾಲ್ಮೀಕಿ, ವ್ಯಾಸಾದಿ ಕವಿಗಳೆಲ್ಲರೂ ಅಜ್ಞಾತ ಜನಪದ ಕವಿಗಳಿಗೆ ನಾನಾ ರೀತಿಯಲ್ಲಿ ಋಣಿಯಾಗಿದ್ದಾರೆಂಬುದು ಅತ್ಯಂತ ಮುಖ್ಯ ಸಂಗತಿ ಎನ್ನಬಹುದು. ಕೆಲವೊಂದು ಸಂದರ್ಭದಲ್ಲಿ ಶಿಷ್ಟ ನಿಂತ ನೀರಾದಾಗ ಅದಕ್ಕೆ ಜನಪದ ಸಾಹಿತ್ಯ ಅದರ ಮೇಲೆ ಹರಿದು ಮತ್ತು ಹೊಸತನ ತುಂಬುವ ಪ್ರಯತ್ನ ಮಾಡಿದೆ. ವರ್ಡ್ಸ್‌ವರ್ಥ್, ಬರ್ನ್ಸ್, ಸ್ಕಾಟ್ ಶೆಲ್ಲಿ, ಕುಮಾರವ್ಯಾಸ, ಲಕ್ಷ್ಮೀಶ, ವಚನಕಾರರು, ದಾಸರು ಈ ಮಾತಿಗೆ ಸಾಕ್ಷಿಗಳಾಗಿದ್ದಾರೆ."[೪೨] ನಮ್ಮ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತವಾಗಲೀ, ಗ್ರೀಸಿನ ಇಲಿಯಡ್ ಮತ್ತು ಒಡಿಸ್ಸಿಗಳಾಗಲೀ ಮೂಲತಃ ಜಾನಪದ ಕಾವ್ಯಗಳಾಗಿವೆ. ಇವುಗಳ ಕರ್ತೃ ವಾಲ್ಮೀಕಿ, ವ್ಯಾಸ ಮತ್ತು ಹೋಮರ್ ಆಗಿದ್ದರೂ, ಮೊದಲು ಈ ಕಾವ್ಯಗಳನ್ನು ಜನಪದರು ತಮ್ಮದೆ ಹಾಡಿನ ಧಾಟಿಯಲ್ಲಿ ಹಾಡುತ್ತಿದ್ದಾಗ ಬಾಯಿಂದ, ಬಾಯಿಗೆ ತೇಲಿಬರುತ್ತಿದ್ದವು. ಕಾಲಾನುಕ್ರಮದಲ್ಲಿ ಶಿಷ್ಟಕವಿಗಳು ಅವುಗಳನ್ನು ಪರಿಶೋಧಿಸಿ ಗ್ರಾಂಥಿಕ ಶಬ್ದಗಳಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದರು. ವ್ಯಾಸವೆಂದರೆ ಸುಧೀರ್ಘವಾದುದು ಎಂದರ್ಥ. ಅದೇ ರೀತಿ ಹೋಮರ್ ಎಂಬ ಪದ ಹೋಮರಾಯ್ಡ್ ಎಂಬುದರಿಂದ ನಿಷ್ಪತ್ತಿಯಾಗಿದೆ ಆದರೆ 'ಅಂಧ ಗಾಯಕರ ಗುಂಪು' ಎಂದು ಸಂಶೋಧಕರ ಅಭಿಪ್ರಾಯ.[೪೩] ಆದುದರಿಂದ ಗ್ರೀಸ್ ದೇಶದಲ್ಲಿನ ಜನರ ಬಾಯಿಯಲ್ಲಿದ್ದ ವೀರರ ನೆನಪುಗಳನ್ನು ಕಥೆ ಹಾಡಿನ ಮೂಲಕ ಹೊರಹೊಮ್ಮಿಸಲಾಯಿತು.

"ಜನಪದ ಸಾಹಿತ್ಯ ಪಂಡಿತ ವರ್ಗದಿಂದ ತಿರಸ್ಕೃತವಾದರೂ, ಪಂಡಿತಾಭಿಮಾನಿಯಾದ ಸಾಹಿತ್ಯ ಪ್ರಜಾಭಿಮುನಿಯಾದಾಗ ಸಂವೇದನೆಗೆ ಹತ್ತಿರವಾದ ಜಾನಪದ ಸಾಹಿತ್ಯವನ್ನೇ ಬಳಸಿದರು" "ಮಾರ್ಗ ಪ್ರಭಾವಿಕ್ಕೆ ಸಿಕ್ಕ ಶಿಷ್ಟಪರ ಕಾವ್ಯ ಲಿಖಿತದ ನಿರ್ದಿಷ್ಟ ರೂಪವನ್ನು ಪಡೆಯುತ್ತಾ ಹೋದರೆ, ಮೌಖಿಕ ಚಲಾವಣೆಯಿಂದಾಗಿ ಪ್ರಸರಣ ಗುಣದಿಂದಾಗಿ ಜನಪದ ಸಾಹಿತ್ಯ ನಿರಂತರ ಪರಿವರ್ತನೆಗೆ ಒಳಗಾಗುತ್ತಲೇ ಹೋಗುತ್ತದೆ.[೪೪]

‘ಧರ್ಮನೀತಿ ವಿಶ್ವಕೋಶ’ದ ಸಂಪಾದಕರಾದ ‘ಜೇಮ್ಸ್ ಹೆಸ್ಟಿಂಗ್ಸರು’ ಈ ತೆರನಾಗಿ ಹೇಳಿದ್ದಾರೆ. “ರಾಜ್ಯದ ಅಥವಾ ರಾಷ್ಟ್ರೀಯ ಜೀವನ ದಾಖಲೆ ಇತಿಹಾಸವಾದರೆ, ಜನಪದ ಸಾಹಿತ್ಯವು ಪ್ರಾಗೈತಿಹಾಸಿಕ ಜೀವನದ ಪರಂಪರಾಗತ ಸಂಗತಿಯಾಗಿದೆ.”[೪೫]

ಐತಿಹಾಸಿಕ ದಾಖಲೆಗಳು ತಪ್ಪೆನಿಸಿದ ಅನೇಕ ಕಡೆಗಳಲ್ಲಿ ಅದನ್ನು ತುಂಬಿಕೊಳ್ಳಲು ಸಾಂಪ್ರದಾಯಿಕ ದಾಖಲೆಗಳನ್ನು ಅವಲಂಭಿಸಬಹುದಾಗಿದೆ. ದಂತಕಥೆಗಳಿಗೂ ಯಾವುದೇ ಒಂದು ಆಧಾರ ಇದ್ದೇ ಇರುತ್ತದೆ... ಅವು ಕೇವಲ ಕಲ್ಪನಾ ಕೃತಿಗಳಲ್ಲ ಎಂಬುದನ್ನು ನಿಶ್ಚಿತವಾಗಿಯೂ ಹೇಳಬಹುದು. ಇದಲ್ಲದೆ ಜಾನಪದ ಕಥೆಗಳು ಜನಾಂಗದ ಪುರಾಣಗಳು. ವಿಜ್ಞಾನ ಯುಗಕ್ಕೂ ಹಿಂದಿನ ವಿಜ್ಞಾನವೂ ಅದ್ಭುತಗಳ ಬಗ್ಗೆ ನೀಡಿದ ವಿವರಣೆಗಳೇ ಪುರಾಣಗಳು. ಪ್ರಾಚೀನ ತಿಳುವಳಿಕೆ ಹಾಗೂ ನಿರೀಕ್ಷಣೆಗಳು ನೀಡಿದ ಇಂಥ ವಿವರಗಳಿಂದಲ್ಲದೆ ಈ ಅದ್ಭುತಗಳನ್ನು ತಿಳಿದುಕೊಳ್ಳುವುದು ಸಾಧ್ಯವಾಗದು ಎಂದಿದ್ದಾರೆ.[೪೬]

ಐತಿಹಾಸಿಕ ಸಂಗತಿಗಳು ಜನಾಂಗದ ಸ್ಥಿತಿಗತಿಗಳನ್ನು ಹೇಳಲು ತಪ್ಪಿದರೆ, ಸಂಪ್ರದಾಯಗಳು ಅವುಗಳನ್ನು ಹೇಳಿ, ಇಲ್ಲಿಯವರೆಗೆ ತುಂಬುತ್ತ ಬಂದಿವೆ. ಜಾನಪದ ಕಥೆಗಳೇ ಜನಾಂಗದ ಪೌರಾಣಿಕ ಕಥೆಗಳು. ಹಿಂದಿನ ಯುಗದಲ್ಲಿ ವಿಜ್ಞಾನವು ಹೇಳದ ಸೃಷ್ಟಿಯ ಅನೇಕ ಸಂಗತಿಗಳನ್ನು ಪೌರಾಣಿಕ ಕಥೆಗಳು ಹೇಳಲು ಯತ್ನಿಸಿವೆ. ಜಾನಪದ ಸಾಹಿತ್ಯದ ವಿಶಾಲತೆಯನ್ನು ವರ್ಣಿಸುತ್ತ ಈಗಿನ ಜನರು ಜಾನಪದದ ಸತ್ವಸಾರವನ್ನು ಅರಿಯದೆ ಅಲಕ್ಷ್ಯ ಮಾಡಿದ್ದಕ್ಕೆ ಗ್ರಂಥಕಾರರು ಕಾರಣಗಳನ್ನು ಹೇಳಿದ್ದಾರೆ. “ ಆದರೆ ಆಧುನಿಕ ಪಾಂಡಿತ್ಯವು ಪ್ರಾಚೀನ ವಿಜ್ಞಾನ ಅಥವಾ ಮರೆತುಹೋದ ಕರ್ಮತಂತ್ರಗಳ ಬಗೆಗಿನ ಧಾರ್ಮಿಕ ವಿವರಗಳ ಜ್ಞಾನಕ್ಕೆ ಹೊರತಾಗಿರುವುದರಿಂದ ಅದು ಇಡಿಯ ವಿಷಯವನ್ನೆ ಕಸದ ಬುಟ್ಟಿಗೆ ಒಗೆಯಲಾರದು. ವಿದ್ವಾಂಸರು ಅದನ್ನು ವಿವರಿಸಲು ತಮ್ಮ ಅಸಾಮರ್ಥ್ಯವನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು ಮತ್ತು ಮುಂದಿನ ಪೀಳಿಗೆಯವರ ಇನ್ನೂ ಯಶಸ್ವಿಯಾದ ಪ್ರಯತ್ನಗಳಿಗೆ ವಿಷಯವನ್ನು ಅಷ್ಟಕ್ಕೆ ಬಿಟ್ಟು ಕೊಡಬೇಕು.”[೪೭]

ಜಿ.ಎಲ್.ಗೋಮ್ಮೆ(G.L.Gomme) ಎಂಬ ಇಂಗ್ಲಿಷ್ ಜಾನಪದ ವಿದ್ವಾಂಸನು ತನ್ನ ‘Handbook of folklore’ ಎಂಬ ಗ್ರಂಥದಲ್ಲಿ ಅದರ ವೈಶಿಷ್ಟ್ಯಗಳನ್ನೂ, ವಿಶಾಲತೆಯನ್ನೂ ಸುದೀರ್ಘವಾಗಿ ಚರ್ಚಿಸಿ ಕಡೆಗೆ ಜಾನಪದ ಸಾಹಿತ್ಯವೆಂದರೆ “The comparision and identification of the Servivals in modern age of archaic belief, customs and traditions” ಎಂದು ಹೇಳಿದ್ದಾನೆ.

ಇಂಗ್ಲೆಂಡ್, ಅಮೇರಿಕಾ ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳ ವಿಶ್ವವಿದ್ಯಾಲಯಗಳಲ್ಲಿ ಜಾನಪದ ಸಾಹಿತ್ಯಕ್ಕೆ ಸ್ಥಾನಕೊಟ್ಟಿದ್ದಾರೆ. ಆರ್.ಎಸ್.ಬಾಗ್ಸ್ (R.S.Boggs) ಅವರು “ಭಾಷೆ ಮತ್ತು ಸಾಹಿತ್ಯಾಭ್ಯಾಸ” (Studies in Languages and literary) ಎಂಬ ಪುಸ್ತಕದಲ್ಲಿ “ವಿಶ್ವವಿದ್ಯಾನಿಲಯದಲ್ಲಿ ಜಾನಪದ

ಸಾಹಿತ್ಯದ ಬೆಳವಣಿಗೆ" ಎಂಬ ಲೇಖನದಲ್ಲಿ ಪದವೀಧರರು ಈ ವಿಷಯವನ್ನು ಕುರಿತು ಅಭ್ಯಾಸ ಮಾಡುವುದನ್ನು ಹೇಳಿ, ಕೊನೆಯಲ್ಲಿ "ಸರಕಾರ ನೇಮಿಸಿಕೊಳ್ಳುವ ಉತ್ತಮ ತರಬೇತಿ ಹೊಂದಿದ ಜಾನಪದ ಕವಿಗಳ ಮಾರ್ಗದರ್ಶನವಿದ್ದಾಗಲೂ ಭಿನ್ನ ಭಿನ್ನ ಸಂಪ್ರದಾಯದ ಸಂಸ್ಕೃತಿಯ ಅಂಶಗಳನ್ನೊಳಗೊಂಡು ಗುಂಪುಗಳನ್ನು ಏಕ ರಾಶಿಗೊಳಿಸುವಲ್ಲಿಯೂ, ಹಾಗೆಯೇ ರಾಷ್ಟ್ರಗಳಲ್ಲಿ ಪರಸ್ಪರ ತಿಳುವಳಿಕೆ ಹಾಗೂ ಸ್ನೇಹವನ್ನು ಸಂವರ್ಧನೆಗೊಳಿಸುವಲ್ಲಿಯೂ ಅದು ಸಾಕಷ್ಟು ಪ್ರಯೋಜನಕಾರಿಯಾಗಿದ್ದರೂ, ರಾಜಕೀಯ ಪ್ರಚಾರ ಕ್ಷೇತ್ರದಲ್ಲಿ ಮಾತ್ರ ಜನಪದ ಸಾಹಿತ್ಯದ ಮುಂದಿನ ಬೆಳವಣಿಗೆಯನ್ನು ಸ್ವಲ್ಪ ಕುತೂಹಲದಿಂದ ನಾನು ನಿರೀಕ್ಷಿಸುತ್ತೇನೆ"[೪೮] ಎಂದಿದ್ದಾರೆ. (Studies in languages and Literature P.111, Edited by George Rcoffman) ಶ್ರೀ.ಕೆ.ಎಂ.ಮುನ್ಷಿ ಅವರು ಈ ರೀತಿಯಾಗಿ ಹೇಳಿದ್ದಾರೆ. "ಪ್ರಾಗೈತಿಹಾಸಿಕ ಕಾಲದಿಂದಲೂ ಭಾರತವು ಅಪಾರವಾದ ಜನಪದ ಸಾಹಿತ್ಯ ಸಂಪತ್ತನ್ನು ಪಡೆದುಕೊಂಡಿದೆ. ಭಾಸನನ್ನು ಮೊದಲುಗೊಂಡು ಮುಂದಿನ ಕವಿಗಳೆಲ್ಲರೂ ಇದರಿಂದ ಬೇಕಾದಷ್ಟು ಸಾಮಗ್ರಿಯನ್ನು ಎರವಲು ಪಡೆದಿದ್ದಾರೆ. ಎಲ್ಲ ಸಾಹಿತ್ಯಗಳೂ ಸಂಸ್ಕೃತ, ಪ್ರಾಕೃತ ಅಪಭ್ರಂಶ ಪ್ರಾಚೀನ ಮತ್ತು ಅರ್ವಾಚೀನ ಯಾವುದೇ ಇರಲಿ ಜನತಾ ಸಾಹಿತ್ಯದ ಬಂಗಾರ ಎಳೆಗಳಿಂದ ಮಿನುಗುತ್ತಿದೆ.[೪೯]

ಜಾನಪದ ಸಮಸ್ತ ಜೀವನ ಕ್ರಮವನ್ನೂ ತಲಸ್ಪರ್ಶಿಯಾಗಿ ವೈಜ್ಞಾನಿಕವಾಗಿ ಪರಿಚಯ ಮಾಡಿಕೊಡುವ ಕೆಲಸ ಇನ್ನೂ ಆಗಬೇಕಿದೆ. ಕನ್ನಡ ಜನಪದಕ್ಕೂ ಜನಪದ ಸಂಸ್ಕೃತಿಗೂ ಸಾಹಿತ್ಯಕ್ಕೂ ನಿಕಟ ಸಂಬಂಧವಿರುವುದರಿಂದ, ಜಾನಪದರ ಸಂಸ್ಕೃತಿಯನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಜನಪದ ವೈದ್ಯ, ಜನಪದ ನುಡಿಗಟ್ಟು, ಆಚರಣೆಗಳು, ನಂಬಿಕೆಗಳು, ಸಂಪ್ರದಾಯಗಳು ಜನಪದಕಲೆಗಳು, ಹಬ್ಬ ಹರಿದಿನಗಳು, ಮದುವೆ ಮುಂಜಿಗಳು, ಉಡುಗೆ ತೊಡುಗೆಗಳು ಒಟ್ಟಿನಲ್ಲಿ ಸಮಗ್ರ ಜಾನಪದವನ್ನು ವೈಜ್ಞಾನಿಕವಾಗಿ ಅಭ್ಯಾಸ ಮಾಡಬೇಕಾಗುತ್ತದೆ.[೫೦]

ಥಿಯೋಡರ್ ಎಚ್.ಗ್ಯಾಸ್ಟರ್ ಅವರು, ಜಾನಪದರ ಪರಂಪರಾಗತ ಸಂಸ್ಕೃತಿಯ ಹರಿಕಾರಿಯಂತೆ ಜಾನಪದ ಸಲುವಳಿ ಪಡೆಯುತ್ತದೆ. ಜಾನಪದ ಮೂಲಭೂತವಾಗಿ ಜಾನಪದರಿಂದ ಜಾನಪದರಿಗಾಗಿ ಹಾಗು ಜಾನಪದರದೇ ಆದುದು, ಗಮನಾರ್ಹ (Folklore is that part of people's culture which is preserved, consciously or unconsciourly in beliefs and practices, customs and observances of general currency; in myths, Legends and tales of common acceptance : and in arts and crafts which express the temper and genious of a group rather than of an individual... folklore serves as a constant source and frame of reference fore more formal literature, and art; but it is distinct there from in

that it is essentially of the people, by the people, and for the people-standard Dictionary of folklore, Vol I, Pp.399)

ಚಾರ್ಲ್ಸ್ ಫ್ರಾನ್ಸಿಸ್ ಅವರ ಹೇಳಿಕೆಗಳು ಜಾನಪದದ ಅಮರತ್ವ ಹಾಗೂ ಸತ್ವಗಳನ್ನು ರಂಜಕವಾಗಿ ತಿಳಿಸುತ್ತವೆ. : "folklore is a lively fossil which refuses to die. it is a precipitate of human experience....." ಒಂದು ಜನಪದ ಸಮಾಜದಾದ್ಯಂತ ರೂಢಿಯಲ್ಲಿರುವ ನೃತ್ಯಗಳು, ಗೀತೆಗಳು, ಕಥೆಗಳು, ಪುರಾಣಗಳು, ಸಂಪ್ರದಾಯಗಳು, ಮೂಢನಂಬಿಕೆಗಳು ಮತ್ತು ಗಾದೆ ನುಡಿಗಳು ಇವೆಲ್ಲವನ್ನೂ ಜಾನಪದ ಒಳಗೊಳ್ಳುತ್ತದೆ. ಅದು ಪರಂಪರಾಗತ ಒಕ್ಕಲುತನ ಪದ್ಧತಿ ಮತ್ತು ಕುಟುಂಬ ನಿಯಮಗಳ ಅಧ್ಯಯನವನ್ನೂ ಜಾನಪದರ ಮನೆಮಾರು, ಮಡಿಕೆ ಕುಡಿಕೆಗಳ ರೂಪ ವಿನ್ಯಾಸ, ನೀತಿ ನಿಯಮಗಳನ್ನೂ ಅವರ ರೂಢಿಗತ ಸಾಮಾಜಿಕ ವ್ಯವಸ್ಥೆಗಳನ್ನು ಒಡಮೂಡಿಸಿಕೊಂಡಿರುತ್ತದೆ ಎಂದು ಮುಂತಾಗಿ ವಿವರಿಸುವ ವಿಖ್ಯಾತ ಜಾನಪದ ತಜ್ಞ ಸ್ಟಿತ್ ಥಾಮ್ಸನ್ ಅವರ ಅಭಿಪ್ರಾಯಗಳು ಬಹುಜನಮಾನ್ಯವಾಗಿವೆ.

ಜಾನಪದ ತಜ್ಞರಾದ ಎಂ.ಎಂ.ಎಸ್ಪಿನೋಜ ಅವರು ಜನಸಾಮಾನ್ಯರ ನಂಬಿಕೆಗಳು, ನಡಾವಳಿಗಳು, ಗಾದೆ, ಒಗಟು, ಪುರಾಣಗಳು, ಧಾರ್ಮಿಕ ಆಚರಣೆಗಳು, ಮಂತ್ರ ಮಾಟಗಳು ಮುಂತಾದ ಅನೇಕಾಂಶಗಳನ್ನು ಜಾನಪದ ಒಳಗೊಳ್ಳುತ್ತದೆ. ಜಾನಪದದ ತಾಯಿ ಬೇರುಗಳು ತುಂಬ ಆಳಕ್ಕಿಳಿದಿರುತ್ತವೆ. ಆದ್ದರಿಂದ ಅದರ ಗುರುತುಗಳನ್ನು ಅತ್ಯುನ್ನತ ಸಾಂಸ್ಕೃತಿಕ ಸ್ತರವನ್ನು ತಲುಪಿದ ನಾಗರಿಕ ಜನತೆಯಲ್ಲಿಯೂ ಕಾಣಬಹುದು. ಜಾನಪದ ಆದಿ ಮಾನವನ ಮನದ ಅತ್ಯಂತ ಸಮೀಪದ ಹಾಗೂ ನೇರವಾದ ಅಭಿವ್ಯಕ್ತಿಯೆಂದು ಭಾವಿಸಿಕೊಳ್ಳಬಹುದು ಎಂದು ಮುಂತಾಗಿ ವಿವರಿಸಿರುವುದೂ ಗಮನಾರ್ಹ.

ಧರ್ಮ ಮತ್ತು ನೀತಿ ವಿಶ್ವಕೋಶದಲ್ಲಿ ಹಾಗೂ ಬ್ರಿಟಾನಿಕಾ ವಿಶ್ವಕೋಶದಲ್ಲಿ ಜಾನಪದವನ್ನು ಕುರಿತು ಪ್ರಸಿದ್ಧ ಜಾನಪದ ತಜ್ಞರು ಕೊಟ್ಟಿರುವ ವಿವರಣೆಯೂ ಗಮನಾರ್ಹವಾಗಿದೆ.[೧೧]

ವಾಸ್ತವವಾಗಿ ಜಾನಪದವನ್ನು ಕುರಿತು ಪ್ರಸ್ತಾಪಿಸಲಾಗಿರುವ ಪ್ರತಿಯೊಂದು ಗ್ರಂಥದಲ್ಲಿಯೂ ಜಾನಪದರಲ್ಲಿ ಪರಂಪರೆಯಿಂದ ಉಳಿದು, ಬೆಳೆದು ಬಂದಿರುವ ನಂಬಿಕೆ, ನಡಾವಳಿಗಳನ್ನೂ ಸಾಹಿತ್ಯಕಲೆ ಸಂಸ್ಕೃತಿಗಳನ್ನೂ ಜಾನಪದರಿಗೇ ವಿಶಿಷ್ಟವಾಗಿರುವ ಒಂದು ಜೀವನ ಕ್ರಮವನ್ನೂ ತಪ್ಪದೇ ಸೂಚಿಸಿರುವುದನ್ನು ಕಾಣಬಹುದು. ಆದ್ದರಿಂದ ಜಾನಪದ ಎಂಬುದು ಜನಪದರ ಪರಂಪರಾಗತ ಸಮಸ್ತ ಜೀವನಕ್ರಮವನ್ನೂ ಅಭ್ಯಾಸ ಮಾಡುವ ಮಾನವಿಕ ವಿಜ್ಞಾನವೆಂಬುದು ಸ್ಪಷ್ಟವಾಗುತ್ತದೆ. ೧೯ನೆಯ ಶತಮಾನದಲ್ಲಿ ಆಂಗ್ಲ ವಿದ್ವಾಂಸರು ಹಲವಾರು ತಮ್ಮ ಪ್ರಾಚೀನ ಜನಪದ ಪರಂಪರೆಯನ್ನರಿತುಕೊಂಡು, ಅದು ಅಳಿದು ಹೋಗದಂತೆ ಮಾಡುವ ಸಲುವಾಗಿ ಇಂಗ್ಲೆಂಡಿನಲ್ಲಿ ಹೊಸ ಆಂದೋಳನವನ್ನೇ ಮಾಡಿದರು; ಹಳೆಯ ವಿಷಯವನ್ನು ಕುರಿತು ಹೊಸ ವೈಜ್ಞಾನಿಕ ಪ್ರಚೋದನೆ ದೊರೆತು, ಭಾರತೀಯರೂ ತಮ್ಮ ಜಾನಪದರ

ಜೀವನ ವಿಧಾನವನ್ನು ಕುರಿತು ತೀವ್ರವಾಗಿ ಪರ್ಯಾಲೋಚಿಸಲು ಅವಕಾಶವಾಯಿತು. ಈ ಒಂದು ಹೊಸ ವಿಜ್ಞಾನವನ್ನು ಬೆಳೆಸಲು ಸಹಾಯಕವಾಯಿತು.[೫೨]

ಜಾನಪದವನ್ನಾಗಲಿ ಜನಪದ ಸಾಹಿತ್ಯವನ್ನಾಗಲಿ ಅಭ್ಯಾಸ ಮಾಡುವ ಅಗತ್ಯವೇನಿದೆ? ದಿನದಿನಕ್ಕೆ ಅಳಿದು ಹೋಗುತ್ತಿರುವ ಹಳೆಯದಾಗುತ್ತಿರುವ ಹಳ್ಳಿಗರ ಸಂಗತಿಗಳನ್ನು ತಿಳಿಯದಿದ್ದರಾಗದೆ? ಸತ್ತ ಸಂಗತಿಗಳನ್ನು ಮರೆತು ತೆಪ್ಪಗಿರಬಾರದೆ? ಇಂತಹ ಸಂಗತಿಗಳು ಕೆಲವರಿಗಾದರೂ ಹುಟ್ಟಬಹುದು. ಆದರೆ ವಾಸ್ತವವಾಗಿ ಜಾನಪದದಂಥ ಪಾರಂಪರಿಕ ವಿಜ್ಞಾನ ಎಂದೋ ಆಗಿ ಹೋದಂಥ ಸಂಗತಿಗಳನ್ನು ಮಾತ್ರ ಕುರಿತದ್ದಲ್ಲ; ಇವತ್ತಿಗೂ ತಾಯಿ ಬೇರಿನ ರೂಪದಲ್ಲಿ ಉಳಿದು, ಆಧುನಿಕ ರೂಪಧರಿಸಿ ಹೊರಹೊಮ್ಮುವ ಸನಾತನ ಸತ್ಯ ಸಂಗತಿಗಳನ್ನು ಅರಿಸುವಂಥದ್ದು. ಇದರ ಅಧ್ಯಯನದಿಂದ ಜಾನಪದರ ಪ್ರಾಚೀನ ಜೀವನ ಚರಿತ್ರೆಯನ್ನು ಯಾವ ಇತಿಹಾಸಕಾರನೂ ಎಂದೂ ಬರೆದಿಡುವಂಥ ಮಾನವೇತಿಹಾಸವನ್ನು ಅತ್ಯಂತ ಸಮೀಪದಿಂದ ತಿಳಿಯಲು ಬರುತ್ತದೆ; ಆಧುನಿಕ ಸಂಸ್ಕೃತಿಯ ಇನ್ನೊಂದು ಮುಖವನ್ನು ಜನಪದ ಸಮಾಜ ತೆರೆದು ತೋರುತ್ತದೆ. "ಈ ವಿಜ್ಞಾನದ ಬೆಳವಣಿಗೆಗೆ ಚಾಲನೆ ನೀಡಿದ ಡಬ್ಲ್ಯೂ.ಜೆ.ಥಾಮ್ಸ್ ನಿಂದ ಹಿಡಿದು ಇಂದಿನವರೆಗೆ ಜಾನಪದೀಯ ವಿಷಯದಲ್ಲಿ ಆಸಕ್ತರಾದ ಪ್ರತಿಯೊಬ್ಬ ವಿದ್ವಾಂಸರೂ ಜಾನಪದ ಕ್ಷೇತ್ರದ ಮಹತ್ವವನ್ನು ಹೇಳಿದ್ದಾರೆ; ಜಾನಪದೀಯ ವಸ್ತುವಿಷಯಗಳ ಬಗೆಗೆ ಅನಾದರ ಸಲ್ಲದೆಂದು ಆಗ್ರಹಪಡಿಸಿದ್ದಾರೆ." ಇವೆಲ್ಲಕ್ಕಿಂತ ಮುಖ್ಯವಾಗಿ, ಜಾನಪದ ಅಧ್ಯಯನದಿಂದ ನಮ್ಮನ್ನು ನಾವೇ ಚೆನ್ನಾಗಿ ಅರಿತುಕೊಳ್ಳುವುದು ಸುಲಭವಾಗುತ್ತದೆ. ಇಂಥ ಸ್ವ ಆತ್ಮಜ್ಞಾನ ಪ್ರತಿಯೊಬ್ಬರಿಗೂ ಅತ್ಯವಶ್ಯ. ಜೊತೆಗೆ ಮಾನವ ಜೀವನದ ಮೂಲಭೂತ ಅಂಶಗಳನ್ನು ಜಾನಪದ ತಿಳಿಯಪಡಿಸುವುದರಿಂದ ಅದರ ಅಧ್ಯಯನ ಎಲ್ಲರಿಗೂ ಲಾಭದಾಯಕ ಎಂದು ಮುಂತಾಗಿ ವಿವರಿಸಿರುವುದೂ ಲಕ್ಷ್ಯಾರ್ಹ.[೫೩]

ಆಚಾರ್ಯ ಬಿ.ಎಂ.ಶ್ರೀ ಅವರು ಈ ರೀತಿಯಾಗಿ ಹೇಳಿದ್ದಾರೆ. "ಕನ್ನಡ ಭಾಷೆಯಲ್ಲಿ ಕೂಡ, ಮೊದಲಿಗೆ ಕನ್ನಡ ಜನಪದ ಸಾಹಿತ್ಯ ನಿರ್ಮಾಣವಾಗಿದ್ದಿರಬೇಕು. ಕ್ರಮೇಣ ಅದು ಪ್ರೌಢ ಸಾಹಿತ್ಯದ ಪ್ರಾಬಲ್ಯದಿಂದ ಜನಪದ ಸಮಾಜದಲ್ಲಿಯೇ ನೆಲೆ ನಿಲ್ಲುವಂತಾಗಿರಬೇಕು."[೫೪]

ಕನ್ನಡ ಜನಪದರ, ಅಷ್ಟೇ ಏಕೆ ವಿಶ್ವ ಜನಪದರ ನಿತ್ಯ ಜೀವನದಲ್ಲಿ ಪ್ರಮುಖವಾಗಿ ಕಂಡುಬರುವ ಗುಣಲಕ್ಷಣಗಳು ಮೂರು : ೧. ದೈವಭಕ್ತಿ ೨. ಭೂಮೋಹ ೩. ಸಂಪ್ರದಾಯ ನಿಷ್ಠೆ. ಆದರೆ ಸಾಂಸ್ಕೃತಿಕವಾಗಿ ಒಂದೇ ಪ್ರಾಂತ್ಯಕ್ಕೆ, ಒಂದೇ ಸಮಾಜಕ್ಕೆ ಸೇರಿದ ಜನಪದರಿಗೂ ನಾಗರಿಕರಿಗೂ ನಿತ್ಯಜೀವನ ಕ್ರಮದಲ್ಲಿಯೇ ಬಹಳಷ್ಟು ವ್ಯತ್ಯಾಸಗಳಿರುತ್ತವೆ. ಈ ಬಗೆಗೆ ಅಧಿಕಾರವಾಣಿಯಿಂದ ನುಡಿದಿರುವ ಕ್ರೋಬರ್ ಅವರ ಅಭಿಪ್ರಾಯಗಳು ಗಮನಾರ್ಹವಾಗಿವೆ.[೫೫]

"Finally, it is folk societies that are specially dominated in their culture and their behavior by the folkways. Their moral and religious sense is there fore strong.

They believe in the sacred things; their sense of right and wrong springs from unconscious roots of social feeling, and is there fore an reasoned compulsive and strong... Narrowness, dept and intensity are the qualities of folk cultures[೫೬]....”

ಪಾಶ್ಚಾತ್ಯರು ಜಾನಪದ ಅಧ್ಯಯನವನ್ನು ೧೮ನೆಯ ಶತಮಾನದಲ್ಲಿಯೇ ಆರಂಭಿಸಿರುತ್ತಾರೆ. ಇದರಿಂದ ಭಾರತೀಯ ಜನ ಸಾಮಾನ್ಯರ ಜೀವನಾದರ್ಶಗಳನ್ನು ಸರಿಯಾಗಿ ತಿಳಿಯಲು ಸಾಧ್ಯವಾಯಿತು. ಈ ನಿಟ್ಟಿನಲ್ಲಿ ಸರ್ ವಿಲಿಯಂ ಜೋನ್ಸ್ ಅವರ ಸೇವೆ ಸ್ಮರಣಾರ್ಹವಾಗಿದೆ. (ಭಾರತೀಯ ಶಾಸ್ತ್ರದ ಅಧ್ಯಯನದ ಉದ್ದೇಶದಿಂದ ೧೭೮೪ರಲ್ಲಿ ಕಲ್ಕತ್ತಾದಲ್ಲಿ ಸರ್ ವಿಲಿಯಂ ಜೋನ್ಸ್ , ಕೋಲ್ ಬ್ರೂಕ್ ಮುಂತಾದ ವಿದ್ವಾಂಸರು ಅಬೆ ದುಬೊಯಿ, ವಿಲಿಯಂ ಕ್ರೂಕ್ ಮುಂತಾದವರೂ ದುಡಿದರು.) ವಿಶೇಷವಾಗಿ ಕನ್ನಡ ಜನಪದ ಸಾಹಿತ್ಯವನ್ನು ಒಳಗೊಂಡಂತೆ ದ್ರಾವಿಡ ಜನಪದ ಸಾಹಿತ್ಯ ಹಾಗೂ ದ್ರಾವಿಡ ಸಂಸ್ಕೃತಿಗಳ ಅಧ್ಯಯನದ ಅವಶ್ಯಕತೆಯನ್ನು ೧೮೭೧ಕ್ಕಿಂತ ಮುಂಚೆಯೇ ಮನಗಂಡು, ಈ ಜನತೆಯ ಅನೇಕ ಜನಪದಗೀತೆಗಳನ್ನು ಸಂಗ್ರಹಿಸಿ, ಜಾನಪದರನ್ನು ಸಂದಿಸಿ ದ್ರಾವಿಡ ಜನಪದ ಸಾಹಿತ್ಯ, ಸಂಸ್ಕೃತಿಗಳನ್ನು ಕಡೆಗಣಿಸುವುದು ಇನ್ನು ತರವಲ್ಲ ಎಂಬುದಾಗಿ ಗಂಭೀರವಾಗಿ ಎಚ್ಚರಿಸಿ ೧೮೭೧ರಲ್ಲಿ ‘Folksongs of southern India’ ಎಂಬ ಗ್ರಂಥವನ್ನು ಪ್ರಕಟಿಸಿದ, ಆ ಮುಖಾಂತರ ದಕ್ಷಿಣ ಭಾರತದ ಜಾನಪದ ಜಗತ್ತಿನತ್ತ ವಿದ್ವಾಂಸರ ಗಮನಸೆಳೆದ ಚಾರಲ್ಸ್ ಇ-ಗೋವರ್ ಎಂಬಾತನಿಗೆ ನಾವು ತುಂಬ ಋಣಿಗಳಾಗಿದ್ದೇವೆ.[೫೭] ‘ಜನವಾಣಿಯೇ ಜನಾರ್ಧನವಾಣಿ’ ಎಂಬ ಮಾತು ಭಾಷೆಗೆ ಹೆಚ್ಚಿನ ಗೌರವವನ್ನು ತಂದುಕೊಟ್ಟಿದೆ. ಜನರ ನುಡಿಗಳು ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಹೆಚ್ಚಿಸಿವೆ. ಬಿ.ಎಂ.ಶ್ರೀ ಅವರು ‘ಜನವಾಣಿಯ ಬೇರು ಕವಿವಾಣಿಯ ಹೂ’ ಎಂಬುದಾಗಿ ತಿಳಿಸಿರುವುದು, ಜನಪದ ಸಂಪತ್ತನ್ನು ಹೆಚ್ಚಿಸಿದೆ. ಕನ್ನಡ ನೆಲದ ಜಾನಪದವಿನ್ನೂ ಹಸಿರಾಗಿ ಬೆಳೆಯುತ್ತಿದೆ. ಸಂಶೋಧಿಸಿದಷ್ಟು ಜಾನಪದ ಸಂಪತ್ತು ದೊರಕುತ್ತಿದೆ. ಜಾನಪದವೊಂದು ಪ್ರಾಚೀನ ಬ್ರಹ್ಮಾಂಡ ಆಧುನಿಕ ಜ್ಞಾನ ಶಾಖೆಗಳ ಬೇರುಗಳಿಗೆ ಅದೇ ತಾಯಿನೆಲ. ಅದು ಸಂಸ್ಕೃತಿಯ ತಲಕಾವೇರಿ. ಜನಾಂಗ, ವಿಜ್ಞಾನ, ಕಾನೂನು ಶಾಸ್ತ್ರ ಮೊದಲಾದ ಶಾಖೆಗಳ ಪುನರ್ವಚನೆಗೆ ಅದರ ನೆರವು ಅತ್ಯಮೂಲ್ಯವಾದುದು. ಶಿಷ್ಟ ಸಾಹಿತ್ಯಕ್ಕಿಂತಲೂ ಅದು ಮಾತೃಸ್ಥಾನದಲ್ಲಿದೆ. ಶಿಷ್ಟಸಾಹಿತ್ಯಕ್ಷೇತ್ರದಲ್ಲಿ ಅಂಧಕಾರ ಮುಸುಕಿದಾಗ, ತಮ್ಮ ಪ್ರತಿಭೆ ನಿಷ್ಕ್ರಿಯಗೊಂಡಾಗ ಪುಷ್ಕಿನ್, ಗಗೋಲ್, ಲರ್ಮಾಂಟೋವಾ, ಟರ್ಗಿನೇವ್, ತೋಲ್ ಸ್ತೋಯ್, ದಾಸ್ತಾವಸ್ಕಿ, ಗಾರ್ಕಿ ಮೊದಲಾದ ಸಾಹಿತಿಗಳು ಜನಪದ ಸಾಹಿತ್ಯದಿಂದ ಸ್ಫೂರ್ತಿ ಪಡೆದದ್ದುಂಟು.[೫೮]

ಈ ಮೇಲಿನ ಉಕ್ತಿ ಕನ್ನಡ ನೆಲಕ್ಕೆ ಅನ್ವಯಿಸುತ್ತದೆ. ಕರ್ನಾಟಕದಲ್ಲಿ ಜಾನಪದ ಸಾಹಿತ್ಯವು ನಿಜಕ್ಕೂ ಕೆನ್ನಲವಾಗಿದೆ. ವೃತ್ತಿಗಾಯಕರು ಭೂಗತವಾದ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಹೊರತೆಗೆಯಲು ಆಕರಗಳಾಗಿದ್ದಾರೆ. ಒಂದೊಂದು ಪಂಗಡದವರನ್ನು ಸಂಶೋಧನೆಗೆ ಎತ್ತಿಕೊಂಡರೆ, ಮಹಾ ಪ್ರಬಂಧದ

ವಸ್ತುಗಳಾಗುವಷ್ಟು ಅಧ್ಯಯನವಿದೆ. ಮಾನವನ ಅತೀ ಪ್ರಾಚೀನ ಸಂಸ್ಕೃತಿಯನ್ನು ಅಳೆಯಬೇಕಾದರೆ ಜನಪದ ಸಂಸ್ಕೃತಿಯನ್ನೇ ಅಳೆಯಬೇಕು ಮತ್ತು ತಿಳಿಯಬೇಕು. 'ಜಾನಪದವು ಮಾನವಶಾಸ್ತ್ರ, ಸಮಾಜಶಾಸ್ತ್ರ, ಭಾಷಾಶಾಸ್ತ್ರ' ಮುಂತಾದವುಗಳಂತೆ ಸಾಮಾಜಿಕ ವಿಜ್ಞಾನ ಶಾಖೆಗಳಲ್ಲಿ ಒಂದಾಗಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ.[೫೯]

ಕವಿವರ್ಯ ರವಿಂದ್ರನಾಥ ಠಾಕರ ಅವರು 'ಎಲ್ಲ ಲೋಕಗೀತೆಗಳನ್ನು ಸಂಗ್ರಹಿಸಿದಾಗ, ಎಲ್ಲ ಮಾನವಕುಲಕ್ಕೂ ಸಾಮಾನ್ಯವಾದ ಮನಸ್ಸು ಹೃದಯಗಳು ಅವುಗಳಲ್ಲಿ ಅಡಗಿರುವುದನ್ನು ಕಾಣಬಹುದು' ಎಂದು ತಿಳಿಸಿದ್ದಾರೆ. ಮಾನವ ಸಂಸ್ಕೃತಿಯನ್ನು ಜಾನಪದ ವಿದ್ವಾಂಸರು ಶುದ್ಧಜನಪದ ಸಂಸ್ಕೃತಿ, ಮಧ್ಯಮ ಸಂಸ್ಕೃತಿ ಮತ್ತು ಪ್ರೌಢ ಸಂಸ್ಕೃತಿ ಎಂದು ಗುರುತಿಸಿರುವುದನ್ನು ಆರ್.ಎಸ್.ಬಾಗ್ಸ್ ಅವರು ತಿಳಿಸಿದ್ದಾರೆ.[೬೦]

ಶ್ರೀ ಸಾಮಾನ್ಯ ಸಮುದಾಯದಿಂದ ಜನಪದ ರೀತಿ-ನೀತಿ, ಮನೋಭಾವ, ಆಚಾರ-ವಿಚಾರ ಸಂಸ್ಕೃತಿಗಳ ಸಮಗ್ರ ಅಧ್ಯಯನ ಎಲ್ಲ ಕಡೆಗೂ ನಡೆದಿರುವುದು. ಇದರ ಸಂಸ್ಕೃತಿಗೆ ಪೂರ್ವಭಾವಿಯಾದ, ಹೊನಲೆಂಬ ಸಂಸ್ಕೃತಿ ನಿರ್ಮಾಣವಾಗಬೇಕಾದಲ್ಲಿ, ಹೊನಲಿಗೆ ಕಾಡು-ಮೇಡುಗಳಿಂದ, ಹೊಲ-ಗದ್ದೆಗಳಿಂದ ಕೂಡಿದ ಝುರಿಗಳು ಹಳ್ಳಿಗಳು ಅನೇಕಾನೇಕಗಳಿವೆ. ಇವೇ ಉಪಸಂಸ್ಕೃತಿಯ ಉಗಮಗಳೆಂಬುದು ಸ್ಪಷ್ಟ.[೬೧]

ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯ ಒಂದಕ್ಕೊಂದು ಹಾಸು ಹೊಕ್ಕಾಗಿರುವಾಗ, ಯಾವುದು ಮೂಲ ಅನ್ನುವುದು ಕಷ್ಟವಾದರೂ ಹಳೆಯ ಬೆಳೆ ಪ್ರಾಕೃತವಾಗಿರುವುದನ್ನು ಕಾಣುತ್ತೇವೆ. ಪ್ರಾಕೃತವಾಗಿರುವುದನ್ನೇ ಜನರು ರೂಪದಿಂದ ಸ್ವರೂಪಕ್ಕೆ ತಂದು ಎಳೆ ಮಾಡಿರುವುದು ಜನಪದವೇ ಆಗಿರುತ್ತದೆ. ಕೆಲವು ಜನಪದ ಎಳೆಗಳನ್ನು ಹಾಸನ್ನಾಗಿಯೂ ಕೆಲವು ಎಳೆಗಳನ್ನು ಹೊಕ್ಕನಾಗಿಯೂ ಉಪಯೋಗಿಸಿ, ಅರಿವೆ ತಯಾರಿಸಿ, ಸಂಸ್ಕೃತಿಯ ಸ್ವರೂಪವನ್ನು ನಾವು ಗೊತ್ತು ಹಚ್ಚುತ್ತೇವೆ. ಆದರೆ ಇಲ್ಲಿ ಮೂಲವಾದುದು ಜನಪದ ಎಂಬುದು ಸ್ಪಷ್ಟ. ಇಲ್ಲಿ ಇನ್ನೊಂದು ಸಾಕ್ಷಿ ದೊರಕುತ್ತದೆ. ಶಿಷ್ಟವಾದ ಕಥೆ ಹಾಗೂ ಕಥಾ ಗ್ರಂಥಗಳಿಗೆ ಜನಪದವೇ ಮೂಲವಾಗಿದೆ. ಇದೇ ರೀತಿ ಜಾನಪದ ಸಂಸ್ಕೃತಿ ಮತ್ತು ನಗರ ಸಂಸ್ಕೃತಿಯೂ ಕೂಡಿಕೊಂಡಿವೆ. ಕೇವಲ ಜಾನಪದವೇ ಮೂಲವಾಗಿರೊ ಭಾರತೀಯ ಸಾಹಿತ್ಯದಂತೆ, ವಿಶ್ವಸಾಹಿತ್ಯದಲ್ಲೂ ಇದು ಕಂಡುಬಂದರೆ ಆಶ್ಚರ್ಯವೇನಲ್ಲ. 'ಪ್ರಗಲ್ಭ ಉದಾತ್ತ ವೈಚಾರಿಕ ಮಟ್ಟದ ಸಾಹಿತ್ಯ' ಎಂದು ಬರೆಯಲಾಗಿರುವ ವೇದ, ಉಪನಿಷತ್ತು, ಪಂಚಮವೇದವೆಂಬ ಮಹಾಭಾರತ, ಗೀತೆ ಮೊದಲಾದವು 'ಶ್ರೇಷ್ಠ' ಸಂಸ್ಕೃತಿಯ ಆದರ್ಶ ಜೀವನದರ್ಶನ ಮೂಡಿಸುತ್ತವೆ' ಎಂದು ನಂಬಲಾಗಿರುವ ಸಂಸ್ಕೃತ(?) ಸಾಹಿತ್ಯದಲ್ಲಿಯೂ ಈ ಸಂಕೀರ್ಣತೆ ಸಮ್ಮಿಶ್ರಣವು ತುಂಬಿದೆ.[೬೨]

ಜನಪದ ಸಾಹಿತ್ಯದಲ್ಲಿ ಭಾಷಾಸತ್ವ ಮತ್ತು ಸಂಸ್ಕೃತಿಯ ತತ್ವಗಳು ತುಂಬಿಕೊಂಡಿರುವುದನ್ನು ಕ್ರಿ.ಶ.೧೮೩೫ರಲ್ಲಿ ಜಾನಪದ ಪಂಡಿತರು ಗುರುತಿಸಿದರೆಂದು ಹೇಳಬಹುದು. ಜೇಕಬ್ ಗ್ರಿಮ್ (೧೭೫೮-೧೮೬೩) ಇವರ 'ಡೆಶ್ಯೂಮಾಯಥಾಲಜಿ' ಎಂಬ ಜನಪದದ ಗ್ರಂಥ, ವೈಜ್ಞಾನಿಕ ಅಧ್ಯಯನಕ್ಕೆ ತಳಹದಿಯಾಯಿತು. 'ಜನಪದ ಸಾಹಿತ್ಯದ ಒಂದು ಪ್ರಮುಖ ಪ್ರಕಾರ, ಜನಪದ ಕಥೆ ಜನಪದ ಕಥನ ಅಧ್ಯಯನದಲ್ಲಿ ಮಾನವ ವಿಜ್ಞಾನಕ್ಕೆ ಪೂರಕವಾಗಿ ಭಾಷಾ ವಿಜ್ಞಾನ ಕಾರ್ಯವೆಸಗುತ್ತಾ ಬಂದಿದೆ.[೩]

ನಾಗರಿಕತೆಯ ಗಾಳಿ ತೀವ್ರವಾಗಿ ಬೀಸುತ್ತಿರುವ ಈ ದಿನಗಳಲ್ಲಿ ಬುಡಕಟ್ಟುಗಳ ಅಧ್ಯಯನ ತೀವ್ರಗೊಳ್ಳಬೇಕಿದೆ. ಬುಡಕಟ್ಟು ಜನರಲ್ಲಿರುವ ಸಂಪ್ರದಾಯ, ಆಚರಣೆಗಳನ್ನು ಯಥಾವತ್ತಾಗಿ ಸಂಗ್ರಹಿಸುವ ಕಾರ್ಯ ತ್ವರಿತವಾಗಿ ನಡೆಯಬೇಕಾಗಿದೆ. ಬದಲಾವಣೆಗೆ ತೀವ್ರವಾಗಿ ಸ್ಪಂದಿಸುವ ಗಂಗಾಮತಸ್ಥರಲ್ಲಿ ನಾಗರಿಕತೆಯ ಹೆಸರಿನಲ್ಲಿ ಈಗಾಗಲೇ ಸಾಕಷ್ಟು ಸಂಪ್ರದಾಯಗಳು. ಆಚರಣೆಗಳು ನಶಿಸಿ ಹೋಗಿವೆ. ಇವರ ಜಾನಪದವಂತೂ ಅವಸಾನದ ಅಂಚಿನಲ್ಲಿದೆ. ಆದಷ್ಟು ಜಾಗ್ರತೆಯಾಗಿ ಅವುಗಳ ಸಂಗ್ರಹ ನಡೆದರೆ, ಕನ್ನಡ ಜಾನಪದ ಲೋಕಕ್ಕೆ ವಿಶಿಷ್ಟವಾದ ಕೊಡುಗೆಯಾಗುವುದರಲ್ಲಿ ಸಂದೇಹವಿಲ್ಲ.

ಯಾವುದೇ ಜನಾಂಗದ ಜಾನಪದ ಆ ಜನಾಂಗದ ಸಂಸ್ಕೃತಿಯ ಸಾರ. ಯಾವುದೇ ಜನಾಂಗದ ಸಂಸ್ಕೃತಿಯ ಮೂಲ ಬೇರುಗಳು, ಆ ಜನಾಂಗದ ಜಾನಪದದಲ್ಲಿ ಅಡಗಿರುತ್ತವೆ. ಒಂದು ಜನಾಂಗದ ಸಂಸ್ಕೃತಿಯನ್ನು ಅಧ್ಯಯನ ಮಾಡುವ ವಿದ್ವಾಂಸರು ಆ ಜನಾಂಗದ ಜಾನಪದವನ್ನು ಅಧ್ಯಯನ ಮಾಡಲೇಬೇಕಾಗುತ್ತದೆ. ಯಾವುದೇ ಜನಪದ ಸಮೂಹ ಆಯಾಕಾಲದ ಏಳು-ಬೀಳುಗಳನ್ನು, ಕಥೆ, ಗೀತೆ, ಗಾದೆ, ಒಗಟು, ನುಡಿಗಟ್ಟು, ನಂಬಿಕೆ, ಸಂಪ್ರದಾಯ, ಆಚರಣೆ ಮೊದಲಾದವುಗಳ ಮೂಲಕ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾಯಿಸುತ್ತದೆ. "Folklore is a lively fossil which refuses to die" ಜಾನಪದ ವಿದ್ವಾಂಸರ ಈ ಹೇಳಿಕೆಯು ಜಾನಪದದ ನಿರಂತರತೆಯನ್ನು ಅತ್ಯಂತ ಸಮರ್ಪಕವಾಗಿ ಅಭಿವ್ಯಕ್ತಪಡಿಸುತ್ತದೆ. ಜಾನಪದವು ಅನೇಕ ತಲೆಮಾರುಗಳ ಏಳು ಬೀಳುಗಳನ್ನು ತನ್ನೊಡಲಲ್ಲಿ ತುಂಬಿಕೊಂಡು ಸಾಗುವ ಚಿರಂತನವಾಹಿನಿಯಾಗಿದೆ. ಜಾನಪದದ ಅಧ್ಯಯನ ಜನಪದರ ಬದುಕಿನ ಸ್ಥರಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ.[೪]

ಟಿಪ್ಪಣಿಗಳು

೧. ಅಂಬಳಿಕೆ ಹಿರಿಯಣ್ಣ, 'ಜಾನಪದ ಪ್ರಕ್ರಿಯೆ : ಹಾಂಕೊದೃಷ್ಟಿ', ೨೦೦೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೩,

೨. ಅದೇ,

೩. Kenneth and mary clarke- Introducing folklore P.5

೪. Alan Dundes, The study of folklore P.4

೫. Kenneth and mary clarke- Introducing folklore P.1

೬. Kalph steel Boggs- standard Dictionary of folklore P.682

೭. Kenneth and mary clarke- Introducing folklore P.18

೮. Richard m Dorson-American folklore P.xiii

೯. ತೀ.ನಂ.ಶಂಕರನಾರಾಯಣ (ಸಂ), 'ಜಾನಪದ ಮೈಲಿಕಲ್ಲುಗಳು', ೧೯೭೦, ತೀ.ನಂ.ಸ್ಮಾರಕ ಪ್ರಕಾಶನ, ಮೈಸೂರು, ಮುನ್ನುಡಿ, ಪು.vii

೧೦. ಎಚ್.ಜೆ.ಲಕ್ಕಪ್ಪಗೌಡ (ಪ್ರ.ಸಂ), ಬಸವರಾಜ ನೆಲ್ಲಿಸರ, ಮಲ್ಲಿಗೆ ಮೊಗ್ಗು ಸುರಿದಾವೆ, ಚೈತ್ರಶ್ರೀ, ೯೩, ತರೀಕೆರೆ, ಚಿಕ್ಕಮಗಳೂರು ಜಿಲ್ಲೆ, ಪು.೩

೧೧. ಎಂ.ಎಂ.ಕಲಬುರ್ಗಿ(ಸಂ), ಪೂರ್ವೋಕ್ತ, ಪು.೪೪೫

೧೨. ಶಾಂತಾದೇವಿ ಮಾಳವಾಡ, ಜಾನಪದ ಸಾಹಿತ್ಯದಲ್ಲಿ ಶರಣರು, ಕದಳಿ ಮಹಿಳಾ ವೇದಿಕೆ, ಬೆಂಗಳೂರು ೨೦೦೦, ಪು.೧೭

೧೩. ಆರ್.ಎನ್.ನಾಯಕ್, ಜಾನಪದ ಸಿಂಹಾವಲೋಕನ, ಜಾನಪದ ಪ್ರಕಾಶನ, ಹೊನ್ನಾವರ (ಉ.ಕ), ೧೯೮೫, ಪು.೧

೧೪. ಬರಗೂರು ರಾಮಚಂದ್ರಪ್ಪ, ಸಂಸ್ಕೃತಿ - ಉಪಸಂಸ್ಕೃತಿ, ಭೂಮಿ ಬಳಗ, ಮೈಸೂರು, ೧೯೯೪, ಪು.೧೪೬

೧೫. ದೇ.ಜವರೇಗೌಡ(ಸಂ), ಜಾನಪದ ಅಧ್ಯಯನ, ಚೇತನ ಬುಕ್‌ಹೌಸ್, ಮೈಸೂರು, ೧೯೯೧, ಪು.೯

೧೬. ತೀ.ನಂ. ತಪಸ್ವೀಕುಮಾರ್, ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ, ಪಿಎಚ್.ಡಿ.ಪ್ರಬಂಧ, (ಪ್ರಕಟಿತ), ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು.೨೩

೧೭. ಎಂ.ಎಂ.ಕಲಬುರ್ಗಿ(ಸಂ), ಮಾರ್ಗ ೨, ಕರ್ನಾಟಕ ಬುಕ್ ಏಜೆನ್ಸಿ, ಗಾಂಧೀನಗರ, ಬೆಂಗಳೂರು ಪು.೩೨೯

೧೮. ಜೀ.ಶಂ.ಪರಮಶಿವಯ್ಯ, ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, ಪಿಎಚ್.ಡಿ ಪ್ರಬಂಧ (ಪ್ರಕಟಿತ), ಪು.೫

೧೯. ಡಾ. ಬಸವರಾಜ ಸಬರದ, ಹೊಸದಿಕ್ಕು, ಪಲ್ಲವಿ ಪ್ರಕಾಶನ, ಬೀದರ್, ೧೯೯೦, ಪು.೧೧

೨೦. ಹಾ.ಮಾ.ನಾಯಕ, ಜಾನಪದ ಸ್ವರೂಪ ಮತ್ತು ಸಾಹಿತ್ಯ, ಪು.೫

೨೧. ಅದೇ, ಪು.೮

೨೨. ಜೀ.ಶಂ.ಪರಮಶಿವಯ್ಯ, ಜಾನಪದ ಸಾಹಿತ್ಯ ಸಮೀಕ್ಷೆ, ಮೋಹನ ಪ್ರಕಾಶನ, ಮೈಸೂರು, ೧೯೯೭, ಪು.೧೯

೨೩. ಲಂಬಳಿಕೆ ಹಿರಿಯಣ್ಣ, ಜಾನಪದ ಕೆಲವು ವಿಚಾರಗಳು, ಪ್ರಜ್ವಲ ಪ್ರಕಾಶನ, ಮೈಸೂರು, ೧೯೮೪, ಪು.೧೯

೨೪. ಶಾಂತಾದೇವಿ ಮಾಳವಾಡ, ಜಾನಪದ ಸಾಹಿತ್ಯದಲ್ಲಿ ಶರಣರು, ಕದಳಿ ಮಹಿಳಾ ವೇದಿಕೆ, ಬೆಂಗಳೂರು ೨೦೦೦, ಪು.೨

೨೫. ಬರಗೂರು ರಾಮಚಂದ್ರಪ್ಪ, ಪೂರ್ವೋಕ್ತ, ಪು.೧೪೮

೨೬. ಕಾಳೇಗೌಡ ನಾಗವಾರ, ಕಾಡುಗೊಲ್ಲರ ಜಾನಪದ ಒಂದು ಅಧ್ಯಯನ, ಪಿಎಚ್.ಡಿ.ಪ್ರಬಂಧ, ಅಪ್ರಕಟಿತ, ಪು.೨೦

೨೭. ಅಂಬಳಿಕೆ ಹಿರಿಯಣ್ಣ, ಸೈದ್ಧಾಂತಿಕ ಜಾನಪದ, ಪ್ರಜ್ವಲ ಪ್ರಕಾಶನ, ಮೈಸೂರು, ಪು.೫೩

೨೮. ಬಸವರಾಜ ಸಬರದ, ಹೊಸದಿಕ್ಕು, ಪಲ್ಲವಿ ಪ್ರಕಾಶನ, ಬೀದರ್, ೧೯೯೦, ಪು.೧೧

೨೯. ಎಂ.ಎಂ.ಕಲಬುರ್ಗಿ(ಸಂ), ಪೂರ್ವೋಕ್ತ, ಪು.೪೪೧

೩೦. ಬಸವಾರಾಜಸಬರದ, ಪೂರ್ವೋಕ್ತ, ೧೯೯೦, ಪು.೧೧

೩೧. ಪುರುಷೋತ್ತಮ ಬಿಳಿಮಲೆ(ಸಂ), ಕೂಡುಕಟ್ಟು, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ, ೧೯೯೭

೩೨. ಎಂ.ಎಂ.ಕಲಬುರ್ಗಿ(ಸಂ), ಪೂರ್ವೋಕ್ತ, ಪು.೪೩೯

೩೩. ಅದೇ ಪು.೪೪೦

೩೪. ಆರ್.ಸುನಂದಮ್ಮ, ದಾಸ ಸಾಹಿತ್ಯದಲ್ಲಿ ಜಾನಪದ ಅಂಶಗಳು ಒಂದು ಅಧ್ಯಯನ, ಲಾವಣ್ಯ ಮುದ್ರಣ, ಬನಶಂಕರಿ, ಬೆಂಗಳೂರು, ೧೯೯೪, ಪು.೧೫

೩೫. ಅದೇ ಪು.೧೯

೩೬. ಅದೇ, ಪು.೧೩

೩೭. ಕಾಳೇಗೌಡ ನಾಗವಾರ, ಪೂರ್ವೋಕ್ತ, ಪು.೧೧

೩೮. ಜಿ.ಎಸ್.ಭಟ್ಟ (ಸಂ) ಜಾನಪದ ೧೯೯೧, ಕಲ್ಯಾಣ ಕರ್ನಾಟಕ ಜನಪದ ಸಾಹಿತ್ಯ, ಬಸವರಾಜ ಸಬರದ ಪು.೧೩೧

೩೯. ಬಸವರಾಜ ಸಬರದ, ಪೂರ್ವೋಕ್ತ, ಪು.೧೩

೪೦. ವಿವಿಧ ಲೇಖಕರು, ಕನ್ನಡ ಶಿಷ್ಟ ಸಾಹಿತ್ಯದಲ್ಲಿ ಜಾನಪದ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೩, ಪು.೪೮, ೪೯

೪೧. ಮಂದಾಕಿನಿ ಭೀಮಸೇನರಾವ್ ತವಗ, ಕನ್ನಡ ಮಹಾಕಾವ್ಯಗಳಲ್ಲಿ ಸೀತೆಯ ಪಾತ್ರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫, ಪು.೧೮

೪೨. ಸಿ.ಕೆ.ನಾವಲಗಿ, ವಚನ ಸಾಹಿತ್ಯದಲ್ಲಿ ಜಾನಪದ ಅಂಶಗಳು, ಜ್ಞಾನೋದಯ ಪ್ರಕಾಶನ, ಬೆಂಗಳೂರು, ೨೦೦೦, ಪು.೫೭

೪೩. ಜೈನಕಥಾ ಸಾಹಿತ್ಯ ಮತ್ತು ಜಾನಪದ, ಪು.Viii

೪೪. ಆರ್.ವಿ.ಎಸ್.ಸುಂದರಂ, ಜನಪದ ಸಾಹಿತ್ಯದ ಮೂಲಭೂತ ತತ್ವಗಳು, ಅರ್ಕಾವತಿ ಪ್ರಕಾಶನ, ಮೈಸೂರು, ೧೯೭೬, ಪು.೪೯

೪೫. Encyclopeadia of Religion and Ethics, P.57

೪೬. Ibid, P.58

೪೭. Dictionary of philosophy and psychology-folklore, P.387

೪೮. George Rcoffman (Ed) studies in Languages and Literature, P.iii

೪೯. K.M. Munshi, **Gujarati and its Literature chapter V**

೫೦. ತಪಸ್ವೀಕುಮಾರ್, ಪೂರ್ವೋಕ್ತ, ಪು.೪

೫೧. **Encyclopaedia of Religion and Ethics, Vol,** ೬. Pp.57, **Encyclopaedia Britanica,** Vol 9, Pp.518

೫೨. ತಪಸ್ವಿಕುಮಾರ್, ಪೂರ್ವೋಕ್ತ, ಪು.೧೬

೫೩. ಅದೇ, ಪು.೧೮

೫೪. ಬಿ.ಎಂ.ಶ್ರೀಕಂಠಯ್ಯ, ಕನ್ನಡ ಕೈಪಿಡಿ, ಸಂಪುಟ ೨, ೧೯೭೦, ಪು.೨೮, ೨೯

೫೫. **Krober, Anthropology,** Pp.281-84

೫೬. **Ibid,** Pp.288-282

೫೭. **The folk song's of southern india commented by A.M. Moos's Travels reviewing the book for Indian antiQuiry** vol.I Pp.28-29

೫೮. ದೇ.ಜವರೇಗೌಡ, ಕನ್ನಡ ನುಡಿ, ಜೂನ್ ೧೬, ೧೯೭೭, ಪು.೧೨, ೧೩

೫೯. ಬೆಳಗಾವಿ ಸಾಹಿತ್ಯ ಸಮ್ಮೇಳನ (೧೯೮೦) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.೪೭೭

೬೦. R.S.Boggs, SDLF Vol.II, P.691, (Pune folk culture, Intermediate culture and learned culture)

೬೧. ನಿಂಗಣ್ಣ ಸಣ್ಣಕ್ಕಿ, ಗೊಂದಲಿಗರ ಸಂಸ್ಕೃತಿ, ೧೯೯೩, ಉಪಸಂಸ್ಕೃತಿ ಅಧ್ಯಯನ, ಪು.೪

೬೨. ಎಂ.ಎಸ್.ಸುಂಕಾಪೂರ (ಸಂ), ಜಾನಪದ ಸಾಹಿತ್ಯದರ್ಶನ ಭಾಗ-೨, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೩. ಪು.೭೭

೬೩. ಡಾ.ಸಣ್ಣರಾಮ, ಲಂಬಾಣಿ ಸಂಸ್ಕೃತಿ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, ೧೯೯೫, ಪು.೧೮೫

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ಮಹತ್ವ

೧

ಅಧ್ಯಯನದ ಉದ್ದೇಶ ಮತ್ತು ಮಹತ್ವ

ಭಾರತವು ವಿಸ್ತಾರವಾದ ಭೂಪ್ರದೇಶಗಳನ್ನು ಹೊಂದಿದೆ. ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ ಅನೇಕ ಪರ್ವತ ಶ್ರೇಣಿ, ದಟ್ಟವಾದ ಕಾಡು, ಜಲಪಾತ, ನದಿ-ಸರೋವರಗಳಿಂದಾವೃತವಾಗಿದೆ. ಪವಿತ್ರ ನದಿಗಳಾದ ಗಂಗಾ, ಯಮುನಾ, ಸರಯೂ, ಸಿಂಧೂ, ಬ್ರಹ್ಮಪುತ್ರ, ಕಾವೇರಿ, ಕಪಿಲ, ಕಾಳಿ, ನರ್ಮದಾ, ಕೃಷ್ಣಾ... ಮುಂತಾದವುಗಳು ಇವೆ. ರುದ್ರರಮಣೀಯತೆಗೆ ಮೌಂಟ್ ಎವರೆಸ್ಟ್ ಜಗತ್ತಿನಾದ್ಯಂತ ಪ್ರಸಿದ್ಧಿಯನ್ನು ಪಡೆದಿದೆ. ಕಾಶ್ಮೀರವನ್ನು 'ಭೂಲೋಕದ ಸ್ವರ್ಗ' ಎಂದು ಕರೆಯುತ್ತಾರೆ. ಸನಾತನ ಧರ್ಮಕ್ಕೆ ಭಾರತವು ಹೆಸರುವಾಸಿಯಾಗಿದೆ. ಇಲ್ಲಿ ನಾನಾ ವಿಧದ ಜನರು ವಾಸಿಸುತ್ತಿದ್ದಾರೆ. ವೈವಿಧ್ಯತೆಗಳಿಂದ ಕೂಡಿದ ಬಹುಸಂಸ್ಕೃತಿಗಳೂ ಇವೆ. ಭಾರತಕ್ಕೆ ಹಿಂದೂಸ್ಥಾನ, ಇಂಡಿಯಾಗಳೆಂಬ ಪರ್ಯಾಯ ಹೆಸರುಗಳಿವೆ.

ಇಲ್ಲಿ ಆದಿವಾಸಿಗಳು, ಗಿರಿಜನರಿದ್ದಾರೆ. ಅನೇಕ ಬುಡಕಟ್ಟುಗಳೂ ಸಹಸ್ರಾರು ವರುಷಗಳಿಂದ ಜೀವಿಸುತ್ತಿದ್ದಾರೆ. ಅವರೆಲ್ಲರೂ ತಮ್ಮ ತಮ್ಮ ಕಟ್ಟುಪಾಡುಗಳಿಗನುಗುಣವಾಗಿ ಬದುಕುತ್ತಿದ್ದಾರೆ. ಪ್ರತಿಯೊಂದು ವರ್ಗ, ಸಮುದಾಯದಲ್ಲಿ ಭಿನ್ನವಾದ ರೀತಿ-ನೀತಿ, ರೂಢಿ-ನಂಬಿಕೆ, ಸಂಪ್ರದಾಯ-ಆಚರಣೆಗಳಿವೆ. ಭಾರತದ ಅನೇಕ ಗುಡ್ಡಗಾಡುಗಳಲ್ಲಿ ಈಗಲೂ ಸಹ ಬಹುತೇಕ ಆದಿವಾಸಿಗಳು ಬದುಕುತ್ತಿದ್ದಾರೆ. ಇಲ್ಲಿಯವರೆವಿಗೂ ಸಹ ಅವರಿಗೆ ನಾಗರಿಕತೆಯ ಗಾಳಿ ಸೋಂಕಿಲ್ಲ. ಅವರಿಗೆ ಇವು ಯಾವುವೂ ಬೇಡ ಎಂಬಂತೆ ತಮ್ಮದೇ ಆದ ನಿಟ್ಟಿನಲ್ಲಿ ಬಾಳುತ್ತಿರುವುದು ಸಖೇದಾಶ್ಚರ್ಯವನ್ನು ತರುತ್ತದೆ. ಸರ್ಕಾರವು ಅವರ ಜಾಡನ್ನು ಪತ್ತೆ ಹಚ್ಚಿ ಅವರನ್ನು ಸಾಕ್ಷರರನ್ನಾಗಿ ಮಾಡುವ ಎಷ್ಟೋ ಪ್ರಯತ್ನಗಳು ವಿಫಲವಾಗುತ್ತಿರುವುದು ನಮ್ಮೆಲ್ಲರಿಗೆ ಗೊತ್ತಿರುವ ಸಂಗತಿ.

ಆರಂಭದಲ್ಲಿ ಮನುಷ್ಯ ಕಾಡಿನ ಗುಹೆಯಲ್ಲಿ ವಾಸಿಸುತ್ತಿದ್ದ ಅವನಿಗೆ ಹಸಿವೆ, ಬಾಯಾರಿಕೆಗಳಾದಾಗ ಪ್ರಕೃತಿಯ ಮಡಿಲಿನಲ್ಲಿ ಬೆಳೆಯುವ ಕಂದ ಮೂಲಗಳನ್ನು ತಿನ್ನುತ್ತಿದ್ದ. ಅಲ್ಲಿ ಹರಿಯುವ ನೀರನ್ನು ಕುಡಿಯುತ್ತಿದ್ದ. ಕಾಡಿನಲ್ಲಿ ವಾಸಿಸುತ್ತಿದ್ದ ಮಾನವನು ಪ್ರಾರಂಭದಲ್ಲಿ ನಗ್ನವಾಗಿರುತ್ತಿದ್ದ. ಅವನಿಗೆ ನಾಚಿಕೆ, ಭಯ, ಆತಂಕ ಇರಲಿಲ್ಲ. ತನ್ನದೇ ಆದ ರೀತಿ-ರಿವಾಜುಗಳಿಂದ ಬದುಕನ್ನು ನಡೆಸುತ್ತಿದ್ದನು.

ಹೀಗೆ ಅನೇಕ ವರುಷಗಳು ಗತಿಸಿದ ಮೇಲೆ ಅವನು ಆಲೋಚನೆ ಮಾಡುವಷ್ಟರ ಮಟ್ಟಿಗೆ ಅವನ ಬುದ್ಧಿ ವಿಕಾಸ ಹೊಂದುತ್ತಾ ಬಂದಿತು.

ತನ್ನ ಅವಸ್ಥೆಯನ್ನು ಕಂಡು ತನಗೆ ನಾಚಿಕೆಯಾಗಿರಬೇಕು. ತನ್ನ ಮೈ ಮುಚ್ಚಿಕೊಳ್ಳಲು ಪ್ರಾರಂಭದಲ್ಲಿ ಮರದ ತೊಗಟೆಯನ್ನು, ಎಲೆಗಳನ್ನು ಉಪಯೋಗಿಸುತ್ತಿದ್ದನು. ಮೊದಲು ಕಂದ ಮೂಲಗಳನ್ನು ತಿಂದು ಬದುಕನ್ನು ಸಾಗಿಸುತ್ತಿದ್ದ ಇವನು ಕಾಡುಮೃಗಗಳನ್ನು ಬೇಟೆಯಾಡಿ ಅವುಗಳ ಹಸಿಮಾಂಸ ತಿನ್ನುವುದನ್ನು ಕಲಿತ. ತೀವ್ರವಾದ ಚಳಿಯಿಂದ ರಕ್ಷಣೆ ಪಡೆಯಲು ಬೆಂಕಿಯ ಉಪಯೋಗ ಮಾಡುವುದನ್ನು ರೂಢಿಸಿಕೊಂಡ. ಎರಡು ಕಲ್ಲುಗಳನ್ನು ಘರ್ಷಿಸಿ ಅದರಿಂದ ಉಂಟಾಗುವ ಕಿಡಿಗಳಿಂದ ಬೆಂಕಿಯನ್ನು ಹೊತ್ತಿಸಲು ಕಲಿತ ಬೆಂಕಿಯ ಉಪಯೋಗವನ್ನು ತಿಳಿದುಕೊಂಡ ನಂತರ ಹಸಿಮಾಂಸವನ್ನು ತಿನ್ನುತ್ತಿದ್ದವ ಮಾಂಸವನ್ನು ಬೇಯಿಸಿ ತಿನ್ನುವುದಕ್ಕೆ ಕಲಿತ. ಹೀಗೆ ಒಂದೊಂದಾಗಿ ಅವನ ದಿನಚರಿಗಳು ಪ್ರಾರಂಭವಾದವು.

ಕಾಡಿನಲ್ಲಿ ದೊರೆಯುವ ಸಾಮಗ್ರಿಗಳಿಂದ ಅವನು ವಾಸಮಾಡಲು ಮನೆಕಟ್ಟಿಕೊಳ್ಳಲು ಪ್ರಾರಂಭಿಸಿದ. ಶಿಲಾಯುಗದಿಂದ ಇವನು ಹೊರಬಂದ. ಕಬ್ಬಿಣದ ಉಪಯೋಗವನ್ನು ತಿಳಿದುಕೊಂಡ. ಅದರಿಂದ ನಾನಾ ನಮೂನೆಯ ಆಯುಧಗಳನ್ನು ತಯಾರಿಸಲು ತೊಡಗಿದ. ವರ್ಷದ ಎಲ್ಲಾ ಋತುಮಾನಗಳಲ್ಲಿ ತುಂಬಿ ಹರಿಯುವ ಜೀವನದಿಯ ದಂಡೆಯಲ್ಲಿ ಬಂದು ನೆಲಸತೊಡಗಿದ.

ಆ ಪರಿಸರವನ್ನು ಕಂಡು ಅವನಿಗೆ ಆನಂದವಾಗಿರಬೇಕು. ಅಲ್ಲಿ ಫಲವತ್ತಾದ ಮೆಕ್ಕಲು ಮಣ್ಣು ಇದ್ದುದರಿಂದ ತಾನು ಏಕೆ ಉಳುಮೆ ಮಾಡಬಾರದು ಎಂಬಂತಹ ಪ್ರಶ್ನೆಗಳು ಅವನಿಗೆ ಉದ್ಭವಿಸಿದವು. ಸಹಜವಾಗಿಯೇ ಆ ನೆಲವನ್ನು ಉಳುಮೆ ಮಾಡಲು ತೊಡಗಿದ. ಉಳುಮೆಗೆ ಬೇಕಾದ ಪ್ರಾಣಿಗಳನ್ನು ಅವನು ಸಾಕತೊಡಗಿದ. ಅಷ್ಟೊತ್ತಿಗಾಗಲೇ ಅವನ ಆಲೋಚನೆಗಳು ವಿಕಾಸವಾಗುತ್ತಾ ಹೋದವು. ಅವನ ಬುದ್ಧಿಯೂ ಸಹ ವಿಕಾಸವಾಗತೊಡಗಿತು. ಇವುಗಳ ಜತೆಗೆ ಪಶುಪಾಲನೆಯನ್ನು ರೂಢಿಸಿಕೊಂಡ. ಮೊದಲ ಮಾನವನಿಗಿಂತ ಇವನು ಭಿನ್ನನೆನಿಸಿಕೊಂಡ. ಹೀಗೆ ಅವನು ವಿಕಾಸ ಹೊಂದುತ್ತಾ ಸಾಗಿದ.

ಅವನೊಂದಿಗೆ ವೇಷ-ಭೂಷಣ, ನಡೆ-ನುಡಿ, ಆಚಾರ-ವಿಚಾರ, ರೂಢಿ-ನಂಬಿಕೆಗಳೂ ಸಹ ಸಮ್ಮಿಳಿತಗೊಂಡವು. ಅನಾಗರಿಕನಾಗಿದ್ದ ಅವನು ನಾಗರಿಕನಾಗುತ್ತಾ ಬಂದ. ಬೇಸಾಯವನ್ನು ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡ. ಜತೆಯಲ್ಲಿಯೇ ಅನೇಕ ಉಪಕಸುಬುಗಳನ್ನು ಅನುಸರಿಸಿಕೊಂಡು ಬಂದ. ಪಶುಪಾಲನೆಯಿಂದಾಗಿ ಹೈನುಗಾರಿಕೆಯ ಪರಿಚಯವೂ ಆಯಿತು. ಇವೆಲ್ಲವುಗಳಿಂದ ಅವನು ಸಾಕಷ್ಟು ಪ್ರಯೋಜನಗಳನ್ನು ಪಡೆದಿದ್ದ. ಬೇಸಾಯದಿಂದ ಅವನು ಸಾಕಷ್ಟು ಪ್ರಭಾವಿತನಾಗಿದ್ದ. ಹೊಸ ಹೊಸ ವಿಚಾರಗಳಿಂದ ಅವನ ಮನಸ್ಸು ಮತ್ತು ಬುದ್ಧಿ ವಿಕಾಸ ಹೊಂದುತ್ತಾ ಹೋಯಿತು.

ಇವೆಲ್ಲವುಗಳನ್ನು ಪಾಲಿಸಿಕೊಂಡು ಬಂದಿರುವ ಅವನಿಗೆ ಬೇಸರ-ದುಗುಡ, ದುಃಖ-ದುಮ್ಮಾನಗಳು ಆಗಿರಬೇಕು. ಪ್ರತಿನಿತ್ಯವೂ ದುಡಿದ ಮನಕ್ಕೆ ವಿಶ್ರಾಂತಿಯ ಆವಶ್ಯಕತೆ ಇತ್ತು. ದುಡಿತದಿಂದ ಅವನಿಗೆ

ಶ್ರಮಹೆಚ್ಚಾಗಿ, ಶ್ರಮ ನಿವಾರಣೆಗಾಗಿ ಯಾವುದಾದರೊಂದು ಮಾಧ್ಯಮ ಅವನಿಗೆ ಬೇಕಿತ್ತು. ಇವೆಲ್ಲವುಗಳಿಗಾಗಿಯೇ ಅವನು ತನ್ನದೇ ಆದ ಮಾರ್ಗವನ್ನು ಕಂಡುಕೊಂಡ. ಹಬ್ಬ ಹರಿದಿನಗಳನ್ನು ಆಚರಿಸಲು ಅವನ ಮನಸ್ಸಿಗೆ ಹೊಳೆದಿರಬೇಕು. ಹೀಗೆ ಹಬ್ಬಹರಿದಿನಗಳು ಜನ್ಮತಾಳಿದವು.

ಯಾವುದೇ ಹಬ್ಬ-ಹರಿದಿನಗಳನ್ನಾಚರಿಸಲು ಏನಾದರೊಂದು ಕಾರಣಬೇಕು. ಅದಕ್ಕೋಸ್ಕರ ಅವನು ಕಾರಣಗಳನ್ನು ಕಂಡುಕೊಂಡ. ಅವುಗಳನ್ನು ಆಚರಿಸಲು ಯಾವುದೇ ಹಿನ್ನೆಲೆ ಇರಬೇಕು. ಅವುಗಳಿಗೆ ಪೂರಕವಾಗಿ ಹಬ್ಬಗಳನ್ನು ಆಚರಿಸಲು ಕರಗತ ಮಾಡಿಕೊಂಡ. ಹೀಗೆ ಇವೆಲ್ಲವುಗಳು ಭೂಮಿಯಲ್ಲಿ ಜನ್ಮ ತಾಳಿದವು. ಮಾನವನ ಬೆನ್ನ ಹಿಂದೆಯೇ ಅನೇಕ ರೂಢಿ ಸಂಪ್ರದಾಯ, ನಂಬಿಕೆ, ಆಚಾರ-ವಿಚಾರಗಳು ಬಂದವು. "ಆರ್ಯರು ಭಾರತಕ್ಕೆ ಬರುವುದಕ್ಕಿಂತ ಮೊದಲೇ ಈ ದೇಶದ ಜನಾಂಗ ಮತ್ತು ಸಂಸ್ಕೃತಿಗೆ ಸಾವಿರಾರು ವರ್ಷಗಳ ಚರಿತ್ರೆ ಇತ್ತೆಂಬುದನ್ನು ಮೆಗಾಸ್ತನೀಸ್ ತಿಳಿಸುತ್ತಾನೆ. ಇಂಡಿಯಾದ ನೂರಾಹದಿನೆಂಟು ಸ್ಥಳ ಜನ್ಯ ಬುಡಕಟ್ಟುಗಳು ತಮ್ಮದೇ ಆದ ಸಂಸ್ಕೃತಿ ಮತ್ತು ದೇವರುಗಳನ್ನು ವಿಭಿನ್ನ ಆಚರಣೆಗಳನ್ನು ಹೊಂದಿದ್ದು ಆಯಾ ಬುಡಕಟ್ಟುಗಳ ಹುಟ್ಟಿನೊಂದಿಗೆ ಧರ್ಮ ಮತ್ತು ಸಂಸ್ಕೃತಿಗಳು ಬೆರೆತು ಬೆಳೆದುಕೊಂಡು ಬಂದಿದ್ದವು. ಈ ಹತ್ತು ಹಲವು ಕಿರು ಸಂಸ್ಕೃತಿಗಳು ನಿಸರ್ಗಕ್ಕೆ ತೀರಾ ಸಮೀಪಸ್ಥವಾಗಿದ್ದು ಸ್ಪಂದನ ಶೀಲವಾದುವುಗಳಾಗಿದ್ದವು. ಆದರೆ ಆರ್ಯರು ಭಾರತಕ್ಕೆ ಕಾಲಿರಿಸಿ ಬೇರೂರಿದ ಮೇಲೆ ಒಟ್ಟು ಸಂಸ್ಕೃತಿಯ ಚಿತ್ರವೇ ಬದಲಾಯಿತು. 'ಆಯಾಯ ದೇವರ ಗುಡಿಯಲ್ಲಿ ಆಯಾಯ ದೇವರುಗಳನ್ನೆ ಮೂಲಸ್ವರೂಪದಲ್ಲಿ ಪೂಜಿಸುವಷ್ಟು' ಔದಾರ್ಯವನ್ನು ಆರ್ಯರು ಬೆಳೆಯಗೊಡಲಿಲ್ಲ. ಇದರಿಂದ ಭಾರತೀಯ ಸಂಸ್ಕೃತಿಯ ವ್ಯಾಖ್ಯೆ ಸೀಮಿತ ಚೌಕಟ್ಟಿನೊಳಗೆ ಸಿಲುಕಿಕೊಂಡು ಕಿರು ಸಂಸ್ಕೃತಿಗಳು ಅಪ್ರಧಾನವಾಗಿ ಪರಿಣಮಿಸಿದವು. ಕಿರು ಸಂಸ್ಕೃತಿಗಳನ್ನು ಕ್ಷುದ್ರ, ಕ್ಷುಲ್ಲಕ ಆಚರಣೆಗಳ ಗೂಡೆಂದು ಕರೆದ ಆರ್ಯರು ವೈದಿಕ ಸಂಸ್ಕೃತಿಯೇ ಈ ದೇಶದ ನಿಜವಾದ ಸಂಸ್ಕೃತಿ, ಸನಾತನ ಸಂಸ್ಕೃತಿ, ಎಂದೆಲ್ಲಾ ಸಾರಿದರು. ಸಮುದಾಯದ ಮನಸ್ಸಿನಲ್ಲಿ ಇದೇ ಭಾವನೆಯನ್ನು ಬಿತ್ತಿ ಬೆಳೆದರು. ಉಚ್ಚ ವರ್ಗದ ಆಚರಣೆಗಳೇ ನಿಜವಾದ ಸಂಸ್ಕೃತಿ ಎಂದು ಭ್ರಮೆಗೆ ತಳ್ಳಿದ್ದಲ್ಲದೆ ಅದರ ಅನುಕರಣೆಯಲ್ಲಿಯೇ ಕಿರುಸಂಸ್ಕೃತಿಗಳಿಗೆ ಮುಕ್ತಿ ಎಂದು ಸಾರಿ ಕಿರು ಸಂಸ್ಕೃತಿಗಳ ನಾಶಕ್ಕೆ ಕಾರಣರಾದರು. ಹೀಗೆ ಕಿರು ಸಂಸ್ಕೃತಿಗಳ ಮೇಲೆ ಪ್ರಧಾನ ಸಂಸ್ಕೃತಿಯೊಂದು ಯಜಮಾನಿಕೆ ನಡೆಸಿದ್ದರ ಫಲವಾಗಿ ಕೆಳವರ್ಗದ ಸಂಸ್ಕೃತಿಗಳು ನಿರಂತರವಾಗಿ ಹತ್ತು ಹಲವು ಸುಧಾರಣೆಗಳು ಹಾಗೂ ನಗರೀಕರಣದ ಧಾಳಿಗೆ ಒಳಗಾಗುತ್ತಲೇ ಬಂದವು. ರಾಜಕಾರಣ ಮತ್ತು ಧರ್ಮ ಒಂದಾಗಿ ಸಮುದಾಯದ ಸಂಸ್ಕೃತಿಯ ಮೇಲೆ ಯುದ್ಧ ಸಾರಿತು. ಜೈನರು, ವೀರಶೈವರು ಮತ್ತು ವೈದಿಕರು ಒಂದಾಗಿ ಕಿರುಸಂಸ್ಕೃತಿಗಳ ಮೇಲೆ ಸಂಘಟಿತ ಧಾಳಿಗಳನ್ನು ನಡೆಸಿದರು. ಬಹುದೇವತೋಪಾದನೆ, ಕ್ಷುದ್ರದೇವತೋಪಾಸನೆ, ಮೌಢ್ಯಭರಿತ ಆಚರಣೆಗಳ ಖಂಡನೆಯ ನೆಪದಲ್ಲಿ ಕಿರುಸಂಸ್ಕೃತಿಗಳನ್ನು ಹೇಳ ಹೆಸರಿಲ್ಲದಂತೆ ಮಾಡಲು ನಡೆಸಿದ ಪ್ರಯತ್ನಗಳ

ರಾಶಿ ರಾಶಿ ಉದಾಹರಣೆಗಳನ್ನು ಸಂಸ್ಕೃತಿಯ ಅಧ್ಯಯನವು ತಿಳಿಸಿಕೊಡುತ್ತದೆ. ಇದರಿಂದಾಗಿ ಪ್ರಧಾನ ಸಂಸ್ಕೃತಿಯು ಮಾನ್ಯತೆ ಪಡೆದ ಉತ್ತಮ ಸಂಸ್ಕೃತಿಯಾಗಿ ಕಂಗೊಳಿಸಲಾರಂಭಿಸಿತು. ಕಿರು ಸಂಸ್ಕೃತಿಗಳು ಅನಾರ್ಯ ದಸ್ಯು ಸಂಸ್ಕೃತಿಗಳ ಬಿರುದನ್ನು ಹೊತ್ತವು. ಆದಾಗ್ಯೂ ಕಿರುಸಂಸ್ಕೃತಿಗಳನ್ನು ಅನುಸರಿಸುತ್ತಿದ್ದ ಸಮುದಾಯಗಳು ತಮ್ಮದೇ ಆದ ಧಾರ್ಮಿಕ ವಿಧಿ, ವಿಧಾನಗಳು, ದೇವರುಗಳು, ಆಚರಣೆಗಳನ್ನು ಕೈಬಿಡದೆ ಎಚ್ಚರದಿಂದ ತಮ್ಮ ದೈನಂದಿನ ಬದುಕಿನಲ್ಲಿ ಕಾಯ್ದುಕೊಂಡು ಬಂದವು. ತಮ್ಮ ಸಾಹಿತ್ಯ, ಸಂಗೀತ, ಶಿಲ್ಪ, ಕಲೆ ಮುಂತಾದ ಆವೃತ್ತಿಗಳಲ್ಲಿ ಅದಕ್ಕೆ ಅಭಿವ್ಯಕ್ತಿಯನ್ನು ದೊರಕಿಸಿಕೊಟ್ಟವು. "ಅಲ್ಪ ಸಂಖ್ಯಾತರ ಸನಾತನ ಧರ್ಮ ಬಹುಸಂಖ್ಯಾತ ಕೆಳವರ್ಗದ ಸಂಸ್ಕೃತಿಯ ನಾಶಕ್ಕೆ ಶತಶತಮಾನಗಳಿಂದ ಪ್ರಯತ್ನ ನಡೆಸುತ್ತಿದ್ದರೂ, ಕೆಳವರ್ಗದ ಸಂಸ್ಕೃತಿ ನಾಶವಾಗದೆ ಅಸ್ತಿತ್ವದಲ್ಲಿರುವುದು ಒಂದು ಪವಾಡವೇ ಸರಿ"(ಪ್ರೊ.ಕೆ.ಜಿ.ನಾಗರಾಜಪ್ಪ, ಮರುಚಿಂತನೆ, ಪು.೧೩೯).

ಭಾರತವು ಹಲವಾರು ಸಂಸ್ಕೃತಿಗಳ ತವರೂರು. ತನ್ನದೇ ಆದ ವೈಶಿಷ್ಟ್ಯಗಳಿಂದ ಕೂಡಿದೆ. ತನ್ನೊಳಗೆ ಎಲ್ಲಾ ಸಂಸ್ಕೃತಿಗಳನ್ನು ಮೇಳೈಸಿಕೊಂಡಿದೆ. ಇಂದಿಗೂ ಕೂಡ ಇಂಡಿಯಾದ ಸಂಸ್ಕೃತಿ ವಿಶ್ವದಾದ್ಯಂತ ಪಸರಿಸಿದೆ. ನಮ್ಮ ದೇಶದ ಸಂಸ್ಕೃತಿ ಇತರೆ ದೇಶಗಳ ಸಂಸ್ಕೃತಿಗಿಂತ ಭಿನ್ನವಾಗಿದ್ದು, ಅದರದ್ದೇ ಆದ ಛಾಪಿನೊಂದಿಗೆ ಗುರುತಿಸಿಕೊಂಡಿದೆ. ಬೇರೆ ದೇಶಗಳಲ್ಲಿರುವ ಸಂಸ್ಕೃತಿಗಿಂತಲೂ ಇಂಡಿಯಾದ ಸಂಸ್ಕೃತಿ ಪ್ರೌಢಿಮೆಯನ್ನು ಮೆರೆದಿದೆ. ಹಾಗೆಯೇ ಜಾನಪದವು ಜನಸಾಮಾನ್ಯರ ಜೀವನದಲ್ಲಿ ಹಾಸುಹೊಕ್ಕಾಗಿದೆ. ಪ್ರತಿಯೊಂದು ವಿಷಯದಲ್ಲಿಯೂ ಸಹ ಇದು ಅವಿಭಾಜ್ಯ ಅಂಗವಾಗಿದೆ.

ಭಾರತ ಹಳ್ಳಿಗಳ ನಾಡು. ಇಲ್ಲಿ ಮುಖ್ಯವಾಗಿ ಕೃಷಿಯೇ ಪ್ರಧಾನವಾಗಿದೆ. ಆದ್ದರಿಂದ ಒಕ್ಕಲುತನವನ್ನೇ ಮುಖ್ಯ ಕಸುಬನ್ನಾಗಿ ಮಾಡಿಕೊಂಡು ಬಂದಿದ್ದಾರೆ. ಮೂಲಭೂತವಾಗಿ ಭೂತಾಯಿಯನ್ನು ನಂಬಿಕೊಂಡು ಬಂದಿರುವ ರೈತರು ಕಾಲಕಾಲಕ್ಕೆ ಮಳೆಬಾರದಿರುವುದರಿಂದ ಅನೇಕ ಸಂಕಷ್ಟಗಳನ್ನು ಎದುರಿಸುತ್ತಿರುವ ಅಂಶ ಗಮನಾರ್ಹ. ಕೃಷಿಯಾಧಾರಿತವಾದ ನಮ್ಮ ನಾಡಿನಲ್ಲಿ ಕೃಷಿಕರು ಅನೇಕ ರೂಢಿ-ಸಂಪ್ರದಾಯ, ನಂಬಿಕೆ, ಆಚಾರ-ವಿಚಾರ, ಪದ್ಧತಿಗಳನ್ನು ಅನುಸರಿಸಿಕೊಂಡು ಬರುತ್ತಿರುವ ಪರಿಪಾಠವಿದೆ. ಭಾರತದಲ್ಲಿ ಅನೇಕ ತೆರನಾದ ಸಂಪ್ರದಾಯಗಳು ನಡೆಯುತ್ತಿದ್ದು ಅವು ಭಿನ್ನವಾಗಿವೆ. ಪ್ರಾದೇಶಿಕವಾಗಿ ಹಲವು ರೀತಿಯಲ್ಲಿ ಅವು ಬೇರೆ ತೆರನಾಗಿವೆ. ಕೃಷಿಯಾಧಾರಿತವಾದ ಇಂಡಿಯಾದಲ್ಲಿ ವಿವಿಧ ಬಗೆಯ ಆಚರಣೆಗಳಿದ್ದು. ಅವುಗಳು ತಮ್ಮದೇ ಆದ ಇತಿಹಾಸವನ್ನು ಹೊಂದಿವೆ.

ಅನೇಕ ಆಚಾರ-ವಿಚಾರಗಳೂ ಸಹ ಪ್ರದೇಶದಿಂದ, ಪ್ರದೇಶಕ್ಕೆ ಅನೂಚಾನಾಗಿ ಪರಿಸ್ಥಿತಿಗಳ ಪ್ರಭಾವದಿಂದ ಸ್ಥಿತ್ಯಂತರಗೊಂಡಿವೆ. ಹಲವು ನಂಬಿಕೆಗಳೂ ಸಹ ಇಂದು ಜನಸಾಮಾನ್ಯರ ದೃಷ್ಟಿಯಲ್ಲಿ ಬದಲಾಗಿದೆ. ಕಾರಣ ಎಲ್ಲವೂ ಕೂಡ ಕಾಲಕ್ಕನುಗುಣವಾಗಿ ಮಾರ್ಪಾಡನ್ನು ಹೊಂದಿವೆ. ದಿನದಿಂದ ದಿನಕ್ಕೆ ಬದಲಾಗುತ್ತಿರುವ ಈ ಶತಮಾನದಲ್ಲಿ ಜನ ಸಾಮಾನ್ಯರ ಬದುಕೂ ಸಹ ಅನಿವಾರ್ಯ

ಎಂಬಂತೆಯೇ ರೂಪಾಂತರ ಹೊಂದುತ್ತಿರುವುದು ವಿಪರ್ಯಾಸವೇ ಸರಿ. ಅದು ಇವತ್ತಿನ ಬದುಕಿಗೆ ಅಗತ್ಯವೂ ಕೂಡ. 'ಬದುಕಿನ ಬೆನ್ನೆಲುಬು ಬೇಸಾಯ' ಎಂಬ ನಾಣ್ಣುಡಿಯಂತೆ ಕೃಷಿಯನ್ನೇ ನಂಬಿ ಬದುಕುತ್ತಿರುವ ಅನೇಕ ಕೃಷಿಕರ ಬದುಕು ಇಂದು ಡೋಲಾಯಮಾನ ಸ್ಥಿತಿಯನ್ನು ತಲುಪಿದೆ. ಪರಿಸ್ಥಿತಿಗನುಗುಣವಾಗಿ ಅವರೂ ಸಹ ಅನೇಕ ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. ಜಾನಪದವು ಇತ್ತೀಚಿನ ದಿನಗಳಲ್ಲಿ ಕ್ಷೀಣಿಸುತ್ತಿದೆ. ಹಿಂದಿದ್ದ ಅನೇಕ ನಂಬಿಕೆಗಳು ಈಗ ಕಣ್ಮರೆಯಾಗುತ್ತಿವೆ. ಕಾರಣ ಕಾಲ ಬದಲಾಗಿದೆ ಎಂಬ ಸಾಮಾನ್ಯ ಅಭಿಪ್ರಾಯ ಅಲ್ಲಲ್ಲಿ ಕೇಳಿಬರುತ್ತಿದೆ. ಬದಲಾಗಿರುವುದು ಜನರ ರೀತಿ-ನೀತಿಗಳೇ ವಿನಃ ಕಾಲ ಅಲ್ಲ. ಹಿಂದಿದ್ದ ಕಾಲ ಪ್ರಸ್ತುತ ದಿನದಲ್ಲಿಯೂ ಮುಂದುವರೆಯುತ್ತಿದೆ. ಯಾಂತ್ರಿಕ ಜೀವನದಿಂದ ಮಾನವನು ತನ್ನ ಜೀವನದಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ಅದು ಅವನಿಗೆ ಅಗತ್ಯವೆನಿಸಿದೆ ಎಂದರೆ ತಪ್ಪಾಗುವುದಿಲ್ಲ.

ಬೇಸಾಯವನ್ನೇ ಪ್ರಧಾನ ವೃತ್ತಿಯನ್ನಾಗಿ ಅನುಸರಿಸಿಕೊಂಡು ಬಂದಿರುವ ರೈತಾಪಿ ವರ್ಗ ಅನೇಕ ಸಂಪ್ರದಾಯ, ರೂಢಿ, ನಂಬಿಕೆ, ಆಚರಣೆಗಳನ್ನು ಅವ್ಯಾಹತವಾಗಿ ಮುಂದುವರೆಸಿಕೊಂಡು ಇಂದಿಗೂ ಬಂದಿದೆ. ಕಾಲ ಕಾಲಕ್ಕೆ ಸರಿಯಾಗಿ ಮಳೆ ಬಂದರೆ ತಮ್ಮ ಬದುಕು ಹಸನಾಗುತ್ತದೆ ಎಂದು ನಂಬಿರುವ ಈ ವರ್ಗವು ಕೃಷಿಗೆ ಸಂಬಂಧಿಸಿದ ದೈವಗಳಿಗೆ ಮೊರೆ ಹೋಗುವ ವಾಡಿಕೆಯಿದೆ. ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ಸಲುವಾಗಿ ಅನೇಕ ಪೂಜಾ ವಿಧಿಗಳ ಕೈಂಕಾರ್ಯಗಳನ್ನು ಪ್ರಾರಂಭಿಸುತ್ತಾರೆ. ಅಂತಹ ಸಂಪ್ರದಾಯದಲ್ಲಿ ಬರುವ ಜೋಕುಮಾರನ ಆಚರಣೆಯೂ ಒಂದು. ಒಂದು ವಾರ ಕಾಲ ಇವನನ್ನು ಹೊತ್ತು ಮನೆಮನೆಗೆ ತಿರುಗಿ ಅವನ ಹಾಡುಗಳನ್ನು ಹೇಳುವುದರ ಮೂಲಕ ರೈತರಿಗೆ ಪ್ರತಿವರ್ಷವೂ ಸಕಾಲಕ್ಕೆ ಸರಿಯಾಗಿ ಮಳೆಯನ್ನು ಕರುಣಿಸಲಿ ಎಂದು ದೇವರಲ್ಲಿ ಬೇಡಿಕೊಳ್ಳುತ್ತಾರೆ. ಮಳೆ ತರಿಸುವುದಕ್ಕಾಗಿ ಬೇರೆ ಬೇರೆ ಆಚರಣೆಗಳಿದ್ದರೂ ಸಹ ಇವನ ಆಚರಣೆ ವಿಶೇಷವಾಗಿದೆ.

ಜೋಕನ ಆಚರಣೆಯನ್ನು ಕರ್ನಾಟಕದಾದ್ಯಂತ ಮಾಡುವುದಿಲ್ಲ. ಹಳೆ ಮೈಸೂರು ಭಾಗಗಳ ಕೆಲವೆಡೆ, (ಚಿತ್ರದುರ್ಗ, ದಾವಣಗೆರೆ... ಮುಂತಾದ ಜಿಲ್ಲೆಗಳು) ಉತ್ತರ ಕರ್ನಾಟಕ ಹಾಗೂ ಹೈದ್ರಾಬಾದ್ ಕರ್ನಾಟಕದಲ್ಲಿ ಪ್ರಚಲಿತವಾಗಿದೆ. ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರಾಚುರ್ಯತೆಯನ್ನು ಪಡೆದಿದೆ. ಪ್ರತಿವರ್ಷ ನಿರ್ದಿಷ್ಟ ಸಮಯದಲ್ಲಿ ಮಾತ್ರ ನಡೆಯುವ ಈ ಆಚರಣೆ ವಿಶೇಷವಾಗಿದೆ. ಭಾದ್ರಪದ ಚೌತಿಯಲ್ಲಿ ಜನರು ಗಣಪನನ್ನು ಪೂಜಿಸುತ್ತಾರೆ. ಇವನನ್ನು ವಿಸರ್ಜಿಸಿದ ಮರುದಿನ ಜೋಕುಮಾರನ ಆಗಮನವಾಗುತ್ತದೆ. ಇವನನ್ನು ಹೊತ್ತು ತಿರುಗುವ ಜನರು ಗಂಗಾ ಮತಸ್ಥರೇ ಆಗಿರುತ್ತಾರೆ. ಇವರನ್ನು ಬಾರಿಕೇರರು, ಕಬ್ಬಾರರು, ಸುಣ್ಣಗಾರರು, ಬೆಸ್ತರೆಂಬ ಹೆಸರಿನಿಂದ ಕರೆಯುವರು.

ಈ ಸಮುದಾಯದ ಜನರು ಮಾತ್ರ ಜೋಕನನ್ನು ಹೊತ್ತು ತಿರುಗುವ ಪದ್ಧತಿ ಈಗಲೂ ಮುಂದುವರೆದುಕೊಂಡು ಬರುತ್ತಿದೆ. ಇವರು ಜೋಕುಮಾರನನ್ನು ಆರಾಧ್ಯದೈವ ಎಂದು ತಿಳಿದು

ಪೂಜಿಸುತ್ತಾರೆ. ಅಲ್ಲದೆ ಇಂದಿಗೂ ಮುಂದುವರಿಯುತ್ತಿದೆ. ನೀರು ಸಕಲ ಜೀವಿಗಳಿಗೆ ಮೂಲಾಧಾರ. ಪಂಚಭೂತಗಳಲ್ಲಿ ಒಂದಾದ ಇದಕ್ಕೆ ಉತ್ತಮ ಸ್ಥಾನವಿದೆ. ಸಮಯಕ್ಕೆ ಸರಿಯಾಗಿ ನಡೆಯಬೇಕಾದ ಎಲ್ಲಾ ಅಗತ್ಯಕ್ರಮಗಳು ಜರುಗದೇ ಹೋದರೆ ಏರು ಪೇರುಗಳಾಗುತ್ತವೆ. ಒಕ್ಕಲುತನವನ್ನೇ ಅವಲಂಭಿಸಿದ ನಾಡಿನಲ್ಲಿ ಕಾಲಕಾಲಕ್ಕೆ ಮಳೆ ಬಾರದಿದ್ದಾಗ ರೈತರು ಪಡುವ ಬವಣೆ ಅಷ್ಟಿಷ್ಟಲ್ಲ. ಈ ವರ್ಗದ ಜನರು ಮುಖ್ಯವಾಗಿ ಭೂತಾಯಿಯನ್ನು ಆರಾಧಿಸಿಕೊಂಡು ಬರುತ್ತಿರುವುದು ಗೊತ್ತಿರುವ ಸಂಗತಿ. ಅವರು ತಮ್ಮ ಜೀವನದುದ್ದಕ್ಕೂ ಅದನ್ನೇ ತಮ್ಮ ಬದುಕಿಗೆ ಜೀವನಾಧಾರ ಎಂದು ತಿಳಿದು ಪ್ರತಿವರ್ಷವೂ ಚಾಚೂ ತಪ್ಪದಂತೆ ಕಾರ್ಯಕ್ರಮಗಳಡಿಯಲ್ಲಿ ಹತ್ತುಹಲವಾರು ಸಂಸ್ಕೃತಿಗಳಿಂದ ಕೂಡಿದ ಸಂಪ್ರದಾಯಗಳನ್ನು ಆಚರಣೆಯ ರೂಪದಲ್ಲಿ ತರುತ್ತಿದ್ದಾರೆ.

ಪ್ರತಿಯೊಬ್ಬ ಕೃಷಿಕನೂ ಸಹ ತಮಗೆ ಈ ವರ್ಷ ಉತ್ತಮ ಮಳೆಯಾಗಲಿ ಎಂದು ಪ್ರಾರ್ಥಿಸುತ್ತಾನೆ. ಆದರೆ ಎಲ್ಲವೂ ತಾನು ಬಯಸಿದಂತೆ ನಡೆಯುವುದಿಲ್ಲ. ಸಾಕಷ್ಟು ಏರುಪೇರುಗಳುಂಟಾಗುತ್ತವೆ. ಒಮ್ಮೆ ಅತಿವೃಷ್ಟಿ ಮತ್ತೊಮ್ಮೆ ಅನಾವೃಷ್ಟಿ ಇವೆರಡರ ಮಧ್ಯೆ ಬದುಕನ್ನು ಸರಿತೂಗಿಸಿಕೊಂಡು ಹೋಗುವ ಕ್ರಮ ಕಠಿಣ. ಜನಪದ ತ್ರಿಪದಿಯಂತೆ

ಏಳುತಲೆ ಎದ್ದು ಯಾರ್‍ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳ| ಭೂಮಿ ತಾಯ
ಎದ್ದೊಂದು ಗಳಿಗೆ ನೆನೆವೇನು||

ರೈತಾಪಿ ವರ್ಗವು ಬೆಳಗಾಗುತ್ತಲೇ ಭೂತಾಯಿಯನ್ನು ಸ್ಮರಿಸಿಕೊಂಡು ದಿನನಿತ್ಯದ ಕೆಲಸಗಳನ್ನು ಮಾಡುತ್ತಾರೆ. ಪ್ರತಿವರ್ಷವೂ ಸಕಾಲಕ್ಕೆ ಸರಿಯಾಗಿ ಮಳೆ ಬಂದರೆ ಎಲ್ಲಾ ವರ್ಗದ ಜನರಿಗೂ ಸುಖ, ಶಾಂತಿ, ನೆಮ್ಮದಿ ದೊರೆಯುತ್ತದೆ. ಮಳೆ ಬಾರದೇ ಹೋದರೆ ರೈತಾಪಿ ವರ್ಗದ ಮೇಲಷ್ಟೇ ಅಲ್ಲದೆ, ರಾಜ್ಯ, ರಾಷ್ಟ್ರದ ಮೇಲೆ ಅಗಾಧವಾಗಿ ಪರಿಣಾಮ ಬೀರುತ್ತದೆ. ದೇಶದ ಆರ್ಥಿಕಾಭಿವೃದ್ಧಿ ಕುಂಠಿತವಾಗುತ್ತದೆ. ಇದರ ಫಲಶ್ರುತಿ ದೇಶದ ವ್ಯಾಪಾರ, ವಹಿವಾಟಿನ ಮೇಲೆ ಹಿನ್ನಡೆ ಉಂಟಾಗಿ ಎಲ್ಲರೂ ನಷ್ಟವನ್ನು ಅನುಭವಿಸುವ ದುಃಖಕರ ಸ್ಥಿತಿ ನಿರ್ಮಾಣವಾಗುತ್ತದೆ.

ಈ ಎಲ್ಲಾ ತೊಂದರೆಗಳಿಂದ ಮುಕ್ತವಾಗಬೇಕೆಂದರೆ ಮಳೆರಾಯನಿಗೆ ಮೊರೆ ಹೋಗುವುದೊಂದೇ ಉತ್ತಮ ಮಾರ್ಗ ಎಂದು(ಎಂಬ) ರೈತಾಪಿ ವರ್ಗದ ಜನರ ತಿಳುವಳಿಕೆ. ತಲೆ ತಲಾಂತರಗಳಿಂದ ಅನುಸರಿಸಿಕೊಂಡು ಬಂದ ನೂರಾರು ಆಚರಣೆಗಳು, ಸಂಪ್ರದಾಯಗಳು, ರೂಢಿಯಲ್ಲಿವೆ. ಮಳೆರಾಯನ ಬರುವಿಕೆಗಾಗಿ ಅನೇಕ ಆಚರಣೆಗಳು ರೂಢಿಯಲ್ಲಿದ್ದರೂ ಸಹ ಆ ಎಲ್ಲವುಗಳ ಕ್ರಮ ಬೇರೆ ಬೇರೆ ತೆರನಾಗಿವೆ. ಆದರೆ ಇಂತಹ ಆಚರಣೆಗಳ ಉದ್ದೇಶ ಮತ್ತು ಆಶಯ ಒಂದೇ ಇದ್ದು ಲೋಕಕಲ್ಯಾಣಕ್ಕಾಗಿ ಇವು ಆವಿರ್ಭವಿಸಿವೆ.

ಮಳೆ ತರಿಸುವುದಕ್ಕಾಗಿ ಅನೇಕ ಆಚರಣೆಗಳು, ಸಂಪ್ರದಾಯಗಳಿದ್ದರೂ ಅವುಗಳ ಆಚರಣೆ ವೈವಿಧ್ಯತೆಗಳಿಂದ ಕೂಡಿದೆ. ಉತ್ತರ ಕರ್ನಾಟಕದಲ್ಲಿ ಬಳಕೆಯಿರುವ ಅನೇಕ ಆಚರಣೆಗಳು ಈ ಕೆಳಕಂಡಂತಿವೆ.

ಅ. ಪರ್ಜನ್ಯ ಜಪ (ಮಳೆಗೆ ಕೂಡ್ರುವುದು)

ಆ. ಅನ್ನ ಸಂತರ್ಪಣೆ

ಇ. ಕಂಬಳಿ ಬೀಸುವುದು

ಈ. ಕಪ್ಪೆ ಮದುವೆ ಮೆರವಣಿಗೆ

ಉ. ಕತ್ತೆ ಮದುವೆ ಮೆರವಣಿಗೆ

ಊ. ಗುರ್ಜಿ ಆಚರಣೆ

ಋ. ಸಹಸ್ರ ಕುಂಭಮೇಳ

ಎ. ವಿವಿಧ ದೇಹದಂಡನೆ

ಏ. ಬೆತ್ತಲು ಸೇವೆ

ಐ. ನಗ್ನ ಸ್ತ್ರೀಯರು ಬಿತ್ತನೆ ಮಾಡುವುದು.

ಒ. ಪಶುಬಲಿ

ಓ. ಜೋಕುಮಾರನ ಆಚರಣೆ

ಔ. ಲಂಬಾಣಿಯರ ನೃತ್ಯ... ಇತ್ಯಾದಿ*

ಜೋಕುಮಾರನ ಆಚರಣೆಯನ್ನು ನಿರ್ದಿಷ್ಟ ಕಾಲದಲ್ಲಿಯೇ ಮಾಡಬೇಕು. ವರ್ಷಕ್ಕೊಮ್ಮೆ ಮಾತ್ರ ಇವನನ್ನು ಹೊತ್ತು ತಿರುಗುವ ಕ್ರಮವಿದೆ. ಈ ಕ್ರಮವನ್ನು ತಪ್ಪಿಸಲು ಬರುವುದಿಲ್ಲ. ಪ್ರತಿವರ್ಷವೂ ಎಲ್ಲಾ ಮನೆಗಳಿಗೆ ಗಂಗಾಮತಸ್ತರು ಇವನನ್ನು ಹೊತ್ತುಕೊಂಡು ಹೋಗಿ ಪ್ರತಿ ಮನೆಯ ಮುಂದೆ ಅವನ ಹಾಡುಗಳನ್ನು ಹೇಳುತ್ತಾರೆ. ವಿಶೇಷವಾಗಿ ಪ್ರತಿಯೊಬ್ಬ ರೈತರ ಮನೆಯ ಮುಂದೆ ಜೋಕುಮಾರನ ಪುಟ್ಟಿಯನ್ನು ಇಳಿಸುವ ಪದ್ಧತಿ ಈಗಲೂ ಸಹ ಮುಂದುವರೆದಿದೆ. ಕೃಷಿಕ ಮನೆತನದವರು ತಪ್ಪದೇ ಇವನನ್ನು ಆದರದಿಂದ ಬರಮಾಡಿಕೊಳ್ಳುತ್ತಾರೆ.

---

* ಡಾ.ದೇವದಾಸ ಕಳಸದ 'ಮಳೆಯ ದೇವ ಜೋಕುಮಾರ' ಸಂಯುಕ್ತ ಕರ್ನಾಟಕ, ಸಾಪ್ತಾಹಿಕ ಸೌರಭ, ೧೫.೦೯.೨೦೦೨

* ರೇಣುಕಾ ಪವಾರ 'ವರುಣನ ಆರಾಧನೆಯ ಲಂಬಾಣಿ ನೃತ್ಯ', ಸಂಯುಕ್ತ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ ವಿಶೇಷ ಪುರವಣಿ, ೦೫.೦೧.೨೦೦೪

ಉತ್ತರ ಕರ್ನಾಟಕದಲ್ಲಿ ಜೋಕುಮಾರನ ಸಂಪ್ರದಾಯವು ರೂಢಿಯಲ್ಲಿದೆ. ವಿಶೇಷ ರೀತಿಯಲ್ಲಿ ರೈತಾಪಿ ವರ್ಗದ ಜನರು ಅವನನ್ನು ಪೂಜಿಸುತ್ತಾರೆ. ಅವನು ಮಳೆ ತರಿಸುವ ದೇವರೆಂದು ನಂಬಿದ್ದಾರೆ. ಲೋಕ ಕಲ್ಯಾಣಾರ್ಥಕ್ಕಾಗಿ ಅವನು ಹುಟ್ಟಿರುವನು. ಅವನ ಹುಟ್ಟು ನಮ್ಮ ಕುತೂಹಲವನ್ನು ಕೆರಳಿಸುತ್ತದೆ. ಇವನು ಅಲ್ಪಾಯುಷಿಯಾಗಿದ್ದು, ಬಾಲ್ಯದಲ್ಲಿಯೇ ಚೇಷ್ಟೆಗೆ ಹೆಸರುವಾಸಿಯಾಗಿರುತ್ತಾನೆ.

ಇವನನ್ನು ಹೊತ್ತು ತರುವ ಗಂಗಾಮತಸ್ಥರ ಹೆಣ್ಣು ಮಕ್ಕಳು ಹೇಳುವ ಹಾಡಿನಲ್ಲಿ ಜೋಕುಮಾರನ ಜನ್ಮ ವೃತ್ತಾಂತದ ಕಥೆಗಳಿವೆ. ಅವನ ಬಾಲ್ಯ, ಯೌವನ, ಮತ್ತು ಸಾವಿನ ಬಗ್ಗೆಯೂ ಸಹ ಅನೇಕ ಹಾಡುಗಳನ್ನು ಹೇಳುತ್ತಾರೆ. ಇಂತಹ ಸಂಪ್ರದಾಯಗಳು ನಮ್ಮಲ್ಲಿ ಅಗಾಧವಾಗಿವೆ. ತೋಂಡೀ ಪರಂಪರೆಯು ಮುಂದುವರಿಯುತ್ತಿದೆ. ಹಿಂದಿದ್ದ ಅನೇಕ ಆಚರಣೆಗಳು, ಸಂಪ್ರದಾಯಗಳು ಕಾಲದ ಪರಿಸ್ಥಿತಿಗನುಗುಣವಾಗಿ ಅನೇಕ ಬದಲಾವಣೆಗಳನ್ನು ಹೊಂದಿವೆ. ಪ್ರಮುಖವಾಗಿ ಹೇಳಬಯಸುವುದೇನೆಂದರೆ ಅಲಕ್ಷ್ಯಿತ ಸಾಂಸ್ಕೃತಿಕ ಧಾರೆಗಳಲ್ಲಿ ಒಂದಾದ ಈ ಆಚರಣೆಗೆ ತನ್ನದೇ ಆದ ಸ್ಥಾನಮಾನವಿದೆ. ನಿರ್ಲಕ್ಷ್ಯಕ್ಕೊಳಗಾದ ತಳ ಸಮುದಾಯದವರಿಂದ ಈ ಆಚರಣೆ ಮುಂದುವರಿಯುತ್ತಿದೆ. ಇಂತಹ ಆಚರಣೆಗೆ ಹೆಚ್ಚಾಗಿ ಮಾನ್ಯತೆ ದೊರಕುತ್ತಿಲ್ಲ. ಇದು ವಿಪರ್ಯಾಸವೇ ಸರಿ. ಈ ಬಗೆಯ ಆಚರಣೆಗಳಿಗೆ ಸರಿಯಾದ ಪ್ರಾಧಾನ್ಯತೆಯಿಲ್ಲದಿರುವುದು ಮತ್ತೊಂದು ಖೇದದ ಸಂಗತಿ.

ಇಂಥಹ ಎಷ್ಟೋ ಆಚರಣೆಗಳು ಇದ್ದರೂ ಸಹ ಜನರಲ್ಲಿ ಅಷ್ಟಾಗಿ ಪ್ರಭಾವ ಬೀರಿಲ್ಲ. ಆದುದರಿಂದ ಬರೀ ನೆಪಕ್ಕೆ ಮಾತ್ರ ಎನ್ನುವಂತೆ ಅವು ರೂಢಿಯಲ್ಲಿವೆ. ಅವುಗಳಲ್ಲಿ ಬಹುತೇಕ ಅವಸಾನದ ಅಂಚಿನಲ್ಲಿವೆ. ಯಾವುದೇ ಸಂಪ್ರದಾಯವನ್ನು ಆಚರಣೆಗೆ ತರುವುದರ ಮೂಲಕ ಅವುಗಳನ್ನು ಜೀವಂತಗೊಳಿಸಬೇಕು. ಕ್ಷೇತ್ರಕಾರ್ಯದ ಮಾಹಿತಿಯಂತೆ ಜೋಕುಮಾರನ ಈ ಆಚರಣೆ ಪಟ್ಟಣಗಳಿಗಿಂತ ಹಳ್ಳಿಗಳಲ್ಲಿಯೇ ಹೆಚ್ಚು ಅಸ್ತಿತ್ವದಲ್ಲಿದೆ. ಪಟ್ಟಣದಲ್ಲಿರುವ ಜನರು ನಾಗರಿಕತೆಯತ್ತ ವಾಲುತ್ತಿರುವುದೇ ಕಾರಣವಾಗಿದೆ. ಅವರಿಗೆ ಇಂತಹ ಕೆಳವರ್ಗದ ದೈವಗಳ ಬಗ್ಗೆ ನಕಾರಾತ್ಮಕ ಧೋರಣೆಯಿದೆ. ಅಲ್ಪಾಯುಷಿಯಾದ ಇವನು ಮಳೆ ತರಿಸುವುದಕ್ಕಾಗಿಯೇ ಭೂಮಿಗೆ ಅವತರಿಸಿ ಬಂದಿದ್ದಾನೆ ಎಂಬ ಜನಪದರ ತಿಳುವಳಿಕೆ, ಅವರಿಗೆ ಇವನ ಬಗ್ಗೆ ಅಪಾರ ಕಾಳಜಿ, ಧನ್ಯತಾ ಭಾವ ನಮ್ಮ ಸಂಸ್ಕೃತಿಯಲ್ಲಿ ಹತ್ತಾರು ಉಪಸಂಸ್ಕೃತಿಗಳೂ ಕೂಡ ಬೆರೆತಿವೆ. ಪ್ರತಿಯೊಬ್ಬರಿಗೂ ತಮ್ಮ ದೈವಗಳ ಬಗ್ಗೆ ಅಪಾರ ನಂಬಿಕೆ ಕಾಳಜಿಯಿರುತ್ತದೆ. ಆ ದೈವಗಳ ಬಗ್ಗೆ ಸಾಕಷ್ಟು ಸಮರ್ಪಣಾ ಭಾವವನ್ನು ಹೊಂದಿರುತ್ತಾರೆ.

ನಮ್ಮ ದಿನನಿತ್ಯದ ಬದುಕಿನಲ್ಲಿ ಅನೇಕ ಹಬ್ಬ ಹರಿದಿನಗಳು, ನಂಬಿಕೆಗಳು, ಸಂಪ್ರದಾಯಗಳು, ರೂಢಿಗಳು, ಆಚರಣೆಗಳು ಬರುತ್ತವೆ. ಅನಾದಿ ಕಾಲದಿಂದಲೂ ಇವುಗಳು ನಿರಂತರವಾಗಿ ಸಾಗಿಬಂದಿವೆ. ಪ್ರತಿಯೊಂದು ಆಚರಣೆಯ ಹಿನ್ನೆಲೆಯಾಗಿ ಅದರದ್ದೇ ಉದ್ದೇಶ ಇದ್ದೇ ಇರುತ್ತದೆ. ಅಂತಹ ಉದ್ದೇಶಗಳನ್ನು ಅರಿಯುವ ಮನಸ್ಸು ನಮ್ಮಲ್ಲಿರಬೇಕು. ಹೊರನೋಟಕ್ಕೆ ಮಾತ್ರ ಯಾವುದೋ ಒಂದು

ಕ್ರಿಯೆಯಾಗಿ ನಮಗೆ ಗೋಚರಿಸಬಹುದು. ಆದರೆ ಅವುಗಳನ್ನು ತಿಳಿಯಲು ಆಳಕ್ಕೆ ಹೋದಂತೆಲ್ಲಾ ಗರ್ಭದಲ್ಲಿ ಹುದುಗಿಕೊಂಡಿರುವ ಅನೇಕ ಮಹತ್ವದ ಸಂಗತಿಗಳು ನಮ್ಮ ಗಮನಕ್ಕೆ ಬರುತ್ತವೆ. ನಮ್ಮಲ್ಲಿರುವಂತಹ ಎಷ್ಟೋ ಆಚರಣೆಗಳು ಅವಸಾನವನ್ನು ಹೊಂದುತ್ತಲಿವೆ. ಒಂದು ರೀತಿಯಲ್ಲಿ ಹೇಳಬಯಸುವುದಾದರೆ ಬಹುತೇಕ ಅವಸಾನ ಹೊಂದಿವೆ.

ತಲೆಮಾರುಗಳಿಂದ ಇವುಗಳು ನಮಗೆ ಬಳುವಳಿಗಳಾಗಿ ಬಂದಿರುತ್ತವೆ. ನಮ್ಮ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ಸಂಪ್ರದಾಯಗಳು ತಮ್ಮದೇ ಆದ ನಿಲುವನ್ನು ಹೊಂದಿವೆ. ನಮ್ಮ ಜನಪದರು ಸುಮ್ಮನೆ ಸಂಪ್ರದಾಯಗಳನ್ನು ಪಾಲಿಸಿಕೊಂಡು ಬಂದಿಲ್ಲ. ಲೋಕ ಕಲ್ಯಾಣಕ್ಕಾಗಿ ಎಷ್ಟೋ ಆಚರಣೆಗಳು, ಸಂಪ್ರದಾಯಗಳು ಹುಟ್ಟಿಕೊಂಡಿವೆ. ರಾಷ್ಟ್ರ, ರಾಜ್ಯಗಳಲ್ಲಿ ಬಗೆ ಬಗೆಯ ಸಂಪ್ರದಾಯಗಳಿವೆ. ಅವೆಲ್ಲವುಗಳಲ್ಲಿರುವ ಆಶಯ ಮಾತ್ರ ಬೇರೆ ಬೇರೆ ತೆರನಾಗಿರುತ್ತವೆ.

ಜನಪದರು ಯಾವುದೇ ಸಂಪ್ರದಾಯಗಳನ್ನು, ಆಚರಣೆಗಳನ್ನು ರೂಢಿ, ನಂಬಿಕೆಗಳನ್ನು ತಮ್ಮ ವಂಶಜರಿಂದ ಕಾಲಕಾಲಕ್ಕೆ ಸರಿಯಾಗಿ ಪಾಲಿಸಿಕೊಂಡು ಬರುತ್ತಿರುವ ಸಂಗತಿ ಎಲ್ಲರಿಗೂ ತಿಳಿದಿದೆ. ಆದರೆ ಅವುಗಳನ್ನು ಪಾಲಿಸಿಕೊಂಡು ಬರುತ್ತಿರುವಲ್ಲಿ ಆಗುವ ಏರುಪೇರುಗಳು ಸಾಕಷ್ಟು. ಎಷ್ಟೋ ಆಚರಣೆಗಳು ಕಾಟಾಚಾರಕ್ಕೆ ಮಾತ್ರ ಎನ್ನುವಂತೆ ಆಗಿವೆ. ಇವೆಲ್ಲವುಗಳಿಗೆ ಜನರೆ ಹೊಣೆಗಾರರಾಗಿದ್ದಾರೆ. ಏಕೆಂದರೆ ಸುಶಿಕ್ಷಿತ ವರ್ಗವು ಜನಪದರ ಬದುಕನ್ನು ತೀರಾ ಅಸಡ್ಡೆಯಾಗಿ ನೋಡುತ್ತಿರುವುದು ಒಂದೆಡೆಯಾದರೆ, ಮತ್ತೊಂದೆಡೆಯಲ್ಲಿ ಯಾರಿಗೆ ಬೇಕು ಈ ಹಳೆಯ(ಓಬೀರಾಯನ) ಕಾಲದ ಅಡಗೂಲಜ್ಜಿ ಸಂಪ್ರದಾಯಗಳು ಎಂಬಂತಹ ಪ್ರಶ್ನೆ. ಈ ತೆರನಾದ ಎಲ್ಲಾ ಸಂಪ್ರದಾಯಗಳನ್ನು ರೂಢಿ, ನಂಬಿಕೆ, ಆಚರಣೆಗಳನ್ನು ಕೀಳು ಮಟ್ಟದಿಂದ ನೋಡುವುದನ್ನು ಬಿಟ್ಟು, ಅವುಗಳನ್ನು ಉತ್ತೇಜಿಸಿ, ಆಚರಣೆಗೆ ತರುವುದರ ಮೂಲಕ ಅವುಗಳಿಗೆ ಜೀವ ತುಂಬಬೇಕು. ಆಗ ಮಾತ್ರ ಇಂತಹುಗಳು ಇನ್ನೂ ಹೆಚ್ಚಿನ ಮಟ್ಟಿಗೆ ಬೆಳೆಯುತ್ತವೆ.

ಮುಂದುವರೆದ ರಾಷ್ಟ್ರಗಳಲ್ಲಿಯೂ ಸಹ ಜಾನಪದವು ಇನ್ನೂ ಜೀವಂತವಾಗಿದೆ. ಪಾಶ್ಚಾತ್ಯರೂ ಸಹ ತಮ್ಮ ರಾಷ್ಟ್ರದಲ್ಲಿರುವ ಎಷ್ಟೋ ಸಂಪ್ರದಾಯಗಳನ್ನು ಆಚರಿಸುವುದರ ಮೂಲಕ ಅವುಗಳಿಗೆ ಮಾನ್ಯತೆಯನ್ನು ಕೊಟ್ಟಿದ್ದಾರೆ. ಅವರು ಇಂತಹ ಸಂಪ್ರದಾಯಗಳನ್ನು ನಿರ್ಲಕ್ಷಿಸುತ್ತಿಲ್ಲ. ವಿನಾಶದ ಅಂಚಿನಲ್ಲಿರುವ ಅನೇಕ ಪ್ರಕಾರಗಳನ್ನು ಅವರು ಜೀವಂತವಾಗಿರಿಸುವ ಪ್ರಯತ್ನ ಮಾಡಿ ಅದರಲ್ಲಿ ಸಫಲರಾಗಿದ್ದಾರೆ. ಜಗತ್ತಿನ 'ಹಿರಿಯಣ್ಣ' ಎನಿಸಿಕೊಂಡಿರುವ ಅಮೆರಿಕಾದಲ್ಲಿಯೂ ಸಹ ಜಾನಪದವು ಜೀವಂತವಾಗಿ ಮಡುಗಟ್ಟಿ ನಿಂತಿದೆ.

ಶಿಫಾರಸ್ಸಿನ ಆರಂಭದಲ್ಲಿ ಜಾನಪದವನ್ನು ಹೀಗೆ ನಿರ್ವಚಿಸಲಾಗಿದೆ : 'ಜಾನಪದ ಒಂದು ಸಂಸ್ಕೃತಿ ಸಮೂಹದ ಪರಂಪರೆಯಾಧಾರಿತ ಸೃಷ್ಟಿಗಳ ಒಟ್ಟು ಮೊತ್ತ. ವ್ಯಕ್ತಿಗಳ ಸಮೂಹದಿಂದ

ಅಭಿವ್ಯಕ್ತಿಗೊಳ್ಳುವಂಥದ್ದು ಹಾಗೂ ಸಮುದಾಯವೊಂದರ ನಿರೀಕ್ಷೆಗಳನ್ನು ಪ್ರತಿಫಲಿಸುವಂಥದ್ದು. ಅನುಕರಣೆ ಅಥವಾ ಇತರ ಸಾಧನಗಳ ಮೂಲಕ ಸಮುದಾಯವೊಂದರ ಸಾಂಸ್ಕೃತಿಕ ಹಾಗೂ ಸಾಮಾಜಿಕ ಅನನ್ಯತೆಯನ್ನು ಬಿಂಬಿಸುವಂಥದ್ದು. ಅದರ ಗುಣಮಟ್ಟ ಮತ್ತು ಮೌಲ್ಯಗಳು ಮೌಖಿಕವಾಗಿ ವಹನಗೊಳ್ಳುತ್ತವೆ. ಅದು ಭಾಷೆ, ಸಾಹಿತ್ಯ, ಸಂಗೀತ, ನೃತ್ಯ, ಆಟ, ಪುರಾಣ, ಆಚರಣೆ, ಸಂಪ್ರದಾಯ, ಕರಕುಶಲ ಕಲೆಗಳು, ವಾಸ್ತು ಮತ್ತು ಇತರ ಕಲೆಗಳು ಮುಂತಾದ ಪ್ರಕಾರಗಳನ್ನು ಒಳಗೊಳ್ಳುತ್ತದೆ.'*

ಮಾನವ ಸಂಸ್ಕೃತಿಯ ಅಧ್ಯಯನಕ್ಕೆ ಲಿಖಿತ ದಾಖಲೆಗಳ ಆಧಾರವನ್ನಷ್ಟೆ ನೆಚ್ಚಿಕೊಂಡಿದ್ದ ಸ್ಥಿತಿಗೆ ಪ್ರತಿಯಾಗಿ ಜಾನಪದ ವಿದ್ವಾಂಸರು 'ಮಾನವ ಸಂಸ್ಕೃತಿಗೆ ಜಾನಪದದ ಕೊಡುಗೆ ಅಪಾರ. ಬೇರಾವ ಮೂಲದಿಂದಲೂ ಬಂದಿರದಷ್ಟು ಕೊಡುಗೆ ಇದೊಂದರಿಂದಲೇ ಬಂದಿದೆ. ಜಾನಪದದ ಪೂರ್ಣ ಅರಿವಿಲ್ಲದೆ ಮಾನವ ಸಂಸ್ಕೃತಿಯ ಪೂರ್ಣ ಅಧ್ಯಯನ ಅಸಾಧ್ಯ ಎಂಬುದು ನಿರ್ವಿವಾದ." ಒಂದು ರಾಷ್ಟ್ರದ ಸಮಗ್ರ ಸಂಸ್ಕೃತಿಯನ್ನರಿಯಬಯಸುವವರು ಅಗತ್ಯವಾಗಿ ಜಾನಪದ ಅಧ್ಯಯನ ಮಾಡಬೇಕು. ಜಾನಪದವು ಸಂಸ್ಕೃತಿಯ ಹೃದಯವೆನ್ನಬಹುದು.

ಎಷ್ಟೋ ಜನ ವಿದೇಶಿಯರು ನಮ್ಮ ಸಂಸ್ಕೃತಿಗೆ ಮಾರುಹೋಗಿದ್ದಾರೆ. ಅಂತಹ ಭವ್ಯ ಸಂಸ್ಕೃತಿ ನಮ್ಮದು. ಇವತ್ತಿಗೂ ಕೂಡ ಇಂಡಿಯಾ ಹೆಸರಾಗಿರುವುದು ಉನ್ನತಿಕೆಗಳಿಂದ ಕೂಡಿದ ಆಚಾರ-ವಿಚಾರಗಳು, ರೂಢಿ, ನಂಬಿಕೆ, ಆಚರಣೆ, ಸಂಪ್ರದಾಯಗಳಿಂದ. ತನ್ನದೇ ಆದ ವಿಶಿಷ್ಟವಾದ ಅನನ್ಯತೆಯಿಂದ ವಿಶ್ವದಾದ್ಯಂತ ಪ್ರಾಚುರ್ಯತೆಯನ್ನು ಹೊಂದಿದೆ. ಅನೇಕ ಮಂದಿ ವಿದೇಶಿ ವಿದ್ವಾಂಸರನ್ನು ಕೈಬೀಸಿ ಕರೆದಿದ್ದು ನಮ್ಮ ಸಂಸ್ಕೃತಿಯೇ ಆಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ವ್ಯಾಪ್ತಿ

ಈ ಅಧ್ಯಯನ ಉತ್ತರ ಕರ್ನಾಟಕದಲ್ಲಿ ಆಚರಣೆಯ ರೂಪದಲ್ಲಿ ಬರುವ ಜೋಕುಮಾರನ ಬಗ್ಗೆ ಸವಿಸ್ತಾರವಾದ ಮಾಹಿತಿಯನ್ನು ಒದಗಿಸಿಕೊಡುತ್ತದೆ. ಇವತ್ತಿನ ದಿನದಲ್ಲಿ ಹೇಗೆ ಆಚರಿಸುತ್ತಿದ್ದಾರೆ ಎಂಬ ವಿಚಾರವನ್ನು ಅನಾವರಣಗೊಳಿಸುತ್ತದೆ. ನೇರ ಸಂದರ್ಶನದ ಮೂಲಕ ಸಂಗ್ರಹಿಸಿದ ಸಮಗ್ರ ಮಾಹಿತಿಯನ್ನು ಆಧರಿಸಿದ ಇದು ಇವರ ಸಂಪ್ರದಾಯದ ನೈಜ ಚಿತ್ರಣವನ್ನು ದಾಖಲಿಸುತ್ತದೆ. ಈ ಅಧ್ಯಯನ ಶೈಕ್ಷಣಿಕ ಕಾರಣಕ್ಕಾಗಿ ರೂಪಗೊಂಡದ್ದೇನಲ್ಲ. ಒಂದು ಅಲಕ್ಷಿತ ಸಾಂಸ್ಕೃತಿಕ ಧಾರೆಗಳಲ್ಲೊಂದಾದ ಸಂಪ್ರದಾಯವೊಂದರ ಶ್ರೇಯೋಭಿವೃದ್ಧಿಯ ಉದ್ದೇಶವನ್ನು ಹೊಂದಿದೆ. ನಿರ್ದಿಷ್ಟ ಸಮುದಾಯವೊಂದು ಆಚರಿಸಿಕೊಂಡು ಬರುತ್ತಿರುವ ಆಚರಣೆ ಹಾಗೂ ಸಂಪ್ರದಾಯದ ಬಗ್ಗೆ ಇಲ್ಲಿ ಹೇಳಿದೆ.

---

* ಎನ್.ಐ.ಎಫ್:೧೯೮೯:೮

ಕ್ಷೇತ್ರಕಾರ್ಯ ಮಾಡಿ ಈ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡಲಾಗಿದೆ. ಆರಂಭದಲ್ಲಿ ಹಳ್ಳಿಗಳಿಗೆ ಹೋದಾಗ ಅಲ್ಲಿನ ಜನಪದರು ನಿರ್ಭೀತಿಯಿಂದ ಪ್ರಶ್ನೆಗಳನ್ನು ಬಿಚ್ಚಿಟ್ಟರು. ನೀವು ಇದರ ಅಧ್ಯಯನ ಮಾಡುತ್ತಿದ್ದೀರಿ, ಇದರಿಂದ ನಿಮಗೇನು ಪ್ರಯೋಜನ? ಸರ್ಕಾರದಿಂದ ಏನಾದರೂ ಸಹಾಯಧನ ಸಿಗುತ್ತದೆಯಾ? ನಾವು ಆಚರಿಸುವುದರ ಬಗ್ಗೆ ನಿಮಗೆ ಹೇಳಿದರೆ ನಮಗಾಗುವ ಪ್ರಯೋಜನವಾದರೂ ಏನು? ಯಾಕೆ ನಿಮಗೆ ಹೇಳಬೇಕು?.... ಎಂಬಂತಹ ತಾರ್ಕಿಕ ಮನಸ್ಸು ಅವರದು. ಅವರ ಪ್ರಶ್ನೆಗಳಿಗೆ, ಅವರಿಗೆ ತಿಳಿಯುವ ಹಾಗೆ ಬಿಡಿಸಿ ಹೇಳಿದಾಗ ಪ್ರಶ್ನಾವಳಿಗಳಿಗೆ ಉತ್ತರಿಸಲು ಸಜ್ಜಾದರು. ಇದರ ಬಗ್ಗೆ ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಬಹುತೇಕವಾಗಿ ಎಲ್ಲಾ ಜಾನಪದ ಸಂಶೋಧಕರಿಗೆ ಈ ರೀತಿಯ ಗೊಂದಲಗಳು ಉದ್ಭವಿಸುತ್ತವೆ. ಜನಪದರರದು ಮುಗ್ಧ ಮನಸು. ಟೇಪ್ ರೆಕಾರ್ಡ್‌ರ್ ಮತ್ತು ಕೆಮರಾದೊಂದಿಗೆ ಒಮ್ಮೆಲೆ ಅವರ ಬಳಿಗೆ ಹೋಗಿ ವಿವರಗಳನ್ನು ಸಂಗ್ರಹಿಸವುದು ಜಟಿಲವಾಗಿದೆ. ಮೊದಲು ಅವರಿಗೆ ಕೂಲಂಕಷವಾಗಿ ವಿಷಯವನ್ನು ತಿಳಿಸಿ ಹೇಳುವುದರಿಂದ ಮುಂದೊದಗಬಹುದಾದ ಸಮಸ್ಯೆಗಳಿಗೆ ಕಡಿವಾಣ ಹಾಕಿದಂತಾಗುತ್ತದೆ.

ಎಲ್ಲಾ ವೇಳೆಯಲ್ಲಿ ಅವರು ತಮಗೆ ಗೊತ್ತಿರುವ ವಿಷಯಗಳನ್ನು ತಿಳಿಸುತ್ತಾರೆಂದು ಹೇಳಲು ಸಾಧ್ಯವಾಗುವುದಿಲ್ಲ. ಹೇಳಬೇಕಾದ ಎಷ್ಟೋ ಮುಖ್ಯ ಸಂಗತಿಗಳನ್ನು ಹೇಳದೇ ಮರೆಯುವ ಸಾಧ್ಯತೆ ಇರುತ್ತದೆ. ಸೂಕ್ಷ್ಮವಾಗಿ ಒಂದೊಂದು ಎಳೆಯನ್ನು ಬಿಡಿಸುವ ಹಾಗೆ ಅವರ ಮನಸ್ಸನ್ನು ಗೆದ್ದು ಆ ಎಲ್ಲಾ ಮಾಹಿತಿಯನ್ನು ಅವರಿಂದ ಪಡೆಯುಬೇಕಾದ ಎಷ್ಟೋ ಪ್ರಸಂಗಗಳು ಬಂದಿರುತ್ತವೆ. ಒಟ್ಟಿನಲ್ಲಿ ವ್ಯಕ್ತಿಗಳಿಂದ ಸಂಬಂಧಪಟ್ಟ ಎಲ್ಲಾ ಪ್ರಥಮ ಆಕರಗಳನ್ನು ಹೆಕ್ಕಿ ತೆಗೆಯುವುದು ಒಂದು ತಾಲೀಮು ಇದ್ದಂತೆ. ಸಾಧ್ಯವಾದಷ್ಟು ಮಟ್ಟಿಗೆ ಸೂಕ್ಷ್ಮ ಅವಲೋಕನ ಮಾಡುವುದರ ಮೂಲಕ ಸಂಶೋಧನೆಗೆ ಹೆಚ್ಚು ಒತ್ತು ಕೊಡಲಾಗಿದೆ. ನಮ್ಮ ಅರಿವಿಗೆ ಬಾರದ ಎಷ್ಟೋ ಸಂಗತಿಗಳು ಇದರ ಗರ್ಭದಲ್ಲಿ ಹುದುಗಿವೆ. ಅವುಗಳನ್ನು ಒರೆಗೆ ಹಚ್ಚುವ ಸಣ್ಣಪ್ರಯತ್ನ ನನ್ನದಾಗಿದೆ.

ಈ ಅಧ್ಯಯನವನ್ನು ತೆಗೆದುಕೊಳ್ಳುವುದಕ್ಕೆ ಮುಖ್ಯಕಾರಣ ನನ್ನ ಆಸಕ್ತಿ ಜೋಕುಮಾರನ ಆಚರಣೆ, ಇದರ ಸಂಪ್ರದಾಯದ ಬಗ್ಗೆ ಇರುವಂತಹ ಕುತೂಹಲವೇ ಆಗಿತ್ತು. ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಬಂದು ಹೋಗುವ ಇವನ ಬಗ್ಗೆ ತಿಳಿದುಕೊಳ್ಳುವ ಪ್ರಸಂಗಗಳು ಕಾರಣವಾಗಿದ್ದವು. ನನ್ನ ಬಾಲ್ಯದಲ್ಲಿ ಕುತೂಹಲದಿಂದ ಈ ಎಲ್ಲಾ ಅಂಶಗಳನ್ನು ಮೂಕ ವಿಸ್ಮಿತನಾಗಿ ಗಮನಿಸುತ್ತಿದ್ದೆನು. ಇವನ ಆಚರಣೆಯ ಬಗ್ಗೆ ಏಕೆ ಅಧ್ಯಯನ ಮಾಡಬಾರದು? ಎಂಬಂತಹ ಪ್ರಶ್ನೆಗಳು ನನಗೆ ಕಾಡುತ್ತಿದ್ದವು. ಇಂದು Advance Technology ಯುಗವಾಗಿದೆ. ಇವತ್ತಿನ ಸಂದರ್ಭದಲ್ಲಿ ಎಷ್ಟೋ ಆಚರಣೆ-ಸಂಪ್ರದಾಯಗಳು ರುಗ್ಣಾವಸ್ಥೆಯನ್ನು ತಲುಪಿವೆ. ಇದಕ್ಕೆಲ್ಲಾ ಯಾರು ಹೊಣೆ? ಯಾರನ್ನೂ ದೂಷಿಸಲು ಬಾರದು. ಅಂತಹ ಅನಿವಾರ್ಯ ಸಂದರ್ಭಗಳನ್ನು ನಮ್ಮ ನಿತ್ಯ ಬದುಕಿನಲ್ಲಿ ಕಂಡುಕೊಂಡಿದ್ದೇವೆ. ಪ್ರಸ್ತುತ ಸಂದರ್ಭದ

satelite ಯುಗದಲ್ಲಿ ಹಿಂದಿನ ಪಳೆಯುಳಿಕೆಗಳೆಲ್ಲಾ ನಿಧಾನವಾಗಿ ಬದಲಾವಣೆಯನ್ನು ಕಂಡುಕೊಂಡವು. 'ಹೊಸ ನೀರು ಬಂದು ಹಳೆ ನೀರು ಕೊಚ್ಚಿಹೋದ ಹಾಗೆ' ಇವು ತಮ್ಮ Identityಯನ್ನು ಕಳೆದುಕೊಳ್ಳತೊಡಗಿದವು. ಮೌಖಿಕ ರೂಪದಲ್ಲಿ ನಮ್ಮ ನಡುವೆ ಇರುವ ಈ ಆಚರಣೆ, ಸಂಪ್ರದಾಯವನ್ನು ಅಕ್ಷರ ಪ್ರಪಂಚಕ್ಕೆ ಪರಿಚಯ ಮಾಡಿಕೊಡುವ ಅನನ್ಯ ಕಳಕಳಿ ನನ್ನದು. ಹಾಗಾಗಿ ಇದರ ಬಗ್ಗೆ ಒಂದು ಚಿಕ್ಕ ಪ್ರಯತ್ನವನ್ನು ಮಾಡಿದ್ದೇನೆ.

ಅಧ್ಯಾಯ ೨

ಪದಸೃಷ್ಟಿ ಸಮಷ್ಟಿ ಪ್ರಜ್ಞೆ ಕನ್ನಡ ಸಾಹಿತ್ಯ ಕೃತಿಗಳಲ್ಲಿ ಜೋಕುಮಾರನ ಉಲ್ಲೇಖ

೨

ಪದಸೃಷ್ಟಿ ಸಮಷ್ಟಿ ಪ್ರಜ್ಞೆ ಕನ್ನಡ ಸಾಹಿತ್ಯ ಕೃತಿಗಳಲ್ಲಿ ಜೋಕುಮಾರನ ಉಲ್ಲೇಖ

ಪದಸೃಷ್ಟಿ

ಜೋಕುಮಾರ - ಇದೊಂದು ನಾಮಪದ

ಜಾನಪದ ದೇವರ ಹೆಸರು

'ಜೋಕು' - ಈ ಪದಕ್ಕೆ

ಅ. ಠೀವಿ

ಆ. ಡಾಲು, ಡೌಲು[೧]

ಇ. ಹಂಚಿಕೆ

ಈ. ತಂತ್ರವಾದ್ಯ

ಉ. ನುಡಿಸುವುದರಲ್ಲಿಯ ಒಂದು ಕ್ರಮ ಎಂಬ ಅನೇಕ ಅರ್ಥಗಳು ಬರುತ್ತವೆ.

ಜೋ-ಕುಮಾರ(ನಾ) - ಮಗ

ಪುತ್ರ, ಎಳೆಯವ, ಬಾಲಕ, ಯುವಕ, ತರುಣ ಎಂಬ ಅರ್ಥಕೊಡುತ್ತವೆ.

ಜೋ - ಇದು ಮುಂದೆ ಜೋಗುಳ ಧ್ವನಿ ಎಂದರೆ ನೇತಾಡುವ ಎಂಬ ಅರ್ಥವನ್ನು ಕೊಡುತ್ತದೆ.

ಜೋಕುಮಾರನ ಹಾಡುಗಳಲ್ಲಿ ಮೇಲಿಂದ ಮೇಲೆ ಬರುವ 'ಕೊಮರಾಗೆ'

ಉದಾ.

ಯಾಕೊ ಕೊಮರಾಯ ನಿನ್ನ ಬಾಯಿಗೆ ಬೆಣ್ಣಿಲ್ಲ |
ಮೇಲೆ ಮಾಣಿಕದ ಹರಳಿಲ್ಲ | ಈ ಊರ
ಓಣ್ಯಾಗ ನಿನ್ನ ಸುಳುವಿಲ್ಲ ||

ಈ ಪದವನ್ನು ವಿಶ್ಲೇಷಿಸಿದಾಗ

ಕೊಮೆ, ಸುಡು, ಉರಿ

ಕೊಮ್ಮೆ, ಕೊಬ್ಬು, ಅಹಂಕಾರ

ಕುವರ-ಮಗ, ತರುಣ, ಯುವಕ ಎಂತಲೂ ಅರ್ಥ ಮಾಡಿಕೊಳ್ಳಬಹುದು.

ಜೋಕುಮಾರನ ಹೆಸರು ಬಂದ ಬಗೆ

ಪುರಾಣ ಕತೆಗಳ ಪ್ರಕಾರ, ಜೋಕಮುನಿಯ ಮಗನು ಜೋಕುಮಾರ ಅಂದರೆ ಉಡಾಳ, ಫಟಿಂಗ ಎಂಬ ಅರ್ಥವನ್ನು ಕೊಡುತ್ತದೆ. ಇನ್ನೂ ಕೆಲವೆಡೆ ದರಿದ್ರ, ಸೂಗ, ಹೇಡಿ ಎಂದು ಕರೆಯುತ್ತಾರೆ.

ವಿದ್ವಾಂಸರ ಅಭಿಪ್ರಾಯಗಳು

೧. ಡಾ. ಬೆಟಗೇರಿ ಕೃಷ್ಣಶರ್ಮರ ಅಭಿಪ್ರಾಯದ ಪ್ರಕಾರ "ಸೋಮಾರಿ ಎಂಬ ಪದದ ಅರ್ಥವು ಪುಂಡ, ಪೋಲಿ ಇದು ಸೋಮಾರಿ ಯೋಗಕುಮಾರ ಎಂಬುದರ ಅಪಭ್ರಂಶ ಲೋಪವೇ ಜೋಕುಮಾರ ಎಂದಾಗಿರಬಹುದೆಂದು ಊಹೆ ಪಟ್ಟಿದ್ದಾರೆ. ಆದರೆ ಜೋಕುಮಾರನಿಗೆ ಸಂಬಂಧಿಸಿದ ಲೋಕವಾರ್ತೆಗಳಲ್ಲಿಯೂ ಜಾನಪದ ಹಾಡುಗಳಲ್ಲಿಯೂ ಯೋಗ ಮತ್ತು ಜೋಕುಮಾರರಿಗೆ ಸಂಬಂಧವಿದ್ದಂತೆ ಎಲ್ಲಿಯೂ ಪ್ರಮಾಣಗಳಿಲ್ಲ."[೨]

೨. ಡಾ. ಶಿವರಾಮ ಕಾರಂತರ ಅಭಿಪ್ರಾಯದ ಪ್ರಕಾರ "ಜೋಕುಮಾರನ ಹಬ್ಬವು ನಮ್ಮಲ್ಲಿಯ ಕೃಷಿಕರ ಕೆಲಸವನ್ನು ಕುರಿತು ಒಂದು ಸಾಂಕೇತಿಕ ರಚನೆ"[೩] ಇರಬಹುದೆಂದು ಉಹಿಸುತ್ತಾರೆ.

೩. ಎಸ್.ಎಸ್.ಭದ್ರಾಪೂರ ಅವರು "ಜೋಕನು - ಜನಕುಮಾರನೂ ಅಲ್ಲ, ಶಿವಕುಮಾರನೂ ಅಲ್ಲ. ಈತನು ಯುವ ಕುಮಾರ ಇಲ್ಲವೇ ಯುವಾಂಕುರ ಯುವದಿಂದ ಹುಟ್ಟಿದ ಮೊಳಕೆ ಇವರ ತಂದೆ. ಜೇಷ್ಠ ಮಳೆ (ಜೇಷ್ಠಾದೇವಿ ತಾಯಿ) ಗೌರಿ ಎನಿಸುವ ನೆಲ ಹೇಗೆ ಹುಟ್ಟಿದ ಯುವ(ಜವೆಗೋಧಿ) ಗೋದಿ ಸಸಿ ಪೋಷಣೆಗೆ ಮುಂದೆಯೂ ಮಳೆಬೇಕಷ್ಟೇ ಜನರು ಅಂತಹ ಭಾರೀ ಮಳೆಗಾಗಿ ಆತುರರಾಗಿದ್ದಾರೆ, ಬಯಸುತ್ತಾರೆ.

ಜೋಕುಮಾರ ಕುದುರೆಯನ್ನೇರಿ ಸಂಚರಿಸಿ ಆಕಾಶದಿಂದ ಅಂತಹ ಮಳೆಯನ್ನು ತರಿಸುತ್ತಾನೆ. ಅವರ ತಂದೆ ಅದಕ್ಕಾಗಿಯೇ ಭೂಮಿಯಲ್ಲಿ ಉಳಿಯಬೇಕಾಗಿತು. ಕೊನೆಯ ಮಳೆಯೇ ಉತ್ತರೆಯ ಮಳೆ.

೧. ಜೇಷ್ಠ - ಜನನಕ್ಕೆ ಕಾರಣವಾದ ಮಳೆಯಾದರೆ, ಮುಂದೆ ಬೆಳೆಗೆ.

೨. ಮೂಲಾ

೩. ಪೂರ್ವಾಷಾಢಾ

೪. ಉತ್ತರಾಷಾಢಾ

೫. ಶ್ರಾವಣ

೬. ಪೂರ್ವಭಾದ್ರಪದ

೭. ಉತ್ತರ ಭಾದ್ರಪದ

ಹೀಗೆ ಏಳು ನಕ್ಷತ್ರಗಳ ಕಾಲದ ತನಕವೂ ಮಳೆ ಬೀಳಬೇಕಾಗುತ್ತದೆ. ಜೇಷ್ಠದಲ್ಲಿ ಹುಟ್ಟಿದ ಕೂಸಿಗೆ ಮುಂದೆ ೭ x ೧೪ ದಿನಗಳ ಆಯುಷ್ಯ (ಇಲ್ಲಿ ಒಂದೊಂದು ಮಳೆಯ ಅವಧಿ ೧೪ ದಿನಗಳೆಂದು ಅರ್ಥ) ಕಥೆಯು ೭ ದಿನಗಳೆಂಬುದು ಮಳೆಯ ೭ ನಕ್ಷತ್ರಗಳ ಅವಧಿ.

ದೀನದೃಷ್ಟಿ ಎಂಬ ಪದಕ್ಕೆ ನಕ್ಷತ್ರದೃಷ್ಟಿ ಎಂಬ ಪದವಿದೆ. ಹಾಗಿದ್ದರೆ ದಿನ ಎಂಬುದಕ್ಕೆ ನಕ್ಷತ್ರ ಎಂಬ ವಿಚಾರವು ಸ್ಪಷ್ಟವಾಗುತ್ತದೆ.[೪]

ಯುವಕುಮಾರ ಬೆಳೆದು ದೊಡ್ಡವನಾಗಿ ಮೆರೆಯುತ್ತಾನೆ. ಪೃಥ್ವಿ ಸಸ್ಯಶಾಲಿನಿ ಆಗುತ್ತದೆ. ಊರ ಕನ್ನೆಯನ್ನು ಮೋಹಿಸುತ್ತಾನೆ. ನಿಜವಾಗಿ ಅವನು ಬಲವಂತದಿಂದ ತಬ್ಬಿಕೊಂಡ ಕನ್ಯೆಯ ಹೆಸರು 'ಸುಕರ್ಣಿಕೆ' ಎಂದರೆ ಹೂವಿನ ಹೊಡೆ ಸಸ್ಯದಲ್ಲಿ ಕಾಳು ಬೆಳೆಯಬೇಕಾದರೆ ಮುಂದೆ ಪರಾಗ ವಿನಿಮಯವಾಗಬೇಕು ಜೋಕುಮಾರನ ಭೋಗಲಾಲಸೆ ಪುಷ್ಪದ ಗರ್ಭಪ್ರಧಾನಕ್ಕೆ ಸಂಕೇತ. ಈ ಮೊದಲೇ ಹೇಳಿದಂತೆ ಮತ್ತೊಂದು ಕಥೆಯ ಪ್ರಕಾರ ಜೋಕುಮಾರನು ತನ್ನ ತಾಯಿಯನ್ನೇ ಅಂದರೆ ಗೌರಿಯನ್ನೇ ಮೋಹಿಸುತ್ತಾನೆಂಬ ಅಂಶ ಬರುತ್ತದೆ. ಅಂದರೆ ಸಸ್ಯದಲ್ಲಿ ಕಾಳು ಬಲಿತ ಬಳಿಕ ನೇರವಾಗಿ ನೆಲದ ಮೇಲೆ ಬೀಳುತ್ತದೆ. ಹಾಗೆ ಆಗಬಾರದಲ್ಲ. ಹಾಗೆ ಮಾಡುವುದೆಂದರೆ ಜೋಕುಮಾರನನ್ನು ಕೊಂದಂತೆ ಆದರೆ ಆ ಕಥೆಯಲ್ಲಿಯೂ ಸಹ ಅವನನ್ನು ಕೊಲ್ಲುತ್ತಾರೆ.

ಇತ್ತ ಭೂಮಿಯ ಮೇಲೆ ಬಿದ್ದ ಮಳೆ ನೀರು ಹಳ್ಳ ಸೇರಿ ಅಂಬಿಗರ ಮತ್ತು ಮಡಿವಾಳರ ಕೈಯಿಂದ ತಪ್ಪಿಸಿಕೊಂಡು ತಿರುಗಿ ಆಕಾಶ ಸೇರುತ್ತದೆ. ಆವಿಯಾಗಿ ಜೋಕ ತನ್ನ ಋಷಿಗಳನ್ನು ಕೂಡಿಕೊಳ್ಳುತ್ತಾನೆನ್ನುವ ತಾತ್ಪರ್ಯ ಅದು. ಜೋಕುಮಾರನ ಈ ಕಥೆಯ ಮೂಲ ಬೀಜೋತ್ಪತ್ತಿಯ ಹಬ್ಬ ಎಂಬುದಾಗಿ ನಾವು ತರ್ಕಿಸಬಹುದೆಂದು ಶಿವರಾಮಕಾರಂತರು ಈ ಅಭಿಪ್ರಾಯ ಕೇವಲ ಕಲ್ಪನೆಯಾಗಿದೆ ಹೊರತು ಯಾವುದೇ ನಿರ್ದಿಷ್ಟವಾದ ಆಧಾರಗಳಿಲ್ಲವೆಂದಿದ್ದಾರೆ.[೫]

೪. ಡಾ. ಎಂ. ಚಿದಾನಂದಮೂರ್ತಿ ಅವರ ಪ್ರಕಾರ "ಶಿವ-ಪಾರ್ವತಿಯವರಿಗೆ ಗಣಪತಿಯು ಹೇಗೆ ಮಗನೋ ಹಾಗೆ ಜೋಕ ಹಾಗೂ ಎಳೆಗೌರಿಯವರಿಗೆ ಜೋಕುಮಾರನೂ ಒಬ್ಬ ಮಗನು. ಅವನು ಜನತೆಯ ಆರಾಧ್ಯ ದೇವತೆಯಂತಲೂ ಅವರ ಹೆಸರಿನಿಂದ ಹಬ್ಬ ಹುಣ್ಣಿಮೆಗಳು ಬಳಕೆಯಲ್ಲಿ ಬಂದಿರಬಹುದೆಂದೂ ಊಹಿಸುತ್ತಾರೆ.

ಜೋಕುಮಾರನು ಹುಟ್ಟಿದ್ದು ಭಾದ್ರಪದ ಶುದ್ಧ ಅಷ್ಟಮಿಯ ದಿನ ಎಂಬುದಕ್ಕೆ (ಅಂದರೆ ಅಷ್ಟಮಿಯ ಕೊಡದಲ್ಲಿ ಹುಟ್ಟಿದ್ದು) ಆಧಾರವಾದ ಮೈಸೂರು ಪ್ರಾಚ್ಯಕೋಶಾಗಾರದ ಕೆ-೩೨೦

ಸಂಖ್ಯೆಯ ಹಸ್ತಪ್ರತಿ ಪತ್ರ ೫೨ರ ಪ್ರಕಾರ

ಆದಿ ಮೂರುತಿ ಗುರುವೆ ಆವಜನ

ನಾದದಿನವನು ಪೇಳು ಯಂದೊಡೆ

ಭಾದ್ರಪದ ಶುದ್ಧದಲ್ಲಿ ದೇವಿಯ ಅಷ್ಟಮಿಯ ಧಾರಾ ।

ಭೇದವಿಲ್ಲದೆ ಸರ್ವ ಲೋಕವು ।

ಆದಲಿಸಿ ಕಟ್ಟೇರ ಬಳಿಕಲಿ ।

ಆ ದಿವಸವೇ ಹುಟ್ಟಿ ನಡೆದನು ಭೂಪ ಕೇಳಂದಾ ॥

ಈ ಆಧಾರದ ಮೇಲೆ ಜೋಕುಮಾರನ ಹುಟ್ಟಿನ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಸಮಷ್ಠಿ ಪ್ರಜ್ಞೆ

ಜನಪದರು ದೇವರ ಬಗ್ಗೆ ನಂಬಿಕೆಯನ್ನು ಇರಿಸಿಕೊಂಡಿದ್ದಾರೆ. ತಮ್ಮ ಅನುಕೂಲ, ಅನಾನುಕೂಲಗಳಿಗಾಗಿ ಪ್ರಾರ್ಥಿಸುವರು. ತಮ್ಮ ದೈನಂದಿನ ಬದುಕಿನಲ್ಲಿ ಒಳ್ಳೆಯದನ್ನು ಕರುಣಿಸು, ಉತ್ತಮ ಫಲ ಪ್ರಾಪ್ತವಾಗಲಿ, ಯಾವುದೇ ರೀತಿಯ ಕಷ್ಟ-ಕಾರ್ಪಣ್ಯಗಳು ಬಾರದಿರಲಿ. ಹೀಗೆ ದೇವರ ಮೊರೆ ಹೋಗುವುದು ಸಾಮಾನ್ಯ ಸಂಗತಿ. ಇಂಡಿಯಾದಲ್ಲಿ ದೇವರಿಗಿದ್ದ ಸ್ಥಾನ-ಮಾನಗಳು ಪ್ರಪಂಚದಲ್ಲಿ ಬೇರೆಲ್ಲೂ ಇಲ್ಲ.

ಮನುಷ್ಯನಿಗೆ ಯಾವುದೇ ಕೆಲಸದಲ್ಲಿ ಸಫಲವಾಗಬೇಕಾದರೆ ದೇವರ ಕೃಪಾ ಕಟಾಕ್ಷಬೇಕು. ಅವನ ಆಶೀರ್ವಾದವಿಲ್ಲದೆ ಹೋದರೆ ಯಾವುದೇ ಕಾರ್ಯಗಳು ನಡೆಯದೆ ಸ್ಥಗಿತಗೊಳ್ಳುತ್ತವೆ ಎಂಬ ಅಛಲವಾದ ನಿರ್ಧಾರವನ್ನು ಹೊಂದಿರುತ್ತಾನೆ. ಭಾರತದಲ್ಲಿ ವಾಸಿಸುತ್ತಿರುವ ನಾನಾ ಸಮುದಾಯದವರು ತಮ್ಮದೇ ಆದ ದೇವರನ್ನು ಪೂಜಿಸುವ ಸಂಗತಿ ಸಾಮಾನ್ಯವಾಗಿ ಕಂಡುಬರುತ್ತದೆ. ಅವರು ತಮ್ಮ ನಿಯಮಕ್ಕನುಗುಣವಾಗಿ ಮಾಡಿಕೊಂಡಿರುವ ಪೂಜಾ ವಿಧಾನವೂ ಸಹ ಭಿನ್ನವಾಗಿರುತ್ತದೆ. ಕಾಲಕ್ಕನುಗುಣವಾಗಿ ಅವರು ಬಹುದೇವರೋಪಾಸಕರಾಗಿದ್ದಾರೆ.

ನಿತ್ಯ ಜೀವನದಲ್ಲಿ ಒಳಿತು ಕೆಡಕುಗಳು ಸಂಭವಿಸಿದರೆ ಅದಕ್ಕೆ ದೈವಕೃಪೆ ಅಥವಾ ಅವಕೃಪೆಯಾಗಿದೆಯೆಂದು ಅವರ ತಿಳುವಳಿಕೆ. ಒಂದೊಮ್ಮೆ ಹಾಗೇನಾದರು ಆದರೆ ಶಾಂತಿ ಮಾಡಿಸಬೇಕು, ಪೂಜೆ ಮಾಡಿಸಬೇಕು, ಅನ್ನ ಸಂತರ್ಪಣೆ ಮಾಡಿಸುವುದರಿಂದ ಉತ್ತಮವಾದ ಫಲಗಳು ಪ್ರಾಪ್ತಿಯಾಗುತ್ತವೆ ಎಂಬ ನಿಲುವು ಅವರದು. ಹೀಗಾಗಿ ಅನೇಕ ರೀತಿಯ ಪೂಜೆ ಪುನಸ್ಕಾರಗಳನ್ನು ಮಾನವನು ರೂಢಿಸಿಕೊಂಡು ಬಂದಿರುತ್ತಾನೆ.

ಪ್ರತಿಯೊಂದು ಸಮುದಾಯವು ತನ್ನದೇ ಆದ ದೃಷ್ಟಿಕೋನವನ್ನು ಹೊಂದಿರುತ್ತದೆ. ಆ ದೃಷ್ಟಿಕೋನದೊಳಗೆ ಆಯಾ ವರ್ಗ ಅಥವಾ ಸಮುದಾಯವು ಕಾಣ್ಕೆಯನ್ನು ಕಂಡುಕೊಳ್ಳುತ್ತದೆ. ಅವರ ಅನೇಕ ನಡಾವಳಿಗಳು ಸಹ ಇದರಲ್ಲಿ ಸಮ್ಮಿಳಿತವಾಗುತ್ತವೆ. ನಿರ್ದಿಷ್ಟ ವರ್ಗವೊಂದರಲ್ಲಿ ಅನೇಕ ಹೊಳಹುಗಳು ಸಹ ಆವಿರ್ಭವಿಸುತ್ತವೆ. ಎಲ್ಲಾ ಕೂಡ ಜತೆಗೂಡಿ ಹೊಯ್‌ಕಯ್ ಆಗಿ ಕಾರ್ಯರೂಪಕ್ಕೆ ಬರುತ್ತವೆ. ಹೀಗೆ ಕಾರ್ಯರೂಪಕ್ಕೆ ಬಂದ ಮನಸ್ಸಿನಲ್ಲಿ ಆಳವಾಗಿ ಬೇರು ಬಿಡುತ್ತವೆ. ಹೀಗೆ ಪರಂಪರೆಯು ಸಾಗುತ್ತಾ ಮುನ್ನಡೆಯುವುದು.

ಮನುಷ್ಯನ ಬುದ್ಧಿ ವಿಕಾಸವಾದಂತೆ ಅವನ ಆಲೋಚನಾ ಕ್ರಮಗಳೂ ಸಹ ವಿಕಾಸಗೊಳ್ಳುವುದು ಸಹಜ. ಹೀಗೆ ಅವನು ತನಗೆ ತಿಳಿದ ರೀತಿಯಲ್ಲಿ ಈ ಎಲ್ಲಾ ರಿಚ್ಯುಯಲ್ ಗಳನ್ನು ಬಳಕೆಗೆ ತಂದನು. ಅವುಗಳಿಗೆ ನಿರ್ದಿಷ್ಟವಾದ ಕಾರಣಗಳನ್ನು ಕಂಡುಕೊಂಡ. ಅವುಗಳಲ್ಲಿನ ಅನೇಕ ಸಮಸ್ಯೆಗಳಿಗೆ ತಾನೇ ಪರಿಹಾರಗಳನ್ನು ಕಂಡುಕೊಂಡನು. ಅನೇಕ ಸುಲಭ ಮಾರ್ಗಗಳನ್ನು ಗುರುತಿಸಿಕೊಂಡು ಅವುಗಳ ಏಳಿಗೆಗೆ ಶ್ರಮಿಸಿದನು. ವ್ಯಕ್ತಿಯೊಬ್ಬನಿಂದ ಪ್ರಾರಂಭಗೊಂಡು ಸಾರ್ವತ್ರಿಕವಾಗಿ ರೂಢಿಗೆ ಬಂದಿತು. ಇವುಗಳನ್ನು ಪ್ರತಿ ವರುಷದಲ್ಲಿ ಒಂದು ನಿರ್ದಿಷ್ಟವಾದ ಕಾಲದಲ್ಲಿ ಮಾತ್ರ ಆಚರಣೆಗಳಾಗಿ ಬಳಕೆಗೆ ತರುವುದಕ್ಕಾಗಿ ಆಲೋಚಿಸಿರಬೇಕು.

ಸಮಾಜದಲ್ಲಿ ತಾನು ಕಂಡುಂಡ ನೋವು-ನಲಿವುಗಳ ಪರಿಣಾಮವಾಗಿ ಮಾನವನು ಎಷ್ಟೋ ಕೆಲಸ ಕಾರ್ಯಗಳನ್ನು ಅವ್ಯಾಹತವಾಗಿ ಮುಂದುವರಿಸಿಕೊಂಡು ಬಂದಿರುತ್ತಾನೆ. ಅವನು ಇವೆಲ್ಲವುಗಳಿಂದ ಸಾಕಷ್ಟು ಪ್ರೇರಿತಗೊಂಡಿದ್ದಾನೆ. ಸಮಾಜಕ್ಕೆ ಸರಿಯಾಗಿ ಹೊಂದಿಕೊಂಡು ಹೋಗುವ ಜಾಯಮಾನ ಅವನದು. ಯಾವುದೇ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಒಬ್ಬರಿಂದಲೇ ಸಾಧ್ಯವಾಗುವುದಿಲ್ಲ. ಜನರ ಆಸರೆ, ಪ್ರೋತ್ಸಾಹ ಬೇಕಿರುತ್ತದೆ. ಸಮಾಜದಲ್ಲಿರುವ ಪ್ರತಿಯೊಬ್ಬರ ಸಹಕಾರ ಇಲ್ಲವಾದಲ್ಲಿ ಯಾವೊಂದು ಕಾರ್ಯಗಳು ಜರುಗದೇ ಇರಬಹುದು. ಎಷ್ಟೋ ಸೂಕ್ಷ್ಮ ವಿಚಾರಗಳು ಸಹ ಜನರ ತಿಳುವಳಿಕೆಗಳಿಗನುಸಾರವಾಗಿ ಮೂಡಿಬರುತ್ತವೆ. ಸಮಷ್ಟಿ ಪ್ರಜ್ಞೆಯಿಂದಾಗಿ ಎಷ್ಟೋ ಬುಡಕಟ್ಟು ಸಮುದಾಯದವರ ನಂಬಿಕೆ, ಆಚರಣೆ, ರೂಢಿ ಸಂಪ್ರದಾಯಗಳು ಅಸ್ತಿತ್ವಕ್ಕೆ ಬಂದಿವೆ. ಇವೆಲ್ಲವುಗಳ ಉಳಿವಿಗೆ ಇದು ಪರೋಕ್ಷವಾಗಿ ಕೆಲಸ ಮಾಡುತ್ತಿದೆಯೆಂದರೆ ಅತಿಶಯೋಕ್ತಿಯಾಗಲಾರದು. ತನಗೆ ತೋಚಿದ್ದನ್ನು, ಕಂಡು ಕೇಳಿದ್ದನ್ನು ಒಳಗೊಂಡು ಅವನು ಆಲೋಚಿಸತೊಡಗುತ್ತಾನೆ. ವಿಭಿನ್ನವಾದ ಆಲೋಚನೆಗಳಿಂದ ಅವನು ಕಂಡುಕೊಂಡ ಹರಹುಗಳು ಹತ್ತು ಹಲವಾರು. ಅವನ ಬುದ್ಧಿಚಾತುರ್ಯ, ತೀಕ್ಷ್ಣಮತಿಯನ್ನು ಕಂಡು ನಮಗೆ ಸೋಜಿಗವೆನಿಸಿದರೂ ಸಹ ಒಪ್ಪಿಕೊಳ್ಳಬೇಕಾಗುತ್ತದೆ. ಪ್ರತಿಯೊಂದನ್ನು ನಾವು ಭಿನ್ನವಾಗಿ ಅವಲೋಕಿಸುತ್ತಾ ಸಾಗಿದಾಗ ಅದರಲ್ಲಿ ಸಾಕಷ್ಟು ಹೊಸ ವಿಚಾರಗಳನ್ನು ಕಂಡುಕೊಳ್ಳುತ್ತೇವೆ. ಅಂತಹ ವಿಚಾರಗಳಲ್ಲಿ ಅನೇಕ ದಾರ್ಶನಿಕ ವಿಚಾರಗಳೂ ಕೂಡ ಸಮ್ಮಿಳಿತಗೊಂಡಿರುತ್ತವೆ. ಮಾನವನು

ಕಂಡ ನೋಟ ಮತ್ತು ಆಲೋಚನಾ ಪರಿ ಇವೆರಡೂ ಪೂರಕವಾಗಿ ಕೆಲಸ ಮಾಡುತ್ತವೆ. ಅಂದಿನ ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ಅನೇಕ ಲೋಕಾನುಭವಗಳಿಂದ ಒಡಗೂಡಿದ ಮಹತ್ವ ಪೂರ್ಣ ಅಂಶಗಳೂ ಸಹ ಇದರೊಂದಿಗಿವೆ. ತಲತಲಾಂತರಗಳಿಂದ ಒಳಗೂಡಿದ ದಾರ್ಶನಿಕ ಹಾಗೂ ಲೋಕಕಲ್ಯಾಣದ ಅಭೀಪ್ಸೆಗಳೂ ಪೂರಕವಾಗಿ ಬೆರೆತಿರುತ್ತವೆ.

ಪ್ರಸಿದ್ಧ ವಿದ್ವಾಂಸರೂ ಜಾನಪದ ತಜ್ಞರೂ ಆಗಿರುವ ಡಾ.ದೇ.ಜವರೇಗೌಡ ಅವರ ಪ್ರಕಾರ, "ಸಂಸ್ಕೃತಿಯನ್ನು ಹಿರಿಯದು-ಕಿರಿಯದು, ಮೇಲಿನದು-ಕೆಳಗಿನದು, ಗ್ರಾಮ್ಯ-ನಾಗರಿಕ, ವೈದಿಕ-ಅವೈದಿಕ ಎಂದು ವರ್ಗೀಕರಣ ಮಾಡುವುದು ಅನುಚಿತ ಅಸಹಜ, ಜಾನಪದ ಸಂಸ್ಕೃತಿ, ನಾಗರಿಕ ಸಂಸ್ಕೃತಿಗಳಲ್ಲಿ ವ್ಯತ್ಯಾಸವಿಲ್ಲದಿದ್ದರೂ ಸಮಾನಾಂತರವಾಗಿಯೇ ವಿಕಾಸ ಹೊಂದುವುದು."[೭]

ಭಿನ್ನ ಸಂಸ್ಕೃತಿಯ ನೆಲೆಯಿಂದ ಹೊಸ ಆಯಾಮಗಳನ್ನು ಕಂಡುಕೊಂಡನು. ಮಾನವನ ಆಲೋಚನಾ ಕ್ರಮಗಳು ಹೀಗೆ ಮುಂದುವರೆಯುತ್ತವೆ. ಪ್ರತಿಯೊಂದು ವಿಚಾರಗಳನ್ನು ಒಳನೋಟದಿಂದಲೇ ಗ್ರಹಿಸುತ್ತಾನೆ. ಅವೆಲ್ಲವುಗಳನ್ನು ಮನನ ಮಾಡಿಕೊಳ್ಳುತ್ತಾನೆ. ಪ್ರತಿಯೊಂದು ವರ್ಗದವರ ಭಿನ್ನ ನಡಾವಳಿಗಳನ್ನು ಗ್ರಹಿಸುತ್ತಾನೆ. ತನ್ನದೇ ಆದ ವಿಮರ್ಶಾತ್ಮಕ ಬುದ್ಧಿಶಕ್ತಿಯಿಂದ ಅಭ್ಯಾಸ ಮಾಡಲು ತೊಡಗುತ್ತಾನೆ. ಎಲ್ಲಾ ವಿಷಯಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾನೆ. ವ್ಯಕ್ತಿಯೊಬ್ಬನಿಂದ ಬಳಕೆಗೆ ಬಂದು ಸಮಸ್ತ ಜನರಿಂದ ಮಾನ್ಯತೆ ಪಡೆದು ಆಚರಣೆಯ ರೂಪದಲ್ಲಿ ಜನ್ಮ ತಾಳುತ್ತದೆ. ಆದರೆ ಎಲ್ಲಾ ಆಚರಣೆಗಳಿಗೆ ಮಾನ್ಯತೆ ಸಿಗುತ್ತದೆಯೆಂದು ಖಚಿತವಾಗಿ ಹೇಳಲು ಬರುವುದಿಲ್ಲ. ಕೆಲವುಗಳಿಗೆ ಮಾತ್ರ ಬೇಗನೆ ಮಾನ್ಯತೆ ದೊರಕುತ್ತವೆಯಾದ್ದರಿಂದ ಅವು ಅತ್ಯಲ್ಪ ಕಾಲದಲ್ಲಿಯೇ ಹೆಮ್ಮರವಾಗಿ ಬೆಳೆಯುತ್ತವೆ. ಜನರು ಬೇಗನೆ ಅವನ್ನು ಗುರುತಿಸುತ್ತಾರೆ. ಇನ್ನೂ ಕೆಲವು ಆಚರಣೆಗಳನ್ನು ಯಾರೂ ಗುರುತಿಸದೇ ಹೋಗಬಹುದು. ಕಾರಣ ಅಂತಹುಗಳು ಜನರಿಗೆ ಗೋಚರಿಸಿದರೂ ಕೂಡ ಅವರ ಉಪೇಕ್ಷೆಯಿಂದಾಗಿ ಅವುಗಳು ಅಸ್ತಿತ್ವವನ್ನು ಕಳೆದುಕೊಳ್ಳುತ್ತವೆ. ಇಂದಿನ ಅತ್ಯಾಧುನಿಕ ಯುಗದಲ್ಲಿ ಎಲ್ಲವೂ ಕೂಡ ವಿನಾಶದ ಅಂಚಿನಲ್ಲಿವೆ. ವಿಜ್ಞಾನಕ್ಷೇತ್ರದ ಆವಿಷ್ಕಾರದಿಂದಾಗಿ ಹೊಸ ವಿಷಯಗಳು ಜನ್ಮ ತಾಳುತ್ತಿವೆ. ಹಿಂದಿನ ತಲೆಮಾರಿನ ಜನರು ಪ್ರತಿವರ್ಷದಲ್ಲಿ ಆಯಾ ಋತುಮಾನಕ್ಕೆ ತಕ್ಕಂತೆ ನಿಗಧಿಪಡಿಸಿದ ದಿನದೊಳಗೆ ಎಲ್ಲಾ ಸಂಪ್ರದಾಯ, ಆಚರಣೆಗಳನ್ನು ಚಾಚೂ ತಪ್ಪದಂತೆ ನಡೆಸಿಕೊಂಡು ಬರುತ್ತಿದ್ದರು. ಈಗಲೂ ಕೂಡ ಈ ಪದ್ಧತಿ ಮುಂದುವರೆಯುತ್ತಿದೆ. ಆದರೆ ಅವುಗಳಲ್ಲಿ ಬೆರಳೆಣಿಕೆಯಷ್ಟು ಮಾತ್ರ ಉಳಿದಿರುತ್ತವೆ.

ಇವತ್ತಿನ ದಿನಗಳಲ್ಲಿ ನಮ್ಮ ಎಷ್ಟೋ ಆಚರಣೆಗಳಾಗಿರಬಹುದು ರೂಢಿ ಸಂಪ್ರದಾಯಗಳಾಗಿರಬಹುದು, ಕೇವಲ Formalities ಗಾಗಿ ಅವು ಜನಮಾನಸದಲ್ಲಿ ಅಚ್ಚೊತ್ತಿದಂತಿವೆ. ಆದರೆ ಅವುಗಳ ಮೂಲೋದ್ದೇಶ ಹಾಗೂ ಅವುಗಳಲ್ಲಿರುವ ಆಶಯ ದಿನದಿಂದ ದಿನಕ್ಕೆ ಕ್ವಚಿತ್ ಆಗುತ್ತಾ ಬಂದಿರುವುದು ವಿಪರ್ಯಾಸದ ಸಂಗತಿಯೇ ಆಗಿದೆ.

ಇಂಡಿಯಾ ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ ರಾಷ್ಟ್ರವಾಗಿ ಹತ್ತುಹಲವಾರು ಉಪಸಂಸ್ಕೃತಿಗಳನ್ನು ಹೊಂದಿದ್ದು ತನ್ನದೇ ಆದ ವೈಶಿಷ್ಟ್ಯತೆಗಳನ್ನು ಹೊಂದಿದೆ. ಇಲ್ಲಿ ಅನೇಕ ಬುಡಕಟ್ಟುಗಳು, ಹಲವಾರು ವಿಭಿನ್ನ ಸಮುದಾಯಗಳು ಸಹಸ್ರಾರು ವರುಷಗಳಿಂದ ಇಲ್ಲಿ ಕಾಲೂರಿವೆ. ಅವೆಲ್ಲವೂ ತಮ್ಮದೇ ಆದ ಕಟ್ಟುಪಾಡುಗಳನ್ನು ಹೊಂದಿದ್ದು ಪ್ರತಿಯೊಂದು ವರ್ಗದ ಜನರು ತಮ್ಮ ರೀತಿ-ನೀತಿಗಳಿಗೆ ಅನುಗುಣವಾಗಿ ಬದುಕನ್ನು ನಡೆಸುತ್ತಿದ್ದಾರೆ. ಬಹುಸಂಸ್ಕೃತಿಯಿಂದ ಕೂಡಿದ್ದರೂ ಅವರವರ ನಿಯಮಕ್ಕೆ ಅನುಸಾರವಾಗಿ ಪ್ರತಿಯೊಂದನ್ನು ಅವರ ದೈನಂದಿನ ಬದುಕಿಗೆ ಪೂರಕವಾಗಿ ಪಾಲಿಸಿಕೊಂಡು ಬರುತ್ತಿರುವುದು ಎಲ್ಲರಿಗೂ ತಿಳಿದ ವಿಚಾರ.

ಡಾ. ಸಂಗಮೇಶ ಬಿರಾದಾರ ಅವರು "ಬರಹದಲ್ಲಿ ಜೋಕೊವರನೆಂದೂ, ಜೋಕುಮಾರನೆಂದೂ ಬಳಕೆಯಾಗುತ್ತಿರುವಂತೆ ಜೋಕುಮಾರ ಎಂಬುದು ಮಾತ್ರ ಇಂದು ಉಳಿದಿದೆ. ಅಲ್ಲದೆ ಜೋಕಪ್ಪ, ಕೊಮರ ಎಂಬಂತೆ ಎರಡನ್ನು ಪ್ರತ್ಯೇಕವಾಗಿಯೂ ಬಳಸುತ್ತಿರುವುದು ಕಂಡುಬರುತ್ತದೆ. ನಾರಸಿಂಹ ಕವಿಯ "ಅನುಭವ ಶಿಖಾಮಣಿ"ಯಲ್ಲಿ ಸಪ್ತರ್ಷಿಗಳ ಸೇವನಾದ 'ಜೋಕ' ಎಂಬುವನು ಭೂಲೋಕದಲ್ಲಿ 'ಮಾರಿ'ಯೊಡನೆ ಕೂಡಲು ಹುಟ್ಟಿದ ಮಗನೆ ಜೋಕನ ಕುಮಾರ > ಜೋಕಕುಮಾರ > ಜೋಕುಮಾರ ಆದನೆಂದು ಅಭಿಪ್ರಾಯಪಟ್ಟಿದ್ದಾರೆ.[೭]"

ಕನ್ನಡ ಸಾಹಿತ್ಯದ ಕೃತಿಗಳಲ್ಲಿ ಜೋಕುಮಾರನ ಉಲ್ಲೇಖ

ಜೋಕುಮಾರನ ಬಗ್ಗೆ ಹಲವು ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ಉಪಲಬ್ಧವಿದೆ. ಅವುಗಳನ್ನು ಕಾಲಾನುಕ್ರಮದಲ್ಲಿ ಈ ಕೆಳಗೆ ಕಂಡಂತೆ ಉಲ್ಲೇಖಿಸಿದೆ.

೧

೧. ಶ್ರೀಧರಾಚಾರ್ಯನ (ಕ್ರಿ.ಶ. ೧೦೪೯) 'ಜಾತಕ ತಿಲಕ' ದಲ್ಲಿ

ಭವನಾಂತದೊಳ್ ಸುಧಾಸಂ
ಭವನಿರೆ ಕಾಣದಿರೆ ಸೌಮ್ಯರಿರೆ ಪಾಪಗಣಂ
ನವಪಂಚಮದೊಳ್ ಪುಟ್ಟಿದ
ಕುವರಂ ಜೋಕೊವರನಂತೆ ಪಲದಿವಸ ಮಿರಂ ||

ಅಂದರೆ "ರಾಶಿಯ ಕೊನೆಯ ನವಾಂಶದಲ್ಲಿ ಚಂದ್ರನಿದ್ದು ಶುಭ ಗ್ರಹಗಳು ಅವನನ್ನು ನೋಡದೆ ಪಾಪ ಗ್ರಹಗಳು ಒಂಬತ್ತು ಐದನೇ ಸ್ಥಾನಗಳಲ್ಲಿರುವಾಗ ಹುಟ್ಟಿದ ಮಗ ಜೋಕುಮಾರನಂತೆ ಬಹಳ ದಿನ ಇರುವುದಿಲ್ಲ."

ಈ ವಿಚಾರವು ಜ್ಯೋತಿಷ್ಯ ಶಾಸ್ತ್ರಕ್ಕೆ ಸಂಬಂಧಪಟ್ಟಿರುತ್ತದೆ. ಮಾನವನ ಜೀವಿತದ ಅವಧಿಯಲ್ಲಿ ಗ್ರಹಗಳು ಹೇಗೆ ಪರಿಣಾಮವನ್ನು ಬೀರುತ್ತವೆ. ಅವುಗಳ ಪ್ರಭಾವದಿಂದ ಅವನು ಅಲ್ಪಾಯು, ದೀರ್ಘಾಯು ಆಗುತ್ತಾನೆ. ಗ್ರಹಗತಿಗಳ ದೋಷದಿಂದಾಗಿ ಉನ್ನತ, ಅವನತ ಸ್ಥಾನಮಾನಗಳು ದೊರಕುತ್ತವೆ. ಎಂಬಿತ್ಯಾದಿ ಅಂಶಗಳನ್ನು ಇದು ತಿಳಿಸುತ್ತದೆ.

೨. ಬಂಧುವರ್ಮನ (ಕ್ರಿ.ಶ.೧೧೫೦)[೨] 'ಜೀವಸಂಬೋಧನೆ'ಯಲ್ಲಿ

ಅವರಿವರನ್ನರಿನ್ನರಿನಿ ಸೋವುವೆನೆನ್ನದೆ ರೌದ್ರಕೋಪದಿಂ
ಜವನಿರದುಣ್ಮಿ ತಾಂ ಮಸಗಿ ಗರ್ಭದೊಳಂ ಕೊಲೆಮುನ್ನೆ ಕಟ್ಟಿದೊಂ
ದವಧಿಯ ನೆಯ್ದೆ ನಿಟ್ಟಿಸಿರ ಲಾಗದ ಮಾನಿ(ನ) ಸವಾಳ್ಗೆನಾಡೆ ಜೋ
ಕುವರನ ಬಾಳ್ಕೆ ಲೇಸು ಗಡಮೇಕದು ನಿಟ್ಟಿಸಲಪ್ಪದೂ ಸಹೆಂ||[೬]

ಯಮ ಅವರು, ಇವರು, ಅಂಥವರು, ಇಂಥವರು, ಸ್ವಲ್ಪ ಕಾಪಾಡುತ್ತೇನೆ ಎನ್ನದೆ ರೌದ್ರಕೋಪದಿಂದ ಗರ್ಭದಲ್ಲೇ ಕೊಂದು ಹಾಕಲು, ವಿಧಿ ಮುಂಚೆಯೇ ಕಟ್ಟಿಟ್ಟಂತಹ ಜೀವಿತದ ಅವಧಿಯನ್ನೇ ನೋಡಲು ಸಾಧ್ಯವಾಗದ ಅಂತಹ ಮಾನವ ಜೀವಿತಕ್ಕಿಂತ ಜೋಕುಮಾರನ ಬಾಳುವೆಯೇ ಲೇಸು ಏಕೆಂದರೆ ಅದನ್ನು ಸ್ವಲ್ಪ ಕಾಲವಾದರೂ ನೋಡಬಹುದು.

೩. ಬಸವಣ್ಣನವರು (ಕ್ರಿ.ಶ. ೧೧೬೦) ವಚನವೊಂದರಲ್ಲಿ [೭]ಉಣಲುಡಲು ಮಾರಿಯಲ್ಲದೆ ಕೊಲಲು ಕಾಯಲು ಮಾರಿಯೆ?

ತನ್ನ ಮಗನ ಜವನೊಯ್ದಲ್ಲಿ ಅದೆತ್ತ ಹೋದಳಾ ಮಾರಿಕವ್ವೆ?

ಈವ ಕಾವರೆ ನಮ್ಮ ಕೂಡಲ ಸಂಗಯ್ಯನಲ್ಲದೆ ಮತ್ತೊಂದು ದೈವವಿಲ್ಲ||

ಉಣ್ಣುವುದು ಉಡುವುದು ಇಷ್ಟೇ ಮಾರಿಗೆ ಗೊತ್ತಿರುವುದು. ಕೊಲ್ಲುವ ಕಾಪಾಡುವ ಶಕ್ತಿ ಅವಳಿಗಿಲ್ಲ. ತನ್ನ ಮಗನನ್ನು ಯಮ ಕೊಂಡುಯ್ಯುವಾಗ ಆ ಮಾರಿಕವ್ವೆ ಎತ್ತ ಹೋದಳು[೭] ಕೊಡಬೇಕಾದರೆ ಕಾಪಾಡಬೇಕಾದರೆ ನಮ್ಮ ಕೂಡಲ ಸಂಗಯ್ಯನನ್ನು ಬಿಟ್ಟರೆ ಬೇರೆ ದೈವವಿಲ್ಲ.

೪. ನೇಮಿಚಂದ್ರನ (ಕ್ರಿ.ಶ.೧೧೭೦) 'ನೇಮಿನಾಥ ಪುರಾಣ'ದಲ್ಲಿ-

"ಬಲಿ ಜೋ** ಕೋರನಂತಿರೇಬು ದಿವಸದರ ಸುತಮಂಬೇಡಿ ಪಡೆದನ್"[೮]

(ಪಾಠಾಂತರ** ಕಾ)

(ಜೋಕುಮಾರ ಬದುಕಿದ್ದುದು ಏಳು ದಿನ ಮಾತ್ರ ಎಂದು ಮುಂದೆ ಹೇಳಲಾಗುವ ಕಥೆಗಳಲ್ಲಿ ಸ್ಪಷ್ಟವಾಗಿ ಉಕ್ತವಾಗಿದೆ.)

೫. ಬ್ರಹ್ಮಶಿವನ (ಕ್ರಿ.ಶ.೧೧೮೦) 'ಸಮಯ ಪರೀಕ್ಷೆ'ಯಲ್ಲಿ

> ದೇವತೆ ಪೆಱರನದೆಂತುಂ | ಕಾವಳು ಗಡ ತನ್ನ ಪೆಮ್ಮಗಂ* ಜೋಕಾರಂ|*
> ಸಾವಾಗ ಕಾಯಲಾರದ | ಕೀಟಲು ಪೇಳ್ಪೆಱರ್ಗೆ ಮಾಡಲಾರ್ಪಳೆ ಸುಖಮಂ||[೭]
> (ಪಾಠಾಂತರ - ಜೋಕೊವರಂ ಬಹುಶಃ ಇದೇ ಸರಿಯಾದ ಪಾಠ)

ದೇವತೆ ಬೇರೆಯವರನ್ನು ಅದು ಹೇಗೆ ಕಾಪಾಡುತ್ತಾಳೆಯೋ? ಏಕೆಂದರೆ ತನ್ನ ಹಿರಿಯ ಮಗ ಸಾಯುವಾಗ ಕಾಪಾಡಲಾರದೆ ಹೋದ ಅವಳು ಇತರರಿಗೆ ಹೇಗೆ ತಾನೆ ಸುಖವನ್ನುಂಟು ಮಾಡಿಯಾಳು? ಉಣ್ಣುವುದು ಉಡುವುದು ಇಷ್ಟೇ ಮಾರಿಗೆ ಗೊತ್ತಿರುವುದು? ಕೊಲ್ಲುವ ಕಾಪಾಡುವ ಶಕ್ತಿ ಅವಳಿಗಿಲ್ಲ, ತನ್ನ ಮಗನನ್ನು ಯಮ ಕೊಂಡುಯ್ಯುವಾಗ ಆ ಮಾರಿಕವ್ವೆ ಎತ್ತ ಹೋದಳು?[೮] ಕೊಡಬೇಕಾದರೆ, ಕಾಪಾಡಬೇಕಾದರೆ ನಮ್ಮ ಕೂಡಲ ಸಂಗಯ್ಯನನ್ನು ಬಿಟ್ಟರೆ ಬೇರೆ ದೈವವಿಲ್ಲ.

೬. ಪಾರ್ಶ್ವಕವಿಯ (ಕ್ರಿ.ಶ.೧೨೨೨) 'ಪಾರ್ಶ್ವನಾಥ ಪುರಾಣ'ದಲ್ಲಿ

> ಜೋಕೊವರಂ ನೆಗಟ್ದಂ ಸುರ
> ಲೋಕ ವಿರುದ್ಧಮನೆ ಕಮಠನಿರದಧಿಕಂ
> ಲೋಕ ವಿರುದ್ಧಮುಮಂ ಸುರ
> ಲೋಕ ವಿರುದ್ಧಮುಮನಿರದೆ ನೆಗಟ್ದುದ ಜಿಂದಂ[೯]||

೭. ಶ್ರೀ ವಿಜಯ ದಾಸರ (ಕ್ರಿ.ಶ.೧೭೦೦) ಒಂದು ಸುಳಾದಿಯಲ್ಲಿ ಅನೇಕ ದೇವತೆಗಳ ಪಟ್ಟಿಯಲ್ಲಿ 'ಹಲ್ಲಿನ ಜೋಕುಮಾರ'ನ ಉಲ್ಲೇಖವಿದೆ.[೧೦]

೮. ನಾರಸಿಂಹ ಕವಿಯ[೧೧] (ಕ್ರಿ.ಶ.೧೭೬೮) 'ಅನುಭವ ಶಿಖಾಮಣಿ'ಯಲ್ಲಿ ಗೌತಮ ಋಷಿಯು ಗಂಭೀರ ಮಹಾರಾಜನಿಗೆ ನಿರೂಪಿಸಿದ ಕಥೆಗಳಲ್ಲಿ ಜೋಕುಮಾರನ ಕಥೆಯೂ ಒಂದು. (ಈ ಕಥೆಯ ವಿವರಗಳಿಗೆ ನೋಡಿ)

ಟಿಪ್ಪಣಿಗಳು

೧. ಕನ್ನಡ ರತ್ನಕೋಶ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು, ೧೯೯೩, ಪು.೯೫

೨. ಎಸ್.ಎಸ್. ಭದ್ರಾಪೂರ 'ಜೋಕುಮಾರ' ಜಾನಪದ ಸಾಹಿತ್ಯ ದರ್ಶನ-೧೦, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಪು.೧೧೨

೩. ಅದೇ, ಪು.೧೧೩

೪. ಅದೇ, ಪು.೧೧೩

೫. ಡಾ. ಶಿವರಾಮ ಕಾರಂತ, ಅದೇ ಪು.೧೧೩

೬. ಡಾ.ಎಂ.ಚಿದಾನಂದ ಮೂರ್ತಿ, 'ಜೋಕುಮಾರ' ಜಾನಪದ ಸಾಹಿತ್ಯ ದರ್ಶನ-೧೦, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು.೧೧೪

೭. ಸಂಗಮೇಶ ಬಿರಾದಾರ 'ಜೋಕುಮಾರ' ಜಾನಪದ ಸಾಹಿತ್ಯದರ್ಶನ-೧೦, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಪು.೧೧೪

* * *

೧. ಎಸ್.ಎನ್.ಕೃಷ್ಣ ಜೋಯಿಸ್(ಸಂ), 'ಜಾತಕ ತಿಲಕಂ', ೧೯೫೯, ೬.೭

೨. ಕರ್ನಾಟಕ ಕವಿಚರಿತೆಯಲ್ಲಿ (I, ಪು.೩೫೮) ಇವನ ಕಾಲವನ್ನು ಸು.೧೨೦೦ ಎಂದು ಕೊಟ್ಟಿದೆ. ಇವನು ಬ್ರಹ್ಮಶಿವನಿಗಿಂತ (ಸು.೧೧೮೦) ಹಿಂದಿನವನೆಂಬುದು ಸ್ಪಷ್ಟ. ಬ್ರಹ್ಮಶಿವ ತನ್ನ ಮೂರು ಪದ್ಯಗಳಲ್ಲಿ (ಸಮಯ ಪರೀಕ್ಷೆ, ೧, ೨೯, ೩೧) ಬಂಧವರ್ಮನನ್ನು 'ಜೀವ ಸಂಬೋಧನೆ'ಯನ್ನೂ ಹೆಸರಿಸಿದ್ದಾನೆ.

೩. ಎಚ್.ಶೇಷಅಯ್ಯಂಗಾರ್ (ಸಂ), ಜೀವಸಂಬೋಧನೆ, ಪು.೮

೪. ಶಿ.ಶಿ.ಬಸವನಾಳ (ಸಂ), ಬಸವಣ್ಣನವರ ಷಟ್‌ಸ್ಥಲದ ವಚನಗಳು, ೧೯೫೪, ಪು.೧೪೩

೫. ಮಾರಿಕವ್ವೆಯ ಮಗ ಇನ್ನಾರೂ ಅಲ್ಲ, ಜೋಕುಮಾರನೇ. ಬ್ರಹ್ಮಶಿವನ ಉಕ್ತಿಯನ್ನು ಇಲ್ಲಿ ಸ್ಮರಿಸಬಹುದು. ಜೋಕುಮಾರನ ತಾಯಿ ಮಾರಿದೇವತೆ ಎಂಬುದು 'ಅನುಭವ ಶಿವಾಮಣಿ'ಯಿಂದ ಸ್ಪಷ್ಟವಾಗುತ್ತದೆ. ಅಲ್ಲಮನ "ಊರಕ್ಕಿ ಊರೆಣ್ಣೆ ಉಣ್ಣು ಮಾರಿಕವ್ವೆ ತಾಯಿ ಬಾರೆ ಕುಮಾರನ ತಲೆಗಾಯಿ....' ಎಂಬ ವಚನದಲ್ಲಿ ಜೋಕುಮಾರನ ಕತೆ ಸೂಚಿತವಾಗಿರುವುದನ್ನು ಡಾ.ಪಿ.ವಿ.ನಾರಾಯಣ ತಮ್ಮ ಲೇಖನವೊಂದರಲ್ಲಿ ಗುರುತಿಸಿದ್ದಾರೆ.

೬. ಬಿ.ಎಸ್.ಸಣ್ಣಯ್ಯ(ಸಂ), 'ನೇಮಿನಾಥ ಪುರಾಣ', ೬, ೧೯, ವಚನ.

೭. ಬಿ.ಎಸ್. ಕುಲಕರ್ಣಿ(ಸಂ), 'ಸಮಯ ಪರೀಕ್ಷೆ', ೯, ೧೧೦

೮. -

೯. ಎಂ.ಮರಿಯಪ್ಪ ಭಟ್ಟ ಮತ್ತು ಎಂ.ಗೋವಿಂದರಾವ್ (ಸಂ), ಪಾರ್ಶ್ವನಾಥ ಪುರಾಣಂ, ೧೯೫೪, ೩, ೬೫,

ಕಮಠ ಮರುಭೂತಿಯರು ಅಣ್ಣ ತಮ್ಮಂದಿರು, ವಿಶ್ವಭೂತಿ ಎಂಬ ಮಂತ್ರಿಯ ಮಕ್ಕಳು ಕಮಠ ಜಡ, ಮಹಾಮೂರ್ಖ, ದುಷ್ಟ; ಮರುಭೂತಿ ಸಾತ್ವಿಕ, ವಿವೇಕಿ, ಶುದ್ಧಹೃದಯಿ. ಆ ಕಾರಣ ಚಿಕ್ಕವನಾಗಿದ್ದರೂ ಮರುಭೂತಿಗೆ ಮಂತ್ರಿಪದವಿಯು ದೊರಕಿತು. ಆ ಊರಿನ ರಾಜ ಒಮ್ಮೆ ಯುದ್ಧಕ್ಕೆ ಹೋಗುವಾಗ ಅವನ ಜತೆ ಮರುಭೂತಿಯೂ ಹೋಗುತ್ತಾನೆ. ರಾಜ್ಯವನ್ನು ಪಾಲಿಸುವ ಹೊಣೆ ಕಮಠನ ಮೇಲೆ ಬೀಳುತ್ತದೆ. ಮೊದಲೇ ಅಸೂಯಾಪರನೂ ದುಷ್ಟನೂ ಆಗಿದ್ದ ಕಮಠನಿಗೆ ಸ್ವಾತಂತ್ರ್ಯವು ಸಿಕ್ಕರೆ ಕೇಳಬೇಕೆ? ಅವನು ಮಾಡದ ಪಾಪವಿಲ್ಲ ಎಂಬಂತಾಯಿತು. ನೃಪನ ರಾಣಿಯರನ್ನು ತನ್ನವರನ್ನಾಗಿ ಮಾಡಿಕೊಂಡ; ನೃಪನ ಐಶ್ವರ್ಯ ಕಸಕ್ಕಿಂತಲೂ ಕಡೆಯಾಯ್ತು. ವಿಟರು, ಜೂಜುಗಾರರು ಇವನ ಸ್ನೇಹಿತರಾದರು. ಅದನ್ನು ಕಂಡ ಜನ ಮೇಲಿನ ಮಾತನ್ನು ಆಡುತ್ತಾರೆ.(೩, ೬೫ ರವರೆಗಿನ ಕಮಠನ ಕಥೆ)

ದೇವತಾಪುರುಷನಾದ ಜೋಕುಮಾರನು ಮೋಹಿಸಿದ್ದು ಒಬ್ಬ ಅವಿವಾಹಿತ ತರುಣಿಯನ್ನು (ಮುಂದೆ ನೋಡಿ) ಇದು 'ಸುರಲೋಕ ವಿರುದ್ಧ' ವಾದ ಪಾಪಕಾರ್ಯ. ಆದರೆ ಕಮಠನು ಮೋಹಿಸಿದ್ದು ನೃಪನ ರಾಣಿಯರನ್ನು, ಹಾಳು ಮಾಡಿದ್ದು ರಾಜನ ಐಶ್ವರ್ಯವನ್ನು; ಇದು 'ಸುರಲೋಕ ವಿರುದ್ಧ'ವೂ 'ಲೋಕ ವಿರುದ್ಧ'ವೂ ಆದ ಪಾಪಕಾರ್ಯ. ಆದ್ದರಿಂದ ಇವನ ಪಾಪದ ಪ್ರಮಾಣ ಹೆಚ್ಚು. ಇದು ಬಹುಶಃ ಮೇಲಿನ

ಪದ್ಯದ ತಾತ್ಪರ್ಯವಿರಬಹುದು?

೧೦. ಹನುಮಂತರಾವ್ ಗೋರಬಾಳ (ಸಂ), ಶ್ರೀ ವಿಜಯದಾಸರ ಸಾಧನಭಾಗ ಸುಳಾದಿಗಳು, ಭಾಗ ೧, ಪು.೧೧೭, ಸುಳಾದಿ ೫೮

೧೧. 'ಅನುಭವ ಶಿಖಾಮಣಿ'ಯ ಕರ್ತೃ ನಾರಸಿಂಹನೆಂದು ಕವಿಚರಿತೆಯಲ್ಲಿ(III ಪು.೧೨೦) ಹೇಳಿದೆ. ನಾನು ನೋಡಿದ ಮೂರು ಪ್ರತಿಗಳಲ್ಲಿಯೂ (ಇವುಗಳಲ್ಲಿ ಒಂದು ಓಲೆಯ ಪ್ರತಿ, ಇನ್ನೆರಡು ಕಾಗದ ಪ್ರತಿಗಳು) ಕರ್ತೃ ನಾರಸಿಂಹನೆಂದು ಸ್ಪಷ್ಟವಾಗಿ ಹೇಳಿದೆ. 'ಅನುಭವ ಶಿಖಾಮಣಿ'ಯ ಕರ್ತೃ ಬಿಟ್ಟ ಮಂಡೆಯ ಪ್ರಭುದೇವನೆಂದು ಕೆಲವರು ತಪ್ಪಾಗಿ ಭಾವಿಸಿದ್ದಾರೆ. ಮೈಸೂರಿನ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿರುವ ಹಸ್ತಪ್ರತಿಯಲ್ಲಿ (K.೩೨೦) ಕರ್ತೃವಿನ ಹೆಸರನ್ನು ಹೇಳುವ ಮೊದಲ ಹಾಳೆಯು ನಷ್ಟವಾಗಿದೆ. (ಈ ಕೃತಿ ೧೮೯೭ರಲ್ಲಿ ಹೊನ್ನೂರು ಸಿದ್ಧರಾಮಶಾಸ್ತ್ರೀ ಅವರಿಂದ ಪ್ರಕಟಿತವಾಗಿದೆ.)

ಅಧ್ಯಾಯ ೩

ಜೋಕುಮಾರನ ಹುಟ್ಟು, ಸ್ವರೂಪ ಮತ್ತು ಅಂತ್ಯ

೩

ಜೋಕುಮಾರನ ಹುಟ್ಟು, ಸ್ವರೂಪ ಮತ್ತು ಅಂತ್ಯ

ಜನಪದರಿಗೆ ತಮ್ಮದೇ ಆದ ಕಲ್ಪನೆಗಳಿವೆ. ಅವರ ಕಲ್ಪನೆ ಅದ್ಭುತವಾಗಿದೆ. ಅವುಗಳಿಗೆ ತಕ್ಕಂತೆ ಅವರು ದೈವಗಳನ್ನು ಆರಾಧಿಸಿಕೊಂಡು ಬರುತ್ತಿದ್ದಾರೆ. ಜನಪದರ ಕ್ರಮ ಮೆಚ್ಚತಕ್ಕದ್ದೇ ಆಗಿರುತ್ತದೆ. ಅವರ ಭಕ್ತಿಭಾವಗಳು ಆಯಾ ದೈವಗಳಲ್ಲಿ ಸಮ್ಮಿಳಿತವಾಗಿರುತ್ತವೆ. ಪ್ರತಿಯೊಂದು ದೈವದ ಹುಟ್ಟಿನ ಹಿಂದೆ ಜನಪದರ ಪರಿಕಲ್ಪನೆ ಇದೆ. ಇಂದು ಜನರಿಂದ ಪೂಜೆಗೊಳ್ಳುತ್ತಿರುವ ಎಲ್ಲಾ ದೇವರುಗಳು ಜನ್ಮ ತಾಳಿರುವುದು ಲೋಕಕಲ್ಯಾಣಾರ್ಥವಾಗಿ. ಈ ಸಂಬಂಧದಲ್ಲಿ ದೇವರು ಮಾನವನನ್ನು ಒರೆಗಲ್ಲಿಗೆ ಹಚ್ಚಿ ಅವನ ಶ್ರದ್ಧೆ, ಭಕ್ತಿ, ತಾಳ್ಮೆಗಳನ್ನು ಪರೀಕ್ಷಿಸುತ್ತಾನೆ. ಇದರಲ್ಲಿ ಮಾನವನು ಜಯಾಪಜಯಗಳನ್ನು ಕಾಣುತ್ತಾನೆ.

ಜನರ ನಿತ್ಯಜೀವನದಲ್ಲಿ ಪ್ರತಿಯೊಂದು ವಿದ್ಯಮಾನಗಳು ಘಟಿಸುತ್ತವೆ. ಎಲ್ಲವುಗಳಲ್ಲಿ ಒಳ್ಳೆಯ, ಕೆಟ್ಟ ಅನುಭವಗಳೂ ಸಹ ಬೆರೆತಿರುತ್ತವೆ. ಪ್ರತಿಯೊಂದರಲ್ಲಿಯೂ ಸಹ ಈ ಅಂಶಗಳನ್ನು ಗುರುತಿಸಬಹುದಾಗಿದೆ. ಹಾಗೆಯೇ ಸಹ ದೇವರ ಬಗ್ಗೆ ಅವರಿಗೆ ಗೌರವಾದರಗಳುಂಟು. ತಮ್ಮ ದೈನಂದಿನ ಜೀವನದಲ್ಲಿ ಉತ್ತಮೋತ್ತಮ ಫಲಾಪೇಕ್ಷೆಗಳು ಪ್ರಾಪ್ತವಾಗಬೇಕೆಂದರೆ ದೈವಾನುಗ್ರಹವಿರಬೇಕು. ಇಲ್ಲದೇ ಹೋದಲ್ಲಿ ಯಾವುದೇ ಕೆಲಸಗಳು ಸಾಂಗವಾಗಿ ನೆರವೇರುವುದಿಲ್ಲ ಎಂಬ ತಿಳುವಳಿಕೆ ಎಲ್ಲರಲ್ಲಿಯೂ ಮನೆ ಮಾಡಿಕೊಂಡಿರುತ್ತದೆ. ಈ ವಿಷಯದಲ್ಲಿ ಎಲ್ಲರಿಗೂ ನಂಬಿಕೆ ಇದೆ. ದೈವಾನುಗ್ರಹದ ಮುಂದೆ ಮಾನವ ಪ್ರಯತ್ನಗಳು ಸೋಲನ್ನು ಅನುಭವಿಸುತ್ತವೆ. ಬಹಳಷ್ಟು ಜನರು ಆಗಾಗ್ಗೆ ಹೇಳಿಕೊಳ್ಳುತ್ತಿರುತ್ತಾರೆ. ಮಾನವ ಪ್ರಯತ್ನ ಇದ್ದರೆ ಮಾತ್ರ ಎಲ್ಲ ರಂಗಗಳಲ್ಲಿಯೂ ಸಫಲತೆಯನ್ನು ಹೊಂದಲು ಸಾಧ್ಯ ಎಂದು ಆದರೆ ಮಾನವ ಪ್ರಯತ್ನದ ಜತೆಗೆ ದೈವಾನುಗ್ರಹ ಇದ್ದರೆ ಮಾತ್ರ ಎಲ್ಲ ಕಾರ್ಯಗಳೂ ಸಾಂಗವಾಗಿ ಜರುಗುತ್ತವೆ. ದೈವಾನುಗ್ರಹದ ಮುಂದೆ ಮಾನವ ಪ್ರಯತ್ನದ ಆಟವೇನೂ ನಡೆಯುವುದಿಲ್ಲ. ಇದಿಲ್ಲದೇ ಹೋದರೆ ಎಲ್ಲಾ ಕ್ಷೇತ್ರಗಳಲ್ಲಿ ಎಡರು-ತೊಡರುಗಳು ಇದಿರಾಗುತ್ತವೆ.

'ಸೂರ್ಯಗ್ರಹಣ, ಚಂದ್ರಗ್ರಹಣಗಳಂತಹ ಪ್ರಕೃತಿ ವೈಚಿತ್ರಗಳು, ಗುಡುಗು-ಸಿಡಿಲು, ಭೂಕಂಪ, ಜ್ವಾಲಾಮುಖಿಗಳಂತಹ ಪ್ರಕೃತಿಯ ವಿಕೋಪಗಳು ಆದಿಮಾನವನನ್ನು ಗಾಬರಿಗೊಳಿಸಿರಬೇಕು. ಈ

ಜಾನಪದರ ಮಾನಸಿಕ ಹದ ಮತ್ತು ಭಾವೈಕ್ಯತೆಯ ಬಗೆ ಅಭ್ಯಾಸಯೋಗ್ಯವೆನಿಸುತ್ತದೆ. ಇದೆಲ್ಲ ಒಂದು ಬಗೆಯಲ್ಲಿ ಸಮಾಜಶಾಸ್ತ್ರ, ಮಾನವಶಾಸ್ತ್ರ, ಮಾನಸಶಾಸ್ತ್ರ, ತತ್ವಶಾಸ್ತ್ರ, ದೇವಜ್ಞಾನಶಾಸ್ತ್ರ(Theology) ಮುಂತಾದವುಗಳಿಗೆಲ್ಲ ನೆರವಾಗಬಲ್ಲ ಪೂರಕ ಅಧ್ಯಯನವೆನಿಸುತ್ತವೆ.'[೧]

'ದೇವನೊಬ್ಬ ನಾಮ ಹಲವು' ಎಂದು ಭಾರತದ ದಾರ್ಶನಿಕರು ಹೇಳಿದ್ದಾರೆ. ಇಂಡಿಯಾದಲ್ಲಿ ಸುಮಾರು ೩೩ ಕೋಟಿ ದೇವರಿದ್ದಾರೆಂತಲೂ ತಿಳಿದಿದೆ. ಇಲ್ಲಿ ಪ್ರತಿಯೊಂದು ಸಮುದಾಯವೂ ಸಹ ತಮ್ಮದೇ ಆದ ದೇವರನ್ನು ಪೂಜಿಸುವುದು ಎಲ್ಲರಿಗೂ ತಿಳಿದ ವಿಷಯ. ಹಾಗೆಯೇ ಪ್ರತಿ ವರುಷದಲ್ಲಿ ಒಮ್ಮೆ ಆಯಾ ದೇವರ ಹೆಸರಿನಲ್ಲಿ ಹಬ್ಬ-ಹರಿದಿನ, ಜಾತ್ರೆಗಳನ್ನು ಏರ್ಪಡಿಸಿ ಜನರ ಹರಕೆಗಳನ್ನು ತೀರಿಸುವುದು ಹಿಂದಿನಿಂದಲೂ ಅನುಸರಿಸಿಕೊಂಡು ಬಂದ ಕ್ರಮ. ಈ ಕ್ರಮವನ್ನು ತಪ್ಪಿಸಲು ಬರುವುದಿಲ್ಲ. ಅಂತೆಯೇ ಅನೇಕ ರೂಢಿ-ಆಚರಣೆಗಳನ್ನು ಹಿರಿಯರಿಂದ, ಕಿರಿಯರು ಬಳುವಳಿಯಾಗಿ ಪಡೆದುಕೊಂಡು ಅವುಗಳನ್ನು ಪಾಲಿಸಿಕೊಂಡು ಬಂದಿರುತ್ತಾರೆ. ಸಂಪ್ರದಾಯಗಳಿಂದ ಕೂಡಿದ ಇಂಡಿಯಾ ಇದರಿಂದ ಹೊರತಾಗಿಲ್ಲ. ಭಯ, ಭಕ್ತಿ ಇವೆರಡರ ಸಮ್ಮಿಳಿತಗಳೊಂದಿಗೆ ಈ ಎಲ್ಲಾ ಅಂಶಗಳೂ ಲೋಕದಲ್ಲಿ ಜನ್ಮವೆತ್ತಿವೆ.

ಪ್ರಾದೇಶಿಕ ಭಿನ್ನತೆಗಳಿಂದಲೂ ಸಹ ಅನೇಕ ವಿಚಾರಗಳು ಸಹ ಬದಲಾಗುತ್ತಾ ಹೋಗುತ್ತವೆ. ಅದು ಅನಿವಾರ್ಯವೂ ಕೂಡ. ಜನರ ನಡುವಿರುವ ಅನೇಕ ಸಾದೃಶ್ಯ, ವೈದೃಶ್ಯ ನಿಲುವುಗಳೂ ಸಹ ಒಂದು ರೀತಿಯಲ್ಲಿ ಕಾರಣವಾಗುತ್ತವೆ. ವ್ಯಕ್ತಿಯಿಂದ ವ್ಯಕ್ತಿಗೆ ನಾನಾ ವಿಧಗಳಲ್ಲಿ ಮಾರ್ಪಾಡುತ್ತಾ ಹೋಗುವುದು ಸಾಮಾನ್ಯ ಭೌಗೋಳಿಕ ಹಿನ್ನೆಲೆಯೂ ಸಹ ಪರೋಕ್ಷವಾಗಿ ಕಾರ್ಯನಿರ್ವಹಿಸುತ್ತದೆ.

ಜೋಕುಮಾರನ ಹುಟ್ಟು ನಮ್ಮ ಕುತೂಹಲವನ್ನು ಕೆರಳಿಸುತ್ತದೆ. ಹಳ್ಳಿಗರು ಇಂದಿಗೂ ಸಹ ಇವನನ್ನು 'ಮಳೆಯ ದೇವರು' ಎಂದು ತಿಳಿದಿದ್ದಾರೆ. ಇವನು ಜನ್ಮ ತಳೆದಿರುವುದು ಮಳೆಯನ್ನು ತರುವುದಕ್ಕಾಗಿಯೇ ಎಂಬ ತಿಳುವಳಿಕೆ ಅವರದು. ಪಟ್ಟಣದ ಜನರು ಸಹ ಇವನನ್ನು ಮಳೆ ತರುವುದಕ್ಕಾಗಿಯೇ ಹುಟ್ಟಿರುತ್ತಾನೆಂದು ತಿಳಿದಿದ್ದರೂ ಸಹ ಅವರಿಗೆ ಇಂತಹ ವಿಚಾರಗಳಲ್ಲಿ ನಂಬಿಕೆ ಕಡಿಮೆ ಇರುತ್ತದೆ. ಅಲ್ಲದೆ ಆಸಕ್ತಿ ವಹಿಸಲು ಅವರು ತಯಾರಿರುವುದಿಲ್ಲ. ಮುಂದುವರಿದ ತಂತ್ರಜ್ಞಾನದ (Advance Technology) ದಿನಗಳಲ್ಲಿಯೂ ಸಹ ಇಂತಹ ವಿಚಾರಗಳು ಬೇಕು ಬೇಡ ಎಂಬ ಪ್ರಶ್ನೆಗಳು ಅವರಿಗೆ ಉದ್ಭವಿಸುವುದಿಲ್ಲ. ಒಂದು ರೀತಿಯಲ್ಲಿ ಇವುಗಳ ಬಗ್ಗೆ ಅವರ ಮನಸ್ಸಿನಲ್ಲಿ ಮನೆ ಮಾಡಿರುವ ಅನಾದರಣೀಯ ಧೋರಣೆಗಳೇ ಆಗಿರುತ್ತವೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ಹಳ್ಳಿಗಳಲ್ಲಿ ಅನೇಕ ಆಚರಣೆಗಳು ಇಂದಿಗೂ ಜೀವಂತವಾಗಿ ಉಳಿದಿವೆ. ಇವೆಲ್ಲದಕ್ಕೂ ಕಾರಣ ಹಳ್ಳಿಗರ ಹೃನ್ಮನಗಳು ಕಾರಣವಾಗಿವೆ. ಅವರ ಹೃದಯ ವೈಶಾಲ್ಯತೆಯನ್ನು ತೋರಿಸತ್ತದೆ. ಪ್ರತಿಯೊಂದು ಬಗೆಗಳನ್ನು ಅವರು ಸಂರಕ್ಷಿಸಿ, ಉಳಿಸಿ-ಬೆಳೆಸಿಕೊಂಡು ಬರುತ್ತಿದ್ದಾರೆ. ಒಟ್ಟಾರೆಯಾಗಿ ಅನನ್ಯ ಕಳಕಳಿ ಅವರಲ್ಲಿದೆ.

ಉತ್ತರ ಕರ್ನಾಟಕದಲ್ಲಿ ಪ್ರಚಲಿತವಾಗಿ ಆಚರಣೆಯಲ್ಲಿರುವಂತೆ ಜೋಕುಮಾರನು ಹುಟ್ಟುವುದು ಕುಂಬಾರನ ಮನೆಯಲ್ಲಿ. ಇದಕ್ಕೆ ವ್ಯತಿರಿಕ್ತವಾಗಿ ಕೆಲವೆಡೆ ಜಿನಗಾರನ ಮನೆಯಲ್ಲಿ ಜನ್ಮ ತಾಳುತ್ತಾನೆ. ಜಿನಗಾರನ ಮನೆಯಲ್ಲಿ ಜನ್ಮ ತಾಳುವ ಸಂಭವ ಕಡಿಮೆ ಎಂದು ಹೇಳಬೇಕಾಗುತ್ತದೆ. ಕ್ಷೇತ್ರಕಾರ್ಯ ಮಾಹಿತಿಯಂತೆ ನಿಖರವಾಗಿ ತಿಳಿದು ಬಂದಿರುವಂತೆ ಕುಂಬಾರನ ಮನೆಯಲ್ಲಿಯೇ ಅವನ ಜನನ ಆಗುತ್ತದೆ. ಇದರಲ್ಲಿ ಯಾವ ಸಂದೇಹವಿಲ್ಲ. ಪ್ರತಿ ವರುಷದಲ್ಲಿ ಒಂದು ಬಾರಿ ನಿರ್ದಿಷ್ಟ ಸಮಯದಲ್ಲಿ ಅವನ ಆಗಮನವಾಗುತ್ತದೆ.

ಕಾಲ : ಪ್ರತಿವರುಷದಲ್ಲಿ ಭಾದ್ರಪದಮಾಸ (ಸೆಪ್ಟಂಬರ್ ತಿಂಗಳಿನಲ್ಲಿ)ದಲ್ಲಿ ಜೋಕುಮಾರನ ಹುಟ್ಟಿನ ಬಗೆಗೆ ವಿಚಾರಮಾಡಲು ತೊಡಗಿದರೆ ನಾರಸಿಂಹಕವಿಯ 'ಅನುಭವ ಶಿಖಾಮಣಿ' ಕೃತಿಯು ಸವಿಸ್ತಾರವಾಗಿ ತಿಳಿಸಿಕೊಡುತ್ತದೆ. ಅದರಲ್ಲಿ ೧೬ನೆಯ ಸಂಧಿಯಲ್ಲಿ ಬರುವ ಕಥೆ ಈ ಕೆಳಕಂಡಂತಿದೆ.

"ಜೋಕ ಎಂಬುವನು ಸಪ್ತ ಋಷಿಗಳಿಗೆ ಒಬ್ಬ ಮೆಚ್ಚಿನ ಆಳಾಗಿರುತ್ತಾನೆ. ಒಂದು ದಿನ ಆ ಋಷಿಗಳು ಮರ್ತ್ಯಲೋಕದ ನರಮಾನವರ ವೈಭವವನ್ನು ಕುರಿತು ಹೇಳುತ್ತಾರೆ. ಸುರರು ಅಮೃತವನ್ನು ಮಾತ್ರ ಉಣ್ಣುತ್ತಾರೆಯೇ ಹೊರತು ಎರಡನೆಯದನ್ನು ಅರಿಯರು. ಮರ್ತ್ಯರೋ ಪರಮಾನ್ನ ಪಂಚ ಭಕ್ಷ್ಯಗಳನ್ನು ಸವಿಯುತ್ತಾರೆ. ಅವರು ಜಿಹ್ವಾ ಲಂಪಟರು, ವಿಷಯ ಲೋಲುಪರು. ಸಿಂಹವು ತಾನೇ ಹೋಗಿ ಆನೆಯ ನಾಲಗಗೆ ಬಿದ್ದಂತಿದೆ ಇದು. ಅವರು ಪಾಪಿಗಳು...." ಇತ್ಯಾದಿ ಮಾತನಾಡಿಕೊಳ್ಳುತ್ತಾರೆ. ಇದು ಜೋಕನಿಗೆ ಕೇಳಿಸುತ್ತದೆ. ಅವನು ಪೂರ್ವಾಪರ ಯೋಚನೆ ಮಾಡದೆ ಎದ್ದು ಕೈಮುಗಿದು, ನನಗೆ ನೀವು ಒಂದು ವರವನ್ನು ಅನುಗ್ರಹಿಸಬೇಕು; ಮರ್ತ್ಯಲೋಕದ ಚಂದದಾಟವನ್ನು ನೋಡಿ ಬರುತ್ತೇನೆ. ನೀವು ನನ್ನನ್ನು ಕಳುಹಿಸುವ ಕೃಪೆ ಮಾಡಬೇಕು' ಎಂದು ಕೇಳಿಕೊಂಡನು. ಅದಕ್ಕೆ ಸಪ್ತಋಷಿಗಳು ನೀನು ಯಾವಾಗಲೂ ಎಚ್ಚರದಿಂದಿರಬೇಕೆಂದೂ ಷಡ್ರಸೋಪೇತವಾದ ಕೂಳನ್ನು ಮುಂದಿಟ್ಟರೂ ಉಣ್ಣಬಾರದೆಂದೂ ಬಾಲೆಯರಿಗೆ ಸೋಲಬಾರದೆಂದೂ ಬೇಗನೆ ಹಿಂದಿರುಗಬೇಕೆಂದೂ ಬುದ್ಧಿವಾದ ಹೇಳಿ ಕಳುಹಿಸುತ್ತಾರೆ. ಅವನು ಇಳೆಗೆ ಇಳಿಯುತ್ತಾನೆ. ಅಷ್ಟರಲ್ಲಿ ಸೂರ್ಯಾಸ್ತವಾಗುತ್ತದೆ. ವಾಸ್ತವ್ಯಕ್ಕೆ ಜಾಗವಿಲ್ಲದೆ ಯೋಚಿಸುತ್ತಿರುವಾಗ ಮುಂದೆ ಅವನಿಗೆ ಮಾರಿ ಗುಡಿಯು ಕಾಣಿಸುತ್ತದೆ. ಅಲ್ಲಿ ಅವನು ನಮಿಸಿ ಅಮೃತವನ್ನು ಕುಡಿದು ಸ್ವರಬತ್ತೀಸ ರಾಗದಲ್ಲಿ ಸುಶ್ರಾವ್ಯವಾಗಿ ಹಾಡತೊಡಗುತ್ತಾನೆ. ಅದನ್ನು ಮಾರಿಕೇಳಿ ಸ್ವಾದಿಷ್ಟವಾದ ಅಡುಗೆಯನ್ನು ಮಾಡಿ ಚಿನ್ನದ ಹರಿವಾಣದಲ್ಲಿ ಬಡಿಸುತ್ತಾಳೆ. ನಂತರ ಜೋಕುಮಾರನನ್ನು ನೋಡುತ್ತಾಳೆ. ಅವನ ರೂಪ-ಲಾವಣ್ಯಗಳಿಗೆ ಮಾರು ಹೋಗುತ್ತಾಳೆ. ಅವಳ ಮನಸಿನಲ್ಲಿ ಬಿರುಗಾಳಿ ಏಳುತ್ತದೆ. ಇವನು ಶಿವನೋ, ವಿಷ್ಣುವೋ, ಬ್ರಹ್ಮನೋ ಎಂದು ಇತ್ಯಾದಿಯಾಗಿ ಅವನ ರೂಪವನ್ನು ವರ್ಣನೆ ಮಾಡುತ್ತಾ ಬೆರಗಾಗಿ ನಿಲ್ಲುತ್ತಾಳೆ. ಅವನ ರೂಪ ಲಾವಣ್ಯಕ್ಕೆ ಮರುಳಾಗಿ ಅವನಿಗೆ ಸೋಲುತ್ತಾಳೆ. ತಾನು ಮಾಡಿದ ಅಡುಗೆಯನ್ನು ಉಣ್ಣಬೇಕೆಂದು ಅವನಿಗೆ ಹೇಳುತ್ತಾಳೆ. ಸಪ್ತ ಋಷಿಗಳು

ಕೊಟ್ಟ ಎಚ್ಚರಿಕೆಯ ಮಾತುಗಳು ಅವನ ನೆನಪಿಗೆ ಬರುತ್ತವೆ. ಆ ಅಡುಗೆಯನ್ನು ಉಂಡರೆ ಸಪ್ತ ಋಷಿಗಳು ನನ್ನನ್ನು ಕೊಲ್ಲುತ್ತಾರೆಂದು ಪರಿಪರಿಯಾಗಿ ಅವಳಲ್ಲಿ ಬೇಡಿಕೊಳ್ಳುತ್ತಾನೆ. ಆದರೆ ವಿಧಿಯ ಸಂಕಲ್ಪದ ಮುಂದೆ ಯಾವ ಆಟವೂ ನಡೆಯವುದಿಲ್ಲ. ಅವಳು ತಯಾರಿಸಿದ ಭಕ್ಷ್ಯಭೋಜ್ಯಗಳ ಸುವಾಸನೆ ಅವನನ್ನು ಆಕರ್ಷಿಸುತ್ತದೆ. ಕೊನೆಗೆ ಅವನು ಧೈರ್ಯ ಮಾಡಿ ಉಣ್ಣುತ್ತಾನೆ. ಹಿಂದಿನ ವಿದ್ಯಮಾನಗಳೆಲ್ಲವನ್ನೂ ಮರೆಯುತ್ತಾನೆ. ಊಟವಾದ ಮೇಲೆ ಅವಳು ಚಿನ್ನದ ಗಿಂಡಿಯಲ್ಲಿ ಅವನ ಕೈಗೆ ನೀರೆರೆಯುತ್ತಾಳೆ. ತನ್ನ ಕೈಯನ್ನು ತೊಳೆದುಕೊಳ್ಳುತ್ತ ಜೋಕನು ಅವಳ ಮುಖವನ್ನು ದಿಟ್ಟಿಸಿ ನೋಡುತ್ತಾನೆ. ಆಶ್ಚರ್ಯ ಚಕಿತನಾಗಿ 'ನೀನೇನು ಗಿರಿಜೆಯೋ, ಲಕ್ಷ್ಮೀಯೋ, ಸರಸ್ವತಿಯೋ' ಎಂದು ಪ್ರಶ್ನಿಸುತ್ತಾನೆ. ಅದಕ್ಕೆ ಅವಳು 'ನಾನು ಮಾರಿ' ಎಂದು ಉತ್ತರವನ್ನು ನೀಡುತ್ತಾಳೆ. ನಂತರ ತಾಂಬೂಲವನ್ನು ಪ್ರೀತಿಯಿಂದ ಕೊಡುತ್ತಾಳೆ. ಇಂಥ ಸಂದರ್ಭಕ್ಕೋಸ್ಕರ ಮನ್ಮಥನು ಕಾಯುತ್ತಿರುತ್ತಾನೆ. ಈ ಸಮಯದಲ್ಲಿ ಬಾಣಪ್ರಯೋಗವನ್ನು ಮಾಡುತ್ತಾನೆ. ಜೋಕನು ಮಾರಿಗೆ ಮನಸೋಲುತ್ತಾನೆ. ಪ್ರಕೃತಿ ಸಹಜ ಕ್ರಿಯೆಗಳು ನಡೆಯುತ್ತವೆ. ಸ್ವಲ್ಪ ಸಮಯದ ನಂತರ ಅವನಿಗೆ ಜ್ಞಾನೋದಯವಾಗಿ, ತಾನು ಮಾಡಿದ ತಪ್ಪಿನ ಅರಿವಾಗುತ್ತದೆ. 'ಋಷಿಗಳು ಕೊಟ್ಟ ಎಚ್ಚರಿಕೆಯ ಮಾತನ್ನು ನೆನಪಿಸಿಕೊಳ್ಳುತ್ತಾನೆ' ಋಷಿಗಳ ಮಾತನ್ನು ಮೀರಿದೆನು. ಈ ಮಾರಿಯ ದೆಸೆಯಿಂದ ತನಗೆ ನರಕ ಪ್ರಾಪ್ತವಾಯಿತು ಎಂದು ಕೊರಗುತ್ತಾನೆ. ಸಪ್ತ ಋಷಿಗಳ ಬಳಿಗೆ ಹೋಗುತ್ತಾನೆ. ಅವರಿಗೆ ನಮಸ್ಕರಿಸುತ್ತಾನೆ. ಅವರು ಅವನನ್ನು ಕಾಲಿನಿಂದ ಒದೆಯುತ್ತಾರೆ. ಆಗ ಜೋಕನು 'ನಿಮ್ಮ ಪಾದಗಳು ಸೋಕಿದರೆ ನನ್ನ ಕುಲಕೋಟಿಗಳೆಲ್ಲ ಮಾಡಿದ ಪಾಪವು ಬಗೆಹರಿಯುತ್ತದೆ. ನಾನು ಧನ್ಯನಾದೆನು' ಎಂದು ವಿನಯದಿಂದ ನುಡಿಯುತ್ತಾನೆ. ಸಪ್ತ ಋಷಿಗಳು ಮನದಲ್ಲಿಯೇ ನಸುನಗುತ್ತ 'ಏಳು ದಿನ ಸುಮ್ಮನಿರು ನೀನು ನಮ್ಮಲ್ಲಿಗೆ ಬಂದು ಸೇರುತ್ತೀಯೆ' ಎಂದು ಭರವಸೆಕೊಡುತ್ತಾರೆ.

ಇತ್ತ ಮಾರಿಯು ಒಂದು ಮಗುವಿಗೆ ಜನ್ಮ ನೀಡುತ್ತಾಳೆ. ಅದು ಹುಟ್ಟಿದ ಕೂಡಲೆ ತನ್ನ ತಂದೆ ಯಾರೆಂದು ಕೇಳುತ್ತದೆ. ಆಗ ಮಾರಿ ಅವನು ಯಾರೆಂಬುದು ತನಗೆ ಗೊತ್ತಿಲ್ಲವೆಂದೂ ಒಬ್ಬ ಸತ್ಯ ಸರ್ಗದ ಪುರುಷ ಅವನೆಂದೂ ಹೇಳುತ್ತಾಳೆ. ಅವನು ಎತ್ತಹೋದನೋ ತಿಳಿಯಲಿಲ್ಲ ಎಂದು ತಿಳಿಸುತ್ತಾಳೆ. ಆ ಮಗು ತನ್ನ ತಂದೆಯನ್ನು ಹುಡುಕಿ ಕರೆತರುತ್ತೇನೆಂದು ಹೊರಡುತ್ತದೆ. ಮಗು ಹುಟ್ಟಿದ್ದು ಭಾದ್ರಪದ ಶುದ್ಧದಲ್ಲಿ, ದೇವಿಯ ಅಷ್ಟಮಿಯ ಧಾರೆಯಲ್ಲಿ.[೬] ಹೀಗೆ ಏಳುದಿನ ಹುಡುಕುತ್ತಿರುವಾಗ ಅನಂತನ ಹುಣ್ಣಿಮೆಯು ಬರುತ್ತದೆ. ಎಲ್ಲಾ ಜನರು ಸಂಭ್ರಮ ಸಡಗರದಿಂದ ಹಬ್ಬವನ್ನು ಮಾಡುತ್ತಿರುತ್ತಾರೆ. ಆ ನಿರ್ದಿಷ್ಟ ದಿನದಂದು ಅಗಸರೆಲ್ಲರೂ ಕೂಡಿಕೊಂಡು, ಪ್ರತಿಮನೆಯಲ್ಲೂ ಬೇಡಿ ತಂದ ಆಹಾರವನ್ನು ಒಂದು ಪುಟ್ಟಿಯಲ್ಲಿ ತುಂಬಿಕೊಳ್ಳುತ್ತಾರೆ. ಅದನ್ನು ತೆಗೆದುಕೊಂಡು ಬಂದು ಒಂದು ಗಂಗೆಯ ಕಲ್ಲಿನ ಬಳಿ ಪೂಜಿಸುತ್ತಾರೆ. ಅವರೆಲ್ಲರೂ ಸೇರಿ ಒಟ್ಟಾಗಿ ಕೂತು ಉಣ್ಣಲು ನಿರ್ಧರಿಸುತ್ತಾರೆ. ಆ ಸಂದರ್ಭದಲ್ಲಿ

ತಮ್ಮ ಕತ್ತೆಗಳು ಹೊಲಗಳಿಗೆ ನುಗ್ಗಿ ಪೈರನ್ನು ಹಾಳು ಮಾಡುತ್ತವೆ ಎಂಬ ಭಯ ಅವರನ್ನು ಆವರಿಸುತ್ತದೆ. 'ಸುಕರ್ಣಿಕೆ' ಎಂಬ ತಮ್ಮ ಒಬ್ಬ ಪುತ್ರಿಯ ಕೈಯಲ್ಲಿ ಒಂದು ಹೋಳಿಗೆಯನ್ನು ಕೊಟ್ಟು ಅವಳನ್ನು ಕಾವಲಿಗೆ ನೇಮಿಸುತ್ತಾರೆ. ಇದೇ ಸಂದರ್ಭದಲ್ಲಿ ತನ್ನ ತಂದೆಯನ್ನು ಹುಡುಕುತ್ತ ಜೋಕುಮಾರನು ಬರುತ್ತಾನೆ. ಚೆಂದವಾದ ಆಭರಣಗಳನ್ನು ಧರಿಸಿ ನಗುತ್ತಾ ನಿಂತಿದ್ದ ಅವಳನ್ನು ಕಂಡು ಮೋಹಿಸುತ್ತಾನೆ. ಆತುರದಿಂದ ಅವಳನ್ನು ಪೀಡಿಸಲು ಅವಳು ಹೆದರಿ ಕೂಗಿಕೊಳ್ಳುತ್ತಾಳೆ. ಅವಳ ಕೂಗನ್ನು ಕೇಳಿಸಿಕೊಂಡ ಅಗಸರು ತಮ್ಮ ಕೈಯಲ್ಲಿ ತಲಾ ಒಂದು ದೊಣ್ಣೆಯನ್ನು ಹಿಡಿದುಕೊಂಡು ಕೊಲ್ಲು, ಕೊಲ್ಲು ಎಂದು ಓಡಿಬರುತ್ತಾರೆ. ಅವನನ್ನು ಕೊಂದು ಒಂದು ಕಲ್ಲಿನ ಕೆಳಗೆ ಹೂಳುತ್ತಾರೆ. ಆ ಕ್ಷಣದಲ್ಲಿ ಸಪ್ತರ್ಷಿಗಳು ಜೋಕನನ್ನು ಕೂಡಿಕೊಳ್ಳುತ್ತಾರೆ. ಅದಕ್ಕೆ ಕಾರಣ : ಜೋಕನ ಇಂದ್ರಿಯವು ಮಾರಿಯನ್ನು ಪ್ರವೇಶಿಸುತ್ತದೆ. ಇದರ ಪರಿಣಾಮ ಜೋಕುಮಾರನ ಜನ್ಮವಾಗುತ್ತದೆ. ಇವನು ತನ್ನ ಇಂದ್ರಿಯವನ್ನು ಸುಕರ್ಣಿಕೆಗೆ ಬಿಡುತ್ತಾನೆ. ಆಗ ಅಗಸರು ಇವನನ್ನು ಬಡಿದಾಗ ಅವನ ಇಂದ್ರಿಯವು ಹೋಗುತ್ತದೆ. ಸಪ್ತ ಋಷಿಗಳು ಕೊಟ್ಟ ಮಾತಿನಂತೆ ಜೋಕನು ಅವರ ಬಳಿಗೆ ಹೋಗುತ್ತಾನೆ. ಅವನಿಗೆ ತಂದೆ ತಾಯಿ ಹೆಸರಿಡಲಿಲ್ಲ. ಜೋಕನ ಮಗನಾದ್ದರಿಂದ 'ಜೋಕುಮಾರ' ಎಂದು ಭೂಮಿಯಲ್ಲಿ ಹೆಸರಾಗುತ್ತಾನೆ.

'ಇವನ ಕಥೆ ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ. ಜೋಕ+ಕುಮಾರ=ಜೋಕುಮಾರ ಎಂಬ ಹೆಸರನ್ನು ವಿವರಿಸುತ್ತದೆ. ಅವನ ತಾಯಿ ಮಾರಿಯೆಂದೂ ಅವನು ಅಲ್ಪಾಯುಷಿಯೆಂದೂ ಬದುಕಿದ್ದುದು ಏಳು ದಿನಗಳು ಮಾತ್ರವೆಂದೂ ತಿಳಿಸುತ್ತದೆ. ಕನ್ನಡ ಕಾವ್ಯಗಳಲ್ಲಿ ಬರುವ ಜೋಕುಮಾರ ಸಂಬಂಧವಾದ ಉಲ್ಲ ಉಲ್ಲೇಖಗಳಿಗೂ ಅತ್ಯಂತ ಸಮರ್ಪಕವಾದ ಟಿಪ್ಪಣಿಯನ್ನೊದಗಿಸುತ್ತದೆ.'[೪]

ಸ್ವರೂಪ

ಮೂರ್ತಿಯನ್ನು ತಯಾರಿಸುವುದು

ನಮ್ಮ ಜನಪದರು ತಮ್ಮದೇ ಆದ ಕಲ್ಪನೆಗಳನ್ನು ಹೊಂದಿದ್ದಾರೆ. ಯಾವುದೇ ಕೆಲಸ ಕಾರ್ಯಗಳನ್ನು ನಿರ್ವಹಿಸುವಾಗ ವಾರ, ತಿಥಿ, ನಕ್ಷತ್ರ... ಮುಂತಾದವುಗಳನ್ನು ನೋಡಿಕೊಂಡು ಪ್ರಶಸ್ತವಾದ ಕಾಲದಲ್ಲಿ ಪ್ರಾರಂಭಿಸುವ ಪದ್ಧತಿ. ಹಾಗೆ ಮಾಡುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ವಿಶೇಷವಾಗಿ ರಾಹುಕಾಲವನ್ನು ನೋಡಿಕೊಂಡು ಅನಂತರ ಕೆಲಸಕಾರ್ಯ ಮಾಡುವುದನ್ನು ಜನಸಾಮಾನ್ಯರು ತಿಳಿದುಕೊಂಡಿದ್ದಾರೆ. ಸರಿಯಿಲ್ಲದ ಸಮಯದಲ್ಲಿ ಯಾವುದೇ ಕೆಲಸ ಮಾಡಿದರೂ ಅದರಿಂದ ತಮಗೆ ಕೆಟ್ಟದ್ದಾಗುತ್ತದೆ ಎಂಬ ನಿಲುವು ಅವರದು.

ಯಾವೊಂದು ಕೆಲಸವನ್ನು ಮಾಡಿದರೂ ಸಹ ಒಳ್ಳೆಯದಾಗಬೇಕು. ಅದು ತಮಗೆ ಶ್ರೇಯಸ್ಸನ್ನು ಕೊಡಬೇಕು, ಭವಿಷ್ಯದಲ್ಲಿ ಉತ್ತಮ ಸ್ಥಾನಮಾನಗಳು ದೊರಕಲಿ, ತಮ್ಮ ಮುಂದಿನ ಬದುಕು

ಹಸನಾಗಲಿ ಎಂದು ಪ್ರತಿಯೊಬ್ಬರು ಪ್ರಾರ್ಥನೆ ಮಾಡುವರು. ಅದರಲ್ಲಿಯೂ ದೈವಗಳ ಬಗ್ಗೆ ವಿಶೇಷ ಕಾಳಜಿಯನ್ನು ಹೊಂದಿರುವ ಇವರು. ತಮ್ಮ ಮೇಲೆ ಯಾವೊಂದು ಅನಿಷ್ಟಕರ ಘಟನೆಗಳು ನಡೆಯದಿರಲಿ ಎಂದು ಭಗವಂತನಲ್ಲಿ ಬೇಡಿಕೊಳ್ಳುವ ಪದ್ಧತಿಯಿದೆ.

ಅನೇಕ ಸಂದರ್ಭಗಳಲ್ಲಿ ಜನಪದರು ಮಣ್ಣಿನಿಂದಲೇ ದೇವರಮೂರ್ತಿಗಳನ್ನು ತಯಾರಿಸುತ್ತಾರೆ. ಮಣ್ಣಿಗೆ ಅವರು ವಿಶೇಷ ಮಹತ್ವವನ್ನು ಕೊಟ್ಟಿದ್ದಾರೆ. ಅದು ಫಲವಂತಿಕೆಯ ಸಂಕೇತವೂ ಅಹುದು. ಬಹುಶಃ ಎಲ್ಲ ಪೂಜೆ-ಪುನಸ್ಕಾರಗಳು ಮಣ್ಣಿಗೆ ಸಲ್ಲುತ್ತವೆ. ಇದು ಜನರಿಗೆ ಅವಿಭಾಜ್ಯ ಅಂಗದಂತಿದೆ. ಮಣ್ಣಿನಿಂದಲೇ ಎಲ್ಲ ಕ್ರಿಯೆಗಳು ನಡೆಯುತ್ತವೆ. ಪ್ರಾರಂಭದಲ್ಲಿ ನಾವು ಮಣ್ಣನ್ನು ಪೂಜಿಸಿ ಆನಂತರ ಉಳಿದ ಕಾರ್ಯಕ್ರಮಗಳತ್ತ ನೋಟ ಬೀರುತ್ತೇವೆ. ಮಣ್ಣಿಗೆ ಭೂತಾಯಿಯೆಂದು ಕರೆದು ಸತ್ಕರಿಸುತ್ತೇವೆ.

ಕೃಷಿಕರಂತೂ ಮಣ್ಣಿನ ಮೇಲೆ ತಮ್ಮ ಪ್ರಾಣವನ್ನೇ ಇಟ್ಟುಕೊಂಡಿರುತ್ತಾರೆ. ಅವರಿಗೆ ದಿನನಿತ್ಯ ಅನ್ನಕೊಡುತ್ತಿರುವುದು ಇದೇ ಆಗಿರುತ್ತದೆ. ವರುಷದಲ್ಲಿ ಹಲವಾರು ಬಾರಿ ಪೂಜೆ ನಡೆಯುತ್ತದೆ. ಉತ್ತರ ಕರ್ನಾಟಕದಲ್ಲಿ ಬಹುತೇಕವಾಗಿ ಕುಂಬಾರನ ಮನೆಯಲ್ಲಿ ಜೋಕುಮಾರ ಮೂರ್ತಿಯನ್ನು ತಯಾರಿಸುತ್ತಾರೆ. ವ್ಯತಿರಿಕ್ತವಾಗಿ ಕೆಲವೊಂದು ಭಾಗದಲ್ಲಿ ಜಿನಗಾರನ ಮನೆಯಲ್ಲಿಯೂ ಸಹ ತಯಾರು ಮಾಡುತ್ತಾರೆ. ಅದಕ್ಕೆ ಬೇಕಾಗುವ ಪರಿಕರಗಳು ಇಂತಿವೆ.

೧. ಕೆರೆಯ ಅಂಗಳದಲ್ಲಿ ಸಿಗುವ ಜೇಡಿಮಣ್ಣು ಅಥವಾ ಹುತ್ತದ ಮಣ್ಣು

೨. ಅರಳೆ

ಮಣ್ಣಿನ ಆಯ್ಕೆಯೂ ಸಹ ಇದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಯಾವುದೋ ಎಂಥದೋ ಮಣ್ಣನ್ನು ತಂದು ಇವರು ಮೂರ್ತಿಯನ್ನು ತಯಾರು ಮಾಡಲು ಸಿದ್ಧರಿರುವುದಿಲ್ಲ. ಅನೇಕ ವಿಧದ ಮಣ್ಣುಗಳನ್ನು ಸಹ ಕಾಣಬಹುದು. ಎಲ್ಲದಕ್ಕಿಂತಲೂ ಶ್ರೇಷ್ಠ ಎಂದರೆ ಕೆರೆಯ ಅಂಗಳದಲ್ಲಿ ದೊರೆಯುವ ಜೇಡಿಮಣ್ಣು. ಇದು ಪ್ರಾಮುಖ್ಯತೆಯನ್ನು ಪಡೆದಿದೆ. ಈ ಮಣ್ಣಿನಿಂದ ತಯಾರಿಸುವ ಮಡಿಕೆಗಳು ತುಂಬಾ ಬಾಳಿಕೆ ಬರುತ್ತವೆ. ನೋಡಲಿಕ್ಕೂ ಸಹ ಆಕರ್ಷಕವಾಗಿ ಕಾಣಿಸುತ್ತವೆ. ಈ ಮಣ್ಣಿನಿಂದ ಬೇಕಾದ ಅಕಾರ, ವಿನ್ಯಾಸಗಳನ್ನು ಮಾಡಿಕೊಳ್ಳಲು ಉಪಯುಕ್ತ. ಇನ್ನು ಎರಡನೆಯದಾಗಿ ಹುತ್ತದ ಮಣ್ಣು ಸಹ ಜನಪದರ ದೃಷ್ಟಿಯಲ್ಲಿ ಪಾವಿತ್ರ್ಯತೆಯನ್ನು ಹೊಂದಿದೆ. ಅನೇಕ ಸಂದರ್ಭಗಳಲ್ಲಿ ಜನರು ಹುತ್ತದ ಮಣ್ಣನ್ನು ತಂದು ಪೂಜಿಸುತ್ತಾರೆ. ಒಟ್ಟಿನಲ್ಲಿ ಇದಕ್ಕೆ ಪೂಜ್ಯ ಭಾವನೆ ಇದೆ. ಹುತ್ತದ ಮಣ್ಣು ಶ್ರೇಷ್ಠ ಎಂಬ ಭಾವನೆ ಎಲ್ಲರಲ್ಲಿಯೂ ಮನೆಮಾಡಿಕೊಂಡಿರುತ್ತದೆ.

ಕುಂಬಾರ ಮೊದಲು ಕೆರೆಯ ಅಂಗಳದಲ್ಲಿರುವ ಜೇಡಿಮಣ್ಣನ್ನು ತಂದು ಒಂದು ಕಡೆ ಗುಡ್ಡೆ ಹಾಕುತ್ತಾನೆ. ಮಣ್ಣು ನೆನೆಯುವಷ್ಟು ಪ್ರಮಾಣದಲ್ಲಿ ನೀರನ್ನು ಹಾಕುತ್ತಾನೆ. ಆ ಮಣ್ಣು ಚೆನ್ನಾಗಿ ನೀರು

ಕುಡಿದು ಹದಕ್ಕೆ ಬರಲು ಸುಮಾರು ಎರಡರಿಂದ ಮೂರು ದಿನಗಳವರೆಗೆ ಸಮಯವನ್ನು ತೆಗೆದುಕೊಳ್ಳುತ್ತದೆ. ಮಣ್ಣು ಚೆನ್ನಾಗಿ ನೀರಿನೊಂದಿಗೆ ಬೆರೆತು ಹದಕ್ಕೆ ಬರುತ್ತದೆ. ಆ ನಂತರ ಮಣ್ಣನ್ನು ಮೇಲೆ ಕೆಳಗೆ ಮಾಡುತ್ತಾ ನೆಲಕ್ಕೆ ಕುಟ್ಟುತ್ತಾರೆ. ಹೀಗೆ ಮಾಡಿದ ನಂತರ ಮಣ್ಣಿಗೆ ಸರಿಹೊಂದುವಷ್ಟು ಅರಳೆಯನ್ನು ಮಿಶ್ರಮಾಡುತ್ತಾರೆ. ಮಣ್ಣು ಮತ್ತು ಅರಳೆ ಎರಡೂ ಸಮ ಪ್ರಮಾಣದಲ್ಲಿ ಬೆರೆಯುವಂತೆ ಪುನಃ ಕಲಸುತ್ತಾರೆ. ಹೀಗೆ ಮಾಡುವುದರಿಂದ ಮಣ್ಣು ಉತ್ತಮವಾಗಿ ಬಳಕೆಗೆ ಬರುತ್ತದೆ. ಅದನ್ನು ಬೇಕಾದ ಹಾಗೆ ಉಪಯೋಗಿಸಬಹುದಾಗಿದೆ. ಇದರಲ್ಲಿ ಮತ್ತೊಂದು ಅಂಶವಿದೆ. ಏನೆಂದರೆ ಮಣ್ಣಿನೊಂದಿಗೆ ಅರಳೆಯನ್ನು ಬೆರೆಸುವುದರಿಂದ ಮಣ್ಣಿನಿಂದ ಮಾಡಿದ ಯಾವುದೇ ಮೂರ್ತಿಗಳು ಬಹಳ ಬೇಗನೆ ಬಿರಿಯು(ಬಿರುಕು)ವುದಿಲ್ಲ. ಅಥವಾ ಭಗ್ನವಾಗುವುದಿಲ್ಲ. ದೀರ್ಘಕಾಲ ಬಾಳಿಕೆ ಬರುತ್ತದೆ.

ಅರಳೆಯನ್ನು ಮಣ್ಣಿನೊಂದಿಗೆ ಮಿಶ್ರಣ ಮಾಡಿ ಸುಮಾರು ಎರಡು ಅಥವಾ ಮೂರು ದಿನಗಳ ಕಾಲ ಹಾಗೆಯೇ ಇಟ್ಟಿರುತ್ತಾರೆ. ಚೆನ್ನಾಗಿ ಹದಕ್ಕೆ ಬಂದ ಮೇಲೆ ಅದನ್ನು ತೆಗೆದುಕೊಂಡು ಮೂರ್ತಿಯ ಒಂದೊಂದು ಭಾಗಗಳನ್ನು ತಯಾರಿಸುವ ಪದ್ಧತಿ. ಮೊದಲು ಜೋಕನ ಕಿರೀಟವನ್ನು ತಯಾರಿಸುವ ರೂಢಿಯಿದೆ. ಆನಂತರ ಮುಖ, ಕೈ, ಆಯುಧ, ಅವನ ದೊಡ್ಡದಾದ ಜನನೇಂದ್ರಿಯ ಇವುಗಳನ್ನು ತಯಾರಿಸುತ್ತಾರೆ. ಆದರೆ ಒಂದೇ ದಿನ ಇವನ ವಿಗ್ರಹ ಅಥವಾ ಮೂರ್ತಿಯನ್ನು ಮಾಡುವುದಿಲ್ಲ. ಪ್ರತಿದಿನವೂ ಮಣ್ಣನ್ನು ಹದ ಮಾಡಿಕೊಂಡು ಒಂದೊಂದೇ ಭಾಗಗಳನ್ನು ತಯಾರು ಮಾಡುತ್ತಾರೆ. ಜೋಕುಮಾರನ ಮೂರ್ತಿಯು ಒಂದೇ ರೀತಿಯ ಆಕಾರದಲ್ಲಿರಬೇಕು ಎಂಬ ನಿಯಮವಿಲ್ಲ.

ಕ್ಷೇತ್ರಕಾರ್ಯ ಸಂದರ್ಭದಲ್ಲಿ ಅನೇಕ ಊರುಗಳಲ್ಲಿ ಅವನ ಆಕಾರವು ಬೇರೆ ತೆರನಾಗಿರುವುದು ಗೋಚರಿಸುತ್ತದೆ. ಲಕ್ಷ್ಮೇಶ್ವರದಲ್ಲಿ ಇವನನ್ನು ಮಾಡುವ ರೀತಿಯೇ ಬೇರೆಯಾಗಿದೆ. ಅಲ್ಲಿಯ ಕುಂಬಾರನು, ಮೊದಲಿಗೆ ಹರನಾಳಿಗೆ (ಕೊಳವೆಯಾಕಾರದಲ್ಲಿ)ಯನ್ನು ಸುಮಾರು ಎರಡು ಅಥವಾ ಎರಡೂವರೆ ಅಡಿ ಉದ್ದ(ವಿರುವಂತೆ)ದ ಅಳತೆಯಲ್ಲಿ ಮಣ್ಣಿಂದ ಮಾಡುತ್ತಾರೆ. ಅದನ್ನು ಮಾಡಿದ ದಿವಸ ಬಿಸಿಲಿನಲ್ಲಿಡದೆ, ನೆರಳಿನಲ್ಲಿಯೇ ಒಣಗಿಸುವ ಪದ್ಧತಿಯನ್ನು ರೂಢಿಸಿಕೊಂಡಿದ್ದಾನೆ. ಬಯಲಿನಲ್ಲಿಟ್ಟರೆ ಮೂರ್ತಿಯು ಚೆನ್ನಾಗಿ ಮೂಡಿಬರುವುದಿಲ್ಲ. ಭಗ್ನ ಆಗುತ್ತದೆ. ಇದರಿಂದ ತಮಗೆ ಕೆಡಕು ಸಂಭವಿಸುತ್ತದೆ ಎಂಬ ಭಾವನೆ ಆತನಲ್ಲಿದೆ.

ಜೋಕನನ್ನು ತಯಾರಿಸುವಾಗ ಸಾಕಷ್ಟು ಎಚ್ಚರಗಳನ್ನು ವಹಿಸುತ್ತಾರೆ. ಪ್ರತಿದಿನ ಮುಂಜಾನೆ ಸ್ನಾನಾದಿಗಳನ್ನು ಪೂರೈಸಿಕೊಂಡು, ಶ್ರದ್ಧಾ, ಭಕ್ತಿಯಿಂದ ಪೂಜಿಸುತ್ತಾರೆ. ನಂತರ ಈ ಕೆಲಸಕ್ಕೆ ತೊಡಗುತ್ತಾರೆ. ಅವರು ಜೋಕುಮಾರನ ಬಗ್ಗೆ ಭಯ, ಭಕ್ತಿಗಳನ್ನಿಟ್ಟುಕೊಂಡಿದ್ದಾರೆ. ತಾವು ಮೂರ್ತಿಯನ್ನು ತಯಾರಿಸುವಾಗ ಏನಾದರೂ ಅಪಶಕುನಗಳಾದರೆ ಅಂದು ಅವರು ಕೆಲಸಕ್ಕೆ ತೊಡಗುವುದಿಲ್ಲ. ತಮಗೆ ಏನಾದರೂ ವಿಪತ್ತು ಬಂದೊದಗುತ್ತದೆ ಎಂಬ ಭಾವನೆ ಅವರಲ್ಲಿದೆ. ಹೊರನೋಟಕ್ಕೆ ಜನರಿಗೆ ಇದರ

ಬಗ್ಗೆ ಸೋಜಿಗವಾಗುವುದರಲ್ಲಿ ಸಂದೇಹವಿಲ್ಲ. ಆದರೆ ಪ್ರತಿ ವರ್ಷವೂ ಇವರು ಈ ಎಲ್ಲಾ ನಂಬಿಕೆಗಳನ್ನು ಅನುಸರಿಸಿಕೊಂಡು ಬಂದಿರುತ್ತಾರೆ. ಅವರಿಗೆ ಹೊರನೋಟದ ಜಗತ್ತಿಗಿಂತ ತಾವು ಅನುಸರಿಸಿಕೊಂಡು ಬಂದಿರುವ ಈ ಪದ್ಧತಿಯ ಬಗ್ಗೆಯೇ ವಿಶೇಷ ಕಾಳಜಿಯಿದೆ. ಎಷ್ಟೋ ಸೂಕ್ಷ್ಮ ವಿಚಾರಗಳು ಇದರಲ್ಲಿ ಹುದುಗಿವೆ. ಕ್ಷೇತ್ರಕಾರ್ಯದಲ್ಲಿ ವಕ್ತೃ ಒಬ್ಬನನ್ನು ಸಂದರ್ಶಿಸಿದಾಗ ಆತ ಜೋಕುಮಾರನು ತಮ್ಮ ಆರಾಧ್ಯದೈವ. ಪ್ರತಿವರ್ಷವೂ ಇವನನ್ನು ಇದೇ ರೀತಿಯಲ್ಲಿ ತಯಾರು ಮಾಡಿ, ಪೂಜಿಸಿಕೊಂಡು ಬಂದಿದ್ದೇವೆ. ಈ ಪದ್ಧತಿ ನಮಗೆ ತಲಾಂತರದಿಂದ ಬಂದಿದೆ. ಇದರಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಿಕೊಂಡಿಲ್ಲ. ನಮಗೆ ಒಳ್ಳೆಯದಾಗಿದೆ ಎಂದನು.

ನೆರಳಿನಲ್ಲಿ ಒಣಗಿಸಿಟ್ಟ ದುಂಡನೆಯ ಕೊಳವೆಗಳನ್ನು ತೆಗೆದುಕೊಂಡು ಹದಕ್ಕೆ ತಕ್ಕ ಹಾಗೆ ನುಣುಪಾಗಿ ಕಾಣುವಂತೆ ಒದ್ದೆ ಬಟ್ಟೆಯಿಂದ ಸವರುತ್ತಾರೆ. ನಂತರ ಕಣ್ಣು, ಕಿವಿ, ಮೂಗೂ, ಹಣೆ.... ಮುಂತಾದ ಅವಯವಗಳನ್ನು ರಚಿಸುತ್ತಾರೆ. ಕಿರೀಟದಲ್ಲಿ ಆಭರಣಗಳನ್ನು ಬಿದಿರುಕಡ್ಡಿಯಿಂದ ಕೊರೆಯುತ್ತಾರೆ. ತಮ್ಮ ಕಲ್ಪನೆಗೆ ತಕ್ಕಂತೆ ಬೇಕಾದ ಆಭರಣಗಳನ್ನು ಮಣಿ ಸರಗಳನ್ನು, ಕಿವಿಗಳಿಗೆ ಬಿದಿರು ಕಡ್ಡಿಯ ಸಹಾಯದಿಂದ ರಚಿಸುತ್ತಾರೆ. ಅವನ ಮುಖದ ವರ್ಚಸ್ಸು ನೋಡಿದವರಿಗೆ ಆಹ್ಲಾದ ತರುವಂತಿರುತ್ತದೆ. ನೋಡುಗರಿಗೆ ಸುಂದರ ಪುರುಷನಂತೆ ಕಾಣುವ ಹಾಗೆ ಕಲಾನೈಪುಣ್ಯತೆಯಿಂದ ತಯಾರು ಮಾಡುವುದರಲ್ಲಿ ಸಂದೇಹವಿಲ್ಲ. ಪ್ರತಿಯೊಂದನ್ನು ಅಗತ್ಯಕ್ಕನುಗುಣವಾಗಿ ತಯಾರಿಸುವರು. ರೂಪ-ಲಾವಣ್ಯಗಳಿಗೇನೂ ಕಡಿಮೆಯಿಲ್ಲದಂತೆ ಜೋಕನನ್ನು ರಚಿಸಿ ಅವನಿಗೆ ದೊಡ್ಡದಾದ ಜನನೇಂದ್ರಿಯವನ್ನು ನೋಡುಗರಿಗೆ ಎದ್ದು ಕಾಣುವಂತೆ ಮಾಡುತ್ತಾರೆ. ಯಾವುದೇ ಊರಿನಲ್ಲಿ ಜೋಕುಮಾರನ ಮೂರ್ತಿಯನ್ನು ನೋಡಿದರೂ ಸಹ ಮೊದಲು ಪ್ರಧಾನವಾಗಿ ಕಾಣುವುದು ಅವನ ಜನನೇಂದ್ರಿಯ.

ಅವನು ಅತಿಕಾಮಿ ಆಗಿರುತ್ತಾನೆ. ಆದುದರಿಂದ ದೊಡ್ಡ ಗಾತ್ರದ ಜನನೇಂದ್ರಿಯವನ್ನು ನಾವು ಮಾಡಬೇಕಾಗುತ್ತದೆ. ಜನಸಾಮಾನ್ಯರು ಗುರುತಿಸುವುದೇ ಇವನ ಅತಿಕಾಮುಕತನದಿಂದ ಎಂದು ಅನೇಕ ವಕ್ತೃಗಳು ಹೇಳಿದ್ದಾರೆ. ಜೋಕುಮಾರನ ಮೂರ್ತಿಯನ್ನು ಸಕಲ ವಿಧದಲ್ಲಿ ಅಣಿಗೊಳಿಸಿದ ಮೇಲೆ ನಿರ್ದಿಷ್ಟ ದಿನ ಜೋಕನನ್ನು, ಅವನ ಆರಾಧಕರಿಗೆ ಬಂದು ತೆಗೆದುಕೊಂಡು ಹೋಗಬಹುದು ಎಂದು ತಿಳಿಸುತ್ತಾರೆ.

ಗಣಪತಿಯನ್ನು ವಿಸರ್ಜಿಸಿದ ಮರುದಿನ ಇವನನ್ನು ಆರಾಧಿಸುತ್ತಾರೆ. ಗಂಗಾಮತಸ್ಥರು ಜೋಕುಮಾರನನ್ನು ತೆಗೆದುಕೊಂಡು ಹೋಗಲು ಪೂಜಾ ಸಾಮಗ್ರಿಗಳೊಂದಿಗೆ ಕುಂಬಾರನ ಮನೆಗೆ ಬರುವ ಪರಿಪಾಠವಿರುತ್ತದೆ. ರಾಹುಕಾಲವನ್ನು ನೋಡಿಕೊಂಡು ಕುಂಬಾರನು ಜೋಕುಮಾರನನ್ನು ಪೂಜಿಸುತ್ತಾನೆ. ಗಂಗಾಮತಸ್ಥರು ಕುಂಬಾರನಿಗೆ ಇಂತಿಷ್ಟು ಹಣವನ್ನು ಕೊಡುವ ಪದ್ಧತಿಯನ್ನು ಹಿಂದಿನಿಂದಲೂ ಪಾಲಿಸಿಕೊಂಡು ಬಂದಿರುತ್ತಾರೆ. ಅವನಿಗೆ ಹಣವನ್ನು ಕೊಡಲೇಬೇಕು. ೧೦೦ ರಿಂದ

"ವಿಚಾರ ವಾದಿಗಳೆಂದು ಹೇಳಿಕೊಳ್ಳುವಂಥ, ಮೊದಲಾಗಿ ನಂಬಿಕೆಗಳ ಹಿಡಿತದಿಂದ ತಪ್ಪಿಸಿಕೊಳ್ಳುವಂಥ ಮಹನೀಯರು ಜಗತ್ತಿನಲ್ಲಿ ಇಲ್ಲವೆಂದೇ ಹೇಳಬೇಕಾಗಿದೆ."[೬]

"ವಾಸ್ತವಿಕತೆ ಮತ್ತು ಯಥಾರ್ಥತೆಯ ದೃಷ್ಟಿಯಿಂದ ನೋಡಿದಾಗ ನಂಬಿಕೆಗಳಲ್ಲಿ ಕೆಲವು ದಿಟವೆಂದೂ ಕೆಲವು ಸಟೆಯೆಂದೂ ಒಪ್ಪಿಕೊಳ್ಳಬೇಕಾಗುತ್ತದೆ. ಎಲ್ಲೆಲ್ಲಿ ಕಾರ್ಯಕಾರಣ ಸಂಬಂಧ ಸುಸಂಬದ್ಧವಾಗಿ ತೋರುತ್ತದೆಯೋ ಅವು ದಿಟದ ನಂಬಿಕೆಗಳೆಂದೂ ಅದು ತೋರದಿದ್ದರೆ ಸಟೆಯ ನಂಬಿಕೆಗಳೆಂದೂ ಕರೆಯಬಹುದು. ಈ ಸಟೆ ನಂಬಿಕೆಗಳನ್ನು ಮೂಢ ನಂಬಿಕೆಗಳೆಂದೂ ಮೌಢ್ಯಗಳೆಂದೂ ಕರೆಯುವ ರೂಢಿಯಿದೆ. ಆಂಗ್ಲಭಾಷೆಯಲ್ಲಿ ಈ ಗುಂಪಿಗೆ Superstition ಎನ್ನುವ ಹೆಸರಿದೆ. ಅದು Stare ಎನ್ನುವ ಲ್ಯಾಟಿನ್ ಮೂಲದಿಂದ ಬಂದಿದೆ. Survival ಎಂಬ ಆಂಗ್ಲಪದ ಅದಕ್ಕೆ ಸಂವಾದಿಯಾದುದು. ಜರ್ಮನ್ ಭಾಷೆಯಲ್ಲಿ Aberglaube ಎಂದೂ, ಡಚ್‌ನಲ್ಲಿ overgeloof ಎಂದೂ ಡೇನಿಷಿನಲ್ಲಿ overtro ಎಂದೂ ಅದಕ್ಕೆ ಹೆಸರು. ಆದರೆ ಗ್ರೀಕ್ ಪದ deisidaimonia ಮೂಢನಂಬಿಕೆಗಳ ಸ್ವರೂಪವನ್ನು ಸ್ಪಷ್ಟವಾಗಿ ತಿಳಿಸುತ್ತದೆಂದು ತೋರುತ್ತದೆ. ಆ ಪದದ ನಿಜವಾದ ಅರ್ಥ 'ದೇವರ ಭಯ' ಎಂದು. ಜೀವನದಲ್ಲಿ ಸಂಭವಿಸುವ ಸಾಮಾನ್ಯಗಳ ಸಂಗತಿಗಳ ಕಡೆಗೆ ಮನುಷ್ಯ ಲಕ್ಷ್ಯ ಕೊಡುವುದಿಲ್ಲ. ಅಸಾಧಾರಣ ಸಂಗತಿಗಳು ಮಾತ್ರ ಅವನ ಗಮನವನ್ನು ಸೆಳೆಯುತ್ತವಲ್ಲದೆ, ಗೌರವ, ಭಯ ಭಕ್ತಿಗಳನ್ನು ಆಕರ್ಷಿಸುತ್ತವೆ. ತನಗೆ ತಿಳಿದಂತೆ ಮನುಷ್ಯ ಅವನ್ನು ರೂಪಿಸಿಕೊಳ್ಳುತ್ತಾನೆ. ಇಂಥ ಘಟನೆಗಳೂ ಯಾವತ್ತೂ ಇರುತ್ತವೆ. ಕೆಲವಂತು ಆಧುನಿಕ ವಿಜ್ಞಾನಿಯೂ ಬಿಡಿಸಲಾರದಂಥವು. ಅಷ್ಟೇ ಏಕೆ, ಹಿಂದಿನ ವೈಜ್ಞಾನಿಕ ಸಿದ್ಧಾಂತ ಕಾಲಾನಂತರದಲ್ಲಿ ಹುಸಿಯಾಗಬಹುದೆಂಬುದನ್ನು ಈ ಸಂದರ್ಭದಲ್ಲಿ ನೆನಸಿಕೊಳ್ಳಬಹುದಾಗಿದೆ. ಆದರೆ ಒಬ್ಬನಿಗೆ ಅಸಾಧಾರಣವೆಂದು ತೋರಿದ್ದು ಮತ್ತೊಬ್ಬನಿಗೆ ಸಾಧಾರಣವೆಂದು ತೋರಬಹುದು. ಅಂದರೆ ಅದನ್ನು ಸೀಮಿತಾರ್ಥದಲ್ಲಿ ಬಳಸಬೇಕಾಗುತ್ತದೆ.[೭]

ಗಣಪತಿ ಹಬ್ಬದ ದಿನಗಳಲ್ಲಿ ಕುಂಬಾರನು ಇವನ ಮೂರ್ತಿಯನ್ನು ಮಾಡುವಾಗ ಕೆಲವು ಎಚ್ಚರಿಕೆಗಳನ್ನು ಗಮನದಲ್ಲಿಟ್ಟುಕೊಳ್ಳುತ್ತಾರೆ. ಅದೇನೆಂದರೆ ಗಣಪನ ವಿಗ್ರಹದ ಎದುರಿಗೆ ಇವನನ್ನು ತಯಾರಿಸುವುದಿಲ್ಲ. ಕೆಲವೆಡೆಗಳಲ್ಲಿ ಗಮನಿಸಿದಂತೆ ಪ್ರತ್ಯೇಕವಾದ ಸ್ಥಳದಲ್ಲಿ ಇದಕ್ಕೆ ಅವಕಾಶವನ್ನು ಕಲ್ಪಿಸಿಕೊಂಡಿರುತ್ತಾರೆ. ಕಾರಣವೇನೆಂದರೆ ಜೋಕನನ್ನು ಮಾಡುವಾಗ ಗಣಪತಿಮೂರ್ತಿಯ ನೇರದರ್ಶನವಾಗದಂತೆ ನೋಡಿಕೊಳ್ಳುತ್ತಾರೆ. ಅಂದರೆ ಗಣಪನನ್ನು ಕುಳ್ಳಿರಿಸಿರುವ ಸ್ಥಳದಿಂದ ನೇರಕ್ಕೆ ಜೋಕನನ್ನು ಮಾಡುವುದಿಲ್ಲ. ಒಂದಮ್ಮೆ ಎದುರಿನಲ್ಲಿ ಮಾಡಿದರೆ ಜೋಕನ ಮೂರ್ತಿಯು ಭಗ್ನವಾಗುತ್ತದೆ. ಇದರಿಂದ ಮಾಡುವವನಿಗೆ ಒಳ್ಳೆಯದಾಗುವುದಿಲ್ಲ. ಅವರು ಈ ರೀತಿಯ ಮನೋಭಾವವನ್ನು ಹೊಂದಿರುತ್ತಾರೆ.

ಅನೇಕ ಕಡೆಗಳಲ್ಲಿ ಕ್ಷೇತ್ರಕಾರ್ಯ ಮಾಡುವಾಗ ಈ ವಿಚಾರವನ್ನು ಪ್ರಸ್ತಾಪಿಸಿದೆನು. ವಕ್ರಗಳು ಗಣಪ ಮತ್ತು ಜೋಕನಿಗೆ ಆಗುವುದಿಲ್ಲ. ಇಬ್ಬರನ್ನು ಪರಸ್ಪರ ಎದುರಿರಿಸಿದರೆ ಅವು ಭಗ್ನವಾಗುತ್ತವೆ ಎಂದರು. ಮೇಲ್ನೋಟಕ್ಕೆ ಜನರಿಗೆ ಇದು ಮೌಢ್ಯ ಎನಿಸಬಹುದು. ಆದರೆ ಈ ಬಗ್ಗೆ ಅವರು ನಂಬಿಕೆಗಳನ್ನು ಅನೇಕ ತಲೆಮಾರುಗಳಿಂದ ರೂಢಿಸಿಕೊಂಡು ಬಂದಿರುತ್ತಾರೆ. ಇವೆಲ್ಲವುಗಳನ್ನು ಒರೆಹಚ್ಚಿ ನೋಡುವವರಾರು? ಭಯದಿಂದ ಭಕ್ತಿ ಎನ್ನುವಂತೆ ನಾವು ಕೂಡ ಅವುಗಳಿಗೆ ಪೂರಕವಾಗಿ ಸಾಗಬೇಕು. ದೇವರ ವಿಷಯದಲ್ಲಿ ಇಂತಹ ನಂಬಿಕೆಗಳು ಪ್ರಶ್ನಾತೀತವಾಗುತ್ತವೆ.

ಕಾಲದಗತಿಯೊಂದಿಗೆ ಹೆಜ್ಜೆ ಹಾಕುವ ಜನ ನಂಬಿಕೆಯ ಚೌಕಟ್ಟನ್ನು ಬಿಟ್ಟು ಬದುಕಲಾರರು. ಕೆಲವರಿಗೆ ಈ ನಂಬಿಕೆಗಳೇ ಬದುಕಿಗೆ ಆಧಾರವಾಗಿ ನಿಂತರೆ ಇನ್ನೂ ಕೆಲವರಿಗೆ ಇದು ಅಪನಂಬಿಕೆಯಾಗಿ ಕಾಣಿಸುತ್ತದೆ. ಮತ್ತೂ ಕೆಲವರು ಅದನ್ನೆ ಮೂಢನಂಬಿಕೆ ಎಂದು ಜರೆಯುತ್ತಾರೆ. ಆದರೂ ದೈನಂದಿನ ಬದುಕಿನಲ್ಲಿ ಎಲ್ಲೋ ಒಂದು ಕಡೆ 'ನಂಬಿಕೆ' ಎಂಬ ವಿಚಾರದ ಪರಿಣಾಮ ಇದ್ದೇ ಇರುತ್ತದೆ. ಭಯ, ಆತಂಕ, ನಿಟ್ಟುಸಿರು ಇರುವಂತೆ ನಂಬಿಕೆ ನೆಲಗಟ್ಟಿನಲ್ಲಿ ಅದನ್ನೆಲ್ಲಾ ಕಾಣಿಸಿಕೊಳ್ಳಲಾರದ 'ಶಕ್ತಿ' ಯೊಂದರ ಮೇಲೆ ಹಾಕಿ ಬದುಕು ದೂಡುವ ಜನರು ನಮ್ಮ ಸುತ್ತ ಬದುಕುತ್ತಿದ್ದಾರೆ. ಆ ಶಕ್ತಿ ಹಲವರಿಗೆ 'ದೇವರು' ಎನಿಸಿದರೆ ಇನ್ನು ಕೆಲವರಿಗೆ ಶೋಷಣೆಯ ಭಾಗವಾಗಿಯೂ ಕಂಡೀತು.

"ನಂಬಿಕೆಗಳು ಸಮಾಜದ ಅಲಿಖಿತ ಶಾಸನಗಳು. ಲಿಖಿತ ಶಾಸನಗಳಿಗಿಂತ ಬೆಲೆಯುಳ್ಳವು. ಅವುಗಳ ಹಿಂದೆ ದೀರ್ಘ ಪರಂಪರೆಯಿರುವುದರಿಂದ, ಅನೇಕ ಪೀಳಿಗೆಗಳ ಮೆಚ್ಚುಗೆಗೆ ಪಾತ್ರವಾಗಿರುವುದರಿಂದ ಅವುಗಳ ಬೆಲೆ ಅಮೇಯವಾದದ್ದು. ಮನುಧರ್ಮ ಶಾಸ್ತ್ರ ಯಾವುದು? ನಂಬಿಕೆಗಳ ಸಂಗ್ರಹ. ಆ ಸಂಗ್ರಹ ಸಮರ್ಪಕವಾಗಿಲ್ಲದಿರಬಹುದು. ಸಮಗ್ರವಾಗಿಲ್ಲದಿರಬಹುದು. ಅದರಲ್ಲಿ ನ್ಯೂನತೆಗಳೂ ಇರಬಹುದು. ಪಕ್ಷಪಾತದಿಂದ ಕೂಡಿರಬಹುದು. ನಂಬಿಕೆಗಳು ನಿಂತ ಮಡುವಲ್ಲ, ಹರಿಯುವ ನದಿ ಎನ್ನುವುದನ್ನು ಗಮನಿಸಬೇಕು. ಅವೂ ಕಾಲಕ್ಕೆ ತಕ್ಕಂತೆ ಬದಲಾಯಿಸುತ್ತವೆ. ಇರಲಿ ಸಮಾಜದಲ್ಲಿ ನೀತಿಧರ್ಮಗಳು ಉಳಿದಿರುವುದು ಈ ನಂಬಿಕೆಗಳಿಂದ; ಐಕ್ಯ ಸಾಧನೆಯಾಗಿರುವುದು ಇವುಗಳಿಂದ."[೮]

ಸಮಾಜದ ಎಲ್ಲ ಸ್ತರಗಳಲ್ಲಿಯೂ ಮೂಢನಂಬಿಕೆ ಅಸ್ತಿತ್ವದಲ್ಲಿದೆ ಮತ್ತು ಸಾಂಪ್ರದಾಯಿಕ ಶಿಕ್ಷಣವನ್ನು ಪಡೆದಿರುವ ಜನ ಅದನ್ನು ಪ್ರತಿಭಟಿಸುತ್ತಾರೆ ಎಂದು ಅಮೆರಿಕಾದ ಜಾನಪದ ತಜ್ಞ ವೇಲ್ಯಾಂಡ್ ಡಿ ಹ್ಯಾಂಡ್ ಹೇಳಿದ್ದಾರೆ. Superstition exists in all strata of Society and is encountered among people of all degrees of formal education-

ಜಗತ್ತಿನ ಜನರನ್ನು ನಂಬಿಕೆಗಾರರು ಮತ್ತು ವಿವೇಕಿಗಳು ಎಂದು ವಿಭಜನೆ ಮಾಡಲಾಗದು; ಕೆಲವರು ಅರೆ ನಂಬಿಕೆಗಾರರು ಮತ್ತು ಕೆಲವರು ಪೂರ್ಣನಂಬಿಕೆಗಾರರು ಎಂದು ಪಟ್ಟಿ ಮಾಡಬೇಕಾಗುತ್ತದೆ ಎಂದು

ಫಿಲಫ್ ಎಫ್ . ವಾಟರ್ ಮನ್ ಹೇಳುವ ಮಾತೇ ಸರಿ ಎಂದು ತೋರುತ್ತದೆ.[೧೦] one cannot divide the peoples of the world in to the superstitious and the enlightened, but only in to those, by and large, more or less Superstitious-

ಇವುಗಳ ಬಗ್ಗೆ ಡಾ.ದೇ.ಜವರೇಗೌಡರು ಹೀಗೆ ಹೇಳಿದ್ದಾರೆ. "ಏನೇ ಇರಲಿ, ಇಂಥ ನಂಬಿಕೆಗಳು ಜಾತಿ ವೃತ್ತಿ ಅಂತಸ್ತುಗಳ ಭೇದವಿಲ್ಲದೆ ಸಮಾಜದ ಸಮಸ್ತರ ಎಲುಬು ರಕ್ತಗಳಲ್ಲಿ ಸೇರಿಕೊಂಡಿವೆಯೆಂಬುದು ಸುಸ್ಪಷ್ಟ.[೧೧]

ಗಂಗಾಮತಸ್ಥರು ಇವನ ಬಗ್ಗೆ ಅಪಾರವಾದ ಭಕ್ತಿ, ನಂಬಿಕೆಗಳನ್ನಿಟ್ಟುಕೊಂಡಿರುತ್ತಾರೆ. ಅವನ ಬಗ್ಗೆ ಕೇವಲವಾಗಿ ಮಾತನಾಡಿದರೆ ಅವರಿಗೆ ಒಳ್ಳೆಯದಾಗುವುದಿಲ್ಲ. ನಿತ್ಯ ಜೀವನದಲ್ಲಿ ಕೆಡಕುಗಳು ಸಂಭವಿಸುತ್ತವೆ ಎಂದು ಹೇಳುತ್ತಾರೆ. ಈ ವಿಚಾರವನ್ನು ಜೋಕುಮಾರನನ್ನು ಹೊರುವವರೆಲ್ಲರೂ ಪ್ರಸ್ತಾಪಿಸಿದರು. ನಮ್ಮ ಮನೆತನಕ್ಕೆ ಅನೇಕ ಕಷ್ಟ-ಕಾರ್ಪಣ್ಯಗಳು ಬಂದಿವೆ ಎಂತಲೂ ಹೇಳಿದ್ದಾರೆ. ಇವರ ನಂಬಿಕೆಗಳೇನೇ ಇರಲಿ, ಈ ಸಮುದಾಯದವರು ಮಾತ್ರ ಹಿಂದೆ ಅನುಸರಿಸಿಕೊಂಡು ಬಂದಂತಹ ಎಲ್ಲಾ ಕ್ರಮಗಳನ್ನು ಈಗಲೂ ತಪ್ಪದೇ ಪಾಲಿಸುತ್ತಿದ್ದಾರೆ.

ಪ್ರಾರಂಭದ ದಿನದಲ್ಲಿ ಇವನೊಟ್ಟಿಗೆ ಬೇವಿನ ಸೊಪ್ಪ(ತೊಪ್ಪಲು)ನ್ನು ಪುಟ್ಟಿಯ ತುಂಬಾ ಇಟ್ಟಿರುತ್ತಾರೆ. ಜೋಕುಮಾರನ ಮುಖ ಮಾತ್ರ ಕಾಣುವಂತಿದ್ದು ಉಳಿದ ಭಾಗಗಳನ್ನು ಈ ಸೊಪ್ಪಿನಿಂದ ಮುಚ್ಚಿರುತ್ತಾರೆ. ಪುಟ್ಟಿಯ ಒಂದು ಕಡೆಯಲ್ಲಿ ಕುಂಕುಮ, ಅರಿಶಿನ, ವಿಭೂತಿಗಳನ್ನಿಡುವ ಕ್ರಮವಿದೆ. ಒಂದು ಚಿಕ್ಕ ಬಟ್ಟಲಿನಲ್ಲಿ ರೈತರಿಗೆ ಕೊಡಲಿಕ್ಕಾಗಿ ಕಪ್ಪು ಮತ್ತು ಪ್ರತ್ಯೇಕವಾದ ಚೀಲದಲ್ಲಿ ಅಂಬಲಿ ಇರುತ್ತದೆ. ರೈತರು ಕೊಡುವ ಉಪ್ಪು, ಮೆಣಸಿನ ಕಾಯಿಗಾಗಿ ಮತ್ತೊಂದು ಚೀಲವನ್ನಿಟ್ಟುಕೊಂಡಿರುತ್ತಾರೆ. ರೈತರು ಕೊಡುವ ಬೆಣ್ಣೆಗಾಗಿ ಒಂದು ಬಟ್ಟಲಿರುತ್ತದೆ.

ಪ್ರತಿದಿನವೂ ಇವರೆಲ್ಲರೂ (ಹೊರುವವರು) ಸ್ನಾನಾದಿಗಳನ್ನು ಪೂರೈಸಿಕೊಂಡು ಕಾರ್ಯಕ್ರಮದ ವೇಳಾಪಟ್ಟಿಯಂತೆ ಜೋಕುಮಾರನನ್ನು ಹೊತ್ತು ಊರಾಡಲು ಹೋಗುತ್ತಾರೆ. ಅದಕ್ಕೂ ಸಹ ಪದ್ಧತಿ ಇದೆ. ಊರಿನ ಪ್ರಮುಖರಾದ ಗೌಡ, ಶಾನುಭೋಗರ ಮನೆಗಳಿಗೆ ಹೋಗಿ ಅಲ್ಲಿ ಪುಟ್ಟಿಯನ್ನು ಇಳಿಸುವ ರೂಢಿ. ಇದು ಹಿಂದಿನಿಂದಲೂ ನಡೆಸಿಕೊಂಡು ಬಂದಿರುವ ಕ್ರಮ. ಈ ಕ್ರಮ ಯಾವುದೇ ಕಾರಣಕ್ಕೂ ಬದಲಾಗುವಂತಿಲ್ಲ. ಆ ಮನೆಯ ಯಜಮಾನ ಅಥವಾ ಯಜಮಾನನ ಹೆಂಡತಿ ಶಾಸ್ತ್ರೋಕ್ತವಾಗಿ ಪೂಜಿಸುವರು.

ಎಂ.ಚಿದಾನಂದ ಮೂರ್ತಿ ಅವರು ಸಾಧನೆಯಲ್ಲಿ ಹೀಗೆ ಉಲ್ಲೇಖಿಸಿದ್ದಾರೆ. "ಜೋಕುಮಾರ ಹುಟ್ಟಿದ ದಿನ ಅವನನ್ನು ಮುತ್ತೈದೆ ಹೆಂಗಸರು ಅಂದು ಸ್ನಾನ ಮಾಡಿ, ತಲೆ ಬಾಚಿಕೊಂಡವರು

ಜೋಕುಮಾರನಿಗೆ ‘ಮಣ್ಣು ಕೊಡುವ’ ತನಕ, ಎಂದರೆ ಏಳು ದಿನಗಳವರೆಗೆ ಸ್ನಾನ ಮಾಡುವಂತಿಲ್ಲ. ಬಟ್ಟೆ ಬದಲಿಸುವಂತಿಲ್ಲ. ತಲೆ ಬಾಚುವಂತಿಲ್ಲ. ಅವನು ಹುಟ್ಟಿದ ಮನೆಯಲ್ಲಿ-ಧಾರವಾಡದಲ್ಲಿ ನಾಗಣ್ಣನವರ ಮನೆಯಲ್ಲಿ ಮೊದಲ ಪೂಜೆ. ಬಳಿಕ ಅನುಕ್ರಮವಾಗಿ ಬಡಿಗ್ಯಾರ ಮನೆಗೆ, ಗೌಡರ ಮನೆಗೆ, ಧಾರವಾಡಕ್ಕೇ ದೊಡ್ಡ‘ಮೇಟಿ’ ಎನ್ನಿಸಿಕೊಂಡಿರುವ ಮುಸಲ್ಮಾನ್ ಮತದ ಲಂಗೂಟಿಯವರ ಮನೆಗೆ, ಉಳ್ಳಾಗಡ್ಡ್ಯಾರ ಮನೆಗೆ ಹೀಗೆ ಇನ್ನೂ ಕೆಲವೇ ಕೆಲವು ಮನೆಗಳಿಗೆ ಜೋಕುಮಾರನ ಬುಟ್ಟಿಯನ್ನು ಹೊತ್ತು ಒಯ್ಯುತ್ತಾರೆ. ಗೌಡರ ಮನೆಯಲ್ಲಿ ಆ ಹೊತ್ತಿಗೆ ‘ಅಷ್ಟಮೀ ಕೊಡ ಪೂಜೆ’ ಆಗಿರುತ್ತದೆ. ಕೊಡ ಇಲ್ಲಿ ಲಕ್ಷ್ಮಿಯ ಸಂಕೇತ. ಬಾಗಿಲಲ್ಲಿ ಜೋಕುಮಾರನನ್ನು ಇಳಿಸಿದಾಗ ಗೌಡರ ಮನೆಯವರು ಪೂಜಾ ಸಾಮಗ್ರಿ ಕೊಡುತ್ತಾರೆ; ಆ ದಿನ ಮಾಡಿದ ಅಡಿಗೆಯನ್ನು ಬಂದವರಿಗೆ ಕೊಡುತ್ತಾರೆ. ಹಿಂದೆ ಹೇಳಿದ ಎಲ್ಲ ಮನೆಯವರೂ ತಮ್ಮ ಮನೆಗೆ ಜೋಕುಮಾರ ಬಂದಾಗ ಆ ದಿನ ತಾವು ತಂದಿದ್ದ ಜರತಾರಿ ಪಟಕವನ್ನೂ ಕಾಣಿಕೆಯನ್ನು ಕೊಟ್ಟರೆ ಎಣ್ಣೆಯನ್ನು ಮಗೆ ಒಳಕ್ಕೆ ಸುರಿದು, ಬೆಣ್ಣೆಯನ್ನು ಜೋಕುಮಾರನ ತುಟಿಗೆ ಮುಟ್ಟಿಸಿ ಬೇರೆ ಪಾತ್ರೆಗೆ ಹಾಕಿಕೊಳ್ಳುತ್ತಾರೆ.”[೧೨]

ಇಲ್ಲಿ ಗಮನಿಸಬೇಕಾದ ಎಷ್ಟೋ ಅಂಶಗಳು ಈ ರೀತಿಯಲ್ಲಿವೆ.

ಅ. ಪ್ರತಿ ಬಾರಿಯೂ ಸಹ ಊರ ಗೌಡರ ಮನೆಯ ಮುಂದೆಯೇ ಜೋಕುಮಾರನ ಪುಟ್ಟಿಯನ್ನು ಇಳಿಸುವರು.

ಆ. ಈ ಕ್ರಮದಲ್ಲಿ ಯಾವುದೇ ಬದಲಾವಣೆ ಮಾಡಿಕೊಳ್ಳದೆ ಈಗಲೂ ಅನುಸರಿಸಿಕೊಂಡು ಬರುತ್ತಿದ್ದಾರೆ.

ಇ. ಮೊದಲ ಪೂಜೆ ಅವರ ಮನೆಯಿಂದಲೇ ಪ್ರಾರಂಭವಾಗಬೇಕು.

ಈ. ಈ ವರ್ಷದಲ್ಲಿ ಉತ್ತಮ ಮಳೆಯಾಗಲಿ, ಪೈರುಗಳು ಚೆನ್ನಾಗಿ ಬರಲಿ, ಜಾನುವಾರುಗಳಿಗೆ ಮೇವು ದೊರೆಯಲಿ.

ಉ. ಹೈನು ಉತ್ಪಾದನೆಗಳು ಹೆಚ್ಚಿನ ರೀತಿಯಲ್ಲಿ ಆಗಲಿ

ಊ. ಬರಗಾಲ ಬರದಂತೆ ನಮ್ಮನ್ನು ಕಾಪಾಡು. ಲೋಕದಲ್ಲಿ ಸುಖ, ಶಾಂತಿ, ನೆಮ್ಮದಿಗಳನ್ನು ಕರುಣಿಸು.

ಋ. ತಮ್ಮ ಕುಟುಂಬದ ಸದಸ್ಯರಿಗೆ ಮಕ್ಕಳಾಗದಿದ್ದರೆ, ಮಕ್ಕಳ ಭಾಗ್ಯವನ್ನು ದಯಪಾಲಿಸು.

ಎ. ಮಕ್ಕಳಾದರೆ ಬರುವ ವರುಷ ತಪ್ಪದೆ ನಿನಗೆ ಹರಕೆಯನ್ನು ತೀರಿಸುತ್ತೇನೆ... ಇತ್ಯಾದಿಯಾಗಿ ಬೇಡಿಕೊಳ್ಳುತ್ತಾರೆ. ಇವನು ಮಕ್ಕಳನ್ನು ಕೊಡುವ ದೇವರಾಗಿದ್ದಾನೆ.

ಜೊಕುಮಾರನನ್ನು ಹೊರುವವರು ಬಹುತೇಕವಾಗಿ ಹೆಂಗಸರಾಗಿರುತ್ತಾರೆ. ಅವರೆಲ್ಲರೂ ಒಟ್ಟಾಗಿ ಮನೆಯ ಮುಂದೆ ದುಂಡಾಗಿ ಕುಳಿತುಕೊಳ್ಳುತ್ತಾರೆ. ಮಧ್ಯದಲ್ಲಿ ಜೋಕುಮಾರನ ಪುಟ್ಟಿಯನ್ನಿಡುತ್ತಾರೆ.

ಅವನ ಹಾಡುಗಳನ್ನು ಕ್ರಮವಾಗಿ ಹಾಡುತ್ತಾರೆ. ಯಾವ ಊರಿನವರೇ ಆದರೂ ಸಹ ಪ್ರಾರಂಭದಲ್ಲಿ ಈ ಕೆಳಗಿನಂತೆ ಹಾಡಿ, ಆನಂತರ ತಮ್ಮದೇ ಆದ ಧಾಟಿಯಲ್ಲಿ ಹಾಡುವ ಪದ್ಧತಿಯನ್ನಿಟ್ಟುಕೊಂಡಿರುತ್ತಾರೆ.

ಅಡ್ಡಡ್ಡ ಮಳಿ ಬಂದು ದೊಡ್ಡೊಡ್ಡ ಕೆರಿ ತುಂಬಿ
ಗೊಡ್ಡುಗಳೆಲ್ಲ ಹಯನಾಗಿ ಗೌಡರ
ಶೆಡ್ಡೇಯ ಮೇಲೆ ಸಿರಿ ಬರಲಿ ||

ಮೊದಲು ಇಬ್ಬರು ಹಾಡನ್ನು ಹೇಳಿ ಮುಗಿಸುತ್ತಾರೆ. ಉಳಿದ ಇನ್ನಿಬ್ಬರು ಹಿಮ್ಮೇಳದಂತೆ ಅವರ ಹಾಡನ್ನು ಪುನರ್ ಉಚ್ಚರಿಸುತ್ತಾರೆ. ಅವರ ಹಾಡಿನ ಕ್ರಮ ಹೀಗೆ ಸಾಗುತ್ತದೆ.

ಮೊತ್ತ ಮೊದಲಿಗೆ ಜೋಕುಮಾರನನ್ನು ಹೊತ್ತುಕೊಂಡು ಆಯಾ ಊರಿನ ಗಣ್ಯರಾದ ಗೌಡರ ಮನೆ ಮುಂದೆ ಬರುತ್ತಾರೆ. ಮನೆಯ ಹಿರಿಯರು ತುಂಬಿದ ಕೊಡದಿಂದ ಒಂದು ಚೊಂಬು ನೀರನ್ನು ತೆಗೆದುಕೊಂಡು ಬಂದು ಅವನನ್ನು ಇಟ್ಟಿರುವ ಪುಟ್ಟಿಯ ಸುತ್ತಲೂ ಹಾಕುತ್ತಾರೆ. ಈ ಪದ್ಧತಿಯನ್ನು ಹಿಂದಿನಿಂದಲೂ ಪಾಲಿಸಿಕೊಂಡು ಬಂದಿದ್ದಾರೆ. ಆನಂತರ ಜೋಕುಮಾರನಿಗೆ ವಿಭೂತಿ, ಕುಂಕುಮ, ಅರಿಶಿಣವನ್ನು ಹಚ್ಚುತ್ತಾರೆ. ಅವನ ಬಾಯಿಗೆ ಬೆಣ್ಣೆಯನ್ನಿಡುವ ಕ್ರಮವಿದೆ. ಬೆಣ್ಣೆ ಅವನಿಗೆ ಪ್ರಿಯವಂತೆ. ಹೀಗೆ ಇಡುವುದರಿಂದ ಹೈನು ಪದಾರ್ಥಗಳು ಇಮ್ಮಡಿಯಾಗುತ್ತವೆ ಎಂಬ ನಂಬಿಕೆ ಅವರದು. ಅವನ ಬಳಿ ಇಟ್ಟಿರುವ 'ಜ್ಯೋತಿ'ಗೆ ಹರಳೆಣ್ಣೆಯನ್ನು ಹಾಕಿ, ಗಂಧದ ಕಡ್ಡಿಗಳಿಂದ ಬೆಳಗಿ ನಮಸ್ಕರಿಸುತ್ತಾರೆ.

ಇದಾದ ನಂತರ ಗೌಡರ ಮನೆಯ ಯಜಮಾನ ತುಂಬಿದ ಕೊಡವನ್ನು ತೆಗೆದುಕೊಂಡು ಬಂದು ಜೋಕುಮಾರನನ್ನು ಹೊರುವ ಹೆಂಗಸರೊಬ್ಬರ ತಲೆಯ ಮೇಲಿನಿಂದ ನೀರನ್ನು ಹಾಕುತ್ತಾರೆ. ಇವರು ಒದ್ದೆಯಾಗಿ ಗಡಗಡ ನಡುಗಿದರೆ ಉತ್ತಮವಾದ ಮಳೆ ಬರುತ್ತದೆ ಎಂಬ ಪರಿಕಲ್ಪನೆ ಇವರದು. ಪರಿಕಲ್ಪನೆ ಎನ್ನುವುದಕ್ಕಿಂತಲು ನಂಬಿಕೆ ಎನ್ನಬಹುದು. ಅನೇಕ ವರ್ಷಗಳಿಂದ ಇದನ್ನು ಪಾಲಿಸಿಕೊಂಡು ಬಂದಿದ್ದಾರೆ. ಇಂತಹ ನಂಬಿಕೆಗಳು ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿದೆ. ಇವರು ಪ್ರತಿ ಮನೆಯಲ್ಲಿಯೂ ಈ ರೀತಿ ನೀರನ್ನು ಹಾಕಿಸಿಕೊಳ್ಳುವುದಿಲ್ಲ. ಪ್ರಾರಂಭದ ದಿನ ಊರ ಗೌಡರ ಮನೆಯಲ್ಲಿ ಮಾತ್ರ ಹಾಕಿಸಿಕೊಳ್ಳುತ್ತೇವೆ ಎಂದು ವಕ್ತೃಗಳು ಹೇಳಿದ್ದಾರೆ. ಜೋಕುಮಾರನ ಹಾಡನ್ನು ಹೇಳುವಾಗ ಮೊದಲು ಗೌಡರ ಬಗ್ಗೆ ಹೇಳುವ ಕ್ರಮವಿದೆ. ಗೌಡರ ಮನೆಯಲ್ಲಿ ಎಲ್ಲರೂ ಆಯುರಾರೋಗ್ಯದಿಂದ ನೂರುಕಾಲ ಬಾಳಿ ಬದುಕಲಿ ಅವರ ಸಂಪತ್ತು ಘನತೆ ಗೌರವಗಳು ಹೆಚ್ಚಲಿ ಎಂದು ಹಾರೈಸುತ್ತಾರೆ.

ಅಡ್ಡಡ್ಡ ಮಳಿ ಬಂದು ದೊಡ್ಡ ದೊಡ್ಡ ಕೆರಿ ತುಂಬಿ
ಗೊಡ್ಡುಗಳೆಲ್ಲ ಹೈನಾಗಿ | ಗೌಡರ
ಸೆಡ್ಡೆದ ಮ್ಯಾಲ ಸಿರಿ ಬಂದ

ಈ ಸಾಲು ಎಲ್ಲರ ಬಾಯಲ್ಲೂ ಸಾರ್ವತ್ರಿಕ(Universal)ವಾಗಿ ಬರುತ್ತದೆ. ಯಾವುದೇ ಊರಿನಲ್ಲಾಗಲೀ ಪ್ರಾರಂಭದಲ್ಲಿ ಗೌಡರ ಮೇಲೆ ಹಾಡನ್ನು ಕಟ್ಟಿ ಹಾಡುತ್ತಾರೆ. ಏಕೆಂದರೆ ಅಂದಿನ ಕಾಲದಲ್ಲಿ ಪ್ರತಿಷ್ಠಿತ ಮನೆತನಗಳಲ್ಲಿ ಒಂದಾದ ಗೌಡರ ಮನೆತನವು ಚೆನ್ನಾಗಿ ಬೆಳೆಯಲಿ. ಅವರು ಚೆನ್ನಾಗಿದ್ದರೆ, ನಮಗೆ ಧನ, ಧಾನ್ಯ, ಹೈನು ಪದಾರ್ಥ... ಮುಂತಾದವುಗಳನ್ನು ನೀಡುತ್ತಾರೆ ಎಂಬ ತಿಳುವಳಿಕೆ ಇದ್ದಿರಬೇಕು. ತಾವು ಹಾಡುವ ಹಾಡಿನಲ್ಲಿ ಅವರನ್ನು ಹೊಗಳಿದರೆ ತಮಗೆ ವಿಶೇಷ ಮನ್ನಣೆಯಾದರೂ ಸಿಕ್ಕೀತು ಎಂಬ ನಿರ್ಧಾರ ಅವರದ್ದಾಗಿರಬೇಕು. ಅಲ್ಲದೆ ಗೌಡರ ಹೊಲದಲ್ಲಿ ಈ ಬಾರಿ ಉತ್ಕೃಷ್ಟ ಬೆಳೆಗಳು ಬೆಳೆಯಬೇಕೆಂದು ಹಾಡಿನ ಮೂಲಕ ಬೇಡುವುದು ಸಾಮಾನ್ಯ.

ಹಾಸ್ಹಾಸಿ ಮಳಿ ಬಡದ ಬೀಸ್ಬೀಸಿ ಕೆರಿ ತುಂಬಿ
ಬಾಸಿಂಗದಂತ ತೆನಿಬಾಗಿ | ಗೌಡರ
ರಾಸಿಯ ಮ್ಯಾಲ ಸಿರಿ ಬಂದ ||

ಇಂತಹ ಹಾಡುಗಳು ಚರ್ವಿತ ಚರ್ವಣದಂತೆ ಆಗಾಗ್ಗೆ ಪುನರಾವರ್ತನೆಯಾಗುತ್ತವೆ. ಗೌಡರ ಮನೆಯವರು ಒಂದು ಮೊರದ ತುಂಬ ಜೋಳವನ್ನು ಕೊಡುತ್ತಾರೆ. ಜತೆಗೆ ಒಣಮೆಣಸಿನಕಾಯಿ, ಹುಣುಸೆ ಹಣ್ಣನ್ನು ಕೊಡುತ್ತಾರೆ. ಮನೆಯಲ್ಲಿ ಜಾನುವಾರುಗಳಿದ್ದವರು ಬೆಣ್ಣೆಯನ್ನು ಅವನ ಬಾಯಿಗೆ ಹಚ್ಚುತ್ತಾರೆ. ಬೆಣ್ಣೆಯನ್ನು ಏಕೆ ಹಚ್ಚುತ್ತೀರಿ? ಎಂದು ಕೇಳಿದರೆ ನಮ್ಮ ಮನೆಯ ಜಾನುವಾರುಗಳ ಸಂಖ್ಯೆ ಹೆಚ್ಚಲಿ, ಹೈನುಗಾರಿಕೆಯೂ ದ್ವಿಗುಣಗೊಳ್ಳಲಿ ಎಂದು ಬೇಡಿಕೊಂಡು ಹಚ್ಚುವ ಕ್ರಮ ಹಿಂದಿನಿಂದಲೂ ಬಂದಿದೆ ಎಂದು ಹೇಳಿದರು.

ರೈತರು ತಮ್ಮ ಮನೆಯಲ್ಲಿರುವ ತಗಣೆ, ಚುಕ್ಕಾಡುಗಳನ್ನು ಹತ್ತಿಯಲ್ಲಿಟ್ಟು ಜೋಕುಮಾರನ ಪುಟ್ಟಿಯೊಳಗಿಡುತ್ತಾರೆ. ಇದರಿಂದ ತಮಗೆ ನಿರಾಳವಾಗುತ್ತದೆ. ಇವು ತಮಗೆ ಕಾಟ ಕೊಡುವುದಿಲ್ಲ ಎಂಬ ನಂಬಿಕೆ ಅವರದು. ಇತ್ತೀಚೆಗೆ ಇದು ವಿರಳವಾಗುತ್ತಿದೆ.

"ಏನೇ ಇರಲಿ, ಇಂಥ ನಂಬಿಕೆಗಳು ಜಾತಿ ವೃತ್ತಿ ಅಂತಸ್ತುಗಳ ಭೇದವಿಲ್ಲದೆ ಸಮಾಜದ ಸಮಸ್ತರ ಎಲುಬು ರಕ್ತಗಳಲ್ಲಿ ಸೇರಿಕೊಂಡಿವೆಯೆಂಬುದು ಸುಸ್ಪಷ್ಟ."[೧೩]

ಕೆಲವು ಭಾಗಗಳಲ್ಲಿ ಮಾತ್ರ ಜೋಕುಮಾರನನ್ನು ಹೊರುವ ಹೆಂಗಸರು ಅವನು ಹುಟ್ಟಿದ ದಿನ ಸ್ನಾನ ಮಾಡಿ, ಮತ್ತೆ ಅವನು ಹುಣ್ಣಿಮೆಯ ದಿನ ಸತ್ತಮೇಲಷ್ಟೇ ಸ್ನಾನಮಾಡುವ ಕ್ರಮವನ್ನಿಟ್ಟುಕೊಂಡಿರುತ್ತಾರೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಪ್ರತಿದಿನವೂ ಸ್ನಾನಮಾಡಿ ಅವನನ್ನು ಪೂಜಿಸುವ ವರ್ಗವೂ ಸಹ ಇದೆ.

ಮೊದಲನೆಯ ದಿನ ಗೌಡರ ಮನೆಗೆ ಹೋದ ಮೇಲೆ ಬೀದಿಯಲ್ಲಿರುವ ಇನ್ನಿತರ ಮನೆಗೆ ಹೋಗುವ ಕ್ರಮವನ್ನು ಹಿಂದಿನಿಂದಲೂ ಪಾಲಿಸಿಕೊಂಡು ಬಂದಿದ್ದಾರೆ. ಈ ಪದ್ಧತಿಯನ್ನು ಅವರು ತಪ್ಪಿಸುವಂತಿಲ್ಲ.

ಪ್ರತಿ ಮನೆ ಮನೆಗೂ ಹೋಗಿ ಹಾಡನ್ನು ಹೇಳಿಯೇ ತೀರಬೇಕು. ಅವನ ಹಾಡುಗಳಿಂದ ಜೋಕನ ಸಂಪೂರ್ಣ ಚರಿತ್ರೆ ತಿಳಿಯುತ್ತದೆ. ಕೆಲವು ಭಾಗಗಳಲ್ಲಿ ಇವನನ್ನು ಹೊರುವ ಹೆಣ್ಣು ಮಕ್ಕಳು ಕೆಲವು ಹಾಡುಗಳನ್ನು ಮಾತ್ರ ಹೇಳಿ ಇನ್ನುಳಿದವುಗಳನ್ನು ಹೇಳದೇ ಇರುವ ಅಭ್ಯಾಸ ಕೆಲವೆಡೆ ಉಂಟು. ಅವರನ್ನು ಈ ಕುರಿತು ವಿಚಾರಿಸಿದಾಗ ಸಮಯ ಕಡಿಮೆ ಇರುವುದರಿಂದ (ಕೇವಲ ಏಳು ದಿನಗಳು) ಪ್ರತಿ ಮನೆಯ ಮುಂದೆ ಹಾಡುತ್ತಾ ಕುಳಿತರೆ ನಮಗೆ ಇನ್ನುಳಿದ ಮನೆಗಳಿಗೆ ಹೋಗಲು ಕಷ್ಟವಾಗುತ್ತದೆ. ಊರಿನಲ್ಲಿರುವ ಪ್ರತಿ ಮನೆಗೂ ಹೋಗಬೇಕು. ಬಡವ, ಬಲ್ಲಿದ ಎಂಬ ಭೇದ ನಮ್ಮಲ್ಲಿಲ್ಲ. ಆದಷ್ಟು ಮಟ್ಟಿಗೆ ರೈತರ ಎಲ್ಲಾ ಮನೆಗಳಿಗೂ ಹೋಗಲೇಬೇಕು. ಇಲ್ಲವಾದರೆ ಅವರ ಕೋಪಕ್ಕೆ ಗುರಿಯಾಗುತ್ತೇವೆ. ನಮ್ಮ ಉದ್ದೇಶ ರೈತರಿಗೆ ಕಪ್ಪು-ಬೇವು ಮತ್ತು ಅಂಬಲಿಯನ್ನು ಕೊಡುವುದು. ಇದನ್ನು ಎಲ್ಲಾ ವರ್ಗದ ರೈತರು ತಪ್ಪದೇ ಪ್ರತಿ ವರುಷವೂ ತೆಗೆದುಕೊಳ್ಳುತ್ತಾರೆ. ಅದನ್ನು ತೆಗೆದುಕೊಂಡರೆ ಮಾತ್ರ ಅವರಿಗೆ ನಿರಾಳವಾಗುತ್ತದೆ. ಜೋಕನ ಮರಣಾನಂತರ ಅಂಬಲಿಯನ್ನು ಕಪ್ಪಿನೊಂದಿಗೆ ಬೆರೆಸಿ ತಮ್ಮ ಹೊಲದಲ್ಲಿನ ಪೈರುಗಳಿಗೆ 'ಚರುಗ'ವನ್ನು ಚೆಲ್ಲುತ್ತಾರೆ. ಇದು ಅನೇಕ ವರ್ಷಗಳಿಂದಲೂ ಅನುಸರಿಸಿಕೊಂಡು ಬಂದಿರುವ ಕ್ರಮ.

ಜೋಕನ ಅಚರಣೆ ನಡೆಯುವುದು ಕೇವಲ ಒಂದು ವಾರ ಮಾತ್ರ. ಈ ಆಚರಣೆಯನ್ನು ಭಾದ್ರಪದ ಶುದ್ಧ ನವಮಿಯಿಂದ ಪೌರ್ಣಿಮೆಯವರೆಗೆ ಆಚರಿಸುವರು. ಇದಕ್ಕೆ 'ಭಾಗವತ ಪುರಾಣ ಸಪ್ತಾಹ'(ಪ್ರೌಷ್ಠ ಪರ್ವ ಸಪ್ತಾಹ) ಎಂದು ಕರೆಯುವರು.

'ಎಳೆ ತರುವ ಪದ್ಧತಿ'

ಉತ್ತರ ಕರ್ನಾಟಕದಲ್ಲಿ ಎಳೆ ತರುವ ಪದ್ಧತಿ ಹೆಚ್ಚು ಚಾಲ್ತಿಯಲ್ಲಿದೆ. ಅಂದರೆ ಗಣಪನನ್ನು ಮನೆಯಲ್ಲಿ ಕುಳ್ಳಿರಿಸಿ, ಮೂರು ಅಥವಾ ಐದು ದಿನದ ನಂತರ ಅವನನ್ನು ವಿಸರ್ಜಿಸುವ ಮೊದಲು ಎಳೆ ತರುವ ಪದ್ಧತಿಯನ್ನಿಟ್ಟುಕೊಂಡಿದ್ದಾರೆ. ಅವರು ಹಿಂದಿನಿಂದಲೂ ರೂಢಿಸಿಕೊಂಡಂತೆ ಗೌಡರ, ಹೂಗಾರರ, ಜಿನಗಾರರ ಮನೆಯಲ್ಲಿ ಇದನ್ನು ತರುತ್ತಾರೆ. ಗಣಪನನ್ನು ವಿಸರ್ಜಿಸಲು ಈ ಪದ್ಧತಿಯನ್ನು ಪಾಲಿಸಬೇಕಾಗುತ್ತದೆ. ಎಳೆಯನ್ನು ತರುವವರು ಸ್ನಾನ ಮಾಡಿ ಶುಭ್ರವಾದ ಉಡುಪನ್ನು ಧರಿಸಿ ಹೋಗುತ್ತಾರೆ. ಒಂದು ತಟ್ಟೆಯಲ್ಲಿ ಪೂಜಾ ಸಾಮಾನುಗಳಿರುತ್ತವೆ. ಅದರ ಜತೆಗೆ ಕೇರು, ಬಜಿ, ಹತ್ತಿ, ಅಜವಾ(ಓವಿನಕಾಳು)ನ.... ಮುಂತಾದವುಗಳು ಇರುತ್ತವೆ. ಈ ಮೇಲಿನ ಸಾಮಾನುಗಳನ್ನು ತೆಗೆದುಕೊಂಡು ಅವರ ಮನೆಗೆ ಹೋಗುವ ಸಂಪ್ರದಾಯವಿದೆ.

ಗಣಪತಿಯ ನಿರ್ಗಮನ ಮತ್ತು ಜೋಕುಮಾರನ ಆಗಮನಕ್ಕೂ ಲಕ್ಷ್ಮಿಯ ಕೊಡಪೂಜೆಯನ್ನು ಮಾಡುತ್ತಾರೆ. ತುಂಬಿದ ಕೊಡವನ್ನು ಪೂಜಿಸುವ ಪದ್ಧತಿಯನ್ನು ಹಿಂದಿನಿಂದಲೂ ಪಾಲಿಸಿಕೊಂಡು

ಬಂದಿದ್ದಾರೆ. ಲಕ್ಷ್ಮಿಗೆ ನೈವೇದ್ಯವನ್ನು ಮಾಡಿ ಪೂಜಿಸುವರು. ಪೂಜಾ ಸಾಮಗ್ರಿಗಳಲ್ಲಿ ಒಂದಾದ ಹತ್ತಿಯನ್ನು ತೆಗೆದುಕೊಂಡು ಕೊಡದ ಜತೆ ಇಟ್ಟು ಪೂಜಿಸುತ್ತಾರೆ. ಸ್ವಲ್ಪ ಸಮಯದ ನಂತರ ಹತ್ತಿಯಲ್ಲಿರುವ ಬೀಜಗಳನ್ನು ತೆಗೆದು ಅಲ್ಲಿಯೇ ನೂಲುತ್ತಾರೆ. ಬೆಸ ಸಂಖ್ಯೆಯಲ್ಲಿ (೫, ೭, ೯, ೧೧, ೧೩, ೧೫... ಇತ್ಯಾದಿ) ಎಳೆಗಳನ್ನು ತೆಗೆದುಕೊಂಡು ಒಂದೊಂದು 'ಗಟ್ಟಿ'ಯನ್ನಾಗಿ ಮಾಡಿಕೊಳ್ಳುತ್ತಾರೆ. ಅದರಲ್ಲಿ ಮೊದಲನೆಯದನ್ನು ಲಕ್ಷ್ಮಿಗೆ ಹಾಕುತ್ತಾರೆ. ಇನ್ನೊಂದನ್ನು ಒಬ್ಬ ಮುತ್ತೈದೆಗೆ ಕೊಡುವ ಕ್ರಮ. ಉಳಿದ ಎಲ್ಲವನ್ನೂ ಸೇರಿಸಿ ಒಂದು ಗಟ್ಟಿ ಮಾಡಿ ಕುಂಬಳ ಎಲೆಯಲ್ಲಿಡುತ್ತಾರೆ. ಈ ಎಲ್ಲಾ ಪದ್ಧತಿಗಳನ್ನು ನಿರ್ದಿಷ್ಟವಾಗಿ ಅದೇ ಮನೆಯವರು ಮಾಡಬೇಕು. ಸಂಜೆಯಾದ ಮೇಲೆ ಪುನಃ ಅವರ ಮನೆಗೆ ಹೋದರೆ ಅಲ್ಲಿ ಮಧ್ಯಾಹ್ನ ಉಪವಾಸವಿದ್ದು, ಕೊಡಪೂಜೆ ಮಾಡಿದ ಪುರುಷ ಎಳೆ ತರಲು ಹೋದವರ ಜತೆ ಮೌನವಾಗಿ ಇದ್ದು ಎಳೆಯ ಉಂಡೆಗಳನ್ನೂ, ಹತ್ತಿಯನ್ನೂ ಕೊಡುತ್ತಾನೆ. ಅದನ್ನು ತೆಗೆದುಕೊಂಡು ಬರುವವರೂ ಸಹ ಮೌನವಾಗಿ ಬರಬೇಕು. ಮಾತನಾಡಿದರೆ ವ್ರತಭಂಗವಾದಂತೆ. ಹೀಗೆ ತೆಗೆದುಕೊಂಡು ಬಂದಂತಹುಗಳನ್ನು ತಂದು ದೇವರ ಜಗುಲಿಯ ಮೇಲಿಟ್ಟು ನೈವೇದ್ಯ ಮಾಡುತ್ತಾರೆ. ಇಷ್ಟೆಲ್ಲಾ ಕಾರ್ಯಕ್ರಮಗಳಾದ ಮೇಲೆ ಮಾತನಾಡಬಹುದು.

ಎಳೆ ತರುವಾಗಲೂ ಸಹ ಅನೇಕ ನಂಬಿಕೆಗಳನ್ನಿಟ್ಟುಕೊಂಡಿದ್ದಾರೆ. ಅವುಗಳು ಇಂತಿವೆ.

ಅ. ಹತ್ತಿಯನ್ನು ತರುವಾಗ ದಾರಿಯಲ್ಲಿ ಬಿದ್ದರೆ ಅಶುಭವಾಗುತ್ತದೆ.

ಆ. ಅದು ಬೇರೆಯವರಿಗೆ ಸಿಕ್ಕರೆ ಅವರಿಗೆ ಶುಭವಾಗುತ್ತದೆ.

ಇ. ಸಿಕ್ಕವರ ಮನೆಯಲ್ಲಿ ಎಳೆಕೊಡುವ ಪದ್ಧತಿ ಪ್ರಾರಂಭವಾಗುತ್ತದೆ.

ಕಪ್ಪು : ಜನಪದರು ತಮ್ಮದೇ ಆದ ರೀತಿ-ರಿವಾಜುಗಳನ್ನಿಟ್ಟುಕೊಂಡಿದ್ದಾರೆ. ಪದ್ಧತಿಗನುಗುಣವಾಗಿ ಯಾವುದೇ ಕೆಲಸವನ್ನು ಮಾಡುವಾಗ ಅವರದ್ದೇ ಆದ ಯೋಜನೆ ಇರುತ್ತದೆ. ಹಾಗೆಯೇ ಇವರೂ ಸಹ ಜೋಕುಮಾರನನ್ನು ಹೊತ್ತುಕೊಂಡು ಊರಿನಲ್ಲಿ ತಿರುಗಾಡುವಾಗ ಅವನ ಪುಟ್ಟಿಯಲ್ಲಿ ಒಂದು ಸಣ್ಣ ಕುಡಿಕೆ ಅಥವಾ ಬಟ್ಟಲಿನಲ್ಲಿ ಕಪ್ಪು ಇರುತ್ತದೆ. ಅಲ್ಲದೇ ಇದರೊಂದಿಗೆ ಅಂಬಲಿ ನುಚ್ಚು ಮತ್ತು ಬೇವಿನ ಸೊಪ್ಪು ಇರುತ್ತದೆ. ಯಾವುದೇ ಊರಿನಲ್ಲಿ ನೋಡಿದರೂ ಸಹ ಇವು ಇದ್ದೇ ಇರುತ್ತವೆ. ಇವುಗಳಿಲ್ಲದೆ ಜೋಕುಮಾರನನ್ನು ಹೆಂಗಸರು ಹೊತ್ತುಕೊಂಡು ಬರುವುದಿಲ್ಲ. ಇವು ಇರಬೇಕೆಂಬ ನಿಯಮ ಇದೆ ಎಂದು ವಕ್ತೃಗಳು ಹೇಳುತ್ತಾರೆ. ಕಪ್ಪನ್ನು ತಯಾರಿಸಲು ಈ ಕೆಳಕಂಡ ಪದಾರ್ಥಗಳನ್ನು ಉಪಯೋಗಿಸುತ್ತಾರೆ. ಅವುಗಳೆಂದರೆ

ಅ. ಒಣಗಿದ ಬಾಳೆ ಎಲೆಗಳು

ಆ. ಇದ್ದಿಲು

ಇ. ಒಣಗಿದ ಬೇವಿನ ಎಲೆಗಳು

ಈ. ಹರಳೆಣ್ಣೆ

ಒಣಗಿದ ಬಾಳೆ ಎಲೆ ಹಾಗೂ ಬೇವಿನ ಎಲೆಗಳನ್ನು ಸುಡುತ್ತಾರೆ. ಸುಟ್ಟ ನಂತರ ಬಂದ ಬೂದಿಯನ್ನು ತೆಗೆದುಕೊಂಡು ಒಂದು ಕುಡಿಕೆ ಅಥವಾ ಬಟ್ಟಲಿನಲ್ಲಿ ಹಾಕುತ್ತಾರೆ. ಇದ್ದಿಲನ್ನು ಚೆನ್ನಾಗಿ ಪುಡಿ ಮಾಡುತ್ತಾರೆ. ಆ ಪುಡಿಯನ್ನು ಜರಡಿ ಹಿಡಿಯುತ್ತಾರೆ. ಅದರಿಂದ ಬರುವ ನುಣ್ಣನೆಯ ಪುಡಿಯನ್ನು ತೆಗೆದುಕೊಂಡು ಬೂದಿಯ ಜತೆಗೆ ಮಿಶ್ರಮಾಡುತ್ತಾರೆ. ಹರಳೆಣ್ಣೆಯನ್ನು ಬೂದಿ ಮತ್ತು ಇದ್ದಿಲಿನ ಪುಡಿಯ ಜತೆ ಸಮಪ್ರಮಾಣದಲ್ಲಿ ಬೆರೆಸುತ್ತಾರೆ. ಒಂದು ಸಣ್ಣ ಕಡ್ಡಿಯಿಂದ ಎಲ್ಲವನ್ನು ಕಲೆಸುತ್ತಾರೆ. ಒಂದೆರಡು ದಿನ ಬಿಟ್ಟರೆ ಎಲ್ಲವೂ ಬೆರೆತು ದ್ರಾವಣವಾಗುತ್ತದೆ. ಈ ಕೆಲಸವನ್ನು ಜೋಕುಮಾರನ ಆಗಮನಕ್ಕಿಂತ ಒಂದೆರಡು ದಿನಗಳ ಮೊದಲು ಮಾಡುವ ಕ್ರಮವನ್ನಿಟ್ಟುಕೊಂಡಿದ್ದಾರೆ.

ಅಂಬಲಿ : ರೈತರು ನೀಡಿದ ಕಾಳುಕಡ್ಡಿಗಳಿಂದ ಅವರು ಅಂಬಲಿಯನ್ನು ತಯಾರಿಸುವರು. ಕೆಲವೊಮ್ಮೆ ಅಂಬಲಿಯನ್ನು ತಯಾರಿಸಲು ದೊಡ್ಡ ಮನೆತನದವರು ಪ್ರತಿ ವರ್ಷ ಇಂತಿಷ್ಟು ಪಡಿಕೊಡುವ ಪದ್ಧತಿಯಿದೆ. ಕೆಲ ಊರುಗಳಲ್ಲಿ ಮಾತ್ರ ಇಂತಹ ವ್ಯವಸ್ಥೆಯಿದೆ. ಅಂಬಲಿ ತಯಾರಿಸಲು ಧಾನ್ಯವನ್ನು ಕೊಟ್ಟರೆ ತಮ್ಮ ಹೊಲದಲ್ಲಿ ಪೈರುಗಳು ಚೆನ್ನಾಗಿ ಬರುತ್ತವೆ ಎಂಬ ನಂಬಿಕೆಯನ್ನು ಹೊಂದಿದ್ದಾರೆ. ಇವುಗಳಿಂದ ಅವರು ಧಾನ್ಯಗಳನ್ನು ಕೊಡುತ್ತಾರೆ. ಜೋಳ, ರಾಗಿ, ಸಜ್ಜೆ... ಮುಂತಾದ ಧಾನ್ಯಗಳನ್ನು ತೆಗೆದುಕೊಂಡು ಮಿಶ್ರಮಾಡಿ ಕುಟ್ಟುತ್ತಾರೆ. ನುಣುಪಾಗುವ ಹಾಗೆ ಕುಟ್ಟದೆ, ಸಣ್ಣನೆಯ ಚೂರು ಚೂರಾಗುವ ಹಾಗೆ ನೋಡಿಕೊಳ್ಳುತ್ತಾರೆ. ನಂತರ ಇವುಗಳನ್ನು ತೆಗೆದುಕೊಂಡು ನೀರಿಗೆ ಹಾಕಿ ಒಲೆಯ ಮೇಲಿಟ್ಟು ಬೇಯಿಸುತ್ತಾರೆ. ಚೆನ್ನಾಗಿ ಕುದಿದು ಗಟ್ಟಿಯಾಗುವ ಹಾಗೆ ನೋಡಿಕೊಳ್ಳುತ್ತಾರೆ. ಆನಂತರ ಅದಕ್ಕೆ ಬೇಕಾಗುವಷ್ಟು ನೀರನ್ನು ಹಾಕಿ ದ್ರಾವಣವನ್ನು ಮಾಡಿಕೊಳ್ಳುತ್ತಾರೆ.

ಅಂತ್ಯ

ನಮ್ಮ ಜಾನಪದ ಪರಂಪರೆಯಲ್ಲಿ ಪ್ರತಿಯೊಂದು ದೈವಗಳ ಪರಿಕಲ್ಪನೆ ಒಂದೊಂದು ತೆರನಾಗಿವೆ. ಅಂತೆಯೇ ದೈವಗಳ ಸ್ವರೂಪವೂ ಸಹ ವಿವಿಧ ಬಗೆಯ ವೈವಿಧ್ಯತೆಗಳಿಂದ ಕೂಡಿದೆ. ಆಯಾ ಸಮುದಾಯಗಳ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಅನನ್ಯತೆ, ಪ್ರಜ್ಞಾಪೂರ್ವಕ ಕಾಳಜಿಗಳೂ ಸಹ ಅದರೊಂದಿಗೆ ಬೆರೆತಿರುತ್ತವೆ. ಅವುಗಳಿಗೆ ಪೂರಕವಾಗಿಯೇ ಜನಪದರು ತಮ್ಮ ಆರಾಧ್ಯ ದೈವಕ್ಕೆ ನಿರ್ದಿಷ್ಟ ಮತ್ತು ನಿಖರವಾದ ಸ್ವರೂಪವನ್ನು ಕೊಟ್ಟದಾರೆ. ಅವರು ಕೊಟ್ಟ ಸ್ವರೂಪವನ್ನು ಮುಂದಿನ ಪೀಳಿಗೆಯವರೂ ಸಹ ಯಾವುದೇ ರೀತಿಯ ಮಾರ್ಪಾಟನ್ನು ಮಾಡಿಕೊಳ್ಳದೆ ಹಾಗೆಯೇ ಪಾಲಿಸಿಕೊಂಡು ಬರುತ್ತಿರುವ ಕ್ರಮ. ಇದು ಹೀಗೆ ಇರಬೇಕು ಎಂಬ ಅಛಲ ಮನೋಭಾವನೆ ಅವರದ್ದಾಗಿರುತ್ತದೆ.

ಸ್ವರೂಪದ ಬಗ್ಗೆ ಅರ್ಥೈಸುವುದಾದರೆ ಯಾವುದೇ ದೈವದ ಬಾಹ್ಯ ರಚನೆ ನೋಡಿದ ಕೂಡಲೇ ತತ್ ಕ್ಷಣವೇ ಓ ಇದು ಇಂತಹದು ಎಂದು ಹೊಳಹು ಎಲ್ಲರಿಗೂ ಬರುವಂತಹುದು. ಎಷ್ಟೋ ಬಾರಿ ಅನೇಕ ಉತ್ಸವಗಳಲ್ಲಿ ನಾನಾ ವಿಧದ ದೈವಗಳ ಮೂರ್ತಿಯನ್ನು ನೋಡುತ್ತಿರುತ್ತೇವೆ. ಅವುಗಳ ಬಗ್ಗೆ ಅಷ್ಟಾಗಿ ಕೂಲಂಕಷವಾದ ವಿಚಾರ ವಿನಿಮಯ ಮಾಡಿಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಆದರೆ ನೋಡಿದ ತಕ್ಷಣ ಯಾವುದೋ ದೈವ ಎಂಬ ಕಲ್ಪನೆ ಎಲ್ಲರ ಮನದಲ್ಲಿ ಬರುತ್ತದೆ. ಸ್ವರೂಪದ ದೃಷ್ಟಿಕೋನದಿಂದ ನಾವು ಗುರುತಿಸುತ್ತೇವೆ. ಪ್ರತಿಯೊಂದು ದೈವಗಳ ರಚನೆಯೇ ಈ ಸ್ವರೂಪದಲ್ಲಿ ಹುದುಗಿರುತ್ತದೆ. ಜನಸಾಮಾನ್ಯರೂ ಸಹ ಎಲ್ಲಾ ದೈವಗಳನ್ನು ಗುರುತಿಸುವುದು ಅವುಗಳಿಗಿರುವ ಒಂದು ನಿರ್ದಿಷ್ಟ ಸ್ವರೂಪದ ನೆರವಿನಿಂದಲೇ.

ಭಾರತದಲ್ಲಿ ದೇವರ ಸ್ವರೂಪ ಮತ್ತು ಅವುಗಳ ಪರಿಕಲ್ಪನೆ ತಮ್ಮದೇ ಆದ ರೀತಿ-ನೀತಿಗಳನ್ನು ಹೊಂದಿವೆ. ವಿಶ್ವದಾದ್ಯಂತವಿರುವ ದೇವರ ಸ್ವರೂಪಗಳಿಗಿಂತ ಭಿನ್ನವಾಗಿ ಇಲ್ಲಿ ಕಂಡುಬರುತ್ತವೆ. ಸನಾತನ ಧರ್ಮದಲ್ಲಿಯಂತೂ ಹೇರಳವಾಗಿ ಕಂಡುಬರುತ್ತವೆ. ಇಲ್ಲಿರುವ ದೈವಗಳಿಗೆ ಸಿಗುವ ಸ್ಥಾನ-ಮಾನಗಳು ಹೆಚ್ಚು.

"ದೈವ ಅಥವಾ ದೇವರು ಒಂದು ಸಮಾಜದ ವೈಚಾರಿಕ ವಿಕಾಸದ ಜೊತೆ ಜೊತೆಯಲ್ಲಿಯೇ ಬೆಳೆದು ಬಂದ, ಸಮಾಜದ ಒಂದು ಅವಿಭಾಜ್ಯ ಅಂಗ. ಸಮಾಜ ಮತ್ತು ದೇವರು ಇವೆರಡನ್ನೂ ಪ್ರತ್ಯೇಕಿಸಿ ನೋಡುವುದು ಅಸಾಧ್ಯವಾದ ಮಾತು. ಒಂದು ಅರ್ಥದಲ್ಲಿ ಸಮಾಜಕ್ಕೆ ತನ್ನದೇ ಆದ ನಿರ್ದಿಷ್ಟ ಚರಿತ್ರೆ ಇರಬಹುದೆನೋ, ಆದರೆ ದೇವರಿಗೆ ತನ್ನದೇ ಆದ ಸ್ವಂತ ಚರಿತ್ರೆಯೆಂಬುದಿಲ್ಲ. ಸಮಾಜವನ್ನು ಹೊರತಾಗಿಸಿ ಅದು ಸ್ವಯಂ ಪೂರ್ಣವಲ್ಲ. ನಮ್ಮ ಸಮಾಜಗಳಲ್ಲಿ ದೈವದ ವಿಕಾಸ ಕುರಿತು ಒಂದು ನಿಶ್ಚಿತ ಪ್ರಮೇಯ ರೂಪದ ವಾದಗಳಿಲ್ಲ. ಬಹುಶಃ ಪ್ರಪಂಚದ ಎಲ್ಲ ಕಡೆಗೂ ದೈವದ ಕುರಿತು ಇದೇ ದೃಷ್ಟಿಕೋನವಿರಬೇಕು."[೧೪]

ಏಳು ದಿನಗಳಲ್ಲಿ ಜೋಕುಮಾರನನ್ನು ಊರಲ್ಲೆಲ್ಲಾ ಸುತ್ತಾಡಿಸುತ್ತಾರೆ. ಕೊನೆಯ ದಿನ ಅಂದರೆ ಅನಂತನ ಹುಣ್ಣಿಮೆಯ (ಜೋಕುಮಾರನ ಹುಣ್ಣಿಮೆ, ಹೊಲೆಯರ ಹುಣ್ಣಿಮೆ ಎಂತಲೂ ಪರ್ಯಾಯವಾಗಿ ಕರೆಯುತ್ತಾರೆ) ದಿನ ಕತ್ತಲಾದ ಮೇಲೆ ಜೋಕುಮಾರನ ಪುಟ್ಟಿಯನ್ನು ತೆಗೆದುಕೊಂಡು ಹರಿಜನರ ಓಣಿಗೆ ಹೋಗುತ್ತಾರೆ. ಈ ಪದ್ಧತಿ ಎಲ್ಲಾ ಊರಿನಲ್ಲಿಯೂ ಸಾರ್ವತ್ರಿಕವಾಗಿದೆ. ಇದನ್ನು ಹಿಂದಿನಿಂದಲೂ ಅನುಸರಿಸಿಕೊಂಡು ಬಂದಿದ್ದಾರೆ. ಹರಿಜನರ ಓಣಿಯಲ್ಲಿ ಪುಟ್ಟಿಯನ್ನಿಟ್ಟು ಸ್ವಲ್ಪ ಈಚೆ ಬರುತ್ತಾರೆ. ಆ ಓಣಿಯ ಹೆಂಗಸರು ಮತ್ತು ಗಂಡಸರು ಅವನ ಪುಟ್ಟಿಯ ಸುತ್ತಲೂ ತಿರುಗುತ್ತಾರೆ. ಕೆಲವೆಡೆಗಳಲ್ಲಿ ಚಪ್ಪಾಳೆ ತಟ್ಟುತ್ತಾ ಅವನ ಸುತ್ತ ಸುತ್ತುತ್ತಾರೆ. ಆ ನಂತರ ಹರಿಜನರ ಓಣಿಯಲ್ಲಿ ಇಂತಿಷ್ಟು ದವಸಧಾನ್ಯವನ್ನು ತೆಗೆದುಕೊಳ್ಳುತ್ತಾರೆ. ಅವರು ನೀಡಿದ ಪ್ರತಿಯೊಂದನ್ನೂ ಜೋಕುಮಾರನನ್ನು

ಹೊರುವವರು ಸ್ವೀಕರಿಸಲೇಬೇಕು. ಜೋಕುಮಾರನು ಸಾಯುವ ದಿನ ಅಂದರೆ ಹುಣ್ಣಿಮೆಯ ದಿನ ಹೊಲೆಯರಿಗೆ ದೊಡ್ಡ ಹಬ್ಬವಾಗಿರುತ್ತದೆ. ಈ ಹಬ್ಬವನ್ನು ಸಂಭ್ರಮ-ಸಡಗರಗಳಿಂದ ಅವರು ಆಚರಿಸುತ್ತಾರೆ. ಹರಿಜನರ ಕೇರಿಯಲ್ಲಿರುವ ಮುತ್ತೈದೆಯರು ಜೋಕುಮಾರನನ್ನು ನೋಡುತ್ತಾರೆ. ವಿಧವೆಯರು ಸಾಯುವ ಸಂದರ್ಭದಲ್ಲಿ ತಮ್ಮ ಓಣಿಗೆ ಬಂದಾಗ ಮಾತ್ರ ಇವನ ದರ್ಶನ ಮಾಡುತ್ತಾರೆ. ಜೋಕುಮಾರನು ಕಾಮಾಂಧನಾಗಿರುವ ನಿಮಿತ್ತ ಅನೇಕ ಹೊಲೆಯ ಸೂಳೆಯರ ಸಂಪರ್ಕ ಮಾಡಿರುತ್ತಾನೆ. ಇವರನ್ನು 'ಜೋಕುಮಾರನ ಸೂಳೆಯರು' ಎಂದು ಇಂದಿಗೂ ಕರೆಯುತ್ತಿದ್ದಾರೆ. ಎಲ್ಲಿಗೇ ಹೋಗಲಿ ಅವನು ಘಟಿಂಗತನವನ್ನು ಮುಂದುವರೆಸುತ್ತಾನೆ. ಜೋಕುಮಾರನ ಸೂಳೆಯರು ತಮ್ಮ ಓಣಿಗೆ ಜೋಕುಮಾರನು ಬಂದ ನಂತರವೇ ಅವನ ಮುಖವನ್ನು ನೋಡಬೇಕಿರುತ್ತದೆ. ಇದಕ್ಕಿಂತ ಮುಂಚಿತವಾಗಿ ಅವರು ಎಲ್ಲಿಯೂ ಅವನ ದರ್ಶನವನ್ನು ಮಾಡುವಂತಿಲ್ಲ. ಈ ಪದ್ಧತಿಯನ್ನು ಅವ್ಯಾಹತವಾಗಿ ಮುಂದುವರೆಸಿಕೊಂಡು ಬಂದಿರುತ್ತಾರೆ.

ಜೋಕುಮಾರನ ಸೂಳೆಯರು ಬಂದು ಅಳಲನ್ನು ತೆಗೆದುಕೊಳ್ಳುವಾಗ ಸಂಪ್ರದಾಯದಂತೆ ಜೋಕುಮಾರನನ್ನು ಹೊರುವ ಹೆಂಗಸರು ಅವನ ಬಗ್ಗೆ ಹಾಡುತ್ತಾರೆ. ಅವರು ಹಾಡುತ್ತಿರುವಾಗ ಸೂಳೆಯರು ಅವನಿಗೆ ಪೂಜಿಸುತ್ತಾರೆ. ಅವನ ಬಳಿಯಿರುವ ಕಪ್ಪನ್ನು ತಮ್ಮ ಹಣೆಗೆ ಹಚ್ಚಿಕೊಳ್ಳುವ ಸಂಪ್ರದಾಯವಿದೆ. ಕೊನೆಯ ದಿವಸ (ಹುಣ್ಣಿಮೆಯ ದಿನ) ಅವರಿಗೆ ಸಂಕಟವುಂಟಾಗುತ್ತದೆ. ಜೋಕುಮಾರನ ಪುಟ್ಟಿಯಲ್ಲಿರುವ ಬೇವಿನ ಸೊಪ್ಪು, ಅಂಬಲಿ, ಕಪ್ಪನ್ನು ತೆಗೆದುಕೊಳ್ಳುತ್ತಾರೆ.

ಎಲ್ಲಾ ರೀತಿಯ ಪೂಜಾ ಕ್ರಿಯೆಗಳು ಮುಗಿದ ನಂತರ ಜೋಕುಮಾರನ ಪುಟ್ಟಿಯ ಸುತ್ತಲೂ ಸಣ್ಣದಾದ ಒಂದು ಮುಳ್ಳಿನ (ಕೊನೆ)ರಂಬೆಯನ್ನು ಇಡುತ್ತಾರೆ. ಹೊಲೆಯರ ಓಣಿಯ ಗಂಡಸರು ಮತ್ತು ಹೆಂಗಸರು ಜೋಕುಮಾರನ ಸುತ್ತಲೂ ಸುತ್ತುತ್ತಾರೆ. ಸ್ವಲ್ಪ ಸಮಯದ ನಂತರ ಹೆಂಗಸರು ಸುತ್ತುವಾಗ ಅವರ ಸೀರೆಯ ಸೆರಗು ಅಲ್ಲಿ ಇಟ್ಟಿರುವ ಮುಳ್ಳಿಗೆ ತಾಗುತ್ತದೆ. ಜೋಕುಮಾರನು ತಮ್ಮ ಹೆಂಗಸರ ಸೀರೆ ಸೆರಗನ್ನು ಹಿಡಿದು ಎಳೆದನೆಂಬ ಭಾವನೆಯಿಂದ ಅಲ್ಲಿರುವ ಗಂಡಸರು ತಮ್ಮಲ್ಲಿರುವ ಆಯುಧ 'ಉಳಿ'ಯಿಂದ ಜೋಕುಮಾರನ ತಲೆಗೆ ಮುಟ್ಟಿಸುತ್ತಾರೆ. ಇದರರ್ಥ ಜೋಕುಮಾರನನ್ನು ಕೊಲ್ಲುತ್ತಾರೆ. ಕೆಲವೆಡೆಗಳಲ್ಲಿ ಸೂಳೆಯರು ತಮ್ಮಲ್ಲಿರುವ ಒನಕೆಗಳಿಂದ ಜೋಕನ ತಲೆಯನ್ನು ಜಜ್ಜುತ್ತಾರೆ. ಇದರಿಂದಾಗಿ ಅವನು ಸಾವನ್ನಪ್ಪುತ್ತಾನೆ ಎಂಬ ನಂಬಿಕೆ ಅವರಲ್ಲಿ ಇಂದಿಗೂ ಉಳಿದುಕೊಂಡು ಬಂದಿದೆ. ಜೋಕುಮಾರನ ಸಾವು ಹೆಣ್ಣಿನ ಚಪಲದಿಂದಲೇ ಸಂಭವಿಸುತ್ತದೆ. ಈ ಸಂಪ್ರದಾಯದ ಆಚರಣೆಯನ್ನು ಎಲ್ಲಾ ಊರುಗಳಲ್ಲಿಯೂ ಆಚರಿಸಿಯೇ ತೀರುತ್ತಾರೆ.

ಈ ಎಲ್ಲಾ ಘಟನೆಗಳು ಜರುಗಿದ ನಂತರ ಗಂಗಾಮತಸ್ಥರು ಅವನ ಪುಟ್ಟಿಯನ್ನು ಹರಿಜನರ ಓಣಿಯಿಂದ ತಮ್ಮ ಮನೆಗೆ ತೆಗೆದುಕೊಂಡು ಹೊರಡುತ್ತಾರೆ. ಅವರ ಮನೆಯಲ್ಲಿ ಅವನಿಗೆ ವಿಶೇಷವಾದ

ಪೂಜೆಯನ್ನು ಮಾಡುತ್ತಾರೆ. ಅವನ ಹಣೆಗೆ (ದೊಡ್ಡ) ದಪ್ಪವಾಗಿ ಕಾಣುವಂತೆ ವಿಭೂತಿಯನ್ನು ಹಚ್ಚಿ, ಕುಂಕುಮ ಮತ್ತು ಅರಿಶಿಣದಿಂದ ಅವನ ಮುಖಕ್ಕೆ ಸವರುತ್ತಾರೆ. ಬೇವಿನ ಸೊಪ್ಪನ್ನು ತಂದು ಪುಟ್ಟಿಯ ತುಂಬೆಲ್ಲ ಹರಡುತ್ತಾರೆ. ಗಂಧದ ಕಡ್ಡಿ(ಊದುಬತ್ತಿ)ಗಳಿಂದ ಅವನಿಗೆ ಬೆಳಗುತ್ತಾರೆ. ಅವನಿಗೆ ನೈವೇದ್ಯವನ್ನು ಹಿಡಿಯುತ್ತಾರೆ. ಮೊಸರನ್ನ, ರೊಟ್ಟಿ, ಪುಂಡಿಪಲ್ಲೆ ಮುಂತಾದ ಆಹಾರವನ್ನು ಬಳಸುತ್ತಾರೆ. ಆ ಕೊನೆಯ ದಿನ ಇವನಿಗೆ ವಿಶೇಷವಾಗಿ ಪೂಜೆ-ಪುನಸ್ಕಾರಗಳು ನಡೆಯುತ್ತವೆ. ಕೊನೆಯ ದಿನ ಇವನನ್ನು ನೋಡಿದವರಿಗೆ ಹೆದರಿಕೆಯಾಗುವ ಹಾಗೆ ಇವನನ್ನು ಅಲಂಕರಿಸಿರುತ್ತಾರೆ. ರೌದ್ರಾವತಾರದಲ್ಲಿ ಇವನು ಕಾಣಿಸುವ ಹಾಗೆ ಅವರು ನೋಡಿಕೊಳ್ಳುತ್ತಾರೆ.

ಮಧ್ಯರಾತ್ರಿಯಲ್ಲಿ ಇವನನ್ನು ನೀರಿನಲ್ಲಿ ವಿಸರ್ಜಿಸಲು ತೆಗೆದುಕೊಂಡು ಹೊರಡುತ್ತಾರೆ. ಮಧ್ಯರಾತ್ರಿಯೇ ಆಗಬೇಕು. ಏಕೆಂದರೆ ಜೋಕನನ್ನು ತೆಗೆದುಕೊಂಡು ಹೋಗುವಾಗ ಯಾರೂ ಕೂಡ ನೋಡುವಂತಿಲ್ಲ. ಅವನನ್ನು ತೆಗೆದುಕೊಂಡು ಹೊರಟಾಗ ಮಾರ್ಗದಲ್ಲಿ ಯಾರೂ ಎದಿರಾಗಬಾರದು. ಯಾರಾದರೂ ಎದಿರಾದರೆ ಅವರಿಗೆ ಅಪಾಯ ಕಟ್ಟಿಟ್ಟದ್ದು. ಅವರಿಗೆ ಸಾವು ಬರುತ್ತದೆ ಎಂಬುದಾಗಿ ಇವರು(ವಕ್ತೃ) ಹೇಳುತ್ತಾರೆ. ಬಹುಶಃ ಯಾರೂ ನೋಡಬಾರದು ಎಂಬ ತಿಳಿವಳಿಕೆ ಇವರಿಗಿರಬಹುದೆಂದು ತೋರುತ್ತದೆ. ತೆಗೆದುಕೊಂಡು ಹೊರಟಾಗ ಮಾರ್ಗದ ಮಧ್ಯದಲ್ಲಿ ಹಿಂದಕ್ಕೆ ತಿರುಗಿ ನೋಡದಂತೆ ಹೊತ್ತೊಯ್ಯಬೇಕು. ಕನಿಷ್ಠ ಪಕ್ಷ ಇಬ್ಬರು ಧೈರ್ಯಶಾಲಿ ಗಂಡಸರು ಇವನನ್ನು ಹೊತ್ತುಕೊಂಡು ಹೋಗುತ್ತಾರೆ. ಅವರ ಕೈಯಲ್ಲೊಂದು ಚಿಕ್ಕ ದೊಣ್ಣೆಯಿರುತ್ತದೆ. ದಾರಿಯಲ್ಲಿ ಯಾವುದೇ ರೀತಿಯ ಸಪ್ಪಳವಾದರೆ ಹಿಂದಕ್ಕೆ ನೋಡಬಾರದು. ಇಂತಹ ಅನೇಕ ನಿಷಿದ್ಧಗಳಿವೆ. ಹೀಗೆ ಅವರು ತೆಗೆದುಕೊಂಡು ಹೋಗಿ ಆಯಾ ಊರಿನ ಬಾವಿ ಅಥವಾ ಕೆರೆಯ ದಡದಲ್ಲಿಟ್ಟು ಪೂಜಿಸುತ್ತಾರೆ. ಒಂದೆರಡು ನಿಮಿಷ ಮನದಲ್ಲಿ ಧ್ಯಾನ ಮಾಡುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳು ಮುಗಿದ ಮೇಲೆ ಜೋಕುಮಾರನನ್ನು ನೀರಿಗೆ(ಬಿಡುತ್ತಾರೆ) ವಿಸರ್ಜಿಸುತ್ತಾರೆ. ವಿಸರ್ಜಿಸುವಾಗಲೂ ಸಹ ಚಾಚೂ ತಪ್ಪದೆ ಕೆಲವು ಅಂಶಗಳನ್ನು ಅವರು ತಮ್ಮ ಗಮನದಲ್ಲಿಟ್ಟುಕೊಂಡು ಪಾಲಿಸುತ್ತಾರೆ.

ಕೆಲವೆಡೆಗಳಲ್ಲಿ ಜೋಕುಮಾರನನ್ನು ಕೆರೆಯ ದಡದಲ್ಲಿ ಅಗಸರು ಬಟ್ಟೆ ಒಗೆಯುವ ಕಲ್ಲಿನ ತಳಭಾಗದಲ್ಲಿಡುತ್ತಾರೆ. ಅವರ ನಿಯಮದಂತೆ ಇದನ್ನು ಪಾಲಿಸಿಕೊಂಡು ಬಂದಿರುತ್ತಾರೆ. ಅವರ ಜತೆಗೆ ತಂದಿರುವ ಹೂವು, ದವನ, ಪತ್ರೆ ಇತ್ಯಾದಿಗಳನ್ನು ಕಲ್ಲಿನ ಬುಡಕಿಟ್ಟು ಮುಚ್ಚುತ್ತಾರೆ. ಮುಚ್ಚಿದ ಮೇಲೆ ಅವರು ಹಿಂತಿರುಗಿ ನೋಡುವುದಿಲ್ಲ. ಹಾಗೆಯೇ ಮುಖ ಮಾಡಿಕೊಂಡು ಬರುತ್ತಾರೆ.

ಕ್ಷೇತ್ರಕಾರ್ಯ ಸಂದರ್ಭದಲ್ಲಿ ಈ ಮೇಲ್ಕಂಡ ಎಲ್ಲಾ ಪ್ರಶ್ನೆಗಳನ್ನು ಆಲಿಸಿದ ನಂತರ ಯಾಕೆ ಹಿಂತಿರಿಗಿ ನೋಡಬಾರದು? ಮಧ್ಯರಾತ್ರಿಯಲ್ಲಿ ಅವನನ್ನು ಹೊತ್ತೊಯ್ಯುತ್ತೀರಿ ಎಂದು ಕೇಳಿದ್ದಕ್ಕೆ ಅವರು (ವಕ್ತೃ) ಈ ರೀತಿಯಾಗಿ ಹೇಳಿದರು. ಹಿಂತಿರುಗಿ ನೋಡಬಾರದು. ಏಕೆಂದರೆ ನಾವು ನೀರಿನಲ್ಲಿ ಬಿಡುವ

ಸಂದರ್ಭದಲ್ಲಿ ವಿಚಿತ್ರ ಸನ್ನಿವೇಶಗಳು ಜರುಗುತ್ತವೆ. ಒಂದು ರೀತಿಯ ಸಪ್ಪಳ ಕೇಳಿಸುತ್ತದೆ. ಆಗ ಯಾರೂ ಕೂಡ ತಿರುಗಿ ನೋಡಬಾರದು. ಜೋಕುಮಾರನು ಒಮ್ಮೆಲೆ ಆಕಾಶ, ಭೂಮಿಗೆ ಏಕವಾಗಿ ನಿಲ್ಲುತ್ತಾನೆ. ಅವನು ದೇವಲೋಕಕ್ಕೆ ಹೋಗುತ್ತಾನೆ. ಇದನ್ನು ನೋಡಬಾರದು ಅವನು ರೌದ್ರವಾಗಿ ಇರುತ್ತಾನಂತೆ ನಮ್ಮ ಹಿರಿಯರು ಆಗಾಗ ಹೇಳುತ್ತಿದ್ದರು. ಹಿಂದೊಮ್ಮೆ ಇದನ್ನು ಪರೀಕ್ಷಿಸಿ ನೋಡಿಯೇ ಬಿಡೋಣ ಎಂದು ಒಬ್ಬ ವ್ಯಕ್ತಿ ಕಳ್ಳತನದಿಂದ ಅವರನ್ನು (ಜೋಕುಮಾರನನ್ನು ಹೊತ್ತೊಯ್ಯುವಾಗ) ಹಿಂಬಾಲಿಸಿ, ಅವರು ರಹಸ್ಯವಾಗಿ ಮಾಡುವ ಎಲ್ಲಾ ವಿಧಿಕ್ರಿಯೆಗಳನ್ನು ನೋಡುತ್ತಿದ್ದನೆಂದೂ, ಒಮ್ಮೆಲೇ ಹಾ ಎಂದು ಚೀರಿ ಬಾಯಲ್ಲಿ ರಕ್ತವನ್ನು ಕಾರಿ ಸತ್ತನೆಂತಲೂ ಹೇಳುತ್ತಿದ್ದರು. ನಾವುಗಳು ಯಾರೂ ಸಹ ಅದನ್ನು ಪರೀಕ್ಷಿಸಲು ಹೋಗುವುದಿಲ್ಲ ಎಂದರು.

ಬಹುಶಃ ತಾವು ಮಾಡುವ ವಿಧಿ ವಿಧಾನಗಳನ್ನು ಯಾರೂ ನೋಡದಂತಿರಲಿ ಎಂಬ ನಿಲುವನ್ನು ಅವರು ಹೊಂದಿರಬೇಕು. ಇವೆಲ್ಲವುಗಳನ್ನು ಪರಿಶೀಲಿಸಿದಾಗ ನಮಗೆ ಇವರು ಮೌಢ್ಯಕ್ಕೆ ಒಳಗಾಗಿದ್ದಾರೆ ಎಂದು ಅನ್ನಿಸುತ್ತದೆ. ಆದರೆ ಈ ನಂಬಿಕೆಗಳನ್ನು ಅನೇಕ ವರುಷಗಳಿಂದ ಪಾಲಿಸಿಕೊಂಡು ಬಂದಿರುವ ಅವರಿಗೆ ಇವು ಮೂಢ ನಂಬಿಕೆಗಳೆಂದು ಅನ್ನಿಸಿರುವುದಿಲ್ಲ.

ಡಾ.ದೇ. ಜವರೇಗೌಡರು ತಮ್ಮ 'ಜಾನಪದ ಅಧ್ಯಯನ'ದಲ್ಲಿ ನಂಬಿಕೆಗಳ ಬಗ್ಗೆ ಮನೋಜ್ಞವಾಗಿ ವಿವರಿಸಿದ್ದಾರೆ. ''ಮಾನವನ ವೈಜ್ಞಾನಿಕ ಮತಿ ಪ್ರಖರವಾದಂತೆಲ್ಲ ಮೂಢನಂಬಿಕೆಗಳು ಕಡಿಮೆಯಾಗುವುದು ಸಹಜವೇ. ಆದರೆ ಅವುಗಳಲ್ಲಿ ಎಲ್ಲವೂ ಮಾಯವಾಗುವುದಿಲ್ಲ. ಕೆಲವು ವಿಸ್ಮೃತಿಯ ಗರ್ಭದಲ್ಲಿ ಮರೆಯಾಗುತ್ತವೆ; ಹಲವು ಉಡ ಹಿಡಿತದಂತೆ ಸಮಾಜಕ್ಕೆ ಅಂಟಿಕೊಂಡಿರುತ್ತವೆ; ಜತೆಗೆ ಹೊಸವು ಬಂದು ಸೇರಿಕೊಳ್ಳುತ್ತವೆ. ವಿಜ್ಞಾನ ಯುಗದಲ್ಲಿ ಹೊಸ ಸಟೆನಂಬಿಕೆಗಳಿಗೆ ಅವಕಾಶವಿದೆಯೇ ಎಂದು ಪ್ರಶ್ನಿಸಬಹುದು. ಅವಕಾಶವಿದೆ ಎಂದು ಖಚಿತವಾಗಿ ಹೇಳಬಹುದು. ಸೃಷ್ಟಿಯ ಸಕಲ ರಹಸ್ಯಗಳು ಮಾನವ ಮತಿಯ ಹಿಡಿತಕ್ಕೆ ಸಿಕ್ಕಿಲ್ಲ. ವೈಜ್ಞಾನಿಕ ಪ್ರಯೋಗಗಳಿಗೆ ಅವು ನಿಲುಕುವ ತನಕ ಮಾನವ ಅವುಗಳ ಬಗೆಗೆ ಆಶ್ಚರ್ಯ ವ್ಯಕ್ತಪಡಿಸುತ್ತಾನೆ. ತನಗೆ ತೋರಿದಂತೆ ವಿವರಣೆ ನೀಡುತ್ತಾನೆ. ಅಷ್ಟೇ ಅಲ್ಲ ದಿಟ ನಂಬಿಕೆ ಯಾವುದು ಸಟೆ ನಂಬಿಕೆ ಯಾವುದು ಎನ್ನುವುದರ ಬಗೆಗೂ ಈಗ ಇದಮಿತ್ಥಂ ಎನ್ನುವಂತಿಲ್ಲ. ತಾರ್ಕಿಕವಾಗಿ ವೈಜ್ಞಾನಿಕ ಮತಿ ಸಂಶೋಧನೆ ನಡೆಸಿದ್ದಾದರೆ ಕೆಲವು ಮೂಢನಂಬಿಕೆಗಳು ದಿಟದ ನಂಬಿಕೆಗಳಾಗಿ ಪರಿಣಮಿಸುವ ಸಂಭವವುಂಟು. ವಿಜ್ಞಾನ ಅದ್ಭುತವಾಗಿ ಬೆಳೆದಿರುವ ಪಾಶ್ಚಾತ್ಯ ಸಮಾಜದಲ್ಲಿಯೇ ಭೂತ ಪ್ರೇತಗಳ ಬಗ್ಗೆ, ಭವಿಷ್ಯವಾದಿಗಳ ಬಗ್ಗೆ ವಿಶ್ವಾಸವುಂಟು.''[೧೫]

ಹಾಗೆಯೇ ಮುಂದುವರೆದು ''ಆದಿಮಾನವನ ಮಾನಸಿಕ ಮತ್ತು ಆಧ್ಯಾತ್ಮಿಕ ಜೀವನ ಪ್ರಾಥಮಿಕಾವಸ್ಥೆಯ ಭೌತ ವಿಜ್ಞಾನವನ್ನವಲಂಬಿಸಿದ್ದರಿಂದ ಅವನು ಮೂಢ ನಂಬಿಕೆಗಳನ್ನವಲಂಬಿಸಿದ್ದು ಹೆಚ್ಚಲ್ಲ; ಆದರೆ

ಆಧುನಿಕ ವಾತಾವರಣದಲ್ಲಿ ಬೆಳೆದ ಜನರನ್ನು ನೋಡುವಾಗ ಅವರ ವಿಚಾರ ದೂರವಾದ ನಂಬಿಕೆಗಳು ಅಚ್ಚರಿಯನ್ನುಂಟು ಮಾಡುತ್ತವೆ."[೧೬]

"ಒಂದು ಕಡೆ ಮೂಢನಂಬಿಕೆ ಮೂಡಿತೆಂದರೆ ಅದು ಸಾಂಕ್ರಾಮಿಕ ರೋಗದಂತೆ ಕ್ಷಿಪ್ರವಾಗಿ ಊರಿಂದೂರಿಗೆ, ದೇಶದಿಂದ ದೇಶಕ್ಕೆ ಹರಡುತ್ತದೆ. ಅವು ಜಾತಿ ವರ್ಣಗಳನ್ನು, ಸಾಮಾಜಿಕ ವ್ಯವಸ್ಥೆಗಳನ್ನು, ಮತಭಾಷೆಗಳ ಕೋಟೆಗಳನ್ನು, ರಾಜಕೀಯ ಹಾಗೂ ಭೌಗೋಳಿಕ ಗಡಿಗಳನ್ನು, ವೈಜ್ಞಾನಿಕ ಪ್ರಯೋಗ ಶಾಲೆಗಳನ್ನು ಭೇದಿಸಿಕೊಂಡು ಮುನ್ನುಗ್ಗುತ್ತವೆ."[೧೭]

"ಮಾನವನ ಬದುಕು ನಂಬಿಕೆಗಳನ್ನು ಆಧರಿಸಿಯೇ ರೂಪುಗೊಂಡಿರುತ್ತದೆ. ವ್ಯಕ್ತಿಯಿಂದ ವ್ಯಕ್ತಿಗೆ, ಜನಾಂಗದಿಂದ ಜನಾಂಗಕ್ಕೆ ಕೆಲಸ ಮಾಡುವ ವಿಧಾನ, ಗ್ರಹಿಕೆ ಕಲ್ಪನಾಶಕ್ತಿ, ಆಲೋಚನಾ ಕ್ರಮಗಳ ಆಧಾರದ ಮೇಲೆ ಭಿನ್ನಭಿನ್ನವಾದ ನಂಬಿಕೆಗಳು ಆಚರಣೆಯಲ್ಲಿರುತ್ತವೆ. ಸಮಷ್ಠಿ ಅಭಿವ್ಯಕ್ತಿಯ ಮಾಧ್ಯಮಗಳಾದ ನಂಬಿಕೆಗಳು ಸಮಾಜದ ಕನಿಷ್ಠ ಘಟಕವಾಗಿರುವ ವ್ಯಕ್ತಿಯ ಮನಸ್ಸನ್ನು ಪ್ರಜ್ಞಾ ವ್ಯವಸ್ಥೆಯಲ್ಲಿಯೋ ಅಥವಾ ಅಪ್ರಜ್ಞಾವಸ್ಥೆಯಲ್ಲಿಯೋ ಪ್ರವೇಶಿಸಿ ಬರುತ್ತವೆ. ಒಂದು ಜನಾಂಗವು ಹಲವಾರು ವಿಧಾನಗಳ ಮೂಲಕ ತನ್ನ ಒಡಲಲ್ಲಿರುವ ನಂಬಿಕೆಗಳನ್ನು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾಯಿಸುತ್ತದೆ. ಅದರ ಪಾಲನೆಗೆ ಒತ್ತಡವನ್ನು ಹೇರುತ್ತದೆ. ಸಂಪ್ರದಾಯ ನಿಷ್ಠ ಜನರು, ಅವರುಗಳ ವಾಹಕರು ಮತ್ತು ಪಾಲಕರೂ ಆಗಿರುತ್ತಾರೆ. ಮಾನವನ ಆಸೆ, ಆಕಾಂಕ್ಷೆ, ಭೀತಿ ಮೊದಲಾದವುಗಳು, ನಂಬಿಕೆಗಳ ಉಗಮ ಮತ್ತು ಬೆಳವಣಿಗೆಗೆ ಕಾರಣವೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ನಂಬಿಕೆಗಳು ಜನಸಮುದಾಯದಲ್ಲಿ ಬೇರು ಬಿಟ್ಟಿರುವ ಜನಪದ ಪ್ರಕಾರವಾಗಿದೆ."[೧೮]

ಘಟಿಂಗತನದಿಂದ ಹೆಸರಾದ ಜೋಕುಮಾರನು ಅನಂತನ ಹುಣ್ಣಿಮೆಯ ದಿನದಂದು ಹರಿಜನರ ಓಣಿಯಲ್ಲಿ ಅವರಿಂದ ತಲೆಗೆ ಒದಿಸಿಕೊಂಡು ಅಲ್ಲಿಯೇ ಸಾವನ್ನಪ್ಪುತ್ತಾನೆ. ಅತಿಯಾದ ಕಾಮುಕತನವು ಅವನಿಗೆ ಮುಳುವಾಗುತ್ತದೆ. ಎಸ್.ಎಸ್.ಹಿರೇಮಠ ಅವರು ಹೀಗೆ ಹೇಳಿದ್ದಾರೆ. "ಕಾಮ ಮತ್ತು ಜೋಕುಮಾರ ಹಬ್ಬಗಳು ಹೊಲೆಮಾದಿಗರಿಗೆ ನಿಕಟವಾಗಿ ಸಂಬಂಧಿಸಿವೆ. ಎರಡು ಪುರುಷ ಶಕ್ತಿಗಳನ್ನು ಫಲವೃದ್ಧಿಗಾಗಿ, ಹೊಲೆಯರು ಬಲಿ ಕೊಡುವ ಆಶಯ ಈ ಹಬ್ಬಗಳಲ್ಲಿದೆ. ಆದರೆ ಹೊಲೆ ಮಾದಿಗರ ಸಾಮಾಜಿಕ ಹೀನಸ್ಥಿತಿಯಿಂದಾಗಿ ಸಾಂಕೇತಿಕ ರೂಪದಲ್ಲಿ ಈ ಆಚರಣೆಯುಳಿದಿದೆ."[೧೯]

ಜೋಕುಮಾರನು ಸತ್ತ ಮರುದಿನ ರೈತಾಪಿವರ್ಗಕ್ಕೆ ಸೇರಿದ ಕುಟುಂಬಗಳು ಅಂಬಲಿಯನ್ನು ಮನೆಯಲ್ಲಿ ತಯಾರಿಸುತ್ತಾರೆ. ಅಂಬಲಿ ಮತ್ತು ಅಳಲುಗಳೆರಡನ್ನೂ ಬೆರೆಸಿ ತಮ್ಮ ಹೊಲ-ಗದ್ದೆಗಳ ಸುತ್ತ ಚರಗವನ್ನು ಚೆಲ್ಲುತ್ತಾರೆ. ಇದರರ್ಥ ಸತ್ತ ಜೋಕುಮಾರನಿಗೆ ದಿನಕರ್ಮ ಮಾಡುವುದೇ

ಆಗಿರುತ್ತದೆ. ಅವನು ಸತ್ತ ಮೇಲೆ ಚರಗವನ್ನು ಚೆಲ್ಲಿದರೆ ತಮ್ಮ ಪೈರುಗಳಿಗೆ ಹುಲುಸು ಬರುತ್ತದೆ ಎಂಬ ಭಾವನೆ ಅವರದು. ಅವರು ಹೊಲದಲ್ಲಿ ಚರಗವನ್ನು ಚೆಲ್ಲುವಾಗ 'ಪೊಲಿ ಪೊಲಿ', 'ಹೂಲ್ ಹೂಲಿಗ್ಯ' ಎಂದು ಹೇಳುತ್ತಿರುತ್ತಾರೆ. ಇದರರ್ಥ ಪೈರುಗಳು ಇಮ್ಮಡಿಯಾಗಿ ಬೆಳೆಯಲಿ ಎಂದಾಗುತ್ತದೆ.

"ಮೂಲದಲ್ಲಿ ಪಶುಪಾಲಕ ವಲಸೆಗಾರ ದ್ರಾವಿಡರ (ಗೊಂಡರ) ದೇವತೆಗಳಾದ ಕಾಮ ಮತ್ತು ಜೋಕುಮಾರರು 'ಪೊಲಿ' ದೇವತೆಗಳು. ಇವರು ನಮ್ಮ ಗ್ರಾಮೀಣ ಸಮಾಜದ ಫಲವತ್ತತೆಗಾಗಿ ಆರಾಧನೆಗೊಳ್ಳುವ ದೇವರುಗಳು. ಇಬ್ಬರಿಗೂ ಹೊಲೆಮಾದಿಗರ ಸಂಬಂಧವಿದೆ. ಬಲಿಯ ಪಂಥವೂ ಪೊಲಿ ಪಂಥವೇ ಆಗಿದೆ."[೨೦]

'ರೈತರು ವರ್ಷದ ಹಲವಾರು ಸಂದರ್ಭಗಳಲ್ಲಿ (ಡಾ.ಬಿ.ಎಸ್.ಗದ್ದುಗಿ ಮಠರು ಇವರ ವಿವರಗಳನ್ನು ಸಂಗ್ರಹಿಸಿದ್ದಾರೆ.) ಹೊಲಗಳಲ್ಲಿ ಎರಚುವ 'ಚರಗ'ಕ್ಕೂ ಊರಮ್ಮನ ಹಬ್ಬಗಳಲ್ಲಿ ಹೊಲೆ-ಮಾದಿಗರು ಬತ್ತಲೆಯಾಗಿ ಊರಸುತ್ತ ಎರಚುವ ಪೊಲಿಗೂ ನಿಕಟ ಸಂಬಂಧವಿದೆ. ಜೋಕುಮಾರನ ಹುಣ್ಣಿಮೆಗೆ ಹೊಲೆಯರ ಹುಣ್ಣಿಮೆಯೆಂದೇ ಹೆಸರಿದೆ. ಗೌರಿಗಣೇಶ ಜೋಕುಮಾರರಿಗಿರುವ ಸಂಬಂಧದ ವೈಜ್ಞಾನಿಕ ವಿಶ್ಲೇಷಣೆಯಾಗುವಂತಾದರೆ ಹೊಲೆ ಮಾದಿಗರ ಜತೆ ಅವರ ಸಂಬಂಧದ ವಿವರಗಳು ಹೊರಬೀಳುವ ಶಕ್ಯತೆ ಇದೆ. ಜೋಕುಮಾರ ಸತ್ತ ಏಳು ದಿವಸ ಅಥವಾ ಒಂದು ತಿಂಗಳು ಇಡೀ ಊರಿಗೆ ಊರೇ 'ಅಳಲು'(ದುಃಖ) ಆಚರಿಸುತ್ತದೆ. ಗೌರಿ ಬಂದು ಹೋಗಿ ಗಣೇಶ ನೀರಿನಲ್ಲಿ ಮುಳುಗಿ ತಮಗೆ ಮಳೆ ಮತ್ತು ಮಕ್ಕಳು ತರುವ ಜೋಕುಮಾರ ಹುಟ್ಟಿದ ಏಳೇ ದಿನಕ್ಕೆ ಕೊಲೆಯಾಗಿ ಮರಣ ಹೊಂದುವನು. ಈ ಎಲ್ಲ ದುಃಖದ ಸರಮಾಲೆಗಳು ಜನಪದರ ಗಾಢ ನೋವಿಗೆ ಅಭಿವ್ಯಕ್ತಿ ನೀಡುತ್ತವೆ. ಅವರ ಮನಸ್ಸನ್ನು ಕಲಕುತ್ತವೆ. ಅದಕ್ಕಾಗಿ ಒಂದು ತಿಂಗಳು 'ಅಳಲು' ಆಚರಿಸುತ್ತಾರೆ.[೨೧]

ಅಡಿಟಿಪ್ಪಣಿಗಳು

೧. ಎಚ್.ಜೆ.ಲಕ್ಕಪ್ಪಗೌಡ(ಪ್ರ.ಸಂ), ಪುರುಷೋತ್ತಮ ಬಿಳಿಮಲೆ(ಸಂ.ಸಂ) 'ಜಾನಪದ ಕೈಪಿಡಿ' ೧೯೯೭, ಪುಸ್ತಕ ಪ್ರಾಧಿಕಾರ ಬೆಂಗಳೂರು, ಶ್ರೀರಾಮ ಇಟ್ಟಣವರ 'ಜನಪದ ದೈವ' ಪು.೧೫೮-೧೫೯

೨. 'ಅನುಭವ ಶಿಖಾಮಣಿ'ಯ ಕಥೆಯೂ ಇದನ್ನೇ ಹೇಳುತ್ತದೆ.

೩. ಆದಿ ಮೂರುತಿ ಗುರುವೆ ಆವ ಜನ| ನಾದ ದಿನವನು ಪೇಳು ಯಂದೊಡೆ|
ಭಾದ್ರಪದ ಶುದ್ಧದಲಿ ದೇವಿಯ ಅಷ್ಟಮಿಯ ಧಾರಾ|
ಭೇದವಿಲ್ಲದೆ ಸರ್ವಲೋಕವು| ಆದರಿಸಿ ಕಟ್ಟೀವ ಬಳಿಕಲಿ|
ಆ ದಿನಸವೇ ಹುಟ್ಟಿ ನಡೆದನು ಭೂಪ ಕೇಳೆಂದಾ ||
(ಮೈಸೂರು ಪ್ರಾಚ್ಯಕೋಶಾಗಾರದ K.೩೨೦ ಸಂಖ್ಯೆಯ ಹಸ್ತಪ್ರತಿ, ಪತ್ರ ೫೨)

೪. ಡಾ.ಎಂ.ಚಿದಾನಂದ ಮೂರ್ತಿ, 'ಜೋಕುಮಾರ', ಗ್ರಾಮೀಣ, ಪು.೧೪೦-೧೪೧

೫. ಡಾ.ಹಿ.ಚಿ.ಬೋರಲಿಂಗಯ್ಯ, ಎ.ಎಸ್.ಪ್ರಭಾಕರ(ಸಂ) ಬುಡಕಟ್ಟು ಅಧ್ಯಯನ ಪು.೧೫೦, ೨೦೦೩, ಪ್ರಸಾರಾಂಗ ಕನ್ನಡವಿಶ್ವವಿದ್ಯಾಲಯ ಹಂಪಿ, ಲೇಖನ ಬುಡಕಟ್ಟು ನ್ಯಾಯವ್ಯವಸ್ಥೆ ಡಾ.ಕೆ.ಎಂ ಮೈತ್ರಿ.

೬. ಡಾ.ದೇ.ಜವರೇಗೌಡ, ಜಾನಪದ ಅಧ್ಯಯನ, ಚೇತನ ಬುಕ್ ಹೌಸ್ , ಮೈಸೂರು, ೧೯೯೧, ಪು.೩೪೬.

೭. ಅದೇ, ಪು.೩೫೨

೮. ಅದೇ, ಪು.೩೬೪, ೩೬೫

೯. Wayland D.Hand in his paper'the fear of the Gods superstition and popular Belief', puglished in American folklore, Ed, by Tristram coffin, III, P.245

೧೦. Philip F.Waterman,'The story of superstition', p.೩೩

೧೧. ಡಾ.ದೇ.ಜವರೇಗೌಡ, ಜಾನಪದ ಅಧ್ಯಯನ, ಚೇತನ್ ಬುಕ್ ಹೌಸ್ , ಮೈಸೂರು, ೧೯೯೧, ಪು.೩೪೧

೧೨. ಎಂ.ಚಿದಾನಂದಮೂರ್ತಿ, ಜೋಕುಮಾರನ ಕಥೆಯ ಇನ್ನೊಂದು ಪ್ರಭೇದ, ಪು.೨೦ ಸಾಧನೆ

೧೩. ಡಾ.ದೇ.ಜವರೇಗೌಡ, ಜಾನಪದ ಅಧ್ಯಯನ' ನಂಬಿಕೆಗಳು, ಚೇತನ್ ಬುಕ್ ಹೌಸ್ , ಮೈಸೂರು-೨೪, ೧೯೯೩, ಪು.೩೪೧

೧೪. ಎ.ಎಸ್ .ಪ್ರಭಾಕರ, ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು ದೈವಾರಾಧನೆ, ಪ್ರಸಾರಾಂಗ ಹಂಪಿ, ಕ.ವಿ.ವಿ, ಪು.೫೨

೧೫. ಡಾ.ದೇ.ಜವರೇಗೌಡ, ಜಾನಪದ ಅಧ್ಯಯನ, ನಂಬಿಕೆಗಳು, ಪು.೩೫೮-೩೫೯

೧೬. ಅದೇ,

೧೭. ಅದೇ, ಪು.೩೬೦

೧೮. ಡಾ. ಸಣ್ಣರಾಮ ಲಂಬಾಣಿ ಸಂಸ್ಕೃತಿ, ಶಿವಮೊಗ್ಗ, ೧೯೯೯, ಪು.೧೮೫-೧೮೬

೧೯. ಎಸ್.ಎಸ್.ಹಿರೇಮಠ, 'ಜಾತ್ರೆಗಳು', ಸಮತಾ ಪ್ರಕಾಶನ ಹೊಸಪೇಟೆ, ೧೯೯೩, ಪು.೪೩-೪೪

೨೦. ಅದೇ, ಪು.೨೧೬

೨೧. ಅದೇ

ಅಧ್ಯಾಯ ೪

ಜೋಕುಮಾರನ ಪರಿಕಲ್ಪನೆ, ಜೀವನಾವರ್ತನ, ವಾರ್ಷಿಕಾವರ್ತನ

೪

ಜೋಕುಮಾರನ ಪರಿಕಲ್ಪನೆ, ಜೀವನಾವರ್ತನ, ವಾರ್ಷಿಕಾವರ್ತನ

ಪ್ರತಿವರುಷಕ್ಕೊಮ್ಮೆ ನಿರ್ದಿಷ್ಟಪಡಿಸಿದ ದಿನದ ಪ್ರತಿಯೊಂದು ಹಬ್ಬಗಳನ್ನು ಜನಪದರು ಆಚರಿಸುತ್ತಾರೆ. ಹಬ್ಬಗಳು ಅವರ ಜೀವನದಲ್ಲಿ ಅವಿಭಾಜ್ಯ ಅಂಗಗಳಾಗಿವೆ. ಹಬ್ಬಗಳ ಹಿನ್ನೆಲೆಯನ್ನು ಗಮನಿಸಿದಾಗ ಅವುಗಳಿಗಿರುವ ಮಹತ್ವ ಮತ್ತು ಅವುಗಳ ಹಿಂದೆ ಇರುವ ಉದ್ದೇಶ ತಿಳಿಯುತ್ತದೆ. 'ನಂಬಿಕೆ ಮತ್ತು ಸಂಪ್ರದಾಯಗಳ ಕ್ರಿಯಾರೂಪಗಳೇ ಹಬ್ಬಗಳು. ಅವುಗಳ ಬೇರು ಮಾಟಗಳಲ್ಲಿ ಅವಿತಿದೆ. ನಿಸರ್ಗಾರಾಧನೆಯಲ್ಲಿ ಪಸರಿಸಿದೆ. ಅವು ಕೃಷಿ ಸಂಸ್ಕೃತಿಯಲ್ಲಿ ಸ್ಪಷ್ಟ ರೂಪವನ್ನು ಪಡೆದು ಕಾಲಾನಂತರದಲ್ಲಿ ವಿಕಾಸಗೊಳ್ಳುತ್ತಾ ಜಟಿಲವಾದದ್ದುಂಟು. ಪ್ರತಿಯೊಂದು ಯುಗದ ಜನರೂ ಆಯಾಯ ಕಾಲದ ಅಭಿರುಚಿ ಮನೋಧರ್ಮಗಳಿಗನುಗುಣವಾಗಿ ತಂತಮ್ಮ ಕಲ್ಪನೆಗಳಿಗನುಸಾರವಾಗಿ ಅವುಗಳ ರೂಪಸ್ವರೂಪದಲ್ಲಿ ಮಾರ್ಪಾಡುಗಳನ್ನು ಮಾಡಿಕೊಂಡು ಹೊಸ ಹೊಸ ವಿಧಿ ನಿಷೇಧಗಳನ್ನು, ಉಪಾಸನಾ ವಿಧಾನಗಳನ್ನು ಸೇರಿಸಿದ್ದುಂಟು. ಅವುಗಳ ಬಹುವರ್ಣಾಕೀರ್ಣವಾದ ಸಂಕೀರ್ಣ ವಾಡಿಕೆಗಳಿಗೆ ಮತ ಸಂಘಟಕರು ಮತ್ತು ಪುರೋಹಿತರು ನಾನಾರೀತಿಯಲ್ಲಿ ಕಾಣಿಕೆಗಳನ್ನು ನೀಡಿದ್ದಾರೆ. ನಿಸರ್ಗವನ್ನು ನಿಯಂತ್ರಿಸುವ ಮತ್ತು ದೇವರನ್ನೊಲಿಸಿಕೊಳ್ಳುವ ಸತತ ಪ್ರಯತ್ನಗಳ ಫಲವಾಗಿ ಹಬ್ಬಗಳು ಹುಟ್ಟು ಪಡೆದವು. ಹೀಗಾಗಿ ಹಲವು ಸಂಪ್ರದಾಯಗಳ ಮೊತ್ತ ಹಬ್ಬವಾಗುತ್ತದೆ.

ಹಬ್ಬಗಳನ್ನು ಸ್ಥೂಲವಾಗಿ ನಾಲ್ಕು ಬಗೆಗಳಾಗಿ ವಿಂಗಡಿಸಬಹುದು.

೧. ಮತೀಯ

೨. ಸಾಮಾಜಿಕ

೩. ರಾಷ್ಟ್ರೀಯ

೪. ವೈಯಕ್ತಿಕ

ಆಯಾಯ ಮತದವರು ತಂತಮ್ಮ ಇಷ್ಟ ದೇವತೆಗಳ ಉತ್ಸವವನ್ನುವಿಧ್ಯುಕ್ತ ರೀತಿಯಲ್ಲಿ ವರ್ಷಕ್ಕೊಮ್ಮೆ ಸಾಮೂಹಿಕವಾಗಿ ಆಚರಿಸುವುದುಂಟಷ್ಟೆ. ಶಿವರಾತ್ರಿ, ಕೃಷ್ಣಜಯಂತಿ, ರಾಮಲೀಲಾ, ಕಾಮನಹಬ್ಬ,


ಗೌರಿಗಣೇಶೋತ್ಸವ, ರಮ್ಜಾನ್, ಮೊಹರಂ, ಕ್ರಿಸ್‌ಮಸ್, ಬುದ್ಧ ಜಯಂತಿ, ಇಂಥವು ಈ ಗುಂಪಿಗೆ ಸೇರಿದುವು, ಇವನ್ನು ಮತೀಯ ಹಬ್ಬಗಳೆಂದು ಕರೆಯಲಾಗಿದೆ. ದೈವಾನುಗ್ರಹವನ್ನು ಸಂಪಾದಿಸುವ ಜತೆಗೆ ಆಯಾಯ ಗುಂಪಿನ ಐಕ್ಯವನ್ನು ಕಾಪಾಡುವುದೇ ಇವುಗಳ ಮುಖ್ಯಗುರಿ. ಕೆಲವು ಮನೆತನಗಳಿಗೆ ಅಥವಾ ಒಂದು ಊರಿಗಷ್ಟೇ ಮೀಸಲಾದ ಆಚರಣೆಗಳನ್ನು ಸಾಮಾಜಿಕ ಹಬ್ಬಗಳೆಂದು ನಾಮಕರಣ ಮಾಡಬಹುದಾಗಿದೆ. ಹೆಚ್ಚು, ಪಿಳ್ಳೆಪೂಜೆ, ಸುಗ್ಗಿಯ ಉತ್ಸವ ಮೊದಲಾದ ಕೃಷಿ ಸಂಸ್ಕೃತಿಗೆ ಸಂಬಂಧಿಸಿದ ಉತ್ಸವಗಳನ್ನು ಈ ಗುಂಪಿಗೆ ಸೇರಿಸಬಹುದು. ಪಿತೃಪಕ್ಷವೂ ಸಾಮಾಜಿಕ ಹಬ್ಬವೇ. ಸಾಮಾಜಿಕ ಸಂಪ್ರದಾಯಗಳೇ ಅವುಗಳಿಗೆ ಮೂಲ. ಜಾತಿ ಕುಲಗೋತ್ರ ಲಿಂಗವರ್ಣ ದೇಶ ಭೇದವಿಲ್ಲದೆ, ಒಂದು ರಾಷ್ಟ್ರದ ಎಲ್ಲ ಜನರೂ ಒಟ್ಟಾಗಿ ಆಚರಿಸುವ ಉತ್ಸವಗಳನ್ನು ರಾಷ್ಟ್ರೀಯ ಹಬ್ಬಗಳೆಂದು ಹೆಸರಿಸಬಹುದು. ರಾಷ್ಟ್ರೀಯ ಭಾವನೆ, ರಾಷ್ಟ್ರಭಕ್ತಿ ರಾಷ್ಟ್ರಾಭಿಮಾನಗಳನ್ನು ಪ್ರಚೋದಿಸಿ, ರಾಷ್ಟ್ರೈಕ್ಯವನ್ನು ಪುಷ್ಟಿಗೊಳಿಸಿ, ಸಮರಾಷ್ಟ್ರೀಯರೆಲ್ಲ ಸೋದರರೆಂಬ ಭಾವನೆಯನ್ನು ಪ್ರೋತ್ಸಾಹಿಸಿ, ರಾಷ್ಟ್ರದ ಭದ್ರತೆಯನ್ನು ರಕ್ಷಿಸುವುದೇ ಅವುಗಳ ಗುರಿ. ರಾಷ್ಟ್ರದ ಪ್ರಮುಖ ಐತಿಹಾಸಿಕ ಘಟನೆಗಳ ಹಿನ್ನೆಲೆಯಲ್ಲಿ ಅಂಥ ಹಬ್ಬಗಳು ಉಗಮಗೊಳ್ಳುತ್ತವೆ. ಅಮೆರಿಕೆಯ ಮತ್ತು ಭಾರತದ ಜನ ಸ್ವಾತಂತ್ರ್ಯೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸುತ್ತಾರೆ. ನಾಡಹಬ್ಬವೂ ರಾಷ್ಟ್ರೀಯ ಹಬ್ಬವೇ. ಆದರೆ ಸ್ವಾತಂತ್ರ್ಯೋತ್ಸವದಲ್ಲಿ ಕಾಣದ ವೈಶಿಷ್ಟ್ಯ, ನಾಡಹಬ್ಬದಲ್ಲಿ ಪ್ರವೇಶಗೊಂಡಿದೆ. ದುರ್ಗಾ ಸರಸ್ವತೀ ಮೊದಲಾದ ದೇವತೆಗಳ ಪೂಜೆ ನಾಡಹಬ್ಬ ಅಥವಾ ದಸರೆಯ ವಿಶೇಷ ಸಂಗತಿ. ಆ ಪೂಜೆಯಿಲ್ಲದೆ ನಾಡಹಬ್ಬ ನಡೆಯುವಂತೆಯೇ ಇಲ್ಲ. ದೇಶಾಭಿಮಾನ, ಆತ್ಮಾಭಿಮಾನಗಳ ಪುಷ್ಟೀಕರಣದ ಜತೆಗೆ ಪಾರಮಾರ್ಥಿಕ ಲಾಭವೂ ಆ ಹಬ್ಬದಿಂದ ಲಭಿಸುತ್ತದೆ. ಸರ್ವತ್ಯಾಗದ ಮೂಲಕ ರಾಷ್ಟ್ರಕ್ಕೆ ಅಮೂಲ್ಯ ಸೇವೆಸಲ್ಲಿಸಿದ ಬಸವ, ನಾನಕ್, ಗಾಂಧೀಜಿಯಂಥವರ, ಅಂತೆಯೇ ಅಧ್ಯಾತ್ಮ ಸಾಧನೆಯ ಮೂಲಕ ರಾಷ್ಟ್ರದ ಕುಂಡಲಿನೀ ಶಕ್ತಿಯನ್ನೇ ಜಾಗೃತಗೊಳಿಸಿದಂಥ ಶ್ರೀ ರಾಮಕೃಷ್ಣಾರವಿಂದರ ಜನ್ಮೋತ್ಸವಗಳನ್ನು ವೈಯಕ್ತಿಕ ಹಬ್ಬಗಳೆಂದು ಪರಿಗಣಿಸಬಹುದು. ವ್ಯಕ್ತಿಯೊಬ್ಬನ ಸುತ್ತ ಬೆಳೆದ ಆಚರಣೆಗಳಾದ್ದರಿಂದ ಅಂಥವನ್ನು ವೈಯಕ್ತಿಕವೆಂದು ಕರೆಯಬಹುದೇ ಹೊರತು, ಕೆಲವೊಂದು ಇತಿಮಿತಿಗಳಲ್ಲಿ ಅವುಸಾಮೂಹಿಕ ಪರ್ವಗಳೆಂದೇ ಹೇಳಬೇಕಾಗುತ್ತದೆ. ಏಕೆಂದರೆ ಹಬ್ಬದ ಹೆಸರೆತ್ತಿದ ಕೂಡಲೇ ಸಮುದಾಯದ ಕಲ್ಪನೆ ಬಂದೇ ಬರುತ್ತದೆ. ಗಾಂಧೀಜಯಂತಿ ಒಂದು ಕೇವಲ ವೈಯಕ್ತಿಕ ಹಬ್ಬವಾಗದೆ, ರಾಷ್ಟ್ರೀಯ ಹಬ್ಬವಾಗಿ ಪರಿಣಮಿಸಿರುವುದನ್ನು ಗಮನಿಸಿದಾಗ, ಈ ವರ್ಗೀಕರಣ ಸರ್ವಸಮರ್ಪಕವಲ್ಲ. ಒಂದರಗಡಿ ಮತ್ತೊಂದರೊಳಗೆ ಚಾಚಿಕೊಂಡಿರುತ್ತದೆಯೆಂಬ ಸಂಗತಿ ವೇದ್ಯವಾಗುತ್ತದೆ. ಸಾಮಾಜಿಕ ಹಾಗೂ ಮತೀಯ ಪರ್ವಗಳಲ್ಲಿಯೂ ಇಂಥದೇ ಗೊಂದಲ ಕಾಣಲವಕಾಶವುಂಟು. ಅದೇನೇ ಇರಲಿ, ಯಾವುದೋ ಒಂದು ಉನ್ನತ ಧ್ಯೇಯ ಸಾಧನೆ, ಆತ್ಮ ಸಂಸ್ಕಾರ, ಮತ್ತು ಮನರಂಜನೆ ಎಲ್ಲ ಹಬ್ಬಗಳ ಗುರಿಯೆಂದು ಸ್ಪಷ್ಟಪಡಿಸಬಹುದಾಗಿದೆ.[೧]

"ಸಾಮಾನ್ಯವಾಗಿ ಪ್ರತಿವರ್ಷ ಸಾಮಾಜಿಕ ಕ್ಷೇಮಕ್ಕಾಗಿ ವಿಶೇಷ ಸಂದರ್ಭದಲ್ಲಿ ಆಚರಿಸುವ ಜಾನಪದ ಸಂಗತಿಗಳ ಮತ್ತು ಸಂಪ್ರದಾಯಗಳ ಸಮ್ಮಿಶ್ರ ಜಟಿಲ ಘಟಕವೇ ಹಬ್ಬ" ಎಂದು ವಿದ್ವಾಂಸರು ಅದರ ಲಕ್ಷಣವನ್ನು ಗುರುತಿಸಿದ್ದಾರೆ."[3] ಹಬ್ಬ ಹರಿದಿನಗಳಬಗ್ಗೆ ಇಲ್ಲಿ ವಿವರವಾಗಿ ಚರ್ಚೆಮಾಡಲಾಗಿದೆ. ಕಾರಣ ಇವುಗಳ ಆಚರಣೆಯಿಂದ ಸಾಮಾನ್ಯ ಜನರಿಂದ ಶ್ರೇಷ್ಠವರ್ಗದವರಿಗೆ ಉಲ್ಲಾಸ, ಹುರುಪನ್ನು ನೀಡುತ್ತವೆ.

Concept ಎನ್ನುವುದು ಜನಪದರಿಗೆ ಹೊಸದೇನಲ್ಲ ಪ್ರತಿಯೊಂದು ವಿಚಾರದಲ್ಲಿ ತಮ್ಮದೇ ಆದ ಪರಿಕಲ್ಪನೆಯನ್ನು ಹೊಂದಿರುತ್ತಾರೆ. ಯಾವುದೇ ರೀತಿಯ ಆಚಾರ-ವಿಚಾರಗಳನ್ನು ಅವರ ಜೀವನದಲ್ಲಿ ಅಳವಡಿಕೊಂಡರೂ ಸಹ ಈ ವಿಷಯದಲ್ಲಿ ಮನನ ಮಾಡಿಕೊಳ್ಳುತ್ತಾರೆ. ನನ್ನ ಆಲೋಚನೆಯಂತೆ ಅರ್ಥೈಸುವುದಾದರೆ ಯಾವುದೇ ಜನಪದ ಪ್ರಕಾರಗಳಲ್ಲಿ ನಿರ್ದಿಷ್ಟ ವಿಷಯ ಅಥವಾ ವಿಚಾರಕ್ಕೆ ತಕ್ಕಂತೆ ತಮ್ಮದೇ ಆದ ಹೊಳಹುಗಳನ್ನು ಕಂಡುಕೊಳ್ಳುತ್ತಾರೆ. ಇದು ಹೀಗಿರಬೇಕು, ಅದು ಹಾಗಿರಬೇಕು ಎಂಬ ತಾರ್ಕಿಕ ಮನೋಭಾವವನ್ನು ಹೊಂದಿರುತ್ತಾರೆ. ಅವರ ಕಲ್ಪನಾದೃಷ್ಟಿ ಅನನ್ಯವಾದುದು. ಊಹಾತೀತವಾದ ಬುದ್ಧಿಮತ್ತೆಯನ್ನು ಮೆಚ್ಚಲೇಬೇಕು. ಅವರ ಶಿಸ್ತುಬದ್ಧಕ್ರಮ, ಕಾಳಜಿ ಎಲ್ಲವೂ ಇದರಲ್ಲಿ ಸಮ್ಮಿಲನಗೊಂಡಿರುತ್ತವೆ. ಈ ಎಲ್ಲಾ ಅಂಶಗಳಿಂದ ಅವರು ಪೂರಕವಾಗಿ ಅನುಸರಿಸಿಕೊಂಡು ಬರುತ್ತಿರುವುದು ತಿಳಿದ ವಿಚಾರ. ಪ್ರತಿಯೊಂದು ಹಬ್ಬಗಳನ್ನು ಹೀಗೆಯೇ ಆಚರಿಸಬೇಕೆಂಬ ನಿಲುವಿನ ಹಿಂದೆ ಇದರ ಕಾರ್ಯವಿರುತ್ತದೆ.

ಜನಪದರ ಪರಿಕಲ್ಪನೆ ಒಂದೊಂದು ವಿಚಾರದಲ್ಲಿ ಒಂದೊಂದು ತೆರನಾಗಿರುತ್ತದೆ. ಪ್ರತಿವರುಷದಲ್ಲಿ ನಿರ್ದಿಷ್ಟ ಸಮಯದಲ್ಲಿ ಜೋಕುಮಾರನ ಆಗಮನ ಆಗುತ್ತದೆ. ಗಣೇಶಚತುರ್ಥಿನ್ನು ಆಚರಿಸಿದ ಗಂಗಾಮತಸ್ಥರು ಇವನನ್ನು ಆರಾಧಿಸುತ್ತಾರೆ. ಇವರನ್ನು ನಾನಾ ವಿಧದ ಹೆಸರುಗಳಿಂದ ಗುರುತಿಸುತ್ತಾರೆ. ಗಂಗಾಮತಸ್ಥರು ಎಂಬ ಹೆಸರು ಎಲ್ಲಾ ಕಡೆಯಲ್ಲಿಯೂ ಸಾರ್ವತ್ರಿಕವಾಗಿದ್ದು, ಅಂಬಿಗರು, ಕಬ್ಬ್ಯಾರರು, ಸುಣ್ಣಗಾರರು ಎಂಬ ಪರ್ಯಾಯ ಹೆಸರುಗಳನ್ನು ಸಹ ಕರೆಯುತ್ತಾರೆ. ಪ್ರತಿ ವರುಷದಲ್ಲಿ ನಿಯಮದ ಪ್ರಕಾರ ಒಂದು ವಾರ ಇವನು ಜನರಿಂದ ಪೂಜಿಸಿಕೊಳ್ಳುತ್ತಾನೆ. ಇವನು ಬಂದ ಹೋದ ನಂತರವೇ ಉತ್ತಮವಾದ ಮಳೆಬರುತ್ತದೆಂಬ ನಂಬಿಕೆ ಎಲ್ಲೆಡೆಯಲ್ಲಿದೆ. ಯಾವುದೇ ಆಚರಣೆಗಳು, ರೂಢಿ, ನಂಬಿಕೆಗಳು, ಸಂಪ್ರದಾಯಗಳು ತನ್ನದೇ ಆದ ಲಕ್ಷಣಗಳೊಂದಿಗೆ ಮಹತ್ವವನ್ನು ಪಡೆದುಕೊಂಡಿರುತ್ತವೆ. ಅದರದ್ದೇ ಆದ ಪ್ರಾದೇಶಿಕ ಭಿನ್ನತೆಯೊಂದಿಗೆ ಆಯಾ ಪರಿಸರದ ಪ್ರಭಾವಕ್ಕೆ ಒಳಪಟ್ಟು ಮೈದಳೆದುಕೊಂಡಿರುತ್ತವೆ. ಯಾವುದೇ ಪರಿಸರಕ್ಕೆ ಅನುಗುಣವಾಗಿ ಸಾಮ್ಯತೆ- ಭಿನ್ನತೆಗಳೊಂದಿಗೆ ಎಲ್ಲಾ ಆಚರಣೆಗಳು-ಸಂಪ್ರದಾಯಗಳು ಒಳಗೊಂಡಿರಬೇಕು.

'ಆರ್.ಎಸ್.ಬಾಗ್ಸ್ ಅವರು ಜನಪದ ವಾಙ್ಮಯದಲ್ಲಿ ಪುರಾಣ, ಐತಿಹ್ಯ, ಕಟ್ಟುಕಥೆ ಮತ್ತು ಗೀತೆಗಳನ್ನು ಮಾತ್ರ ಸೇರಿಸಿ ಗಾದೆ ಒಗಟುಗಳನ್ನು ಭಾಷಿಕ ವರ್ಗದಲ್ಲಿ ಜೋಡಿಸುತ್ತಾರೆ. ಸಾಮಾಜಿಕ ವಿಜ್ಞಾನದ ಅಂತರ ರಾಷ್ಟ್ರೀಯ ವಿಶ್ವಕೋಶ ಕತೆ ಐತಿಹ್ಯ ಪುರಾಣ ಗಾದೆ ಒಗಟು ಮತ್ತು ಕಾವ್ಯಗಳನ್ನು ಜನಪದ ಸಾಹಿತ್ಯದ ಪರಿಧಿಯಲ್ಲಿಯೇ ಪರಿಗಣಿಸುತ್ತದೆ. ಜಗತ್ತಿನ ಶ್ರೇಷ್ಠವಿದ್ವಾಂಸರ ಅಭಿಪ್ರಾಯಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಜನಪದ ಸಾಹಿತ್ಯದ ಮುಖ್ಯ ಪ್ರಕಾರಗಳನ್ನು ಸಾಮಾನ್ಯವಾಗಿ ಕೆಳಕಂಡಂತೆ ವರ್ಗೀಕರಿಸಬಹುದು'.[೩]



ಆಂಗ್ಲ ಜಾನಪದ ವಿದ್ವಾಂಸ ಆರ್.ಎಸ್. ಬಾಗ್ಸ್ ಅವರ ಪ್ರಕಾರ ಜಾನಪದವು ನಾಲ್ಕು ಬಗೆಗಳಿಂದ ಕೂಡಿದೆ.

೧. ಸಾಹಿತ್ಯಕ ಬಗೆ

೨. ಭಾಷಿಕ ಬಗೆ

೩. ವೈಜ್ಞಾನಿಕ ಬಗೆ

೪. ಕ್ರಿಯಾತ್ಮಕ ಬಗೆ

ಜಾನಪದ ರೂಢಿ ಸಂಪ್ರದಾಯಗಳು ಕ್ರಿಯಾತ್ಮಕ ಬಗೆಯಲ್ಲಿ ಬರುತ್ತವೆ. ನಂಬಿಕೆ ಮತ್ತು ಸಂಪ್ರದಾಯಗಳ ಕ್ರಿಯೆಯ ರೂಪಗಳೇ ಹಬ್ಬಗಳು. ನಿಸರ್ಗದ ಆರಾಧನೆ ಮತ್ತು ದೇವರನ್ನು ಒಲಿಸಿಕೊಳ್ಳುವ ಸತತ ಪ್ರಯತ್ನಗಳ ಫಲವಾಗಿಯೇ ಹಬ್ಬಗಳು ಹುಟ್ಟಿಕೊಂಡಿರುತ್ತವೆ. ಹೀಗಾಗಿ ಕೆಲವು ಸಂಪ್ರದಾಯಗಳ ಸಮೂಹವೇ ಹಬ್ಬಗಳಾಗಿರುತ್ತವೆ. ಮಾನವನು ತನ್ನ ಬಿಡುವಿನ ವೇಳೆಯಲ್ಲಿ ಆನಂದವನ್ನು ಹೊಂದಲು ಸಾಮಾನ್ಯವಾಗಿ ಹಬ್ಬವನ್ನು ಆಚರಿಸುತ್ತಾನೆ. ಅವು ಸಾಮಾಜಿಕ ಘಟನೆಗಳ ಒಂದು ಅಂಗವಾಗಿವೆ. ಹಬ್ಬಗಳಲ್ಲಿ ಮುಖ್ಯವಾಗಿ

೧. ಪ್ರಕೃತಿಗೆ ಸಂಬಂಧಿಸಿದ ಹಬ್ಬಗಳು

(ಉದಾ: ಸಂಕ್ರಾಂತಿ ಹಾಗೂ ಯುಗಾದಿ....ಇತ್ಯಾದಿ)

೦೨.ದೇವರಿಗೆ ಸಂಬಂಧಿಸಿದ ಹಬ್ಬಗಳು

(ಉದಾ: ಶಿವರಾತ್ರಿ, ಕಾಮ, ಗೌರಿಹಬ್ಬ, ಗಣೇಶನಹಬ್ಬ, ಜೋಕುಮಾರ..... ಇತ್ಯಾದಿ)

೦೩.ವ್ಯಕ್ತಿಗಳಿಗೆ ಸಂಬಂಧಿಸಿದ ಹಬ್ಬಗಳು

(ಉದಾ: ವಿಜಯದಶಮಿ, ಬಲಿಪಾಡ್ಯಮಿ, (ದೀಪಾವಳಿ) ಕ್ರಿಸ್‌ಮಸ್, ಶ್ರೀರಾಮ ನವಮಿ)

೦೪. ಪ್ರಾಣಿಗಳಿಗೆ ಸಂಬಂಧಿಸಿದ ಹಬ್ಬಗಳು

(ಉದಾ: ಮಣ್ಣೆತ್ತಿನ ಅಮವಾಸ್ಯೆ, ನಾಗರ ಪಂಚಮಿ,....ಇತ್ಯಾದಿ)

ಮೇಲ್ಕಂಡ ಎಲ್ಲಾ ಹಬ್ಬಗಳು ಸಾಮಾನ್ಯವಾಗಿ ಧಾರ್ಮಿಕ ಆಚರಣೆಗಳನ್ನು ಒಳಗೊಂಡಿರುತ್ತವೆ. ಕ್ರಿಸ್‌ಮಸ್, ರಂಜಾನ್, ದೀಪಾವಳಿ, ಗೌರಿ, ಕಾಮ, ಗಣೇಶ ಹಾಗೂ ಜೋಕುಮಾರ ಇಂತಹ ಹಬ್ಬಗಳ ಸಂದರ್ಭದಲ್ಲಿ ಹಾಡುವ ಹಾಡುಗಳು ಹಬ್ಬದ ಹಾಡುಗಳೆನಿಸಿಕೊಳ್ಳುತ್ತವೆ. ಇವುಗಳಲ್ಲಿ ಆಯಾ ಉಪಾಸನಾ ದೇವ ದೇವತೆಯರ ಜೀವನ ಚರಿತ್ರೆ ಸ್ತುತಿಯನ್ನು ಕುರಿತು ಇರುತ್ತವೆ. ಅದರಂತೆ ಜೋಕುಮಾರನ ಹಾಡುಗಳೂ ಸಹ ಅವನ ಜೀವನ ಚರಿತ್ರೆ, ನಡತೆ, ಆಚಾರ-ವಿಚಾರಗಳನ್ನು ಕುರಿತಾಗಿರುತ್ತವೆ.

ಉತ್ತರ ಕರ್ನಾಟಕದಲ್ಲಿ ಜನಪದರು ಆರಾಧಿಸುವ ದೇವ ದೇವತೆಗಳನ್ನು ಈ ಕೆಳಕಂಡಂತೆ ವಿಭಾಗ ಮಾಡಬಹುದಾಗಿದೆ.

ಅ. ದೇವರು: ಸಂಗಮೇಶ, ಹನುಮಂತ, ವೀರಭದ್ರ, ವಿರುಪಾಕ್ಷ.......ಇತ್ಯಾದಿ.

ಆ. ದೇವತೆಯರು: ಎಲ್ಲವ್ವ, ದ್ಯಾಮವ್ವ, ದುರುಗವ್ವ, ಹುಲಿಗೆಮ್ಮ, ಚೌಡಮ್ಮ......ಇತ್ಯಾದಿ.

ಇ. ಸಂಪ್ರದಾಯ ದೇವ-ದೇವತೆಯರು: ಮಳೆರಾಜ, ಜೋಕುಮಾರ, ಭೂತಾಯಿ, ಬನದಮ್ಮ .....ಇತ್ಯಾದಿ.

ಈ. ಭೂತಾದಿಗಳ ದೇವರು: ಭರಮಪ್ಪ, ಏಳು ಮಕ್ಕಳ ತಾಯಿ ಬ್ರಹ್ಮರಾಕ್ಷಸ......ಇತ್ಯಾದಿ.

ಜೋಕುಮಾರನ ಸಂಪ್ರದಾಯವು ಜನಪದರು ಆಚರಿಸುವ ರೂಢಿಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ. ಇವನ ಹಬ್ಬವು ಜನಪದರ ಪ್ರಕಾರ ಐದನೆಯ ಮಣ್ಣಿನ ದೇವರ ಪೂಜೆ ಎಂಬ ನಂಬಿಕೆಯ ಸಂಪ್ರದಾಯದಿಂದ ಕೂಡಿದೆ.

೧. ಮಣ್ಣೆತ್ತಿನ ಅಮವಾಸ್ಯೆಯಲ್ಲಿ ಮಣ್ಣಿನಿಂದ ಮಾಡಿದ ಎತ್ತಿನ ಪೂಜೆ.

೨. ಗುಳ್ಳವ್ವನ ಪೂಜೆ (ಮಣ್ಣೆತ್ತಿನ ಅಮವಾಸ್ಯೆಯ ಆನಂತರ)

೩. ಪಂಚಮಿಯಲ್ಲಿ ಹುತ್ತದ ಪೂಜೆ.

೪. ಗಣೇಶನ ಪೂಜೆ (ಭಾದ್ರಪದ ಮಾಸದಲ್ಲಿ)

೫. ಅನಂತನ ಹುಣ್ಣಿಮೆಯಲ್ಲಿ ಜೋಕುಮಾರನ ಪೂಜೆ.

ಈ ಎಲ್ಲ ಪೂಜೆಗಳ ನಂಬಿಕೆ ಹಾಗೂ ಸಂಪ್ರದಾಯಗಳನ್ನು ಒಕ್ಕಲಿಗರೇ ಹೆಚ್ಚಾಗಿ ಮಾಡುತ್ತಾರೆ. ಅವುಗಳಲ್ಲಿ ಜೋಕುಮಾರನ ಆಚರಣೆ ಉತ್ತರ ಕರ್ನಾಟಕದಲ್ಲಿ ಬಹು ಮುಖ್ಯವಾದ ಸಾಂಪ್ರದಾಯದ ಹಬ್ಬವಾಗಿದೆ. ಇದಕ್ಕೆ ಅನಂತನ ಹುಣ್ಣಿಮೆ, ಜೋಕುಮಾರನ ಹುಣ್ಣಿಮೆ ಅಥವಾ ಹೊಲೇರ ಹುಣ್ಣಿಮೆ ಎಂದು ಕೆಲವು ಭಾಗಗಳಲ್ಲಿ ಕರೆಯುವ ರೂಢಿ ಇದೆ. ಇದನ್ನು ಭಾದ್ರಪದ ಶುದ್ಧ ನವಮಿಯಿಂದ ಪೌರ್ಣಿಮೆವರೆಗೆ ಅಂದರೆ ಏಳುದಿನಗಳವರೆಗೆ ಆಚರಿಸುವ ಪದ್ಧತಿಯಿದೆ. ಇದಕ್ಕೆ ಭಾಗವತ ಪುರಾಣ ಸಪ್ತಾಹ (ಅಂದರೆ ಪೌಷ್ಯಪವೀ ಸಪ್ತಾಹ ಎಂತಲೂ) ಎಂದು ಕರೆಯುವರು. ಉತ್ತರ ಕರ್ನಾಟಕದಲ್ಲಿ ಜೋಕುಮಾರನ ಪೂಜೆಯ ಸ್ಥಳಭೂಮಿ. ಗಂಗಾ ಮತಸ್ಥರು ಇವನ ಆರಾಧಕರು.

ಜೋಕುಮಾರನು ಗಂಗಾಮತದಲ್ಲಿ ಜನಿಸಿದ್ದಾನೆಂದು ಗಂಗಾಮತದ ವಂಶಸ್ತರಾದ ಬಾರಿಕಾರರು, ಕಬ್ಬಲಿಗರು, ಮಡಿವಾಳರು, ತಳವಾರರು, ಸುಣಗಾರರು, ಅಂಬಿಗರು, ಇವರೆಲ್ಲರೂ ಒಂದೇ ಮುಖ್ಯಜಾತಿ ಗಂಗಾಮತದವರಾಗಿದ್ದರಿಂದ ಇವರೇ ಜೋಕುಮಾರನನ್ನು ಪೂಜಿಸುವರು.[೪]

ಹಬ್ಬಗಳ ಬಗ್ಗೆ ಎಸ್.ಎಸ್. ಹಿರೇಮಠ ಅವರು ಹೀಗೆ ಹೇಳಿದ್ದಾರೆ. "ಭಾರತದ ಹಬ್ಬಗಳ ಮೂಲದಲ್ಲಿ ಕೃಷಿಕ ಹೊಲೆ ಮಾದಿಗರ ತಾಂತ್ರಿಕ ಮಾಟಗಳ ನಿರಂತರ ಪರಿಶ್ರಮವಿದೆ. ಅಂದರೆ ಹೊಲೆ-ಮಾದಿಗರು ಭಾರತದ ಹಬ್ಬಗಳ ಸೃಷ್ಟಿಕರ್ತರು. ಜಾತ್ರೆಗಳು ವಲಸೆಗಾರರ ದ್ರಾವಿಡರ ಸಾಂಸ್ಕೃತಿಕ ವೈಶಿಷ್ಟ್ಯ ಹಬ್ಬಗಳು ಮನುಷ್ಯ, ಬೆಳೆ, ಪ್ರಾಣಿಗಳ ಸಮೃದ್ಧಿಯನ್ನು, ಸಫಲತೆಯನ್ನು ಆಶಿಸಿ, ಅಂದರೆ ಭೌತಿಕ ಜೀವನ ನೆಮ್ಮದಿಯ ನೆಲೆಗಾಗಿ ಹುಟ್ಟಿಕೊಂಡವು. ಅವು ದಲಿತರ ಕೃಷಿ ಮಾಟದಲ್ಲಿ ಪ್ರಕ್ರಿಯೆಯಲ್ಲಿ ಉದ್ಭವಿಸಿದವು."[೫]

ಭಾರತೀಯ ಹಬ್ಬಗಳ ಹಿನ್ನೆಲೆಯನ್ನು ಗಮನಿಸಿದಾಗ ಅವುಗಳ ಮಹತ್ವ ತಿಳಿಯುತ್ತದೆ. ಪ್ರತಿಯೊಂದನ್ನು ಸೂಕ್ಷ್ಮವಾಗಿ ಅವಲೋಕಿಸಬೇಕು. ಆಗ ಅದರಲ್ಲಿರುವ ಪರಂಪರೆ ನಮ್ಮ ಅರಿವಿಗೆ ಬರುತ್ತದೆ. ಜನಪದರ ಜೀವನದಲ್ಲಿ ಅನನ್ಯಕಳಕಳಿ ಧರ್ಮನಿಷ್ಠೆಯಿದೆ ಪ್ರತಿದಿನವೂ ದೈನಂದಿನ ಕೆಲಸಗಳನ್ನು ಆರಂಭಿಸುವಾಗ ಅವರಿಗೆ ಪ್ರಿಯವಾದ ದೇವರನ್ನು ಮನದಲ್ಲಿ ಪ್ರಾರ್ಥಿಸಿಕೊಳ್ಳದೆ ಯಾವುದೇ ಕೆಲಸಗಳಿಗೆ ಕೈ ಹಾಕುವುದಿಲ್ಲ.

ರೈತಾಪಿ ವರ್ಗದ ಜನರು ಬಿಡುವಿಲ್ಲದ ತಮ್ಮ ಸಮಯದಲ್ಲಿ ಬಿಡುವು ಮಾಡಿಕೊಂಡು ಪ್ರತಿಯೊಂದು ಹಬ್ಬ, ಹುಣ್ಣಿಮೆ, ವ್ರತ, ಪೂಜೆ, ಜಾತ್ರೆ, ಉತ್ಸವ ಇತ್ಯಾದಿಗಳನ್ನು ತಪ್ಪದೇ ಆಚರಿಸಿಕೊಂಡು ಇಂದಿಗೂ ಬರುತ್ತಿದ್ದಾರೆ. ಅಂತಹ ಹತ್ತು ಹಲವಾರು ಆಚರಣೆಗಳಲ್ಲಿ ಜೋಕುಮಾರನ ಆಚರಣೆಯೂ ಒಂದಾಗಿದೆ ಎಂದರೆ ಅತಿಶಯೋಕ್ತಿ ಎನಿಸುವುದಿಲ್ಲ.

ಪ್ರತಿಯೊಂದು ಹಬ್ಬ, ಆಚರಣೆಗಳನ್ನು ಗಮನಿಸಿ ನೋಡಿದಾಗ ಇವು ಯಾವಾಗಿನಿಂದ ಬಳಕೆಗೆ (ಆಚರಣೆಗೆ) ಬಂದವು ಎಂಬುದನ್ನು ಹೇಳುವುದು ಜಟಿಲ. ಏಕೆಂದರೆ ಮಾನವನು ಈ ಎಲ್ಲಾ ರಿಚ್ಯುಯಲ್‌ಗಳನ್ನು ಭಯ ನಿವಾರಣೆಗಾಗಿ ಮತ್ತು ಉಪಕಾರ ಸ್ಮರಣೆಮಾಡುವ ಹಿನ್ನೆಲೆಯಿಂದ ಇವುಗಳನ್ನು ಆಚರಿಸಲು ಪ್ರಾರಂಭಿಸಬೇಕೆಂದು ಊಹಿಸಬಹುದಾಗಿದೆ. ನಿಸರ್ಗದಲ್ಲಿ ಬರುವ ಅನೇಕ ವೈಪರೀತ್ಯಗಳಾದ ಗುಡುಗು- ಸಿಡಿಲು, ಮಿಂಚು, ಮಳೆ, ಬೆಂಕಿ, ಬಿರುಗಾಳಿ, ಕಾಡ್ಗಿಚ್ಚು, ಚಂಡಮಾರುತ ಇತ್ಯಾದಿಗಳಿಂದ ಆದಿಮಾನವನು ಭಯ ಭೀತಿಗೊಂಡು ಅವೆಲ್ಲವುಗಳ ಬೆನ್ನಹಿಂದೆ ಯಾವುದೋ ಅದೃಶ್ಯ ಶಕ್ತಿಯೊಂದು ಅಡಗಿರಬೇಕೆಂದು ಭಾವಿಸಿರಬೇಕು. ಆ ಅದೃಶ್ಯ ಶಕ್ತಿಯನ್ನು ವ್ರತ, ಪೂಜೆ, ಪ್ರಾರ್ಥನೆ, ಬಲಿ ಮುಂತಾದವುಗಳಿಂದ ಸಂತೃಪ್ತಿಗೊಳಿಸಿದರೆ ನಿರಾಳವಾಗಿ ಜೀವಿಸಬಹುದೆಂದು ತಿಳಿದಿರಬೇಕು. ಅವನಿಗೆ ಆಹಾರವನ್ನು ಕೊಡುವ ಇಳೆ, ಹಣ್ಣುಹಂಪಲನ್ನು ನೀಡುವ ಮರ, ಗಿಡ, ಬಳ್ಳಿಗಳು, ತನಗೆ ವಾಸಸ್ಥಾನಕ್ಕೆ ಅವಕಾಶ ನೀಡಿದ ಕಲ್ಲು, ಗುಹೆ ಇತ್ಯಾದಿಗಳಿಗೆ ಋಣ ತೀರಿಸುವ ಸಲುವಾಗಿ ಈ ಎಲ್ಲ ಬಗೆಯ ಪೂಜೆ, ಆಚರಣೆಗಳನ್ನು ರೂಢಿಯಲ್ಲಿ ತಂದು ಕರಗತಗೊಳಿಸಿರಬೇಕು. ಈ ಹಿನ್ನೆಲೆಯಿಂದ ಅವಲೋಕನ ಮಾಡಿದಾಗ ಜೋಕುಮಾರನ ಆಚರಣೆಯಲ್ಲಿ ಇಂತಹ ಯಾವುದೇ ಒಂದು ಗಮನಾರ್ಹವಾದ ಕಾರಣವಿರಬೇಕೆಂದು ಭಾವಿಸಬೇಕಾಗುತ್ತದೆ. ಜೋಕುಮಾರನು ಭೂಮಿಯಲ್ಲಿ ಪೂಜೆಗೊಳ್ಳುವುದು ಪ್ರತಿವರುಷ ನಿರ್ದಿಷ್ಟ ಸಮಯದಲ್ಲಿ. ಭಾದ್ರಪದ ಮಾಸದಲ್ಲಿ ಶುದ್ಧ ಅಷ್ಟಮಿ ದಿನದಲ್ಲಿ, ಕೇವಲ ಒಂದು ವಾರ ಕಾಲಮಾತ್ರ ಇವನನ್ನು ಪೂಜಿಸುತ್ತಾರೆ. ಈ ಅಂಶ ಎಲ್ಲೇ ಹೋದರೂ ಸಹ ಸಾರ್ವತ್ರಿಕವಾಗಿಕಂಡು ಬರುತ್ತದೆ. ಉಳಿದ ದಿನಗಳಲ್ಲಿ ಇವನನ್ನು ಪೂಜೆಮಾಡುವುದಿರಲಿ, ಇವನನ್ನ ನೆನಪಿಸಿಕೊಳ್ಳುವುದೂ ಇಲ್ಲ.

ಜೋಕುಮಾರನ ಆಚರಣೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ದೇವರಿಗಿರುವಂತೆ ದೇವಸ್ಥಾನಗಳಾಗಲೀ, ನೆನಪಿನ ಕುರುಹುಗಳಾಗಲೀ ಇವನಗಿರುವುದಿಲ್ಲ. ಬಹುಶಃ ಇವನು ಅಲ್ಪಾಯುಷಿಯಾಗಿರುವುದಕ್ಕೆ, ಹಾಗೂ ವರುಷದಲ್ಲಿ ಕೇವಲ ಏಳುದಿನಗಳು ಮಾತ್ರ ಆಚರಣೆಯ ರೂಪದಲ್ಲಿ ಇವನು ಬಂದು ಹೋಗುತ್ತಿರುವುದು ಕಾರಣವಿರಬಹುದು ಎಂದು ಉಹಿಸಬಹುದು. ಇವನು ಅಲ್ಪಾಯುಷಿಯಾಗಿದ್ದು, ಏಳುದಿನಗಳಲ್ಲಿ ಎಲ್ಲಾ ಪುಂಡಾಟಿಕೆಗಳಿಂದ ಕೂಡಿದ ಕ್ರಿಯೆಗಳನ್ನು ಮಾಡಿದ್ದರಿಂದ, ಇವನು ಕಾಮಾಂಧ,

ಬೆದೆಬಡುಕ ಎಂಬೆಲ್ಲಾ ಹಣೆಪಟ್ಟಿಗಳನ್ನು ಹೊತ್ತಿರುವುದರಿಂದ ಜನರು ನೆನಪಿಸಿಕೊಳ್ಳದೆ ಹೋಗಲು ಮತ್ತೊಂದು ಕಾರಣವಿರಬಹುದು.

ಎಷ್ಟೋ ಬಾರಿ ಹಳ್ಳಿಗಳಲ್ಲಿ ವಾಸ ಮಾಡುತ್ತಿರುವ ಜನರು ಸಂದರ್ಭಕ್ಕೆ ತಕ್ಕಂತೆ ಜೋಕುಮಾರನನ್ನು ನೆನೆಯುತ್ತಾರೆ. ಆಯಾಹಳ್ಳಿಗಳಲ್ಲಿ ಪೋಲಿ ಪುಂಡಾಟಿಕೆಗೆ ಹೆಸರಾದ ಪಡ್ಡೆ ಹುಡುಗರನ್ನು 'ಅವನು ಜೋಕುಮಾರನಂತೆ ಇದ್ದಾನೆ', ಎಂದು ಹೇಳುತ್ತಾರೆ. ಜೋಕುಮಾರನನ್ನು ಇಲ್ಲಿ ಎರಡು ಕಾರಣಗಳಿಂದಾಗಿ ನೆನಪಿಸಿಕೊಳ್ಳುತ್ತಾರೆ. ಮೊದಲನೆಯದಾಗಿ ಅವನು ಸುಂದರ ಪುರುಷನಾಗಿದ್ದಾನೆ, ಎರಡನೆಯದಾಗಿ ಅವನು ಮಹಾಲಂಪಟ, ಕಾಮಾಂಧ ಎಂಬ ವಿಷಯಕ್ಕಾಗಿ. ಕೆಲವೆಡೆಗಳಲ್ಲಿ ಹುಡುಗನು ಅಂದವಾದ ವೇಷ-ಭೂಷಣಗಳಿಂದ ಅಲಂಕೃತವಾಗಿ ತಿರುಗಾಡುತ್ತಿದ್ದರೆ ಅಬ್ಬಾ. ಯಾರಿವನು? ಸುಂದರವಾಗಿ ಜೋಕುಮಾರನಂತಿದ್ದಾನೆ? ಎಂದು ಉದ್ಗರಿಸುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶಗಳೆಂದರೆ, ಅವನ ಸೌಂದರ್ಯ ಮತ್ತು ಉಡಾಳತನ. ಜೋಕುಮಾರ ಎಂದ ತಕ್ಷಣ ಎಲ್ಲರಿಗೂ ಥಟ್ಟನೆ ಹೊಳೆಯುವುದು ಅವನ ಅಲ್ಪಾಯುಷ್ಯ ಹಾಗೂ ೭ ದಿನಗಳಲ್ಲಿ ಅವನು ನಡೆಸಿದ ಕೆಲಸಕಾರ್ಯಗಳು.

ಕೇವಲ ಏಳುದಿನಗಳಲ್ಲಿ ಜೋಕುಮಾರನು ಏನೆಲ್ಲಾ ಕೆಲಸಕಾರ್ಯಗಳನ್ನು ನಿರ್ವಹಿಸುತ್ತಾನೆ ಎಂಬುದರಕಡೆಗೆ ಗಮನಹರಿಸಿದರೆ, ಅವನು ಮಳೆತರುವ ಸಲುವಾಗಿ, ಭೂಲೋಕದಲ್ಲಿ ಜನ್ಮತಳೆದಿರುತ್ತಾನೆ. ಈ ಅಂಶವನ್ನು ನಮ್ಮ ಜನಪದರು ಈಗಲೂ ನಂಬಿ ಅವನನ್ನು ಆರಾಧಿಸುತ್ತಾ ಬರುತ್ತಿದ್ದಾರೆ. ಭೂಲೋಕದಲ್ಲಿ ಮಳೆ ಬಾರದೆ ಇದ್ದಾಗ ಜೋಕುಮಾರನ ಹುಟ್ಟು(ನಿರ್ದಿಷ್ಟ ಸಮಯದಲ್ಲಿ) ತ್ತಾನೆ. ಅವನು ಬಂದು ಹೋದ ನಂತರ ಮಳೆ ಬಂದೇ ತೀರುತ್ತದೆ ಎಂಬ ಆಶಾಭಾವನೆ ರೈತರಲ್ಲಿರುತ್ತದೆ. ಜೋಕುಮಾರನನ್ನು ಪುಟ್ಟಿಯಲ್ಲಿ ಹೊತ್ತು ಮನೆಮನೆಗೆ ಹೋಗಿ ಅವನನ್ನು ಆರಾಧಿಸುವ ಪರಿಪಾಠ ಹಿಂದಿನಿಂದಲೂ ರೂಢಿಸಿಕೊಂಡು ಬಂದಿರುತ್ತಾರೆ.

ಇವನು ಮಳೆಯನ್ನು ತರಿಸುವುದಲ್ಲದೇ ಅನೇಕ ಕಲ್ಯಾಣಕರವಾದ ಕೆಲಸವನ್ನು ನಿರ್ವಹಿಸುತ್ತಾನೆ. ಮಕ್ಕಳಿಲ್ಲದ ಬಂಜೆಯರು ತಮಗೆ ಮಕ್ಕಳ ಭಾಗ್ಯವನ್ನು ಕರುಣಿಸು ಎಂದು ಇವನಲ್ಲಿ ಬೇಡಿಕೊಳ್ಳುತ್ತಾರೆ. ಸಂತಾನಕರುಣಿಸುವ ದೇವರಾಗಿದ್ದಾನೆ. ಈ ಕಾರಣಕ್ಕಾಗಿ ಇವನು 'ಪ್ರಜನನ ದೇವರೆಂದು'(Fertility God) ಕರೆಸಿಕೊಂಡಿದ್ದಾನೆ. ಅಷ್ಟೇ ಅಲ್ಲದೆ ಜೋಕುಮಾರನ ಆಚರಣೆಯ ಹಿನ್ನೆಲೆಯಲ್ಲೂ ಅದರ ಅರ್ಥವ್ಯಾಪ್ತಿ ವಿಸ್ತರಿಸುವುದನ್ನು ಕಾಣಬಹುದು. ಉತ್ತರ ಕರ್ನಾಟಕದಾದ್ಯಂತ ಮಣ್ಣಿನಿಂದ ಮಾಡಿದ ಜೋಕುಮಾರನ ಮೂರ್ತಿಯನ್ನು ಒಂದು ವಾರ ಕಾಲ ಪೂಜಿಸಿ ನೀರಿನಲ್ಲಿ ವಿಸರ್ಜಿಸುವ ಕ್ರಿಯೆ ಮುಖ್ಯವೆನಿಸುತ್ತದೆ. ವಿಸರ್ಜಿಸಿದ ಒಂದೆರಡು ದಿನಗಳಲ್ಲಿ ಅವನ ಅಂಬಲಿ ಮತ್ತು ಕಪ್ಪನ್ನು ಬೇವಿನ ಎಲೆಗಳೊಂದಿಗೆ ಎಲ್ಲಾ ರೈತಾಪಿ ವರ್ಗದವರು ತಮ್ಮ ಹೊಲಗದ್ದೆಗಳಲ್ಲಿ ಚರಗ ಚೆಲ್ಲುವ ಮತ್ತೊಂದು ಕ್ರಿಯೆಯು ನಡೆಯುತ್ತದೆ. ಈ ರೀತಿಯಲ್ಲಿ ಅವನ ಪ್ರಸಾದ ರೂಪದಲ್ಲಿ ಅಂಬಲಿ, ಕಪ್ಪನ್ನು ಭೂಮಿಗೆ

ಚೆಲ್ಲುವುದರಿಂದ ಭೂಮಿಯ ಫಲವತ್ತತೆ ಇಮ್ಮಡಿಯಾಗುತ್ತದೆ. ಬೆಳೆಗಳು ಸಮೃದ್ಧಿಯಾಗಿ ಬರುತ್ತವೆ ಎನ್ನುವ ಬಲವಾದ ನಂಬಿಕೆ ಅವರದ್ದಾಗಿದೆ. ಗ್ರಾಮೀಣ ಜನರ ಜೀವನದಲ್ಲಿ ಜೋಕುಮಾರನು ಅವಿಭಾಜ್ಯ ಅಂಗವಾಗಿದ್ದಾನೆ. ಗ್ರಾಮೀಣ ಜನರಿಗೂ ಇವನಿಗೂ ಅವಿನಾಭಾವ ಸಂಬಂಧವಿರುತ್ತದೆ.

ಜೋಕುಮಾರನ ಆಚರಣೆಯ ಪರಿಕಲ್ಪನೆಗೆ ಸಂಬಂಧಪಟ್ಟಂತೆ ಜನರು ಏಕೆ ಅವನನ್ನು ಪೂಜಿಸುತ್ತಾರೆ? ಎಂಬಂತಹ ಪ್ರಶ್ನೆಗಳಿಗೆ ಪೂರಕವಾಗಿ ಈ ವಿಚಾರವನ್ನು ವಕ್ತೃಗಳು ಹೀಗೆ ಹೇಳುತ್ತಾರೆ. ಭಾದ್ರಪದ ಮಾಸದಲ್ಲಿ ಜನರು ಗಣೇಶನನ್ನು ಅತ್ಯಂತ ವೈಭವದಿಂದ ಪೂಜಿಸುತ್ತಾರೆ. ಪ್ರತಿ ನಿತ್ಯವೂ ಅವನಿಗೆ ಪೂಜೆಮಾಡುವ ಪದ್ಧತಿ. ದಿನವೂ ಅವನಿಗೆ ಭಕ್ಷಭೋಜ್ಯಗಳನ್ನು ನೈವೇದ್ಯ ಹಿಡಿದು ಅರ್ಪಿಸುತ್ತಾರೆ. ಅವನನ್ನು ವಿಸರ್ಜಿಸುವವರೆಗೂ ಒಂದಲ್ಲ ಒಂದು ರೀತಿಯಲ್ಲಿ ಅವನಿಗೆ ಪೂಜೆ-ಪುನಸ್ಕಾರಗಳು ನಡೆಯುತ್ತವೆ. ವಿಸರ್ಜನೆಯಾದ ನಂತರ ಗಣಪನು ಕೈಲಾಸಕ್ಕೆ ಹೋಗುತ್ತಾನೆ. ಅಲ್ಲಿ ಶಿವನು ಭೂಲೋಕದಲ್ಲಿ ಜನರು ಹೇಗಿದ್ದಾರೆ? ಅವರ ಸ್ಥಿತಿ-ಗತಿಗಳು ಹೇಗಿವೆ? ಕಾಲಕಾಲಕ್ಕೆ ಮಳೆ ಆಗುತ್ತಿದೆಯಾ? ಎಂಬ ಪ್ರಶ್ನೆಗಳನ್ನು ಕೇಳುತ್ತಾನೆ. ಆಗ ಗಣಪನು ತಾನು ಭೂಮಿಯಲ್ಲಿರುವಷ್ಟು ದಿನ ಜನರು ನನಗೆ ಪೂಜೆಯನ್ನು ಮಾಡಿ, ಭಕ್ಷಭೋಜ್ಯಗಳನ್ನು ನೀಡಿದರು. ಅಲ್ಲಿನ ಜನರು ಸುಖ, ಶಾಂತಿ, ನೆಮ್ಮದಿಗಳಿಂದ ಜೀವಿಸುತ್ತಿದ್ದಾರೆಂದು, ಕಾಲಕಾಲಕ್ಕೆ ಮಳೆಯಾಗುತ್ತಿದೆ ಎಂದು ಹೇಳುತ್ತಾನೆ. ಇದಾದ ನಂತರ ಜೋಕುಮಾರನು ತಾನೊಮ್ಮೆ ಭೂಲೋಕಕ್ಕೆ ಹೋಗಿ ಬರುತ್ತೇನೆ ಎಂದು ಶಿವನಿಂದ ಅಪ್ಪಣೆ ಪಡೆದು ಇಳೆಗೆ ಬರುತ್ತಾನೆ. ಅವನು ಬಂದಾಗ ಇಲ್ಲಿಯ ಪರಿಸ್ಥಿತಿಗಳು ಅಯೋಮಯವಾಗಿರುತ್ತವೆ. ಅದನ್ನು ಕಂಡ ಅವನಿಗೆ ಖೇದವುಂಟಾಗುತ್ತದೆ. ಗಣೇಶನು ಬಂದಾಗ ಇದ್ದ ಪರಿಸ್ಥಿತಿ ಹಾಗೂ ತಾನು ಬಂದಂಥ ಸಂದರ್ಭದಲ್ಲಿರುವ ಪರಿಸ್ಥಿತಿ ತದ್ವಿರುದ್ಧವಾಗಿರುತ್ತದೆ, ಅಜಗಜಾಂತರ ವಿರುತ್ತದೆ. ಗಣೇಶನಿಗೆ ಜನರು ಭಕ್ಷ ಭೋಜ್ಯಗಳನ್ನು ನೀಡಿದರೆ ಇವನಿಗೆ ಸಾಧಾರಣವಾದ ಆಹಾರವನ್ನು ನೀಡುತ್ತಾರೆ. ಕಾರಣ ಇಲ್ಲಿ ಮಳೆ ಬಾರದ್ದರಿಂದ ಜನರು ತತ್ತರಿಸಿಹೋಗಿರುತ್ತಾರೆ. ಅವರಿಗೆ ತಿನ್ನಲು ಆಹಾರವಿಲ್ಲ, ಇನ್ನು ಜೋಕುಮಾರನಿಗೆ ಕೊಡುವುದಾದರೂ ಎಂತಹವುದು. ಅವನು ಪ್ರತಿಯೊಬ್ಬ ರೈತರ ಮನೆಗೆ ಹೋಗುತ್ತಾನೆ. ರೈತರು ಅವನಿಗೆ ಉಪ್ಪು, ಒಣ ಮೆಣಸಿನಕಾಯಿ ಮತ್ತು ಅಂಬಲಿಯನ್ನು ನೀಡುತ್ತಾರೆ. ಅವನಿಗೆ ಅವುಗಳನ್ನು ತಿಂದು ಸಾಕಾಗಿ ಹೋಗುತ್ತದೆ. ಅವನ ಹೊಟ್ಟೆ ಉರಿಯುತ್ತದೆ. ಸಾಕಷ್ಟು ಕಷ್ಟಗಳನ್ನು ಅನುಭವಿಸುತ್ತಾನೆ. ಆಗ ಜನರು ಅವನಿಗೆ ಹೇಳುತ್ತಾರೆ. ಲೋಕದಲ್ಲಿ ಮಳೆ ಇಲ್ಲದೇ ಜನರು ಒಂದೊತ್ತಿನ ಕೂಳಿಗೂ ವಿಪರೀತ ಸಂಕಟವನ್ನು ಅನುಭವಿಸುತ್ತಿದ್ದಾರೆ. ಅವರಿಗೆ ತಿನ್ನಲಿಕ್ಕೆ ದವಸ-ಧಾನ್ಯವಿಲ್ಲ, ಇನ್ನು ನಿನಗೆ ನೀಡುವುದಾದರೂ ಏನು? ಎಂತು? ಆಗ ಜೋಕುಮಾರನ ಮನಸ್ಸಿಗೆ ನೋವುಂಟಾಗುತ್ತದೆ. ಅವನು ಭೂಲೋಕದಲ್ಲಿ ಎಲ್ಲಿ ಸಂಚರಿಸಿದರೂ ಸಹ ಅದೇ ಪರಿಸ್ಥಿತಿ ನಿರ್ಮಾಣವಾಗಿರುತ್ತದೆ. ಅವನು ದೇವಲೋಕಕ್ಕೆ ಹೋಗಲು ನಿರ್ಣಯಿಸುತ್ತಾನೆ. ದೇವಲೋಕಕ್ಕೆ ಹೋದಾಗ

ಶಿವನು ಅವನನ್ನು ಆದರದಿಂದ ಬರಮಾಡಿಕೊಳ್ಳುತ್ತಾನೆ. ಅವನ ಕುಶಲೋಪರಿಯನ್ನು ವಿಚಾರಿಸಿ ಆ ನಂತರ ಭೂಲೋಕದ ಬಗ್ಗೆ ಕೂಲಂಕಷವಾಗಿ ವಿಚಾರಿಸುತ್ತಾನೆ. ಅದಕ್ಕೆ ಉತ್ತರವಾಗಿ ಜೋಕುಮಾರನು ಅಲ್ಲಿಗೆ ಹೋಗಿದ್ದ ಸಂದರ್ಭದಲ್ಲಿ ಜನರು ಅನುಭವಿಸುತ್ತಿರುವ ಎಲ್ಲ ಕಷ್ಟಕರ ಪರಿಸ್ಥಿತಿಗಳನ್ನು ಚಾಚೂ ತಪ್ಪದೆ ಸಮಗ್ರವಾಗಿ ವಿವರಿಸುತ್ತಾನೆ. ಅಲ್ಲಿ ಮಳೆ ಇಲ್ಲದ ಕಾರಣ ಜನರಿಗೆ ತಿನ್ನಲು ಆಹಾರವಿಲ್ಲದೆ ಬಳಲುತ್ತಿದ್ದಾರೆಂತಲೂ, ಜರೂರು ಮಳೆ ಬೇಕಾಗಿದೆ, ತನಗೆ ಉಪ್ಪು, ಒಣಮೆಣಸಿನಕಾಯಿ, ನುಚ್ಚು ಅಂಬಲಿಯನ್ನು ನೀಡಿದರು. ದಿನವೂ ಅದನ್ನು ತಿಂದು ನನಗೆ ಹೊಟ್ಟೆ ಉರಿಯುತ್ತಿತ್ತು. ಪ್ರತಿನಿತ್ಯ ತಿನ್ನುವ ರೈತರ ಪಾಡೇನು ಎಂದು ಎಲ್ಲವುಗಳ ಬಗ್ಗೆ ಸವಿಸ್ತಾರವಾದ ವರದಿಯಲ್ಲಿ ತಾನು ಭೂಲೋಕದಲ್ಲಿ ಕಂಡುಂಡ ಎಲ್ಲ ಅನುಭವಗಳನ್ನು ತಿಳಿಸುತ್ತಾನೆ. ಭೂಲೋಕದ ಕರುಣಾಜನಕ ಸ್ಥಿತಿಯನ್ನು ಕೇಳಿ ತಿಳಿದುಕೊಂಡ ಶಿವನು ಮಳೆಯ ಅಧಿದೇವನಾದ ವರುಣನಿಗೆ ಭೂಲೋಕಕ್ಕೆ ಹೋಗಲು ಆದೇಶಿಸುತ್ತಾನೆ. ಆಗ ಭೂಲೋಕದಲ್ಲಿ ಸಮೃದ್ಧಿಯಾಗಿ ಮಳೆಯಾಗುತ್ತದೆ. ಎಲ್ಲಿ ನೋಡಿದರೂ ಸಹ ಹಸಿರುಮಯ ವಾತಾವರಣ ನಿರ್ಮಾಣವಾಗುತ್ತದೆ. ಜನರು ಸಮೃದ್ಧಿಯಿಂದ ನೆಮ್ಮದಿಯ ಜೀವನವನ್ನು ನಡೆಸುತ್ತಾರೆ. ಆದುದರಿಂದ ಜೋಕುಮಾರನು ಬಂದು ಹೋದನಂತರ ಮಳೆ ಬಂದೇ ತೀರುತ್ತದೆ ಎಂದು ಜನಪದರು ಇಂದಿಗೂ ತಿಳಿದಿದ್ದಾರೆ. ಈ ಎಲ್ಲ ಕಾರಣಗಳ ಹಿನ್ನೆಲೆಯಲ್ಲಿ ಜೋಕುಮಾರನ ಆಚರಣೆಯನ್ನು ಅವ್ಯಾಹತವಾಗಿ ಮುಂದು ವರಿಸಿಕೊಂಡು ಬರುತ್ತಿದ್ದಾರೆ. ಇದರ ಜತೆಗೆ ಮಕ್ಕಳಾಗದವರು ತಮಗೂ ಮಕ್ಕಳನ್ನು ಕರುಣಿಸುತ್ತಾನೆ ಎಂಬ ನಂಬಿಕೆಯಿಂದ ಇವನನ್ನು ಆರಾಧಿಸುತ್ತಾರೆ. ಕಾಕತಾಳೀಯವೆಂಬಂತೆ ಮುಂದೊಂದು ದಿನ ಈ ಮನೆತನದವರಿಗೆ ಸಂತಾನ ಭಾಗ್ಯಲಭಿಸಿದರೆ ಅವರಿಗೆ ಜೋಕುಮಾರನ ಬಗ್ಗೆ ಇರುವ ನಂಬಿಕೆಗಳು ಇನ್ನಷ್ಟು ಬಲವಾಗುತ್ತವೆ. ಈ ಎಲ್ಲಾ ಉದ್ದೇಶಗಳ ಹಿನ್ನೆಲೆಯಿಂದ ಪ್ರಾರಂಭವಾಗಿ ಜೋಕುಮಾರನ ಆಚರಣೆ ಒಂದು ಸಾಮಾಜಿಕ ಸಂಪ್ರದಾಯವಾಗಿ ಬೆಳೆದು ಉಳಿದುಕೊಂಡು ಬಂದಿರುತ್ತದೆ. "ಹಬ್ಬಕ್ಕಾಗಿ ಗೌರಿಗಣೇಶರು ಕೈಲಾಸದಿಂದ ಭೂಮಿಗೆ ಬರುತ್ತಾರೆ. ಭೂಮಿಯು ಗೌರಿಯ ತವರುಮನೆ. ಹಬ್ಬವನ್ನು ಮುಗಿಸಿಕೊಂಡು ಕೈಲಾಸಕ್ಕೆ ಮರಳಿದಾಗ ಶಿವ ಇವರನ್ನು ಪ್ರಶ್ನಿಸುತ್ತಾನೆ. ತವರು ಮನೆಯಲ್ಲಿ ಏನೇನು ಉಂಡು ಬಂದಿರೆಂದು. ಆಗ ಗೌರಿಯು ಅಂಬಲಿ ತುಂಬೆ ಸೊಪ್ಪು ಎನ್ನುತ್ತಾಳೆ. ಗಣೇಶನು ಕರಿಗಡುಬು ಕರ್ಜಿಕಾಯಿಯಂತಹ ಮೋದಕಗಳು ಎಂದು ಹೇಳುತ್ತಾನೆ. ಆಗ ಶಿವನು ಭೂಮಿಯ ನಿಜವಾದ ಪರಿಸ್ಥಿತಿಯನ್ನು ತಿಳಿದುಕೊಂಡು ಬರಲು ತನ್ನ ಇನ್ನೊಬ್ಬ ಮಗನಾದ ಜೋಕುಮಾರನನ್ನು ಏಳು ದಿವಸ ಅವಧಿ ಕೊಟ್ಟು, ಕಳುಹಿಸುತ್ತಾನೆ. ಏಳುದಿವಸಗಳವರೆಗೆ ಭೂಲೋಕದಲ್ಲಿ ಅಡ್ಡಾಡಿದ ಜೋಕುಮಾರನು ಹಿಂತಿರುಗಿ ಹೋಗಿ ಭೂಲೋಕದ ಸ್ಥಿತಿ ಬಹಳ ದಾರುಣವಾಗಿದೆ. ಮಳೆ ಬರದೆ ಜನರು ಕಂಗಲಾಗಿದ್ದಾರೆ. ಎಂದು ಹಿಡಿ ಕೂಳಿಗೆ ಸಹ ಗತಿಯಿಲ್ಲದವರಾಗಿದ್ದಾರೆ, ನಾನು ಏಳೇಳು ಊರುಗಳನ್ನು ತಿರುಗಿದರೂ ಏಳು ಹಿಡಿ ಜೋಳ ಸಹ ಸಿಕ್ಕಲಿಲ್ಲ ಎಂದು ತನ್ನ ತಂದೆಗೆ ವರದಿ

ಒಪ್ಪಿಸುತ್ತಾನೆ. ಈಗಲೂ ಸಹ ಜೋಕುಮಾರ ಹುಟ್ಟುವ ಮುಂಚಿನ ಏಳು ದಿವಸ ಮತ್ತು ಹುಟ್ಟಿದ ನಂತರದ ಏಳು ದಿವಸ ಮಳೆ ಬರುವುದಿಲ್ಲ. ಅವನು ಸತ್ತ ನಂತರ ಮಳೆ ಬರುತ್ತದೆ ಎನ್ನುತ್ತಾರೆ".[೧]

"ಹಬ್ಬಕ್ಕೆ ಮೊದಲು ಗೌರಿಗಣೇಶರು ಬರುತ್ತಾರೆ. ನಂತರ ಜೋಕುಮಾರ ಬರುತ್ತಾನೆ. ಜೋಕುಮಾರನು ಎಳೆಯಲ್ಲಿ ಹುಟ್ಟುವುದರಿಂದ ಎಳೆಗೌರಿಯ ಮಗ ಅಂದರೆ ಶಿವನ ಮಗ. ಭೂಲೋಕದ ಸ್ಥಿತಿಗತಿಯ ಬಗ್ಗೆ ಸರಿಯಾದ ಮಾಹಿತಿ ಸಿಗುವುದರಿಂದ ತಂದೆಯಿಂದ ನಿಯುಕ್ತನಾಗಿ ಜೋಕುಮಾರ ಬರುತ್ತಾನೆ. ಜನರು ಗಣಪತಿಗೆ ನೀಡುವ ವಸ್ತುಗಳು ಭಕ್ಷ್ಯ ಭೋಜ್ಯಗಳಂತಹ ಮೋದಕಗಳಾದರೆ, ಜೋಕುಮಾರನಿಗೆ ನೀಡುವದು ಉಪ್ಪು, ಮೆಣಸಿನಕಾಯಿ ಬೆಳೆಯುವಂತಹ ಸಾಮಾನ್ಯ ವಸ್ತುಗಳು. ಅವನಿಗೆ ಕರಿಗಡಬು, ಕರ್ಜಿಕಾಯಿಗಳಾದರೆ ಇವನಿಗೆ ಜೋಳದ ರಾಗಿಯ ನುಚ್ಚಂಬಲಿ ಒಂದು ಅರ್ಥದಲ್ಲಿ ಗಣೇಶ ಶ್ರೀಮಂತರ ಪ್ರತಿನಿಧಿಯಂತೆ ಕಂಡರೆ ಜೋಕುಮಾರ ಸಾಮಾನ್ಯರ ಆರಾಧ್ಯದೈವನಂತೆ ಕಾಣುತ್ತಾನೆ. ಗೌರಿಗಣೇಶರ ಪೂಜೆ ಪುನಸ್ಕಾರಗಳು ಗೌಡ ಶಾನುಭೋಗರ ಮನೆಗಳಲ್ಲಿ ಅದ್ದೂರಿಯಾಗಿ ನಡೆದರೆ. ಜೋಕುಮಾರನ ಆರಾಧನೆ ಬಾರಿಕರು, ಅಗಸರು ಮುಂತಾದ ಬಡವರ, ಕೆಳವರ್ಗದವರ ಮನೆಯಲ್ಲಿ ನಡೆಯುತ್ತದೆ. ಕತೆಯ ನಿರೂಪಣೆಯಲ್ಲಿ ಭೂಲೋಕದ ಸ್ಥಿತಿಗತಿ ಅರಿಯಲು ಪರಶಿವ ತನ್ನ ಇನ್ನೊಬ್ಬ ಮಗನಾದ ಜೋಕುಮಾರನನ್ನು ಕಳಿಸಿದ ಎಂಬ ವಿವರಣೆ ನೋಡಿದರೆ ಶಿವನ ಆ ಮಗ ಕುಮಾರಸ್ವಾಮಿಯೇ ಜೋಕುಮಾರ ಎನಿಸುತ್ತದೆ."[೨]

ಜೋಕುಮಾರನನ್ನು ಗಂಗಾಮತಸ್ಥರೇ ಏಕೆ ಆರಾಧಿಸುತ್ತಾರೆ? ಬೇರೆ ಯಾವ ಸಮುದಾಯದವರು ಏಕೆ ಇವನನ್ನು ಹೊತ್ತು ಊರಾಡಲು ಹೋಗುವುದಿಲ್ಲ. ಎಂಬಂತಹ ಸಹಜವಾದ ಪ್ರಶ್ನೆಗಳು ಉದ್ಭವಿಸುತ್ತವೆ ನಿಜ. ಅವರೇ ಇವನನ್ನು ಪೂಜಿಸಿಕೊಂಡು ಬರುತ್ತಿರುವುದಕ್ಕೆ ವಕ್ತೃಗಳು ನಮಗೆ ತಲೆತಲಾಂತರಗಳಿಂದ ಬಂದಂತಹ ಪರಂಪರೆ ಇದಾಗಿದೆ. ಅಲ್ಲದೆ ಇವನು ನಮಗೆ ಒಲಿದಿದ್ದಾನೆ ಎಂದು ಅದಕ್ಕೆ ಪೂರಕವಾದಂತಹ ದಂತ ಕಥೆಯೊಂದನ್ನು ಹೇಳುತ್ತಾರೆ. ಜೋಕುಮಾರನು ಸಾಮಾನ್ಯನಲ್ಲ. ಅವನು ಬಾಲ್ಯಾವಸ್ಥೆಯಲ್ಲಿದ್ದಾಗ ಒಮ್ಮೆ ತನ್ನ ತಾಯಿಯಾದ ಗೌರಿಯನ್ನು ತನ್ನ ಮದುವೆಯ ಬಗ್ಗೆ ಪ್ರಸ್ತಾಪಿಸುತ್ತಾನೆ. ತಾಯಿಗೆ ಅವನ ಇಂಗಿತವನ್ನು ಕೇಳಿ ಸೋಜಿಗವಾಗುತ್ತದೆ. ಕಾರಣ ಆ ಅವಸ್ಥೆಯಲ್ಲಿ ಸರಿಯಾಗಿ ತೊದಲು ಮಾತುಗಳು ಸಹ ಬಾರದ ವಯಸ್ಸಿನಲ್ಲಿ ತನ್ನ ಮದುವೆಯ ಬಗ್ಗೆ ವಿಚಾರಿಸುತ್ತಿರುವುದನ್ನು ಕೇಳಿದ ಅವಳಿಗೆ ಅಚ್ಚರಿಯಾಗುವುದು ಸಹಜ. ಅವಳು ನಿನಗೆ ಎಂತಹ ಹೆಣ್ಣನ್ನು ತಂದು ಮದುವೆ ಮಾಡಬೇಕೆಂದು ಅವನಿಗೆ ಕೇಳುತ್ತಾಳೆ. ಆ ಬಾಲಕನು ನಿನ್ನಂತಹ ಚೆಲುವೆ ಬೇಕೆನ್ನುತ್ತಾನೆ. ತಾಯಿಗೆ ಇವನು ಉತ್ತರ ಕೊಟ್ಟ ಪರಿಯನ್ನು ಕೇಳಿ ಕೋಪಬರುತ್ತದೆ. ಹೆತ್ತ ತಾಯಿಯನ್ನು ಭ್ರಮಿಸಿದ ಇವನು ಎಂತಹ ದುರುಳ! ಪೋಲಿ, ಪುಂಡನಿರಬೇಕು? ಇವನು ಮುಂದೆ ಎಂತಹ ಹುಡುಗನಾಗಬಹುದು ಎಂದು ಮನದಲ್ಲಿಯೇ ನಿರ್ಧರಿಸುತ್ತಾಳೆ. ಅವಳು ಪಕ್ಕದಲ್ಲಿದ್ದ ಕಟ್ಟಿಗೆಯ

ತುಂಡೊಂದನ್ನು ತೆಗೆದುಕೊಂಡು ಬಾಲಕನ ತಲೆಗೆ ಹೊಡೆಯುತ್ತಾಳೆ. ಅವನು ಸಾವನ್ನಪ್ಪುತ್ತಾನೆ.

ಜೋಕುಮಾರೆಂಬನು ಗೌರಿದೇವಿ ಮಗನಮ್ಮ
ಹುಟ್ಟುತ್ಲೆ ತಾಯ ಭ್ರಮಿಸ್ಯಾನೆ
ಹುಟ್ಟುತ್ಲೆ ತಾಯ ಭ್ರಮಿಸ್ಯಾನೆ ಗೌರಮ್ಮ ಎತ್ತಾಕಿ ಕೊರಳು ಮುರಿದಾಳೆ||

ತಾಯಿ ತನ್ನ ಬಟ್ಟೆಯಲ್ಲಿ ಬಾಲಕನ ರುಂಡವನ್ನು ಇಟ್ಟು ಅಗಸನಿಗೆ ಕೊಡುತ್ತಾಳೆ. ಅವನು ಬಟ್ಟೆ ಒಗೆಯಲು ಹೊಳೆಯ ದಂಡೆಗೆ ತೆಗೆದುಕೊಡು ಹೋಗಿ ಅವುಗಳನ್ನು ಬಿಚ್ಚುತ್ತಾನೆ. ಅವುಗಳ ಮಧ್ಯೆ ಬಾಲಕನ ರುಂಡ ಇರುವುದನ್ನು ನೋಡಿದ ಅವನು ಭಯಗೊಂಡು ಅದನ್ನು ತೆಗೆದು ಹೊಳೆಗೆ ಹಾಕುತ್ತಾನೆ. ಬಟ್ಟೆಯನ್ನು ಶುಭ್ರಗೊಳಿಸಿ ತಂದುಕೊಡುತ್ತಾನೆ. ಆಗ ತಾಯಿ ತಾನು ಮಾಡಿದ ಕಾರ್ಯಕ್ಕೆ ಪಶ್ಚಾತ್ತಾಪ ಪಟ್ಟುಕೊಂಡಿರುತ್ತಾಳೆ. ಏನೋ ಬಾಲಕ ಮುಗ್ಧತೆಯಿಂದ ಕೇಳಿದ ಪ್ರಶ್ನೆಗೆ ನಾನು ಇಂತಹ ಹೀನ ಕೃತ್ಯವನ್ನು ಮಾಡಬಾರದಿತ್ತು ಎಂದು ನೊಂದುಕೊಳ್ಳುತ್ತಾಳೆ. ಬಾಲಕನ ರುಂಡವನ್ನು ಪತ್ತೆಹಚ್ಚಲು ಹೊಳೆಯ ದಂಡೆಗೆ ಬರುತ್ತಾಳೆ. ಅಲ್ಲಿರುವ ಜನರನ್ನು ಕುರಿತು 'ನನ್ನ ಕಂದನನ್ನುನೀವು ನೋಡಿದಿರಾ?' ಎಂದು ಕೇಳಿದಾಗ, ಅವರು ನೋಡಿಲ್ಲ ಎಂಬ ಉತ್ತರವನ್ನು ಕೊಡುತ್ತಾರೆ. ಅಷ್ಟರಲ್ಲಿ ಗೌರಿಹಬ್ಬ ಬರುತ್ತದೆ. ಬೆಸ್ತರೆಲ್ಲಾ ಚೆನ್ನಾಗಿ ಊಟಮಾಡಿ ಮೀನು ಹಿಡಿಯಲು ತಮ್ಮ ಬಲೆಗಳೊಂದಿಗೆ ಹೊರಡುತ್ತಾರೆ. ಹೊಳೆಯಲ್ಲಿ ಅವರು ಬಲೆಯನ್ನು ಬೀಸುತ್ತಾರೆ. ಕೆಲ ಗಂಟೆಗಳ ನಂತರ ಬಲೆಯನ್ನು ತೆಗೆದುನೋಡಿದರೆ ರುಂಡವೊಂದು ಅದರಲ್ಲಿರುತ್ತದೆ. ಅವರು ಹೆದರಿ ಅದನ್ನು ಹೊಳೆಗೆ ಹಾಕುತ್ತಾರೆ. ಬೇರೊಂದೆಡೆಯಲ್ಲಿ ಹೋಗಿ ಬಲೆಯನ್ನು ಹಾಕುತ್ತಾರೆ. ಅಲ್ಲಿಯೂ ಸಹ ಅದೇ ರುಂಡ ಬರುತ್ತದೆ. ಅಯ್ಯೋ ಇದೇನು ಕತೆ? ಹೀಗಾಯಿತು ಎಂದು ಮತ್ತೊಂದು ಬದಿಗೆ ಹೋಗಿ ಬಲೆಯನ್ನು ಹಾಕುತ್ತಾರೆ. ಬಲೆಯನ್ನು ತೆಗೆದು ನೋಡಿದರೆ ಅದೇ ರುಂಡ ಇರುತ್ತದೆ. ಅವರೆಲ್ಲರಿಗೂ ಗಾಬರಿಯಾಗುತ್ತದೆ. ಈ ದಿವಸ ಮೀನು ಸಿಗುವಂತೆ ಕಾಣುತ್ತಿಲ್ಲ ಎಲ್ಲರೂ ನಡೆಯಿರಿ. ಜೋಯಿಸರ ಮನೆಗೆ ಹೋಗಿ ಜ್ಯೋತಿಷ್ಯ ಶಾಸ್ತ್ರವನ್ನು ಕೇಳೋಣ ಎಂದು ತಮ್ಮಲ್ಲಿ ನಿರ್ಧರಿಕೊಳ್ಳುತ್ತಾರೆ. ಜೋಯಿಸರ ಮನೆಗೆ ಅವರು ಬಂದು ನಡೆದ ಎಲ್ಲಾ ಘಟನೆಗಳ ಬಗ್ಗೆ ವಿವರವಾಗಿ ತಿಳಿಸುತ್ತಾರೆ. ಜೋಯಿಸರು ಲೆಕ್ಕಾಚಾರ ಹಾಕಿ ಇವನು ಗೌರಮ್ಮನ ಮಗ ನಿಮಗೆ ಸಿಕ್ಕಿದ್ದಾನೆ ಇಂದಿನಿಂದ ಇವನನ್ನು ನೀವು ಚೆನ್ನಾಗಿ ನೋಡಿಕೊಳ್ಳಿರಿ. ಇವನನ್ನು ಏಳುದಿವಸ ಚೆನ್ನಾಗಿ ಮೆರೆಸಿರಿ. ಇವನಿಗೆ ಏಳು ದಿವಸ ಆಯಸ್ಸು. ಏಳುದಿನಗಳ ನಂತರ ಅವನು ಸಾಯುತ್ತಾನೆ. ಅವನ ಮರಣಾನಂತರ ನೀವು ದಿವಸ (ಶ್ರಾದ್ಧ) ಮಾಡಿಕೊಳ್ಳಬೇಕು. ಇಂದಿನಿಂದ ನೀವು (ಗಂಗಾಮತಸ್ಥರು) ಪ್ರತಿ ವರುಷಕ್ಕೊಮ್ಮೆ ಇವನನ್ನು ಆರಾಧಿಸಬೇಕೆಂದು ಹೇಳುತ್ತಾರೆ. ಅಂದಿನಿಂದ ಇಂದಿನವರೆಗೂ ಈ ಸಮುದಾಯದವರು ಇವನನ್ನು ಪೂಜಿಸುತ್ತಿದ್ದಾರೆ. ಕೆಲವು ಭಾಗಗಳಲ್ಲಿ ಜೋಕುಮಾರನ ತಲೆಯನ್ನು ಮಾತ್ರ ಪುಟ್ಟಿಯಲ್ಲಿಟ್ಟಿರುತ್ತಾರೆ ಇನ್ನೂ ಕೆಲವು ಭಾಗಗಳಲ್ಲಿ ಅರ್ಧ ಶರೀರದ ಮೂರ್ತಿಯನ್ನಿಡುವ

ಕ್ರಮ ಕಂಡು ಬರುತ್ತದೆ. ಅವರಿಗೆ ಇವು ಯಾವುವೂ ಅಂತಿಮವಲ್ಲ. ತಮ್ಮ ಕಲ್ಪನೆಗೆ ತಕ್ಕಂತೆ ಅವನ ಮೂರ್ತಿಯನ್ನು ತಯಾರಿಸಿಕೊಳ್ಳುತ್ತಾರೆ. ಕೆಲವು ಮಹಿಳೆಯರು ನಾವು ಒಂದು ವಾರಕಾಲ ಸುತ್ತಮುತ್ತಲ ಹಳ್ಳಿಗಳಿಗೆ ಊರಾಡಲು ಹೋಗಬೇಕಿರುತ್ತದೆ. ನಮಗೆ ಹೊರುವುದಕ್ಕೆ ಅನುಕೂಲವಾಗುವ ಹಾಗೆ ನಾವು ಇದನ್ನು ಬದಲಾವಣೆ ಮಾಡಿಕೊಂಡಿದ್ದೇವೆ ಎನ್ನುತ್ತಾರೆ.

ಜೀವನಾವರ್ತನ ಆಚರಣೆಗಳು (Life cycle Ceremonies)

ಪ್ರತಿಯೊಂದು ಸಮುದಾಯದ ಆಚರಣೆಯಲ್ಲಿ ಜೀವನಾವರ್ತನವು ಅತ್ಯಂತ ಮಹತ್ವದ ಸ್ಥಾನವನ್ನು ವಹಿಸುತ್ತದೆ. ಆಯಾ ಸಮುದಾಯವೂ ಸಹ ಅದರದ್ದೇ ಆದ ಆಚರಣೆಯನ್ನು ಮಾಡುತ್ತಿರುತ್ತದೆ. ಆದರದ್ದೇ ಆದ ರೀತಿ-ನೀತಿ, ರಿವಾಜುಗಳನ್ನು ಹೊಂದಿರುತ್ತದೆ. ಯಾವುದೇ ಆಚರಣೆಯನ್ನು ನಾವು ನೋಡಿದಾಗ ಅದರಲ್ಲಿ ಸಾಮ್ಯತೆ ಮತ್ತು ಭಿನ್ನತೆಯಿರುತ್ತದೆ. ಒಂದು ಆಚರಣೆಯಿಂದ ಮತ್ತೊಂದು ಆಚರಣೆಗೆ ಅನೇಕ ವಿಷಯಗಳೂ ಸಹ ಬದಲಾಗುತ್ತಿರುತ್ತವೆ. ನಿರ್ದಿಷ್ಟ ಸಮುದಾಯಕ್ಕೆ ಸರಿತೋರಿದ ಹಾಗೆ ಅವರು ಆಚರಿಸಿಕೊಂಡು ಬಂದಿರುತ್ತಾರೆ. ಇವುಗಳಲ್ಲಿ ಯಾವುದನ್ನೂ ಇದಮಿತ್ಥಂ ಎಂದು ಹೇಳಲು ಬರುವುದಿಲ್ಲ. ಕೆಲವು ಆಚರಣೆಗಳು ಅನುಚಾನಾಗಿ ಹಿಂದಿನ ತಲೆಮಾರುಗಳಿಂದ, ವಂಶ ಪಾರಂಪರ್ಯವಾಗಿ ಅವರಿಗೆ ಬಳುವಳಿಯಾಗಿ ಬಂದಿರುತ್ತವೆ.

ಇಂತಹ ಆಚರಣೆಗಳು ಮಾನವನ ಜನ್ಮದಿಂದ ಪ್ರಾರಂಭಗೊಂಡು ಅವನ ಮರಣದೊಂದಿಗೆ ಕೊನೆಗೊಳ್ಳುತ್ತವೆ. ಇವೆಲ್ಲವುಗಳ ನಡುವೆ ಅನೇಕ ಮಾರ್ಪಾಡುಗಳಾಗುತ್ತವೆ. ಜೋಕುಮಾರನನ್ನು ಪೂಜೆ ಮಾಡುವವರೂ ಸಹ ಈ ಆಚರಣೆಗೆ ಬದ್ಧರಾಗಿಯೇ ಇರುತ್ತಾರೆ. ಯಾವುದೇ ಒಂದು ದೈವವನ್ನು ಪೂಜಿಸುವಾಗ ಮುಖ್ಯವಾಗಿ ಶ್ರದ್ಧೆ ಮತ್ತು ಭಕ್ತಿ ಇರಲೇಬೇಕು. ಇವುಗಳಿಲ್ಲದೇ ಹೋದರೆ ಅವರು ಮಾಡುವ ಪೂಜಾ ಕೆಲಸಗಳು ಸಿದ್ಧಿಯಾಗುವುದಿಲ್ಲ.

ನಾವು ಯಾವುದೇ ಸಮುದಾಯವನ್ನು ಅಧ್ಯಯನಕ್ಕೊಳಪಡಿಸಿದಾಗ ಪ್ರತಿಯೊಂದು ಸಮುದಾಯದಲ್ಲಿ ತಮ್ಮ ಅನುಕೂಲ ಹಾಗೂ ಸೌಲಭ್ಯಗಳಿಗನುಗುಣವಾಗಿ ಜೀವನದಲ್ಲಿ ಅನೇಕ ಆಚರಣೆಗಳನ್ನು ರೂಢಿಸಿಕೊಂಡು ಬಂದಿರುವುದು ತಿಳಿದು ಬರುತ್ತದೆ. ಈ ಎಲ್ಲಾ ರಿಚ್ಯುಯಲ್‌ಗಳನ್ನು ಗಮನಿಸಿದಾಗ ಅವುಗಳ ಬೆನ್ನ ಹಿಂದೆ ಇರುವ ಮುಖ್ಯ ಉದ್ದೇಶವು ತಿಳಿದುಬರುತ್ತದೆ.

ಲೋಕಕ್ಕೆಲ್ಲಾ ಅನ್ನ ನೀಡುವ ಅನ್ನದಾತನು ರೈತ. ಅವನಿಗೆ ಜೀವನದಲ್ಲಿ ಅವಶ್ಯವಾಗಿ ಮಳೆಬೇಕು. ಮಳೆ ಅವನ ಜೀವನದಲ್ಲಿ ಒಂದು ಅವಿಭಾಜ್ಯ ಅಂಗವೇ ಆಗಿದೆ. ಅದನ್ನು ಅವಲಂಬಿಸಿಯೇ ಅವನು ಬದುಕನ್ನು ನಡೆಸುತ್ತಿದ್ದಾನೆ. ಮಳೆ ಬಾರದಿದ್ದರೆ ಅದು ಬರುವಂತೆ ಮಾಡಲು ಹರಸಾಹಸಪಡುತ್ತಾನೆ. ಕಂಡ ಕಂಡ ದೇವರುಗಳನ್ನು ಬೇಡಿಕೊಳ್ಳುತ್ತಾನೆ. ಮರೆತು ಹೋಗಿರುವ ದೇವರುಗಳ ಪೂಜೆ ಮಾಡುತ್ತಾನೆ.

ಇತ್ಯಾದಿಯಾಗಿ ಪರಂಪರೆಯಿಂದ ನಡೆದು ಬಂದಿರುವ ಸಂಪ್ರದಾಯ ಬದ್ಧವಾದ ಆಚರಣೆಗಳಲ್ಲಿ ತೊಡಗುತ್ತಾನೆ. ಇಂತಹ ಆಚರಣೆಗಳು ಬಹಳಷ್ಟಿದ್ದು. ಅವುಗಳೆಲ್ಲಾ ತನ್ನದೇ ಆದ ಅನನ್ಯತೆಯೊಂದಿಗೆ ಗುರುತಿಸಿಕೊಂಡಿವೆ. ಒಂದು ಆಚರಣೆ ಮತ್ತೊಂದು ಆಚರಣೆಗಿಂತ ಭಿನ್ನವಾಗಿರುತ್ತದೆ. ಮೇಲ್ನೋಟಕ್ಕೆ ಎಲ್ಲಾ ಆಚರಣೆಗಳು (ಕೃಷಿಗೆ ಸಂಬಂಧಿಸಿದಂತೆ) ಒಂದೇ ರೀತಿ ಎನ್ನುವಂತೆ ಭಾಸವಾದರೂ ಸಹ ಅವು ಒಳನೋಟದಲ್ಲಿ ಬೇರೆ ರೀತಿಯಲ್ಲಿ ಗೋಚರಿಸುತ್ತವೆ. ಮಳೆ ತರಿಸುವ ಸಲುವಾಗಿ ಅನೇಕ ಆಚರಣೆಗಳು ನಮ್ಮ ನಡುವೆ ರೂಢಿಯಲ್ಲಿವೆ. ಉದಾಹರಣೆಗೆ ವಿವರಿಸುವುದಾದರೆ

೧. ಕತ್ತೆ, ಕಪ್ಪೆಗಳ ಮದುವೆ.
೨. ಅರಳಿ ಮತ್ತು ಬೇವಿನ ಗಿಡಗಳ ಮದುವೆ.
೩. ಪರ್ಜನ್ಯ ಜಪ.
೪. ಮಳೆ ಮಲ್ಲಪ್ಪನ ಪೂಜೆ.
೫. ಗುರ್ಜಿಯ ಆಚರಣೆ.
೬. ಕರವು (ಬುಡ್ಡೆಕಲ್ಲು) ಕಲ್ಲು ಪೂಜೆ.
೭. ಕಂತೆ ಭಿಕ್ಷೆಯ ಪ್ರಸಾದ.
೮. ಮೇಘದ ಮರಿಯನ್ನು ಕಡಿಯುವುದು.......ಇತ್ಯಾದಿ.

೧. ಕಪ್ಪೆ ಕತ್ತೆಗಳ ಮದುವೆ : ಜೋಡಿ ಕಪ್ಪೆ ಅಥವಾ ಜೋಡಿ ಕತ್ತೆಗಳನ್ನು ಹೂಮಾಲೆಯಿಂದ ಶೃಂಗರಿಸಿ ಅವುಗಳನ್ನು ಪೂಜಿಸಿ ಊರಲ್ಲಿರುವ ಹಿರಿಯ ಪುರೋಹಿತರಿಂದ ಅವುಗಳಿಗೆ ಮದುವೆ ಮಾಡಿಸಿ ಸಾಕಷ್ಟು ವಾದ್ಯಗಳಿಂದ ಊರಿನ ಪ್ರಮುಖ ಬೀದಿಗಳಲ್ಲಿ ಸಾಲಂಕೃತವಾಗಿ ಮೆರವಣಿಗೆ ಮಾಡುತ್ತಾರೆ. ಹೀಗೆ ಮಾಡುವುದರಿಂದ ಮುನಿಸಿಕೊಂಡ ವರುಣನು ಕಣ್ಣು ತೆರೆಯುತ್ತಾನೆ. ಜನರಿಗೆ ಮಳೆಕೊಡುತ್ತಾನೆ. ಮಳೆಯಿಂದ ಅವರ ಬದುಕು ಹಸನಾಗುತ್ತದೆ ಎಂಬ ಕಲ್ಪನೆ ಇಂದಿಗೂ ಎಲ್ಲೆಡೆ ಸಾರ್ವತ್ರಿಕವಾಗಿ ಹಾಗೂ ಜೀವಂತವಾಗಿ ಉಳಿದಿದೆ. ಇದು ಬಾಹ್ಯನೋಟಕ್ಕೆ ಒಂದು ತಮಾಷೆಯಾಗಿ ಗೋಚರಿಸಬಹುದು. ಆದರೆ ಇದನ್ನು ಅಲ್ಲಗಳೆಯುವಂತಿಲ್ಲ. ಈ ಕಲ್ಪನೆ ಮೂಲತಃವಾಗಿ ದ್ರಾವಿಡರದ್ದಾಗಿದೆ. ವಿಚಾರವಾದಿಗಳಿಂದ ಹಿಡಿದು ಎಲ್ಲಾ ವಿದ್ವಜ್ಜನರಿಗೆ ಇದು ತಿಳಿದ ಸಂಗತಿಯಾಗಿದೆ. ಇದನ್ನು ಅಲ್ಲಗಳೆಯುವ ಗುಂಪೂ ಇರಬಹುದು. ಎಲ್ಲವೂ ಅವರ ನಂಬಿಕೆಗಳ ತಳಹದಿಯ ಮೇಲೆ ನಿಂತಿರುತ್ತವೆ. ನಂಬಿದರೆ ನಂಬಿಕೆ ಇಲ್ಲವಾದರೆ ಮೌಢ್ಯ. ತಮ್ಮ ವೈಯಕ್ತಿಕ ನೆಲೆಯಲ್ಲಿ ಇವುಗಳು ಪರಿಣಾಮ ಬೀರಿದರೆ ಅವರು ಇವೆಲ್ಲವುಗಳನ್ನು ನಂಬುತ್ತಾರೆ. ಅವುಗಳ ಆಚರಣೆಗೆ ತೊಡಗುತ್ತಾರೆ.

೨. ಅರಳಿ ಮತ್ತು ಬೇವಿನ ಗಿಡಗಳ ಮದುವೆ : ಅರಳಿ ಮತ್ತು ಬೇವಿನ ಗಿಡಗಳ ಮದುವೆ ಮಾಡುವುದೂ ಸಹ ಬಹುತೇಕ ಹಳ್ಳಿಗಳಲ್ಲಿ ಕಂಡು ಬರುತ್ತದೆ. ಮಳೆ ಬಾರದಿದ್ದ ದಿನಗಳಲ್ಲಿ ಊರಿನ ಪ್ರಮುಖರು

ಸಮಾಲೋಚಿಸಿ ವಯಸ್ಕ ಅರಳಿ ಮತ್ತು ಬೇವಿನ ಗಿಡಗಳಿಗೆ ಮದುವೆ ಮಾಡುತ್ತಾರೆ. ಅರಳಿ ಮತ್ತು ಬೇವಿನ ಗಿಡಗಳು ಒಂದರ ಪಕ್ಕದಲ್ಲೊಂದಿರಬೇಕು. ಸಾಮಾನ್ಯವಾಗಿ ಎಲ್ಲ ಊರುಗಳಲ್ಲಿ ಇವೆರಡನ್ನು ಜತೆಜತೆಯಲ್ಲಿ ಸಸಿ ನೆಟ್ಟು ಬೆಳೆಸಿರುತ್ತಾರೆ. ಹೀಗೆ ಮದುವೆ ಮಾಡುವುದರಿಂದಾಗಿ ಮಳೆ ಬಂದೇ ತೀರುತ್ತದೆಂದು ಇವರು ತಿಳಿದಿರುತ್ತಾರೆ. "ಕರ್ನಾಟಕದಲ್ಲಿ ಚಾಲ್ತಿಯಲ್ಲಿರುವ ಒಂದು ಕತೆಯ ಪ್ರಕಾರ ಅರಳಿಮರ ದುಷ್ಟ ಶಕ್ತಿಯ ಏಳು ಜನ ಸುಂದರ ಪುತ್ರಿಯರನ್ನು ಪ್ರತಿನಿಧಿಸುತ್ತದೆ. ಒಂದು ದಿನ ಅವರು ಹತ್ತಿರದ ನದಿ ಸ್ನಾನಕ್ಕೆಂದು ಹೋಗುತ್ತಿದ್ದಾಗ ಕೃಷ್ಣ ಅವರಲ್ಲಿ ಪ್ರೇಮಾಸಕ್ತನಾದನು. ತನ್ನನ್ನು ಮದುವೆಯಾಗುವಂತೆ ಅವನು ಅವರನ್ನು ಕೇಳಿದನು. ಅವರು ನಿರಾಕರಿಸಿದರು. ಕೃಷ್ಣ ಅವರನ್ನು ಹಿಡಿದುಕೊಳ್ಳಲು ತುಡುಕಿದನು. ಆ ಸೋದರಿಯರು ಕೂಡಲೇ ಅರಳಿ ಮರವಾಗಿ ರೂಪಾಂತರ ಹೊಂದಿದರು. ಅವರನ್ನು ಆಲಂಗಿಸಿಕೊಂಡಿದ್ದ ಕೃಷ್ಣ ಒಡನೆಯೇ ಬೇವಿನ ಮರವಾದನು. ಅಂದಿನಿಂದ ಬೇವು ಅರಳಿಗಳಿಗೆ ಮದುವೆ ಮಾಡಿ ಪೂಜಿಸುವ ಪದ್ಧತಿ ರೂಢಿಯಲ್ಲಿದೆ".[೮]

೩. ಪರ್ಜನ್ಯಜಪ : ಪರ್ಜನ್ಯಜಪವನ್ನು ಮಾಡುವುದರಿಂದ ಮಳೆ ಬರುತ್ತದೆಂಬ ಕಲ್ಪನೆ ಜನಪದರದ್ದಾಗಿರುತ್ತದೆ. ದೇವರನ್ನು ಸಂಪೂರ್ಣವಾಗಿ ನೀರಿನಲ್ಲಿ ಒಂದು ರಾತ್ರಿ ಮುಳುಗಿಸಿ ಬಿಡುವ ಈ ಆಚರಣೆ ವೈದಿಕರಲ್ಲಿರುವ 'ಪರ್ಜನ್ಯ'ವನ್ನು ನೆನಪಿಗೆ ತರುತ್ತದೆ. ಮಳೆಬಾರದೇ ಇದ್ದಾಗ ಪರ್ಜನ್ಯ ಜಪವನ್ನು ನಡೆಸುತ್ತಿದ್ದರೆಂದು ವೇದಗಳಲ್ಲಿ ಉಲ್ಲೇಖವಾಗಿದೆ. 'ಪರ್ಜನ್ಯ' ಎಂದರೆ ವಾರಿಧರ, ಮೇಘ ಎಂತಲೂ, ಪುರಂದರ ಇಂದ್ರ ಎಂದೂ ಕಿಟ್ಟೆಲ್ ನಿಘಂಟುವಿನಲ್ಲಿ ಅರ್ಥನೀಡಲಾಗಿದೆ.[೯] ಪರ್ಜನ್ಯ ಜಪ ಎಂದರೆ ಮಳೆಗಾಗಿ ಮಾಡುವ ಪ್ರಾರ್ಥನೆ. ಪರ್ಜನ್ಯೇಷ್ಟಿ ಕುರಿತು ಕನ್ನಡ ವಿಶ್ವಕೋಶದಲ್ಲಿ ಹೀಗೆ ವಿವರಿಸಲಾಗಿದೆ. "ದೇಶದಲ್ಲಿ ಮಳೆ ಬೀಳದೆ ಕ್ಷಾಮ ಬಾಧೆ ಉಂಟಾದಾಗ ಮಳೆಗಾಗಿ ಮಾಡುವ ಒಂದು ಯಾಗ. ಇದು ಒಂದು ಕಾಮೇಷ್ಟಿ ಇದನ್ನು ಕಾರೀರಿಷ್ಟಿ ಎಂದು ಕರೆಯುವುದಿದೆ. ಮಳೆ ಬೀಳುವಂತೆ ಮಾಡುವುದಕ್ಕಾಗಿ ಇತ್ತೀಚೆಗೆ ನೀರಿನಲ್ಲಿ ನಿಂತು ಋಗ್ವೇದ, ಯಜುರ್ವೇದಗಳಲ್ಲಿ ಉಕ್ತವಾಗಿರುವ ಮಂತ್ರಗಳಿಂದ ವರುಣದೇವರ ಪ್ರಾರ್ಥನೆಯನ್ನು ಒಂದು ಮಂಡಲ ಕಾಲ ಅಂದರೆ ೪೮ ದಿನಗಳ ಕಾಲ ವಿಧಿವತ್ತಾಗಿ ನಡೆಸುತ್ತಾರೆ. ಇದು ಪರ್ಜನ್ಯ ಜಪ "ಇದಲ್ಲದೆ ಮಳೆ ಬೀಳುವಂತೆ ಮಾಡಲು ಮತ್ತೊಂದು ವಿಧಿ ಈ ರೀತಿ ಇದೆ : ನದೀ ತೀರದಲ್ಲಿರುವ ದೇವಾಲಯದಲ್ಲಿ ವೇದಿಕೆಯನ್ನು ನಿರ್ಮಿಸಿ ಅದರ ಮೇಲೆ ಪೂರ್ವಾಭಿಮುಖವಾಗಿ ಕುಳಿತು ಮೇಘವನ್ನು ಆವಾಹನೆಮಾಡಬೇಕು. ಅಷ್ಟದಳ ಪದ್ಮವನ್ನು ಬರೆದು ಅದರಲ್ಲಿ ಪೂರ್ವದಿಂದ ಪ್ರಾರಂಭಿಸಿ ಪ್ರದಕ್ಷಿಣವಾಗಿ ಪರ್ಜನ್ಯ, ಮೇಘಧೂತ, ಕಮಲೋದ್ಭವ, ಮಹಾನೀಲರಾಜ, ನಂದಿಕೇಶ್ವರ, ಸಿಂಹ ಮಹಾರಾಜ, ಕುಂಭರಾಜ, ನಂದರಾಜ-ಈ ಎಂಟು ಮಂದಿಯನ್ನು ಆಹ್ವಾನಿಸಿ, ಆರಾಧಿಸಿ, ಶಾಸ್ತ್ರೋಕ್ತ ಪೂಜಾ ಕ್ರಮದಲ್ಲಿ ಷೋಡಶೋಪಚಾರಗಳನ್ನು ಸಮರ್ಪಿಸಿ ನಂತರ ನಿವೇದನೆ ಮಾಡಬೇಕು. ಬಳಿಕ ಹೋಮಕುಂಡವನ್ನು ನಿರ್ಮಿಸಿ ಗುಗ್ಗುಳ, ಗಂಧ, ಅಗರು, ದೇವಗಣಗಿಲೆ

ಹೂವು, ಘೃತ ಮಧು, ಇವೆಲ್ಲವುಗಳನ್ನು ಒಟ್ಟಿಗೆ ಸೇರಿಸಿ ಹೋಮದ್ರವ್ಯವನ್ನು ಸಿದ್ಧ ಪಡಿಸಿಕೊಂಡು ಮುಂದೆ ತಿಳಿಸುವ ಎಂಟು ಮಂತ್ರಗಳಿಂದ ಒಂದೊಂದು ಮಂತ್ರಕ್ಕೂ ೧೦೮ ಸಲದಂತೆ ಹೋಮ ಮಾಡಬೇಕು.

೧. ಓಂ, ಹ್ರೀಂ, ಪರ್ಜನ್ಯಾಯ ಮೇಘರಾಜಾಯ ನಮಃ ಅಗಚ್ಛ ಅಗಚ್ಛ-ಸ್ವಾಹಾ

೨. ಓಂ, ಹ್ರೀಂ, ಮೇಘಧೂತಾಯ ನಮಃ ಅಗಚ್ಛ ಅಗಚ್ಛ-ಸ್ವಾಹಾ

೩. ಓಂ, ಹ್ರೀಂ, ಕಮಲೋದ್ಭವಾಯ ನಮಃ ಅಗಚ್ಛ ಅಗಚ್ಛ-ಸ್ವಾಹಾ

(ಇದೇರೀತಿ ಇತರರಿಗೆ) ಈ ಮಂತ್ರಗಳಿಂದ ಹೋಮ ಮಾಡಿಸಿದ ಬಳಿಕ ಹೊಕ್ಕಳುವರೆಗಿನ ನೀರಿನಲ್ಲಿ ನಿಂತುಕೊಂಡು ಮೇಲಿನ ಮಂತ್ರಗಳನ್ನು ೧೦೮ ಬಾರಿ ಆವರ್ತಿಸಿ ಜಪಿಸಬೇಕು. ಈ ವಿಧಿಯನ್ನು ೧೨ ದಿವಸಗಳು ಆಚರಿಸಿದಲ್ಲಿ ಮಳೆ ಬರುವದು ಖಂಡಿತ (ಕನ್ನಡ ವಿಶ್ವಕೋಶ ಸಂಪುಟ ೧೦, ೧೯೮೦ ಪು.೮೪೭) ನವ್ಯಕವಿ ಮಂಗೇಶ ನಾಡಕರ್ಣಿ ಅವರು ಆಧುನಿಕ ಸಮಾಜದ ಕಲುಷಿತತೆಯನ್ನು ವಿಡಂಬಿಸುವ ತಮ್ಮ 'ಸಂಜೆ ಆಯಿತು' ಕವನದಲ್ಲಿ ಪರ್ಜನ್ಯ ಅಭಿಷೇಕವನ್ನು ಬಹು ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ.

"ಅದು ನಮ್ಮೂರ ರಾಮದೇವರ ಗುಡಿ
ಅಲ್ಲಿ ಅವನಿಗೆ ಚಿರಕಾಲವೂ ವನವಾಸ
ಗೂಗೆಗಳ ಶಂಖ ವಾದ್ಯ ರಾತ್ರಿಯೆಲ್ಲವೂ
ಕಣ್ಣು ಕಪ್ಪಡಿಗಳ ಚಾಮರಸೇವೆ ಹಗಲೆಲ್ಲವೂ
ಮಳೆಗಾಲದಲ್ಲಿ ಪರ್ಜನ್ಯಾಭಿಷೇಕ
ಹೊರಗೆ ಕಟ್ಟೆಯ ಮೆಲೆ ಶಿಷ್ಯ ಸಮೇತರಾಗಿ
ಪದ್ಮಾಸನಸ್ಥರಾದ ಭಟ್ಟರು
ಗುಲಾಮರಾಗಿ ಗುರುತಿಸಲಾಗದಷ್ಟು
ಕತ್ತಲಾಯ್ತೆಂದು ಆಟ ಬಿಟ್ಟಿದ್ದಾಗ
ಸಂಜೆ ಆಯಿತು......"[೧೦]

ಮಳೆ ಮಲ್ಲಪ್ಪನ ಪೂಜೆ:- ಮಳೆ ಬರುವುದು ತಡವಾದಾಗ ಊರಿನಲ್ಲಿರುವ ಹಿರಿಯರೆಲ್ಲಾ ಸೇರಿ ಸಮಾಲೋಚನೆ ಮಾಡುತ್ತಾರೆ. ಮಳೆ ಮಲ್ಲಪ್ಪನನ್ನು ಆಚರಿಸಲು ನಿರ್ಧರಿಸುತ್ತಾರೆ. ನಿಮ್ನ ವರ್ಗಕ್ಕೆ ಸೇರಿದ ಹತ್ತು ವರ್ಷದೊಳಗಿನ ಹುಡುಗನನ್ನು ಗುರ್ಜಿ ಹೊರಲು ತಯಾರು ಮಾಡುತ್ತಾರೆ. ಆ ಹುಡುಗ ಬೆತ್ತಲೆಯಾಗಿರಬೇಕು. ಸೊಂಟಕ್ಕೆ ಕಟ್ಟಿರುವ ಉಡುದಾರವನ್ನೂ ಸಹ ಬಿಚ್ಚಬೇಕಾಗುತ್ತದೆ. ಆಡು ನುಡಿಯಲ್ಲಿ ಹೇಳುವಂತೆ ಹುಟ್ಟು ಮಾರ್ಗದಲ್ಲಿರಬೇಕು, ಸಾಯಂಕಾಲದ ವೇಳೆಯಲ್ಲಿ ಊರಿನ

ಮುಂದಿರುವ ಗುಡಿಯಿಂದ ಈ ಆಚರಣೆ ಪ್ರಾರಂಭವಾಗುವುದು ಒಂದು ವಿಶೇಷ. ಒಂದು ಮಣೆಯ ಮೇಲೆ ತಟ್ಟೆ ಅಥವಾ ಹೆಂಚೊಂದನ್ನು ಬೋರಲು ಹಾಕುವ ಪದ್ಧತಿ. ಅದರ ಮೇಲೆ ದೊಡ್ಡ ಒಂದು ಅಥವಾ ಸಣ್ಣ ಮೂರು ಬೆನಪ್ಪಗಳನ್ನು ಮಾಡಿ ಇಡುತ್ತಾರೆ. ಅವುಗಳಿಗೆ ಕರಿಕೆ ಹುಲ್ಲನ್ನು ಸಿಕ್ಕಿಸುತ್ತಾರೆ. ವಿಶೇಷವಾಗಿ ಎಕ್ಕೆ ಹೂ ಮತ್ತು ತಂಗಟೆ ಹೂ ಸಿಕ್ಕಿಸುತ್ತಾರೆ. ಬೇರೆ ಹೂಗಳನ್ನು ಬಳಸುವಂತಿಲ್ಲ. ಗುರ್ಜಿಯನ್ನು ಹೊರುವ ಹುಡುಗನ ಸೊಂಟದ ಉಡುದಾರವನ್ನು ಗುರ್ಜಿಯ ಸುತ್ತಲೂ ಸುತ್ತಿರುತ್ತಾರೆ. ಹೊತ್ತ ಹುಡುಗನ ಹಿಂದೆಯೇ ಅದೇ ವಯೋಮಾನದ ಅದೇ ವರ್ಗದ ೧೦ ರಿಂದ ೧೫ ಹುಡುಗ, ಹುಡುಗಿಯರು ಹಾಡುಹೇಳುತ್ತಾ ಮನೆಮನೆಗೆ ಊರಾಡಲು ಹೊರಡುತ್ತಾರೆ. ಮನೆ ಮುಂದೆ ಬರುತ್ತಿದ್ದಂತೆ ಮನೆಯ ಒಡತಿ ಒಂದು ಚೊಂಬಿನಲ್ಲಿ ನೀರನ್ನು ತಂದು ಹುಡುಗನ ಮೇಲೆ ಹಾಕುತ್ತಾಳೆ. ಆ ರೀತಿಯಲ್ಲಿ ನೀರು ಹಾಕುವಾಗ ಆ ಹುಡುಗನು ಒಂದು ಸುತ್ತು ಸುತ್ತುತ್ತಾನೆ. ಇದಾದ ನಂತರ ಮನೆಯವರು ಇತರ ಹುಡುಗ ಹುಡುಗಿಯರ ಕೈಗೆ ಹಣವನ್ನು ಅಥವಾ ದವಸಧಾನ್ಯಗಳನ್ನು ಕೊಡುತ್ತಾರೆ. ಆ ಹುಡುಗನು ಮುಂದಿನ ಮನೆಗೆ ಹೊರಡುತ್ತಾನೆ. ಹೀಗೆ ಊರಾಡುವುದು ೩,೫ ಅಥವಾ ೭ ದಿವಸ ನಡೆಯುತ್ತದೆ. ತಮ್ಮ ಊರಿನಲ್ಲಿಯೇ ಅದು ಮುಗಿಯಬಹುದು. ಅಥವಾ ದಿವಸಗಳಿಗನುಗುಣವಾಗಿ ಕೆಲವು ಊರುಗಳಲ್ಲಿ ಆಡಬಹುದು.ಅಂತ್ಯದ ದಿನ ಕೆರೆಯ ಸಮೀಪ 'ಗಂಗಮ್ಮನ ಪೂಜೆ'ಯನ್ನು ಮಾಡುತ್ತಾರೆ. ಸಂಗ್ರಹವಾದ ದವಸ ಧಾನ್ಯಗಳಿಂದ ಅಡುಗೆಯನ್ನು ಮಾಡುತ್ತಾರೆ. ಆ ಅಡುಗೆಯನ್ನು ಇನ್ನೊಮ್ಮೆ ಮಳೆಮಲ್ಲಪ್ಪನಿಗೆ ವಿಶೇಷ ರೀತಿಯಿಂದ ಪೂಜಿಸಿ, ಎಡೆ ಹಿಡಿದು, ನೈವೇದ್ಯಮಾಡಿ, ಪರ್ವ ಮಾಡುತ್ತಾರೆ. ಇವೆಲ್ಲವನ್ನೂ ನೆರವೇರಿಸಿದ ಮೇಲೆ ಆ ದೇವರನ್ನು ಗಂಗೆಗೆ ವಿಸರ್ಜಿಸುವರು. ಅಲ್ಲಿಂದ ಅವರು ಊರನ್ನು ತಲುಪುವಷ್ಟರಲ್ಲಿ ಮಳೆ ಬಂದೇ ತೀರುತ್ತದೆಂದೂ ಇಲ್ಲವೇ ಈ ಪೂಜೆ ಮಾಡಿದ ಒಂದು ವಾರದೊಳಗಾಗಿ ಮಳೆ ಬರುತ್ತದೆಂದೂ ನಂಬುತ್ತಾರೆ.

ಕರವು (ಬುಡ್ಡೆಕಲ್ಲು) ಕಲ್ಲು ಪೂಜೆ : ಕರವುಕಲ್ಲು ಪ್ರತಿಯೊಂದು ಊರಿನಲ್ಲಿ ನಾಲ್ಕುದಿಕ್ಕಿಗೂ ಇರುತ್ತದೆ. ಈ ಕಲ್ಲಿಗೆ ಜನಪದರು ವಿಶೇಷ ಮಹತ್ವವನ್ನಿತ್ತಿದ್ದಾರೆ. ಈ ಕಲ್ಲುಗಳನ್ನು ನೆಲದಲ್ಲಿ ಹೂಳಿರುತ್ತಾರೆ. ನೋಡಲು ದುಂಡಾಕಾರದಲ್ಲಿರುತ್ತವೆ. ಒಂದು ವಿಧದಲ್ಲಿ ಗುಂಡು ಕಲ್ಲುಗಳೇ ಆಗಿರುತ್ತವೆ. ಪ್ರತಿಯೊಂದು ಕೃಷ್ಣ ಪಕ್ಷ ಹಾಗೂ ಶುಕ್ಲಪಕ್ಷಗಳಲ್ಲಿ ಇವುಗಳನ್ನು ಪೂಜಿಸುವ ಪರಿಪಾಠ ಕ್ವಚಿತ್ ಆಗಿರುತ್ತದೆ. ಮಳೆ ಬಾರದ ದಿನಗಳಲ್ಲಿ ಊರಿನಲ್ಲಿರುವ ಹಿರಿಯರ ತೀರ್ಮಾನದಂತೆ ನಿರ್ದಿಷ್ಟ ದಿನದಂದು ಅಂತಹ ಕಲ್ಲುಗಳಿಗೆ ತುಂಬಿದ ಕೊಡದಿಂದ ನೀರನ್ನು ಅವುಗಳ ಮೇಲೆ ಹಾಕಿ,ಹೂಗಳನ್ನಿಟ್ಟು,ಕುಂಕುಮ ಅರಿಶಿಣ ವನ್ನಿಡುತ್ತಾರೆ. ಗಂಧದ ಕಡ್ಡಿಯಿಂದ ಪೂಜಿಸುತ್ತಾರೆ.ಶಾಂತಿಗಾಗಿ ಒಂದು ಕುಂಬಳ ಕಾಯಿಯನ್ನು ನಿವಾಳಿಸಿ ತೆಗೆದುಒಡೆಯುತ್ತಾರೆ. ಹೀಗೆ ಮಾಡುವುದರಿಂದ ಊರಿಗೆ ಶಾಂತಿ ಉಂಟಾಗಿ ಮಳೆಬರುತ್ತದೆಂಬ ಕಲ್ಪನೆ,ಜನಪದ ನಂಬಿಕೆ ಅವರದ್ದು.

ಕಂತೆಯ ಭಿಕ್ಷೆಯ ಪ್ರಸಾದ : ಈ ಆಚರಣೆಯೂ ಸಹ ಅಲ್ಲಲ್ಲಿ ಬಳಕೆಯಲ್ಲಿದೆ. ಇದು ನಡೆಯುವುದು ಬಹುತೇಕವಾಗಿ ಊರಿನ ಪ್ರಮುಖ ದೇವಸ್ಥಾನದಲ್ಲಿ. ಊರಿನ ಗಣ್ಯರು ಒಂದೆಡೆ ಸೇರಿ ಸಮಾಲೋಚಿಸಿ ಇದನ್ನು ಆಚರಿಸಲು ನಿರ್ಧರಿಸುತ್ತಾರೆ. ಬಹುತೇಕವಾಗಿ ಸೋಮವಾರ ಆಚರಿಸಲು ತೀರ್ಮಾನಿಸುತ್ತಾರೆ. ಪ್ರತಿಯೊಂದು ಮನೆಯಲ್ಲಿ ಮಾಡಿರುವ ಅಡುಗೆಯನ್ನು ಮಕ್ಕಳು ಮನೆ ಮನೆಗೆ ಹೋಗಿ ಭಿಕ್ಷೆಬೇಡುವುದರ ಮೂಲಕ ಸಂಗ್ರಹಿಸುತ್ತಾರೆ.ಇಂತಹುದೇ ಅಡುಗೆಯಾಗಬೇಕೆಂಬ ಕಡ್ಡಾಯವಿಲ್ಲ. ಬಡವ-ಬಲ್ಲಿದರೆಂಬ ಭೇದ- ಭಾವವಿಲ್ಲದೇ ಎಲ್ಲರ ಮನೆಗಳಿಂದಲೂ ಸಂಗ್ರಹಿಸಬೇಕು. ಮನೆ ಮನೆಯಿಂದ ಬೇಡಿ ತಂದ ಅಡುಗೆಯನ್ನು ದೇವಸ್ಥಾನದಲ್ಲಿ ಒಂದೆಡೆ ಇಟ್ಟು ಎಲ್ಲವನ್ನೂ ಬೆರೆಸುತ್ತಾರೆ. ಬೆರೆಸಿದ ಅಡುಗೆಯನ್ನು ಮೊದಲು ದೇವರಿಗೆ ನೈವೇದ್ಯವನ್ನು ಅರ್ಪಿಸುತ್ತಾರೆ. ಆನಂತರ ಊರಿನ ಜನರಿಗೆ ಉಣ್ಣಲು ಬಡಿಸುತ್ತಾರೆ. ಇಡೀ ದಿನ ಈ ಪ್ರಕ್ರಿಯೆ ನಡೆಯುವುದು ಈ ಆಚರಣೆಯ ವಿಶೇಷ. ಹೀಗೆ ಆಚರಣೆ ಮಾಡುವುದರಿಂದ ಮಳೆ ಬಂದೇ ತೀರುತ್ತದೆಂದು ಅವರ ಅಭಿಪ್ರಾಯ.

ಮೇಘದ ಮರಿಯನ್ನು ಬಲಿ (ಕಡಿಯುವುದು) ಕೊಡುವುದು : ಇಂತಹ ಆಚರಣೆಗಳು ಇತ್ತೀಚಿನ ದಿನಗಳಲ್ಲಿ ಅಪರೂಪವಾಗುತ್ತಿವೆ. ಮಳೆಗಾಲದ ದಿನಗಳಲ್ಲಿ ಮೋಡಗಳಾಗಿ ಮಳೆಬರುವಂತಹ ಎಲ್ಲಾ ವಾತಾವರಣವಿದ್ದರೂ ಸಹ ಮಳೆ ಬಾರದೆ ಹೋಗುತ್ತದೆ. ಅನೇಕ ಬಾರಿ ಇದೇ ರೀತಿಯಾಗುತ್ತಿದ್ದರೆ ಊರಿನ ರೈತಾಪಿ ವರ್ಗದವರು ಸೇರಿ ಈ ಆಚರಣೆಯನ್ನು ಮಾಡಲು ನಿಶ್ಚಯಿಸುವರು. ಆಗಸದಲ್ಲಿ ದಟ್ಟವಾಗಿ ಮಳೆ ಮೋಡಗಳಾದ ದಿನದಲ್ಲಿ ಇವರೆಲ್ಲಾ ಸೇರಿ ಬಲಿಕೊಡುವ ನಿರ್ಧಾರಕ್ಕೆ ಬರುತ್ತಾರೆ. ಈ ವಿಚಾರವನ್ನು ಊರಿನ ಸಮಸ್ತರಿಗೆ ತಿಳಿಸಲು ಆಸಾದಿಯಿಂದ ಡಂಗುರ ಹಾಕಿಸುತ್ತಾರೆ. ಅವನು ಇದರ ಬಗ್ಗೆ ಜನರಿಗೆಲ್ಲಾ ತಿಳಿಸುತ್ತಾನೆ. ಬಲಿಕೊಡಲು ಒಂದು ಕಪ್ಪನೆಯ ಆಡು ಮರಿ ಅಥವಾ ಕುರಿಮರಿಯನ್ನು ತೆಗೆದುಕೊಳ್ಳುವರು. ಅದು ಕಪ್ಪಾಗಿರಬೇಕು. ಅದರ ಮೈಮೇಲೆ ಎಲ್ಲಿಯೂ ಬಿಳಿ ಅಥವಾ ಕಂದು ಬಣ್ಣದ ಮಚ್ಚೆ ಇರುವಂತಿಲ್ಲ. ಒಬ್ಬನು ಆಡುಮರಿಯನ್ನು ಕೈಯಲ್ಲಿ ಹಿಡಿದಿರುತ್ತಾನೆ. ಇನ್ನೊಬ್ಬನು ಕೈಯಲ್ಲಿ ಬಲಿಕೊಡುವ ಆಯುಧವನ್ನಿಡಿದಿರುತ್ತಾನೆ. ಊರ ಜನರು ಒಟ್ಟಾಗಿ ಬರುತ್ತಾರೆ. ಅಮ್ಮನ ದೇವಸ್ಥಾನದಲ್ಲಿ ಪೂಜೆ ಆಗುತ್ತದೆ. ಆನಂತರ ಯಾವ ದಿಕ್ಕಿನಲ್ಲಿ ಮಳೆ ಮೋಡ ಚೆನ್ನಾಗಿ ಆಗಿರುತ್ತದೆಯೋ ಅದೇ ದಿಕ್ಕಿನಲ್ಲಿರುವ ಬುಡ್ಡೆಕಲ್ಲಿಗೆ ಬಲಿಕೊಡುವ ಪದ್ಧತಿ. ಬಲಿಕೊಡುವ ಮುಂಚೆ ಮರಿಯನ್ನು ಬೇವಿನ ಸೊಪ್ಪಿನಿಂದ ಅಲಂಕರಿಸಿ ಕುಂಕುಮ, ಅರಿಶಿಣವನ್ನು ಅದಕ್ಕೆ ಹಚ್ಚಿ, ಉರುಮೆ ಬಾರಿಸುವುದರ ಮೂಲಕ ಬಲಿಕೊಡಲು ಅಣಿಗೊಳಿಸುತ್ತಾರೆ. ಈ ಆಚರಣೆಯಲ್ಲಿ ಮರಿಯನ್ನು ಮುಂಗಾಲುಗಳನ್ನು ಒಬ್ಬ, ಹಿಂಗಾಲುಗಳನ್ನು ಮತ್ತೊಬ್ಬ ಹಿಡಿದಿರುತ್ತಾನೆ. ಸಾಮಾನ್ಯ ಬಲಿ ಪದ್ಧತಿಯಲ್ಲಿರುವಂತೆ ರುಂಡವನ್ನು ಕತ್ತರಿಸುವುದಿಲ್ಲ. ಬದಲಾಗಿ ಇಲ್ಲಿ ಮರಿಯ ಹೊಟ್ಟೆಯನ್ನು ಗಂಡುಗೊಡಲಿಯಿಂದ ಕಡಿಯುತ್ತಾರೆ. ಈ ಎಲ್ಲಾ ಕ್ರಿಯೆಗಳು ನಡೆಯುವುದು ದಟ್ಟವಾದ ಕಾರ್ಮೋಡಗಳಾಗಿರುವಾಗ ಮಾತ್ರ

ಎಂಬ ವಿಚಾರ ಗಮನಾರ್ಹವಾದುದು. ಈ ಎಲ್ಲಾ ಆಚರಣೆಗಳಲ್ಲಿ ಕೆಲವು ಹಿಂಸೆ ಸ್ವರೂಪದವುಗಳಾದರೆ ಇನ್ನು ಕೆಲವು ಅಹಿಂಸೆ ಸ್ವರೂಪವನ್ನು ಹೊಂದಿರುತ್ತವೆ. ಜನಪದರ ರೂಢಿಗಳಿಗನುಗುಣವಾಗಿ ಇವುಗಳು ಇಂದು ಬಳಕೆಯಲ್ಲಿವೆ. ಮಳೆ ತರಿಸುವ ಆಶಯವನ್ನು ಹೊಂದಿರುವ ಈ ಎಲ್ಲಾ ಆಚರಣೆಗಳು ಬೇರೆ ಬೇರೆ ರೀತಿಯಲ್ಲಿ ಬಳಕೆಯಾಗುತ್ತಿವೆ.

ವಾರ್ಷಿಕಾವರ್ತನದ ಆಚರಣೆಗಳು [Annual Cycle Rituals]

'ವಾರ್ಷಿಕಾವರ್ತನ ಹಾಗೂ ಜೀವನಾವರ್ತನಗಳಲ್ಲಿ ಸಂಸ್ಕೃತಿಯ ಮೂಲ ಶಿಷ್ಟವು ರೂಪುಗೊಳ್ಳುತ್ತದೆ. ಅಂದರೆ ಸಂಸ್ಕೃತಿಯ ರೂಪೀಕರಣದಲ್ಲಿ ಈ ಎರಡು ಆವರ್ತನಗಳು ದುಡಿಯುತ್ತವೆ. ಈ ಎರಡು ಆವರ್ತನಗಳು ಎಲ್ಲಿ ಸಂಧಿಸುತ್ತವೆಯೋ ಅಲ್ಲಿ ಸಂಸ್ಕೃತಿಯ ಮೂಲದ್ರವ್ಯವೊಂದು ಸಿದ್ಧವಾಗುತ್ತದೆ. ವಾರ್ಷಿಕಾವರ್ತನದಲ್ಲಿ ಕಾಲದ ಪರಿವರ್ತನೆಯು ಬಹಳ ಮಟ್ಟಿಗೆ ಮಳೆ ಮತ್ತು ಬೆಳೆಯನ್ನು ಆಧರಿಸಿಕೊಂಡಿದೆ. ವಾರ್ಷಿಕಾವರ್ತನವು ಕಾಲದಿಂದ ಕಾಲಕ್ಕೆ ಬದಲಾಗುವ ಋತುಮಾನಗಳನ್ನು ಅವಲಂಬಿಸಿದ್ದು ಉತ್ಪಾದನಾ ವಿಧಾನಗಳೊಂದಿಗೆ ನೇರ ಸಂಬಂಧ ಹೊಂದಿದೆ. ಆಹಾರ ಧಾನ್ಯಗಳನ್ನು ಬೆಳೆಸುವ, ಆರ್ಥಿಕ ಮಟ್ಟವನ್ನು ಎತ್ತರಿಸುವ ವ್ಯವಸಾಯದ ರೀತಿ ನೀತಿಗಳನ್ನು ಅದು ಒಳಗೊಳ್ಳುತ್ತದೆ. ಹೀಗೆ ಋತುಮಾನಗಳಿಗೆ ಹೊಂದಿಕೊಂಡು ವರ್ಷವೊಂದರಲ್ಲಿ ಆವರ್ತನಗೊಳ್ಳುವ ಕೃಷಿ ಆಧಾರಿತ ಆಚರಣೆಗಳನ್ನು ವಾರ್ಷಿಕಾವರ್ತನದ ಆಚರಣೆಗಳೆಂದು ಕರೆಯುತ್ತಾರೆ'.[೧೧] ವರ್ಷದಲ್ಲೊಮ್ಮೆ ಆಚರಿಸುವಂತಹವುಗಳು ಈ ಆಚರಣೆಯಲ್ಲಿ ಬರುತ್ತವೆ. ಎಲ್ಲ ಆಚರಣೆಗಳು. ಸಂಪ್ರದಾಯಗಳು ಬಹುತೇಕವಾಗಿ ರೈತರಿಗೆ ಸಂಬಂಧಪಟ್ಟವೇ ಆಗಿರುತ್ತವೆ. ರೈತರು ತಮ್ಮ ದಿನ ನಿತ್ಯದ ಜೀವನದಲ್ಲಿ ಆಚರಿಸುವಂತಹ ಆಚರಣೆಗಳು ಇಂದು ಎಲ್ಲ ಕಡೆಯಲ್ಲಿಯೂ ಮಾನ್ಯತೆಯನ್ನು ಪಡೆದುಕೊಂಡಿವೆ. ರೈತಾಪಿ ವರ್ಗದವರು ವರ್ಷಪೂರ್ತಿ ದುಡಿದು ಬಳಲಿ ಬೆಂಡಾಗಿರುತ್ತಾರೆ. ಅವರಿಗೆ ಉತ್ತಮವಾದ ಫಸಲು ಕೈಗೆ ಸಿಕ್ಕರೆ ಅವರ ಪರಿಶ್ರಮಕ್ಕೆ ಬೆಲೆ ಸಿಕ್ಕಂತಾಗುತ್ತದೆ. ಆದರೆ ಪ್ರತಿವರ್ಷವೂ ಉತ್ತಮವಾದ ಫಸಲುಗಳನ್ನು ಪಡೆಯುತ್ತಾರೆಂದು ನಿಖರವಾಗಿ ಹೇಳಲು ಬರುವುದಿಲ್ಲ.

ಅವೆಲ್ಲವುಗಳನ್ನು ಪಡೆಯಲು ಈ ವರ್ಗವು ಬಹಳಷ್ಟು ಮಟ್ಟಿಗೆ ಒಕ್ಕಲುತನಕ್ಕೆ ಸಂಬಂಧಿಸಿದ ದೈವಗಳಿಗೆ ಮೊರೆ ಹೋಗುತ್ತಾರೆ. ಅಂತಹ ದೈವಗಳಲ್ಲಿ ಜೋಕುಮಾರನೂ ಒಬ್ಬನಾಗಿದ್ದಾನೆ. ಇವನನ್ನು ಪೂಜಿಸುವುದು ವರ್ಷದಲ್ಲಿ ಒಂದು ಬಾರಿ ಮಾತ್ರ. ನಿರ್ದಿಷ್ಟವಾಗಿ ಭಾದ್ರಪದ ಮಾಸದಲ್ಲಿ. ಅವನ ಆಗಮನದಿಂದ ಆರಂಭವಾಗಿ ಅಂತ್ಯದ ತನಕವೂ ಒಂದೊಂದು ವಿಧದಲ್ಲಿ ಕಾರ್ಯಕ್ರಮಗಳು ಸಾಂಗವಾಗಿ ನೇರವೇರುತ್ತವೆ. ಈ ವರ್ಗವು ತಮಗೆ ಉತ್ತಮ ರೀತಿಯಲ್ಲಿ ಬೆಳೆಗಳು ಬರಲು ಸಮಯಕ್ಕೆ ಸರಿಯಾಗಿ ಮಳೆಯನ್ನು ಕರುಣಿಸು ಎಂದು ಬೇಡಿಕೊಳ್ಳುವುದು ಸಾಮಾನ್ಯವಾಗಿ ಕಂಡುಬರುತ್ತದೆ.

ಜೋಕುಮಾರನ ಆಚರಣೆ

ಪ್ರತಿಯೊಂದು ಆಚರಣೆಗಳನ್ನು ವಂಶಪಾರಂಪರ್ಯವಾಗಿ ನಮ್ಮ ಜನಪದರು ನಿರಂತರವಾಗಿ ಆಚರಿಸಿಕೊಂಡು ಬರುತ್ತಿದ್ದಾರೆ. ಅವರಿಗೆ ತಮ್ಮದೇ ಆದ ಕಲ್ಪನೆಗಳಿರುತ್ತವೆ. ಇಂದು ನಮ್ಮಲ್ಲಿ ಉಳಿದು, ಬೆಳೆದುಕೊಂಡು ಬಂದಿರುವ ಎಷ್ಟೋ ಆಚರಣೆಗಳು ತನ್ನದೇ ಆದ ವೈಶಿಷ್ಟ್ಯದಿಂದ ಗುರುತಿಸಿಕೊಂಡಿವೆ. ಅವುಗಳಿಗೆ ನಿರ್ದಿಷ್ಟವಾದ ಹಿನ್ನೆಲೆಗಳೂ ಸಹ ಇವೆ. ಪ್ರತಿಯೊಂದು ಆಚರಣೆಯ ಬೆನ್ನಹಿಂದೆ ಸಾರ್ಥಕತೆಯೂ ಹುದುಗಿರುತ್ತದೆ.

ಮೊದಮೊದಲು ಆಚರಣೆಗಳು ಆಯಾ ಸಮುದಾಯದವರಿಂದ ಗುರುತಿಸಿಕೊಂಡು ಆನಂತರ ಸಾರ್ವತ್ರಿಕವಾಗಿ ಎಲ್ಲೆಡೆ ಪಸರಿಸಿವೆ. ಇಂದು ನಮ್ಮಲ್ಲಿ ಉಳಿದಿರುವ ಪ್ರತಿಯೊಂದು ಆಚರಣೆಗಳು ಒಂದಿಲ್ಲೊಂದು ವಿಧದಲ್ಲಿ ಲೋಕಕಲ್ಯಾಣಕ್ಕಾಗಿಯೇ ಆವಿರ್ಭವಿಸಿವೆ ಎಂದರೆ ತಪ್ಪಾಗುವುದಿಲ್ಲ. ಏಕೆಂದರೆ ಅವುಗಳಲ್ಲಿರುವ ಆಶಯ ಮತ್ತು ಉದ್ದೇಶವನ್ನು ಸೂಕ್ಷ್ಮವಾಗಿ ಅವಲೋಕನ ಮಾಡಿದಾಗ ಮಾತ್ರ ಎಲ್ಲಾ ಅಂಶಗಳು ನಮಗೆ ತಿಳಿದು ಬರುತ್ತವೆ. ನಮ್ಮ ಜನಪದರು ಯಾವುದೇ ಆಚರಣೆಗಳನ್ನು ಸಕಾರಣವಿಲ್ಲದೇ ಪಾಲಿಸಿಕೊಂಡು ಬಂದಿರುವುದಿಲ್ಲ. ಹಾಗೆಯೇ ಸಂಬಂಧಿಸಿದಂತೆ ಜೋಕುಮಾರನ ಆಚರಣೆಯೂ ಸಹ ಇಂದು ತನ್ನ ಅಸ್ತಿತ್ವವನ್ನು ಬೆಳಿಸಿಕೊಂಡು ಬಂದಿದೆ ವ್ಯಕ್ತಿಯೊಬ್ಬನಿಂದ ಇಂತಹ ಆಚರಣೆಗಳು ಪ್ರಾರಂಭವಾಗಿ, ತದನಂತರ ಸಮೂಹ ಸೃಷ್ಟಿಯಲ್ಲಿ ಇವು ಎಲ್ಲಾ ಕಡೆಯಲ್ಲಿ ಪಸರಿಸುತ್ತವೆ. ನಂತರ ಇವುಗಳಿಗೆ ಜನರು ಮಾನ್ಯತೆಯನ್ನೂ ಕೊಡುತ್ತಾರೆ.

ಏತಕ್ಕಾಗಿ ಇವನ ಆಚರಣೆಯನ್ನು ಮಾಡಬೇಕು. ಈ ಆಚರಣೆಯ ಹಿಂದೆ ಇರುವ ಉದ್ದೇಶವೇನು? ಎಂಬಂತಹ ಪ್ರಶ್ನೆಗಳು ಸಹಜವಾಗಿ ಉದ್ಭವವಾಗುತ್ತವೆ ನಿಜ. ಆದರೆ ಕೃಷಿಕ ಮನೆತದವರೆಲ್ಲರೂ ಇವನಿಗೆ ಪೂಜೆಯನ್ನು ಸಲ್ಲಿಸುತ್ತಾರೆ. ಭಾರತವು ಹಳ್ಳಿಗಳಿಂದ ಕೂಡಿದ ರಾಷ್ಟ್ರವಾಗಿದೆ. ಹಳ್ಳಿಗಳಲ್ಲಿ ಬೇಸಾಯ(ವ್ಯವಸಾಯ)ವು ಮುಖ್ಯ ಕಸುಬಾಗಿರುತ್ತದೆ. ಅದಕ್ಕೆ ಸಂಬಂಧಪಟ್ಟಂತೆ ಕೃಷಿಕರು ಅನೇಕ ಗ್ರಾಮೀಣ ಜನಪದ ದೈವಗಳಿಗೆ ಮೊರೆ ಹೋಗುತ್ತಾರೆ. ಅಂತಹ ದೈವಗಳನ್ನು ತಮ್ಮ ಇಷ್ಟಾರ್ಥಸಿದ್ಧಿಗಾಗಿ ಆರಾಧಿಸುತ್ತಾರೆ. ಜಾತ್ರೆ, ಉತ್ಸವಗಳನ್ನು ಮಾಡುತ್ತಾರೆ. ಇವೆಲ್ಲವುಗಳನ್ನು ಮಾಡಲು ಅವರಿಗೆ ಮುಖ್ಯವಾಗಿ ಬೇಕಿರುವುದು ಆ ದೈವಗಳ ಬಗ್ಗೆ ಇರುವ ನಂಬಿಕೆ, ಶ್ರದ್ಧೆ, ಮತ್ತು ಭಕ್ತಿ ಮುಖ್ಯವಾಗಿ ಬೇಕಾಗಿರುವುದು ನಂಬಿಕೆ. ಇಂದು ಎಲ್ಲಾ ವಿದ್ಯಮಾನಗಳು ಬಹುತೇಕವಾಗಿ ಸಾಂಗವಾಗಿ ನೆರವೇರುವುದು ಈ ನಂಬಿಕೆಯಿಂದಲೇ. ದೇವರು ನಂಬಿದವರಿಗೆ ಇಂಬನ್ನು ಕೊಡುತ್ತಾನೆಂದು ಗ್ರಾಮೀಣರ ಉವಾಚವಾಗಿದೆ. ನಂಬಿಕೆಯ ತಳಹದಿಯ ಮೇಲೆ ಎಲ್ಲವೂ ನಿಂತಿವೆ. ನಮ್ಮೆಲ್ಲರ ನಡುವೆ ಇರುವ ಅನೇಕ ಆಚರಣೆಗಳು ನಂಬಿಕೆಗಳಿಂದಲೇ ಇಂದಿಗೂ ಜೀವಂತವಾಗಿ ಉಳಿದು ಬೆಳೆದುಕೊಂಡು ಬಂದಿವೆ. ನಂಬಿಕೆಯಿಂದಲೇ ಎಷ್ಟೋ ಆಚಾರ-ವಿಚಾರಗಳು ಅವ್ಯಾಹತವಾಗಿ ಮುಂದುವರೆದುಕೊಂಡು ಬಂದಿರುತ್ತವೆ.

ರೈತಾಪಿ ವರ್ಗದವರು ಮುಖ್ಯವಾಗಿ ನಂಬಿಕೊಂಡು ಬದುಕನ್ನು ನಡೆಸುತ್ತಿರುವುದು ಭೂಮಿತಾಯಿಯಿಂದ. ತಾವು ಬೆಳೆ ಬೆಳೆಯಲು ಉತ್ತಮವಾದ ಮಳೆ ಬೇಕು ಮಳೆ ಇಲ್ಲದೆ ಹೋದರೆ ಅವನು ಒಂದೊತ್ತಿನ ಕೂಳಿಗೂ ಹೆಣಗಬೇಕಾಗುತ್ತದೆ. ಬರಗಾಲ ಆವರಿಸಿ ಅವನ ಬಾಳು ಗಾಡಾಂಧಕಾರದಲ್ಲಿ ಮುಳುಗುತ್ತದೆ. ಇವೆಲ್ಲವುಗಳಿಂದ ಅವನು ಪಾರಾಗಬೇಕೆಂದರೆ ಮಳೆಗಾಗಿ ಅವನು ಸ್ತೋತ್ರ ಮಾಡುವುದೊಂದೇ ಉತ್ತಮಮಾರ್ಗ. ಎಷ್ಟೋ ವೇಳೆ ನಾನಾ ವಿಧದ ಪೂಜೆ-ಪುನಸ್ಕಾರಗಳನ್ನು ಮಾಡಿ ಮಳೆಬರುವಂತೆ ದೇವರಿಗೆ ಬೇಡಿಕೊಳ್ಳುತ್ತಾನೆ. ಅವನ ಬೇಡಿಕೆಗಳು ಫಲಿಸುವುದಿಲ್ಲ. ಆಗ ಈ ರೀತಿಯ ಆಚರಣೆಗಳನ್ನು ನಡೆಸುತ್ತಾನೆ.

ಮಳೆ ತರಿಸುವುದಕ್ಕಾಗಿ ಅನೇಕ ಆಚರಣೆಗಳು ನಮ್ಮ ನಡುವೆ ಇವೆ. ಈ ಎಲ್ಲ ಆಚರಣೆಗಳಲ್ಲಿ ಜೋಕುಮಾರನ ಆಚರಣೆಯೂ ಒಂದು ಈ ಬಗೆಯ ಆಚರಣೆಗಳು ಎಲ್ಲಾ ಕಡೆಯಲ್ಲಿವೆಯೆಂದು ನಿಖರವಾಗಿ ಹೇಳಲು ಬರುವುದಿಲ್ಲ. ಪ್ರಾದೇಶಿಕ ನೆಲೆಗಟ್ಟಿನಲ್ಲಿ ಇವು ಅನಾವರಣಗೊಳ್ಳುತ್ತವೆಂಬುದಂತೂ ಸ್ಪಷ್ಟ. ಆಯಾ ಪ್ರದೇಶದ ಭೌಗೋಳಿಕ, ಪ್ರಾಕೃತಿಕ ಹಾಗೂ ಸಾಂಸ್ಕೃತಿಕ ಪರಿಸರವೂ ಸಹ ಇವುಗಳ ಮೇಲೆ ಪರಿಣಾಮವನ್ನು ಬೀರುತ್ತದೆ.

ಆಚರಣೆಯ ಹಿನ್ನೆಲೆ

ಭಾದ್ರಪದ ಮಾಸದ (ಸೆಪ್ಟಂಬರ್ ತಿಂಗಳು) ಅಮವಾಸ್ಯೆಯ ಆ ನಂತರ ನಾಲ್ಕನೆಯ ದಿವಸ ಗೌರಿ ಮತ್ತು ಗಣೇಶನ ಹಬ್ಬಗಳು ಬರುತ್ತವೆ. ಅಂದು ಗಣೇಶನನ್ನು ಪ್ರತಿಷ್ಠಾಪಿಸುವ ಮೊದಲು ಗೌರಿಯನ್ನು ಕುಳ್ಳಿರಿಸುತ್ತಾರೆ. ಈ ಪದ್ಧತಿ ಎಲ್ಲಾ ಕಡೆಯಲ್ಲಿ ಸಾರ್ವತ್ರಿಕವಾಗಿ ಇರುತ್ತದೆ. ಕ್ವಚಿತ್ ಆಗಿ ಕೆಲವೆಡೆಗಳಲ್ಲಿ ದೊಡ್ಡಗೌರಿ (ಬಣ್ಣದಗೌರಿ) ಮತ್ತು ಎಳೆಗೌರಿಯರನ್ನು ಕುಳ್ಳಿರಿಸುವುದು ಕಂಡು ಬರುತ್ತದೆ. ದೊಡ್ಡಗೌರಿ ಅಥವಾ ಬಣ್ಣದ ಗೌರಿಯ ಪುತ್ಥಳಿಯನ್ನು ಮರದಿಂದ ತಯಾರಿಸುತ್ತಾರೆ. ಬೇಕಾದ ಬಣ್ಣಗಳನ್ನು ಲೇಪಿಸುತ್ತಾರೆ. ಒಂದು ಚೊಂಬಿನಲ್ಲಿ ತುಂಬಿದ ಕೊಡದ ನೀರನ್ನು ತುಂಬಿ ಇಟ್ಟಿರುತ್ತಾರೆ. ಆ ಚೊಂಬಿನ ಸುತ್ತಲೂ ವೀಳ್ಯದೆಲೆಗಳನ್ನು ಇಟ್ಟಿರುತ್ತಾರೆ. ಆ ಎಲೆಗಳು ಮೂರು ಅಥವಾ ಐದರ ಸಂಖ್ಯೆಯಲ್ಲಿರುತ್ತವೆ. ಆ ಎಲೆಗಳ ನಡುವೆ ಒಂದು ನಿಂಬೆಹಣ್ಣು ಹಾಗೂ ಒಂದು ತೆಂಗಿನಕಾಯಿಯನ್ನು ಇಡುವ ಸಂಪ್ರದಾಯವಿರುತ್ತದೆ. ಮನೆಯವರು ಅಂದು ಹತ್ತಿಯಿಂದ ಎಳೆಯನ್ನಾಗಿ ಮಾಡಿಕೊಂಡು, ಅದನ್ನು ಚೊಂಬಿನ ಸುತ್ತಲೂ ಸುತ್ತಿ ಪೂಜಿಸುತ್ತಾರೆ. ಕೆಲವೆಡೆಗಳಲ್ಲಿ ರೈತರು ತಮ್ಮ ಹೊಲಗಳಲ್ಲಿ ಆಗ ತಾನೇ ಹತ್ತಿ ಬಿಡಲು ಪ್ರಾರಂಭವಾಗಿದ್ದರೆ ಅದನ್ನು ಮನೆಗೆ ತಂದು ರಾಟಿಯ ನೆರವಿನಿಂದ ನೂಲುತ್ತಾರೆ. ನೂತ ಎಳೆಯನ್ನು ಹಾಕುವುದರಿಂದ ತಮಗೆ ಹುಲುಸು ಹೆಚ್ಚಾಗುತ್ತದೆಯೆಂಬ ಭಾವನೆ ಇವರದು. ಅಲ್ಲದೇ ಈ ರೀತಿಯ ಹೊಸ ಹತ್ತಿಯಿಂದ ಎಳೆ ತಯಾರು ಮಾಡಿಟ್ಟುಕೊಂಡು ಎಳೆ ಗೌರಿಗೆ ಹಾಕುವುದು ಶ್ರೇಷ್ಠ ಎಂದು ಇವರ ತಿಳುವಳಿಕೆ ಈ ಎಳೆಗೌರಿಯ ಮಗನೇ ಜೋಕುಮಾರ. ಕನ್ನಡ ಕೃತಿಗಳಲ್ಲಿ ಉಪಲಬ್ಧವಿರುವಂತೆ

ಇವನು ಜೋಕ ಮುನಿಯನ ಮಗನೆಂದು ಮಾರಿಯ ಮಗನೆಂದೂ ಹೇಳಿದರೆ, ಜನಪದರ ದೃಷ್ಟಿಯಲ್ಲಿ ಜೋಕುಮಾರನು ಎಳೆಗೌರಿಯ, ಜೇಷ್ಠಾದೇವಿಯ ಮಗನಾಗಿದ್ದಾನೆ.

ಅನೇಕ ಕಡೆ ಕ್ಷೇತ್ರಕಾರ್ಯ ಸಂದರ್ಭದಲ್ಲಿ ವಕ್ತೃಗಳನ್ನು ಜೋಕುಮಾರನು ಯಾರ ಮಗನು? ಎಂಬುದಾಗಿ ವಿಚಾರಿಸಿದರೆ ಬಹುತೇಕವಾಗಿ ಅವರೆಲ್ಲರೂ ಇವನು ಎಳೆಗೌರಿಯ ಮಗ ಎಂದು ಹೇಳಿದ್ದಾರೆ. ಕೆಲವೆಡೆಗಳಲ್ಲಿ ಈ ಎಳೆಗೌರಿಯ ಪೂಜೆಯೂ ಬಲು ನಿಷಿದ್ಧಗಳಿಂದ ಕೂಡಿದೆ. ಇದು ಒಕ್ಕಲುತನದಲ್ಲಿ ಹುಲುಸು ಹೆಚ್ಚಾಗಲು ಕಾರಣವಾಗುವ ಅಂಶಗಳಿಂದ ಕೂಡಿರುತ್ತದೆ. ಹಳ್ಳಿಗಳಲ್ಲಿ ಇಂದಿಗೂ ಮಳೆ ಬರಲಿ ಅಥವಾ ಬಾರದೇ ಇರಲಿ ಇವನನ್ನು ಪುಟ್ಟಿಯಲ್ಲಿ ಹೊತ್ತು ಮನೆ ಮನೆಗೆ ತೆರಳುವ ಆಚರಣೆ ಮತ್ತು ಹಬ್ಬ ನಡೆಯುತ್ತದೆ. ಈ ಸಂಪ್ರದಾಯವು ಆಚರಣೆ ಮತ್ತು ಹಬ್ಬವೂ ಆಗಿರುತ್ತದೆ. ಇವನು ಮಕ್ಕಳಿಲ್ಲದವರಿಗೆ ಮಕ್ಕಳನ್ನು ಕರುಣಿಸುವ ದೇವರಾಗಿರುತ್ತಾನೆ. ಮಳೆ ಬಾರದಿದ್ದರೆ ಮಳೆ ತರಿಸುವ ಹಾಗೂ ಬೆಳೆಗಳನ್ನು ರಕ್ಷಣೆ ಮಾಡುವ ರೋಗರುಜಿನಗಳನ್ನು ನಿವಾರಿಸುವ ದೇವರಾಗಿದ್ದಾನೆ. ಗ್ರಾಮ ಜನರ ಜೀವನದಲ್ಲಿ ಇವನು ಅವಿಭಾಜ್ಯ ಅಂಗವಾಗಿದ್ದಾನೆ.

ಗೌಡ ಶಾನುಭೋಗರ ಮನೆಯ ಮೂಲ ದ್ರವ್ಯದಿಂದ ಕುಂಬಾರನು ಮೂರ್ತಿಯನ್ನು ಮಾಡಿಕೊಡುತ್ತಾನೆ. ಆ ಮೂರ್ತಿಯನ್ನು ಬೆಸ್ತರು (ಗಂಗಾಮತಸ್ಥರು) ತಮ್ಮ ಮನೆಗೆ ಒಯ್ಯುತ್ತಾರೆ. ಆ ಸಮುದಾಯದ ಜನರು ತಮ್ಮ ಮನೆಯ ಮಗನೆಂದೂ, ತಮ್ಮ ಮನೆಯಲ್ಲಿ ಹುಟ್ಟುತ್ತಾನೆಂದೂ ತಿಳಿದಿರುತ್ತಾರೆ. ಗಂಗಾಮತಸ್ಥರ ಹೆಣ್ಣುಮಕ್ಕಳು ಏಳು ದಿನಗಳ ಅವಧಿಯಲ್ಲಿ ಸಾಧ್ಯವಾದಷ್ಟು ಊರುಗಳನ್ನು ತಿರುಗುತ್ತಾರೆ. ಅಲ್ಪಾಯುಷಿಯಾದ ಇವನು ಅತಿಕಾಮುಕತೆಯಿಂದಾಗಿ ಕೊನೆಯದಿನ ಅಂದರೆ ಹುಣ್ಣಿಮೆಯ ದಿನ ಹೊಲೆಯರ ಉಳಿಯಿಂದ ತನ್ನ ತಲೆಗೆ ಬಡಿಸಿಕೊಂಡು ಸಾವನ್ನಪ್ಪುತ್ತಾನೆ. ಕೆಲವೆಡೆಗಳಲ್ಲಿ ಇವನನ್ನು ಅಗಸರು ಬಟ್ಟೆ ಒಗೆಯುವ (ತೊಳೆಯುವ) ಕಲ್ಲಿನ ಅಡಿ (ತಳಭಾಗ) ಯಲ್ಲಿ ಇಡುವ ಪದ್ಧತಿಯನ್ನಿಟ್ಟುಕೊಂಡಿರುತ್ತಾರೆ. ಇನ್ನು ಕೆಲವೆಡೆಗಳಲ್ಲಿ ಇವನನ್ನು ನೀರಿಗೆ ವಿಸರ್ಜಿಸುತ್ತಾರೆ. ಅವರವರ ಅನುಕೂಲಕ್ಕೆ ತಕ್ಕಂತೆ ಈ ಸಂಪ್ರದಾಯವನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ಇಡೀ ಊರಿನ ಜನರು ಗೌಡ, ಶಾನುಭೋಗ, ಮುಂತಾದ ಗಣ್ಯವ್ಯಕ್ತಿಗಳು ಸೇರಿದಂತೆ ಈ ಒಂದು ಕ್ರಿಯೆಯಲ್ಲಿ ಒಂದು ಮುಖ್ಯ ಘಟಕ (Unit) ವಾಗಿ ಕೆಲಸ ನಿರ್ವಹಿಸುವುದನ್ನು ಗಮನಿಸಬಹುದು.

ಜೋಕುಮಾರನನ್ನು ಜೋಕಪ್ಪ, ಕೊಮಾರಾ, ಮುಂತಾದ ಹೆಸರುಗಳಿಂದಲೂ ಕರೆಯುತ್ತಾರೆ. ಭಾದ್ರಪದ ಮಾಸದ ಬೆನಕನ ಅಮವಾಸ್ಯೆಯಾದ ಚತುರ್ಥಿಯಂದು ಎಳೆಗೌರಿ ಹುಟ್ಟುತ್ತಾಳೆ. ಮೂಲಾ ನಕ್ಷತ್ರದಂದು ಇವನು ಹುಟ್ಟುತ್ತಾನೆ. ಕುಂಬಾರನು ಗೌಡರ ಮನೆಯಿಂದ ಎಳೆಯನ್ನು ತರುತ್ತಾನೆ. ಆ ಎಳೆಯನ್ನು ಸೇರಿಸಿ ಮೂರ್ತಿಯನ್ನು ತಯಾರು ಮಾಡುತ್ತಾನೆ. ಕೆಲವೆಡೆಗಳಲ್ಲಿ ಕೇವಲ ಮುಖವನ್ನು ಮಾತ್ರ ರಚಿಸುತ್ತಾರೆ. ಆ ಮುಖದಲ್ಲಿ ತೆರೆದ ಬಾಯಿ ಪ್ರಧಾನವಾಗಿ ಗೋಚರಿಸುತ್ತದೆ. ಬಾಯಿಯ

ಮೇಲ್ಭಾಗದಲ್ಲಿ ಭಕ್ತರು ಬೆಳ್ಳಿಯಿಂದ ಮಾಡಿಸಿಕೊಟ್ಟ ಕೋರೆ ಮೀಸೆ, ಕಣ್ಣುಗಳು, ತಲೆಯ ಹಿಂಭಾಗದಲ್ಲಿ ಬೆಳ್ಳಿಯ ಛತ್ರಿ, ಸೂರ್ಯ, ಚಂದ್ರರನ್ನು ಇಟ್ಟಿರುತ್ತಾರೆ. ಅವನ ಸುತ್ತಲೂ ಪುಷ್ಪಗಳನ್ನು ಪ್ರಭಾವಳಿಯ ರೀತಿಯಂತೆ ಅರ್ಧ ವೃತ್ತಾಕಾರವಾಗಿ ಇಟ್ಟಿರುತ್ತಾರೆ. ಈ ಬಗೆಯ ಬೆಳ್ಳಿಯ ಆಭರಣಗಳನ್ನು ಭಕ್ತಾದಿಗಳು ತಮ್ಮ ಹರಕೆಗಳನ್ನು ತೀರಿಸಲು ಇವನಿಗೆ ಕೊಡುತ್ತಾರೆ. ತಾವು ಬೇಡಿಕೊಂಡ ಬೇಡಿಕೆಗಳು ಈಡೇರಿದರೆ ಹರಕೆಯ ರೂಪದಲ್ಲಿ ಜೋಕುಮಾರನಿಗೆ ಸಲ್ಲಿಸುತ್ತಾರೆ. ಇವನಿಗೆ ಮೀಸೆಯನ್ನು ಕುರಿಯ ಉಣ್ಣೆ (ತುಪ್ಪಟ) ಯಿಂದ ತಯಾರಿಸಿ ಇಡುತ್ತಾರೆ.

ಇವನನ್ನು ಪುಟ್ಟಿಯಲ್ಲಿ ಹೊತ್ತುಕೊಂಡು ಪ್ರತಿ ಮನೆಯ ಮುಂದೆ ಬಂದ ಹೆಣ್ಣು ಮಕ್ಕಳು, ಅವನ ಹುಟ್ಟು, ಪುಂಡಾಟಿಕೆ, ಕಾಮ ಪ್ರತಾಪಗಳು, ಮಳೆ ಬರಿಸುವ ಶಕ್ತಿ, ಮಕ್ಕಳನ್ನು ನೀಡುವ ಶಕ್ತಿ ಮುಂತಾದ ಅಂಶಗಳನ್ನೊಳಗೊಂಡಂತೆ ಅನೇಕ ವಿಧದ ಹಾಡುಗಳನ್ನು ಹಾಡುತ್ತಾರೆ. ಇವನು ಗೌರಿಯ ಅಥವಾ ಗೌರವ್ವನಮಗ.

ಕುಂತಾಡೋ ಮಗನಿಗೆ ಕುಂಚಿಗೆ ಕೋಲಾಯ
ಹೊಟ್ಟಿ ಮುತ್ತವನ ಕಿವಿಯಾಗೆ | ಗೌರವ್ವನ
ಬಣ್ಣದ ಮಗನೆ ಕೊಮರಯ್ಯ

ಇವನ ತಾಯಿ ಗರ್ಭಿಣಿಯಾಗಿದ್ದಾಗ ಅವಳು ಹಣ್ಣೆ ಸೊಪ್ಪನ್ನು ಬಯಸಿದ್ದಳು. ಬಸಲಿಂತನ ಸೊಪ್ಪನ್ನು ತೆಗೆದುಕೊಂಡು ತಿಂದಿದ್ದಳು. ಅವನನ್ನು ಹಡೆಯುವಾಗ ಅವಳು ಅನುಭವಿಸಿದ ನೋವು ಹೇಳತೀರದು.

ಹೊಟ್ಟೆ ಹೊಟ್ಟಿಗು ಬ್ಯಾನೆ ಕತ್ತಿಲಿ ಕಡುಧಂಗೆ
ಅಕ್ಕ ನಾನೇನ ಪಡುದೇನೆ ಶಿವನಲ್ಲೆ
ಮುಚ್ಚಿ ಬಾಗುಣವ ತರಲಿಲ್ಲ.
ಬ್ಯಾನ ಬರುತಾವೆಂದು ತೂಗು ಮಂಚನಿಳುದಾಳೆ
ವಾಲೆ ಬಂಗಾರ ತಗುದಾಳ | ನಮದೇವಿ
ರಾಜ ಗೋಮರನ ಹಡುದಾಳೆ

ಹೀಗೆ ಹುಟ್ಟಿದ ಜೋಕುಮಾರ ಅಸಾಧ್ಯ ಹುಡುಗನಾಗುತ್ತಾನೆ ಏಕೆಂದರೆ ಆತನಿಗೆ ಹುಟ್ಟುತ್ತಲೇ ಗಡ್ಡಮೀಸೆ ಬಂದಿರುತ್ತವೆ. ಆದುದರಿಂದ ಮಹಾಕಾಮುಕ, ಬೆದೆಬಡುಕ ತನ್ನ ತಾಯಿಯನ್ನೇ ಆಸೆಪಟ್ಟವನು ಇವನು ಪ್ರತಿಯೊಂದು ಓಣಿಯಲ್ಲಿ ಹೋದಾಗ ಅವರ ಹೆಂಡಿರು ನನಗೆ ಬೇಕು ಎನ್ನುತ್ತಾನೆ.

ಊದ್ದೀನ ಕಾಳಿನಂಗೆ ತಿದ್ದೀದಲ್ಲಿ ನಾನೆ
ಜಿಡ್ಡಾಗೆ ಹಾದಿ ಬರುವೋನೆ | ಈ ಊರ
ದೊಡ್ಡೋರೆಂಡಾರೆ ನನಿಗೆಂದ ||

ಆಗಸೇ ಕಾಳಿನಂಗೆ ಸೊಗಸಿದಲ್ಲಿ ನಾನೆ
ಆಗಸ್ಯಾಗೆ ಹಾರಿ ಬರುವೋನೆ | ಈ ಊರ
ಆಗಸರ್ಹೆಂಡಾರೆ ನನಿಗೆಂದ||

ಈರೀಯ ಹೂವೊಂದು ಈರೀಯ ಕಾಯಂಗೆ, ಈರೀಯ ಏಳ ಗೊನೆಯಂಗೆ ಜೋಕುಮಾರ
ಈರೀಯ ಏಳ ಗೊನೆಯಂಗೆ ನನ ಕೊಮರ |
ಹಿರೀರ ಹೆಂಡ್ರ ನನಗೆಂದ ಜೋಕುಮಾರ ||

ಹಾಗಲ ಹೂವೊಂದ ಹಾದ್ಯಾಗ ಕಾಯೆಂದ
ಹಾಗಲ ಏಳ ಗೊನೆಯಂಗೆ ನನ ಕೊಮರ |
ಹಾರೂರ ಹೆಂಡ್ರ ನನಗೆಂದ ಜೋಕುಮಾರ ||

ಕುಂಬಳ ಹೂವೊಂದ ಕುಂಬಳ ಕಾಯೇಲಿ
ಕುಂಬಳ ಏಳ ಗೊನೆಯಂಗೆ ಜೋಕುಮಾರ
ಕುಂಬಳ ಏಳಗೊನೆಯಂಗೆ ನನಕೂಮರ ಕುಂಬಾರ ಹೆಂಡ್ರ ನನಗೆಂದ

ಎಕ್ಕೀಯ ಹೂವೊಂದು ಎಕ್ಕೀಯ ಕಾಯಂದೆ
ಎಕ್ಕೀಯ ಏಳಗೊನೆಯಂಗೆ ಜೋಕುಮಾರ
ಎಕ್ಕಿಯ ಏಳಗೊನೆಯಂಗೆ ನನ ಕೊಮರ ವಕ್ಕಲಿಗರ ಹೆಂಡ್ರ ನನಗೆಂದ

ಇವನ ಆಯಸ್ಸು ಏಳು ದಿನಗಳು ಮಾತ್ರವಾಗಿರುತ್ತವೆ ಈ ಏಳು ದಿನಗಳಲ್ಲಿ ಅವನು ಏನೆಲ್ಲಾ ಪುಂಡಾಟಿಕೆಯನ್ನು ನಡೆಸುತ್ತಾನೆ. ಇವನನ್ನು ನೋಡಿಕೊಳ್ಳುವುದೇ ಕಷ್ಟವಾಗುತ್ತದೆ. ಬಹಳಷ್ಟು ಜನರು ಸೇರಿ ತೊಟ್ಟಿಲಿಗೆ ಹಾಕಿ ತೂಗುತ್ತಾರೆ. ಆದರೆ ಅವನು ಮಲಗುವುದಿಲ್ಲ.

ಕಬ್ಬಿಣದ ತೊಟ್ಲುದಾಗ ಜಗ್ಗಾಕೌದಿಹಾಸಿ
ಇಬ್ರು ತೂಗಿದರ ಮಲಗೌವ್ನ |
ಇಬ್ರು ತೂಗಿದರೆ ಮಲಗೌವ್ನ ನನಕೊಮರ ಅಬ್ಬರದ ಮಗನ್ನ ಹಡದಾಳೆ
ತ್ಯಾಗದ ತೊಟ್ಲೀಗೆ ಜಗ್ಗನಾ ಕಿಡುಕೋಳೆ
ನಾಲರು ತೂಗಿದರೆ ಮಲಗೋನೆ | ನಮದೇವಿ
ಸೂಜಿಗದ ಮಗನ ಹಡದಾಳೆ ||

ಜೋಕುಮಾರನಿಗೆ ತಾಯಿ ಅನೇಕ ಉಡುಗೆ ತೊಡುಗೆಗಳನ್ನು ಹಾಕಿ ಕಳುಹಿಸುತ್ತಾಳೆ. ಅವನು ಅವೆಲ್ಲವನ್ನು ಧರಿಸಿಕೊಂಡು ಬಿತ್ತಿದ ಹೊಲಗಳಿಗೆ ಹೋಗಿ ಚೆಂಡಾಟವಾಡುತ್ತಾನೆ. ಹರಗಿದ ಹೊಲದಲ್ಲಿ ಹಳದಿ ಚೆಂಡಿನಿಂದ ಆಟವಾಡುತ್ತಾನೆ. ಅದರಿಂದದ ಬೆಳಕು ಬರುವಂತೆ ಮಾಡುತ್ತಾನೆ.

ಹಸಿರಿನ ಹೊಲದ ಹೊಕ್ಕಾನಾ ಚೆಂಡಾಡ್ಯಾನ
ನಿತ್ರೆರು ಮಗನ ಕೊಮರಾಯ ಜೋಕುಮಾರ
ನಿತ್ರೆರು ಮಗನ ಕೊಮರಾಯ ಚೆಂಡಾಡ್ಯಾನ ಗೋಧಿಕಾಳುಗಳು ಬೆಳೆಯಾಲಿ
ಹರಗೀದ ಹೊಲದಾಗೊಕ್ಕು ಚೆಂಡಾಡ್ಯನ ಹರದೇವ್ರು ಮನೆಗ್ಯಾನ ಕೊಮರಾಯ
ಹರಬೇವು ಮನೆಯ ಚೆಂಡಾಡಿದಲ್ಲಿ
ಹತ್ತಿ ನೇಣ್ಯಾವು ಬೆಳಿಯಾಲಿ ಜೋಕುಮಾರ
ಹರದೀಯ ಮಗ ನನ ಕೊಮರಯ್ಯ ಚೆಂಡಾಡಿದಲ್ಲಿ
ಹತ್ತಿ ಗೊನೆಗಳೂ ಬೆಳಿಯಾಲಿ
ಬಿತ್ತೀದಾ ಹೊಲದಾಗ ಹೊಕ್ಕು ಚೆಂಡಾಡ್ಯಾನ ನಿಸ್ತ್ರೀಯ ಮಗ ನನ ಕೊಮರಯ್ಯ
ನಿಸ್ತ್ರೀಯ ಮಗ ನನ ಕೊಮರಯ್ಯ ಹೊಕ್ಕು ಚೆಂಡಾಡಿದಲ್ಲಿ ಹತ್ತಿಗೊನೆಗಳೂ ಬೆಳೆಯಾಲಿ

ಇವನು ಹುಟ್ಟಿ ಲೋಕಕ್ಕೆಲ್ಲಾ ಪ್ರಸಿದ್ಧಿಯಾಗುತ್ತಾನೆ. ಬರೀ ಪುಂಡಾಟಿಕೆಗೆ ಮಾತ್ರ ಹೆಸರಾಗದೆ ಉತ್ತಮ ಕೆಲಸಗಳಿಗೂ ಅದೇರೀತಿ ಹೆಸರಾಗುತ್ತಾನೆ. ಮಳೆಗಾಲದಲ್ಲಿ ದೊಡ್ಡ ದೊಡ್ಡ ಮಳೆಗಳು ಬಾರದೇ ಹೋಗುತ್ತವೆ. ರೈತರು ಬಿತ್ತಿದ ಪೈರುಗಳು ಮಳೆಯಿಲ್ಲದೆ ಬಾಡುತ್ತಿರುತ್ತವೆ. ಇದರಿಂದ ರೈತರು ತುಂಬಾ ಸಂಕಷ್ಟವನ್ನು ಅನುಭವಿಸುತ್ತಿರುತ್ತಾರೆ. ಇದಕ್ಕೆ ಏನಾದರೊಂದು ಪರಿಹಾರವನ್ನು ಕಂಡುಹಿಡಿಯಬೇಕೆಂದು ತಮ್ಮ ತಮ್ಮಲ್ಲಿ ಊರಿನ ಗೌಡರು, ರಾಯರು, ಶಾನುಭೋಗರು, ಶೆಟ್ಟರು ಮುಂತಾದ ಗಣ್ಯರೆಲ್ಲರೂ ಚಾವಡಿಯಲ್ಲಿ ಕುಳಿತು ಜೋಕುಮಾರನನ್ನು ಕರೆಯಿಸುತ್ತಾರೆ. ಅವನು ಇವರ ಬಳಿಗೆ ಬರುತ್ತಾನೆ. ತನ್ನನ್ನು ಕರೆಕಳುಹಿಸಿದ ಕಾರಣವೇನೆಂದು ಕೇಳುತ್ತಾನೆ. ಅವರೆಲ್ಲರೂ ದೊಡ್ಡ ಮಳೆಗಳಾದ ಉತ್ತರೆ, ಹಸ್ತ ಮಳೆಗಳು ಬಂದಿಲ್ಲ ತಮ್ಮ ಪಾಡು ಅಧೋಗತಿಗೆ ಇಳಿದಿದೆ ಅದುದರಿಂದ ನೀನು ನಮಗೆ ಮಳೆಯನ್ನು ಕರುಣಿಸು ಎಂದು ಕೇಳಿಕೊಳ್ಳುತ್ತಾರೆ. ಅವರ ಬೇಡಿಕೆಯನ್ನು ಈಡೇರಿಸುವುದಾಗಿ ಭರವಸೆ ನೀಡುತ್ತಾನೆ. ಸ್ವಲ್ಪ ಸಮಯದ ನಂತರ ನಿರ್ಮಲ ಆಕಾಶದಲ್ಲಿ ಇದ್ದಕ್ಕಿದ್ದಂತೆ ಕಾರ್ಮೋಡಗಳು ಆವರಿಸುತ್ತವೆ.

ಎದ್ದಾವೆ ಮಸಿಯಂಗೆ ಎದ್ದಾವೆ ಮಳೆ ಮೋಡ
ಗದ್ದಲಿಸಿ ಮೋರೆ ಹರಿಮಿಂಚೆ ಗೌಡರ
ಗದ್ದೇಯ ಹೊಲಕೆ ಹದ ಮಳೆ
ಅಡ್ಡಡ್ಡ ಮಳೆ ಬಂದು ದೊಡ್ಡ ದೊಡ್ಡ ಕೆರೆ ತುಂಬಿ
ಗೊಡ್ಡುಗಳೆಲ್ಲ ಹಯನಾಗಿ | ಗೌಡರ
ಸೆಡ್ಡಿಯ ಮೇಲೆ ಸಿರಿಬರಲಿ
ಅತ್ತಾಗ ಮಳಿ ಬಂದು ಇತ್ತಾಗ

ಕೆರಿತುಂಬಿ ಸತಿ ಸಾಗರದಾಗ ಬಿಸ್ಲಕಾದ
ಗೌಡರ ರಾಸಿಯ ಮೇಲೆ ಸಿರಿ ಬಂದು ಜೋಕುಮಾರ
ಹಾಸ್ಯಾಸಿ ಮಳಿ ಬಂದು ಬೀಸ್ಬೀಸೀ
ನನಕೊಮರ ಬಾಸಿಂಗನಾಗಿ ಹೊಳದಾನ
ಬಾಸಿಂಗನಾಗಿ ಹೊಳದಾsನ ರೈತರಾ ರಾಸಿಯ ಮ್ಯಾಲೆ ಸಿರಿಬರಲಿ

ಅವನ ಆದೇಶದಂತೆ ಸಾಕಷ್ಟು ಮಳೆ ಬರುತ್ತದೆ. ರೈತರ ಹೊಲಗದ್ದೆಗಳಲ್ಲಿ ಎಲ್ಲಿ ನೋಡಿದರೂ ನೀರು ಕಾಣುತ್ತದೆ. ಎಲ್ಲೆಲ್ಲೂ ಶಾಂತಿ, ಸಮೃದ್ಧಿ ನೆಲೆಸಿರುತ್ತದೆ. ಇವನಿಂದಾಗಿ ರೈತರಿಗೆ ಬರಗಾಲದ ಛಾಯೆ ದೂರ ಸರಿಯುತ್ತದೆ. ದನಕರುಗಳಿಗೆ ಸಮೃದ್ಧಿ ಹುಲ್ಲು ಸಿಗುತ್ತದೆ. ನಾಡಿನಾದ್ಯಂತ ನೆಮ್ಮದಿ ನೆಲೆಸುತ್ತದೆ.

ಇವನು ಮಳೆ ಫಲವನ್ನು ಕೊಡುವುದರ ಜತೆಗೆ ಮಕ್ಕಳಿಲ್ಲದವರಿಗೆ ಮಕ್ಕಳ ಫಲವನ್ನು ಕೊಡುತ್ತಾನೆ. ಇವನು ಇಂದಿಗೂ ಗ್ರಾಮೀಣರ ಜೀವನದಲ್ಲಿ ಆರಾಧ್ಯ ದೇವನಾಗಿದ್ದು ಪ್ರಜನನ (Fertility God) ದೇವರಾಗಿರುತ್ತಾನೆ. ಸಂತಾನದ ಫಲಪ್ರಾಪ್ತಿಗಾಗಿ ಬಂಜೆಯರು ಬಂದು ಇವನಿಗೆ ಬೇಡಿಕೊಂಡರೆ ಮುಂದಿನ ವರ್ಷ ಜೋಕುಮಾರನು ಬರುವ ವೇಳೆಗೆ ತಮಗೆ ಮಕ್ಕಳಾಗುತ್ತಾರೆ ಎಂದು ತಿಳಿಯುತ್ತಾರೆ. ಈ ಅಂಶ ಗಮನಾರ್ಹವಾದುದು. ಇದು ಎಲ್ಲಾ ಕಡೆಯಲ್ಲಿಯೂ ಇಂದಿಗೂ ಉಳಿದುಕೊಂಡು ಬಂದಿರುತ್ತದೆ.

ಮಕ್ಕಳುಳ್ಳ ಮನಿಯ ಹೊಕ್ಕು ನೋಡೊ ಕೊಮರಯ್ಯ
ಹೊಕ್ಕುಳದ ಗಂಟೆ ಅರಳೇಲೆ | ಆ ಮನೆಯ
ಮಕ್ಕಳಿಗಾಸೆ ಘನವಾಗಿ
ಚಿಕ್ಕ ನನ್ನ ಕೊಮರ ಹುಟ್ಟೀಗೆ ಬಂದರೆ ಅಕ್ಕಿ ಬೇಳೆಗಳಾ ಕೊಡಿರವ್ವ
ಅಕ್ಕಿ ಬೇಳೆಗಳಾಕೊಡಿರವ್ವ ನಿಮಿಗೊಳ್ಳೇ ಬಾಲಮ್ಮನಾಸೇ ಸಿರಿಯಾಗೆ
ಬಾಲಾಗೇ ಬೆಣ್ಣೆಕೊಡಿರವ್ವ ನಿಮಿಗೊಳ್ಳೇ ಬಾಲಮ್ಮನಾಸೇ ಸಿರಿಬರಲಿ.

ಇಂತಹ ಒಳ್ಳೆಯ ಗುಣಗಳ ಜೊತೆಗೆ ಇವನು ದುರುಳ ಮತ್ತು ತಿಳಿಗೇಡಿ. ಇವನ ಅತಿಕಾ ಮುಕತೆಯೇ ಇವನಿಗೆ ಸಾವಾಗಿ ಪರಿಣಮಿಸುತ್ತದೆ. ಇವನು ತನ್ನ ಸಾವನ್ನು ತಾನೇ ಬರಮಾಡಿಕೊಳ್ಳುತ್ತಾನೆ.

ಜೋಕುಮಾರನೆಂಬುವನು ಗೌರದೇವಿ ಮಗನಮ್ಮ
ಹುಟ್ಟುತ್ಲೆ ತಾಯ ಭ್ರಮಿಸ್ಯಾನೆ | ಗೌರಮ್ಮ
ಎತ್ಯಾಕಿ ಕೊರಳs ಮುರುದಾsಳೆ
ಈ ಹಾಡಿನೊಂದಿಗೆ ಜನಪದರು ಮತ್ತೊಂದು ಹಾಡನ್ನು ಹಾಡುತ್ತಾರೆ.
ಜೋಕುಮಾರ ಅಂಬೋನು ಹುಟ್ಟುತ್ತಲೆ ತಿಳಿಗೇಡಿ

ದಂಡಿನಗೆ ನಮುನ ಬಿಟ್ಟು ಬಂದು ಮಾದಿಗರ
ಹರಳಯ್ಯನ ಮನೆಗೆ ನುಗ್ಗಿ ಬಂದ

ಇಂತಹ ವಿಲಕ್ಷಣ ಸ್ವಭಾವವನ್ನು ಹೊಂದಿರುವವನು ಮತ್ತೆ ಹುಟ್ಟಿಬರಲಿ. ಲೋಕ ಕಲ್ಯಾಣಕ್ಕಾಗಿ ಮಳೆಯನ್ನು ತರಬೇಕು. ಬಂಜೆಯರಿಗೆ ಮಕ್ಕಳ ಫಲವನ್ನು ಕರುಣಿಸಬೇಕು ಎಂದು ಆ ಹೆಣ್ಣುಮಕ್ಕಳು ಹಾಡಿ ಹರಸುತ್ತಾರೆ.

ಜೋಕುಮಾರ ಹುಟ್ಟಲಿ ಲೋಕವೆಲ್ಲ ಬೆಳಿಯಾಲಿ
ಆಕಳ ಹಾಲ ಕರಿಯಾಲಿ | ಈ ಮನಿಯ
ಕಾಸಿದ್ದೆ ಮೊಸರ ಕಡಿಯಾಲಿ

ಇಂತಹುದೇ ಹಾಡು ಬೇರೆ ಬೇರೆ ಪ್ರದೇಶಗಳಲ್ಲಿ ಪಾಠಾಂತರಗೊಳ್ಳುತ್ತದೆ.

ಜೋಕುಮಾರ ಹುಟ್ಟಲಿ ಲೋಕವೆಲ್ಲಾ ಬೆಳಿಯಾಲಿ
ಆ ತಾಯಿ ಹಾಲು ಕರಿಯಾಲಿ |
ಆ ತಾಯಿ ಹಾಲು ಕರಿಯಾಲಿ ಈ ರಮಣ ಕಾಕೆದ್ದು ಮೊಸರಾ ಕಡೆಯಾಲಿ
ಹಾದೀಗೆ ಜಯ ಜಯ ಬೀದೀಗೆ ಜಯಜಯ
ನಿಮ್ಮನೆ ಮಕ್ಕಳಿಗೆ ಜಯ ಜಯ | ನನ ಕೊಮರ
ಬೇಗಾನೆ ಹರಕೆ ಕೊಡುಬಂದ.

ಈ ರೀತಿಯಲ್ಲಿ ಹಾಡು ಹೇಳಿ ಆ ಸಮುದಾಯದ ಹೆಣ್ಣು ಮಕ್ಕಳು ಬೇರೆ ಮನೆಗಳಿಗೆ ತೆರಳಲು ಅನುವು ಮಾಡಿಕೊಳ್ಳುತ್ತಾರೆ. ಇದಾದ ಸ್ವಲ್ಪ ಹೊತ್ತಿನ ಬಳಿಕ ಮನೆಯವರು ತಮ್ಮ ಹೊಲದಲ್ಲಿ ಬೆಳೆದ ಯಾವುದೇ ಬಗೆಯ ಧಾನ್ಯಗಳನ್ನು ಅವರಿಗೆ ನೀಡುತ್ತಾರೆ. ಇವುಗಳ ಜತೆಗೆ ಜೋಕುಮಾರನಿಗೆ ಪ್ರಿಯವಾದ ಉಪ್ಪು, ಮೆಣಸಿನಕಾಯಿ, ಹುಣುಸೇಹಣ್ಣು, ಎಣ್ಣೆ ಬೆಣ್ಣೆ ಹೀಗೆ ನಾನಾ ವಿಧದ ಪದಾರ್ಥಗಳನ್ನು ಅವನಿಗೆ ಅರ್ಪಿಸುತ್ತಾರೆ. ಜೋಕುಮಾರನ ಪುಟ್ಟಿಯಲ್ಲಿ ಸಣ್ಣ ದೀಪವೊಂದನ್ನು ಇಟ್ಟಿರುತ್ತಾರೆ. ಆ ದೀಪಕ್ಕೆ ಒಂದೆರಡು ಚಮಚೆ ಹರಳೆಣ್ಣೆಯನ್ನು ಹಾಕಿ ಅವನಿಗೆ ಶಿರಬಾಗಿ ನಮಸ್ಕರಿಸುತ್ತಾರೆ. ರೈತಾಪಿ ವರ್ಗದ ಜನರು ದವಸಧಾನ್ಯಗಳನ್ನು ಕೊಡುವ ಮುಂಚೆ ಜೋಕುಮಾರನ ಬಾಯಿಗೆ ಬೆಣ್ಣೆಯನ್ನಿಡುತ್ತಾರೆ. ಇದರಿಂದ ತಮಗೆ ಹೈನು ಪದಾರ್ಥಗಳು ಇಮ್ಮಡಿಯಾಗುತ್ತವೆಯೆಂದು ಅವರ ನಂಬಿಕೆ. ಹೀಗೆ ಬೆಣ್ಣೆಯನ್ನಿಡುವಾಗ 'ಸ್ವಾಮಿ ನಮ್ಮ ಮನಿಯಾಗ ದವಸಧಾನ್ಯ ಬ್ಯಾಳೆ ಇಲ್ಲದ್ರೂ ಬೆಣ್ಣೆ ಇಟ್ಟಿದ್ದೀನಿ ನಮ್ ಹೊಲ, ಮನಿ, ನಮ್ ಜೀವನವನ್ನು ತಂಪಾಗಿಟ್ಟಿರಪ್ಪ ಯಾವೊಂದು ತಾಪತ್ರಯಗಳು ಬರದಂತೆ ನಮ್ಮನ್ನು ಕಾಪಾಡುವ ಹೊಣೆ ನಿನ್ನ ಮ್ಯಾಲಿದೆ' ಎಂದು ಅವನಿಗೆ ಬೇಡಿಕೊಳ್ಳುತ್ತಾರೆ.

ಈ ಮೊದಲೇ ಹೇಳಿರುವಂತೆ ಜೋಕುಮಾರನ ಕಪ್ಪನ್ನು ಅಂಬಲಿನುಚ್ಚನ್ನು ಪ್ರತಿ ಮನೆ ಮನೆಗೆ ಕೊಡುತ್ತಾರೆ. ಅವರು ಕೊಟ್ಟಂತಹ ಕಪ್ಪನ್ನು ರೈತರು ತೆಗೆದುಕೊಂಡು ದನಗಳನ್ನು ಕಟ್ಟುವ ಗೂಟ,

ಕಣ್ಣಿಗಳಿಗೆ ಸವರುತ್ತಾರೆ. ಉಳಿದದ್ದರಲ್ಲಿ ರೈತರು ತಮ್ಮ ಮನೆಯ ಮುಂಬಾಗಿಲಿಗೆ ಹಚ್ಚುತ್ತಾರೆ. ಇದರಲ್ಲಿ ಅನೇಕ ವಿಧಾನಗಳನ್ನು ಅನುಸರಿಸುತ್ತಾರೆ. ಈರೀತಿಯಲ್ಲಿ ಹಚ್ಚುವುದರಿಂದ ತಮ್ಮ ಮನೆಗೆ ಯಾವುದೇ ಅನಿಷ್ಟಕರ ಘಟನೆಗಳು ನಡೆಯುವುದಿಲ್ಲವೆಂಭ ಭಾವನೆ ಅವರಲ್ಲಿ ಮನೆ ಮಾಡಿದೆ. ಮಾನವ ಶಾಸ್ತ್ರಜ್ಞರು ಹೇಳಿರುವಂತೆ ಕುಲದೇವತಾ ಸಂಕೇತಗಳು ದನಗಳ ಕೊಟ್ಟಿಗೆಗೆ ಹಚ್ಚುವುದರ ಉದ್ದೇಶವು ದನಗಳನ್ನು ಕಾಡಿಸುವ ಉಣ್ಣೆಗಳ ಉಪದ್ರವದಿಂದ ಪಾರು ಮಾಡುತ್ತದೆ. ಅವುಗಳಿಗೆ ಯಾವುದೇ ರೀತಿಯ ಕಾಯಿಲೆ, ಕಸಾಲೆಗಳು ಬರುವುದಿಲ್ಲವೆಂದು ಅವರು ನಂಬುತ್ತಾರೆ. ಕಪ್ಪನ್ನು ತಮ್ಮ ಹಣೆಗೆ ಹಚ್ಚಿಕೊಳ್ಳುತ್ತಾರೆ. ಉಳಿದದ್ದನ್ನು ಒಂದು ಚಿಕ್ಕ ಬಟ್ಟೆಯಲ್ಲಿಟ್ಟು ಗಂಟುಹಾಕಿ ತಮಗೆ ನೆನಪಾಗುವಂತಹ ಜಾಗದಲ್ಲಿ ಅದನ್ನು ಕಟ್ಟುತ್ತಾರೆ. ಜೋಕುಮಾರನ ಅಂತ್ಯವಾದ ಒಂದೆರಡು ದಿನಗಳಲ್ಲಿ ಅದನ್ನು ಬಳಕೆ ಮಾಡುತ್ತಾರೆ.

ಜೋಕುಮಾರನನ್ನು ಹೊರುವ ಹೆಣ್ಣುಮಕ್ಕಳು ನೀಡಿದ ಕಪ್ಪಿನ ಜತೆಗೆ ಬೇವಿನ ಎಲೆಗಳು ಅಂಬಲಿನುಚ್ಚನ್ನು ತೆಗೆದುಕೊಂಡು ಎಲ್ಲಾ ಸಮವಾಗಿ ಬೆರೆಯುವಂತೆ ಕಲೆಸುತ್ತಾರೆ. ಚೆನ್ನಾಗಿ ಕಲೆತ ಆನಂತರ ಅದನ್ನು ಮಡಿಕೆಯಲ್ಲಿ ಹಾಕಿಕೊಂಡು ಉಗ್ಗದಲ್ಲಿ ಮಡಿಕೆಯನ್ನಿಟ್ಟುಕೊಂಡು ಮನೆಯ ಯಜಮಾನ ಅಥವಾ ಹಿರಿಯರು ತಲೆಗೆ ಕರಿಯ ಕಂಬಳಿ ಕೊಪ್ಪೆಹಾಕಿ ಕಾಲಿಗೆ ಚಪ್ಪಲಿಯನ್ನು ಧರಿಸಿ ಹೊಲದಲ್ಲಿ ಚರಗ ಚೆಲ್ಲಲು ತಯಾರಾಗುತ್ತಾನೆ. ಆಗ ಅವನು ಒಂದು ಕೈಯಲ್ಲಿ ಕುಡುಗೋಲು ಮತ್ತೊಂದು ಕೈಯಲ್ಲಿ ಉಗ್ಗದ ಮಡಿಕೆ ಇರುತ್ತದೆ. ಈ ಸಂಪ್ರದಾಯವನ್ನು ಹಿರಿಯ ತಲೆಮಾರಿನ ಜನರು ಮಾತ್ರ ಅನುಸರಿಸುತ್ತಿದ್ದಾರೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಇದು ಬಹಳ ಕ್ವಚಿತ್‌ಆಗಿ ಕಂಡು ಬರುತ್ತಿದೆ. ಈಗಿನ ಯುವ ಪೀಳಿಗೆಯ ಹುಡುಗರು ಒಂದು ಚಿಕ್ಕ ಸ್ಟೀಲ್ ಡಬ್ಬಿ ಅಥವಾ ಬಕೆಟ್ (ಕ್ಯಾರಿಯರ್) ನಲ್ಲಿ ಅಂಬಲಿಯನ್ನು ತೆಗೆದುಕೊಂಡು ತಮ್ಮ ಹೊಲಗದ್ದೆಗಳಿಗೆ ಹೋಗಿ ಚರಗ ಚೆಲ್ಲುವುದನ್ನು ಗಮನಿಸಿದ್ದೇನೆ. ಹಿಂದಿನ ದಿನಗಳಲ್ಲಿ ಈ ಎಲ್ಲಾ ಅಗತ್ಯ ವಿಧಿ ವಿಧಾನಗಳನ್ನು ಅಚ್ಚುಕಟ್ಟಾಗಿ ಸಂಪ್ರದಾಯ ಬದ್ಧವಾಗಿ ನಿರ್ವಹಿಸುತ್ತಿದ್ದರು. ಆದರೆ ಈಗ ಔಪಚಾರಿಕ ಆಚರಣೆಯಾಗಿ ಮಾತ್ರ ನಮ್ಮ ನಡುವೆ ಬಳಕೆಯಲ್ಲಿದೆ. ಹಿಂದೆ ಪಾಲಿಸಿಕೊಂಡು ಬರುತ್ತಿದ್ದ ನಿಯಮಗಳು ಈಗ ಅನೇಕ ಮಾರ್ಪಾಡುಗಳನ್ನು ಹೊಂದಿವೆ.

ಚರಗ ಚೆಲ್ಲುವ ಪ್ರಕ್ರಿಯೆಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಚರಗ ಚೆಲ್ಲುವಾಗಲೂ ಸಹ ಅನೇಕ ವಿಧದಲ್ಲಿ ಪ್ರಾರ್ಥಿಸಿಕೊಳ್ಳುತ್ತಾರೆ.

೧. ಈ ಬಾರಿ ಉತ್ತಮ ಮಟ್ಟದಲ್ಲಿ ಮಳೆಯನ್ನು ಕರುಣಿಸು

೨. ನಾವು ಬಿತ್ತಿದ ಪೈರುಗಳು ಸಮೃದ್ಧಿಯಾಗಿ ಬರುವಂತೆ ನಮಗೆ ಅನುಗ್ರಹಿಸು.

೩. ಯಾವುದೇ ರೋಗ-ರುಜಿನಗಳು ಬೆಳೆಗಳಿಗೆ ಬಾರದಂತೆ ನೋಡಿಕೋ.

೪. ತಮ್ಮನ್ನು ಆರ್ಥಿಕ ಸಂಕಷ್ಟದಿಂದ ಪಾರುಮಾಡು

೫. ಉತ್ತಮ ಬೆಳೆಗಳು ಬಂದರೆ ನಿನಗೆ ಹರಕೆಯ ಮುಡಿಪನ್ನು ಕಟ್ಟುತ್ತೇವೆ.

೬. ಭೂಮಿ ತಾಯಿಯ ಹೊಟ್ಟೆ ತಣ್ಣಗಿರಲಿ .....ಇತ್ಯಾದಿ.

ಹೀಗೆ ಪ್ರಾರ್ಥಿಸಿಕೊಂಡು ಜೋಕುಮಾರನ ಅಳಲಂಬಲಿ, ಕಪ್ಪು ಇವರೆಡನ್ನೂ ಕೂಡಿಸಿ ತಮ್ಮ ಹೊಲದ ಸುತ್ತಲೂ ನಾಲ್ಕೂ ಮೂಲೆಗಳಿಗೂ ಚರಗವನ್ನು ಚೆಲ್ಲುತ್ತಾರೆ. ಈ ಚರಗ ಚೆಲ್ಲುವ ಕ್ರಿಯೆಯು ಜೋಕುಮಾರನು ಸತ್ತ ಸಲುವಾಗಿ ಹಾಕುವ ಪಿಂಡದ (ಹಿಂಡೆ ಕೂಳಿನ) ಸಂಕೇತವಾಗಿದೆ. ಅವನು ಮರಣ ಹೊಂದಿದ್ದರಿಂದ ಅವನ ಶಾಂತಿಗೋಸ್ಕರ ಈ ಪದ್ಧತಿಯನ್ನು ರೂಢಿಸಿಕೊಂಡಿರುತ್ತಾರೆ.

"ಚರಗ ಚೆಲ್ಲುವುದು ಕೃಷಿಕಾಲದಲ್ಲಿ ನಿರಂತರವಾಗಿ ನಡೆಯುವ ಕ್ರಿಯೆಯಾಗಿದೆ. ಅನ್ನದ ಚರಗ, ಅಂಬಲಿ ಚರಗ, ಮುಸುರೆ ಚರಗ, ಸರ್ವ ಅಡಿಗೆಯ ಮಿಶ್ರ ಚರಗ, ಪ್ರಾಣಿ ಬಲಿಕೊಟ್ಟರೆ ರಕ್ತಾನ್ನದ ಚರಗ, ಇತ್ಯಾದಿಗಳ ಚರಗವು ಹಬ್ಬ ಹರಿದಿನಗಳಲ್ಲಿ, ಪೂಜೆ, ಪುನಸ್ಕಾರಗಳ ಸಂದರ್ಭದಲ್ಲಿ ಅಮವಾಸ್ಯೆಗೊಮ್ಮೆ, ಹುಣ್ಣಿಮೆಗೊಮ್ಮೆ ನಡೆಯುತ್ತದೆ. ಬೆಳೆ ಅಂದರೆ ರಾವು ಇದ್ದಂತೆ ಅದಕ್ಕೆ ಚರಗ ಹಾಕುತ್ತೇವೆ; ಹೊಲಗದ್ದೆ ತೋಟಗಳಲ್ಲಿ ರಾತ್ರಿ ಹಗಲು ಓಡಾಡುತಿರುತೀವಿ ನಮಗೆ ಏನೂ ಆಗದಂತಿರಲಿ ಎಂದು ಚರಗ ಹಾಕುತ್ತೇವೆ. ಎಂಬ ರೈತರ ಅಭಿಪ್ರಾಯಗಳನ್ನು ಗಮನಿಸಿದರೆ ಚರಗವು ದುಷ್ಟ ಶಕ್ತಿಗೆ ನೀಡುವ ಸಮ್ಮಾನವೆಂದು ತೋರುತ್ತದೆ. ಸೆಂಟ್ರಲ್ ಬೋರ್ನಿಯೊದ ಕಾಯನ್'[Kayans] ಜನಾಂಗದವರು ಬಿತ್ತನೆ ಮತ್ತು ಕೊಯ್ಲು ಸಂದರ್ಭದಲ್ಲಿ ತಮ್ಮ ಸುತ್ತ ಮುತ್ತ ಬೆಳೆಯುವ ತಿನ್ನಬಲ್ಲ ಗಿಡ ಮೂಲಿಕೆಗಳ ಬೇಯಿಸಿದ ವಸ್ತುವನ್ನು ಸಿಂಪಡಿಸುವುದನ್ನು ನೆನೆದರೆ, ಚರಗವು ಪ್ರಾಚೀನವೂ, ಪ್ರಪಂಚದಾದ್ಯಂತವೂ, ಪ್ರಚಲಿತದಲ್ಲಿರುವ ವ್ಯವಸಾಯ ಆಚರಣೆಯಾಗಿರುವುದು ವಿದಿತವಾಗುತ್ತದೆ. ಸುರಪಾಲನ ವೃಕ್ಷಾಯುರ್ವೇದ ಸಹ ಜನಗಳ ಕುದೃಷ್ಟಿ ಪರಿಹಾರಕ್ಕಾಗಿ ಬೇಯಿಸಿದ ಸಾಲಿ ಅಕ್ಕಿಯ ಗಂಜಿಯನ್ನು ಮೊಸರು ಮತ್ತು ಸೈಂಧವ ಉಪ್ಪಿಟ್ಟಿನೊಡನೆ ಬೆರೆಸಿ ಮರಗಳ ತೋಪಿನಲ್ಲೆಲ್ಲ ಚಲ್ಲಬೇಕು (ಶ್ಲೋಕ-೭೭) ಎಂದು ಹೇಳುತ್ತದೆ."[೨]

ಕೆಟ್ಟದೃಷ್ಟಿಯ ನಿವಾರಣೆಗಾಗಿ ಹಳ್ಳಿಯ ಜನರ ಅಭಿಪ್ರಾಯದಂತೆ 'ಕಣ್ಣಾಸರು'ಗಾಗಿ ರೈತಾಪಿ ವರ್ಗದವರು ತಮ್ಮ ಹೊಲ-ಗದ್ದೆಗಳಲ್ಲಿ ಬೆದರು ಬೊಂಬೆಗಳನ್ನು ಇಡುತ್ತಾರೆ. ತಮ್ಮ ಹೊಲಗಳಲ್ಲಿ ಸಮೃದ್ಧವಾಗಿ ಬೆಳೆದಿರುವ ಪೈರುಗಳಿಗೆ ದೃಷ್ಟಿ ತಾಗದಂತಿರಲಿ ಎಂದು ಪೈರಿನ ಮಧ್ಯೆ ಇಂತಹ ಬೆದುರು ಬೊಂಬೆಗಳನ್ನು ನಿಲ್ಲಿಸುವರು. ಸಾಮಾನ್ಯವಾಗಿ ಈ ಕ್ರಿಯೆಯನ್ನು ಜೋಕನ ಚರಗ ಚೆಲ್ಲಿದ ದಿನದಂದು ಒಂದು ಗೂಟವೊಂದನ್ನು ನೆಲದಲ್ಲಿ ಹುಗಿಯುತ್ತಾರೆ. ಹುಗಿದ ಗೂಟದ ಮತ್ತೊಂದು ಮೇಲ್ತುದಿಗೆ ಹೊಸ ಮಡಕೆಯೊಂದನ್ನು ನೇತು ಹಾಕುತ್ತಾರೆ. ಆ ಮಡಕೆಗೆ ಸುಣ್ಣವನ್ನು ಬಳಿಯುತ್ತಾರೆ. ಅದಕ್ಕೆ ಕಣ್ಣು,

ಮೂಗು, ಮತ್ತು ಬಾಯನ್ನು ದೊಡ್ಡದಾಗಿ ಕಾಣುವಂತೆ ಬರೆಯುತ್ತಾರೆ. ನೋಡಿದ ಪಶು, ಪಕ್ಷಿಗಳಿಗೆ ಮನುಷ್ಯ ಎನ್ನುವಂತೆ ಗೋಚರಿಸುವ ಹಾಗೆ ಅದಕ್ಕೆ ಹಳೆಯ ಅಂಗಿಯನ್ನು ತೊಡಿಸುತ್ತಾರೆ. ಸಾಧ್ಯವಾದಷ್ಟು ಮಟ್ಟಿಗೆ ಸಡಿಲವಾಗಿರುವ ಅಂಗಿಯನ್ನು ಹಾಕಿರುತ್ತಾರೆ. ಕಾರಣ ಗಾಳಿ ಬಂದಾಗ ಅದು ಪಟ ಪಟನೆ ಬಡಿದುಕೊಳ್ಳುತ್ತ ಶಬ್ದಮಾಡುತ್ತಿರುತ್ತದೆ. ಈ ಶಬ್ದಕ್ಕೆ ಹೆದರಿದ ಪಶು ಪಕ್ಷಿಗಳು ಅತ್ತ ಸುಳಿಯಲು ಹೆದರುತ್ತವೆ.

ಈ ಬೆದರುಗೊಂಬೆಗೆ 'ಬೆರ್ಚು', 'ಬೆರ್ಚಪ್ಪ', 'ಬೆಳ್ತಲೆ', 'ಚಂದಪ್ಪನ ಬೆಳಕು ಎಂತಲೂ ಕರೆಯುತ್ತಾರೆ. ಹೀಗೆ ಇಡುವುದರಿಂದ ಬೆಳೆಗಳಿಗೆ ರೋಗ-ರುಜಿನಗಳು ಹತ್ತಿರ ಸುಳಿಯುವುದಿಲ್ಲ ಎಂಬ ಭಾವನೆ ಇವರದು. ಅದೇ ಹೊಲದಲ್ಲಿ ಸಜ್ಜೆ, ಜೋಳ, ಮೆಕ್ಕೆಜೋಳ ಮುಂತಾದ ಎತ್ತರವಾಗಿ ಬೆಳೆಯುವ ಪೈರಿನ ಹೊಲದಲ್ಲಿ ಆಳೆತ್ತರದ ಬೆರ್ಚಪ್ಪನನ್ನು ಮಾಡಿ ಇಡುತ್ತಾರೆ. ದೊಡ್ಡ ಕಟ್ಟಿಗೆಯನ್ನು ತೆಗೆದುಕೊಂಡು ಮತ್ತೊಂದು ಕಟ್ಟಿಗೆಯನ್ನು ಪ್ಲಸ್ (+) ಆಕಾರದಂತೆ ಇಟ್ಟು ಸಣವಿನ ದಾರದಿಂದ ಬಿಗಿಯಾಗಿ ಕಟ್ಟುತ್ತಾರೆ. ಆ ಎರಡೂ ಕಟ್ಟಿಗೆಗಳನ್ನು ಹುಲ್ಲಿನಿಂದ ಮುಚ್ಚುತ್ತಾರೆ. ನೋಡಲು ದಪ್ಪನಾಗಿ ಕಾಣುವಂತಿರುತ್ತದೆ. ಒಂದು ದೊಡ್ಡ ನಿಲುವಂಗಿಯನ್ನು ತೆಗೆದುಕೊಂಡು ಆ ಹುಲ್ಲಿಗೆ ತೊಡಿಸುತ್ತಾರೆ. ಅಂಗಿಯ ಗುಂಡಿಯನ್ನು ಹಾಕುತ್ತಾರೆ. ತಲೆಯ ಭಾಗಕ್ಕೆ ಒಂದು ಮಧ್ಯಮ ಗಾತ್ರದ ಮಡಕೆಯನ್ನು ಹಾಕಿರುತ್ತಾರೆ. ಅದಕ್ಕೆ ಸುಣ್ಣ ಬಳಿದು ಕಣ್ಣು, ಮೂಗು ಮತ್ತು ಬಾಯನ್ನು ಚಿತ್ರಿಸಿರುತ್ತಾರೆ. ಇದನ್ನು ನೋಡಿದ ಪಕ್ಷಿಗಳು ಆ ಪೈರಿನ ಹತ್ತಿರಕ್ಕೆ ಬರುವುದಿಲ್ಲ. ಈ ಬೆರ್ಚಪ್ಪನು ಈ ರೀತಿಯಲ್ಲಿ ರೈತನ ಬೆಳೆಗಳನ್ನು ಕಾಪಾಡುತ್ತಾನೆ. 'ಋಗ್ವೇದ ಕಾಲದಲ್ಲಿಯೂ ಸಹ ಜೋಳದ ಜಮೀನಿನಿಂದ ಹಕ್ಕಿಗಳನ್ನು ದೂರವಿರಿಸಲು ಬೆದರು ಗೊಂಬೆಗಳನ್ನು ನಿಲ್ಲಿಸಲಾಗುತ್ತಿತ್ತು.'[೧೩]

ಕುಂಬಾರ ಗುಂಡಯ್ಯ ಬೆಚ್ಚು ಆಗಿ, ಜೋಕುಮಾರನು ನುಚ್ಚು, ಅಂಬಲಿ ಚರಗ ಆಗಿ ಸಸ್ಯ ಸಂರಕ್ಷಣೆ ಮಾಡುತ್ತಿದ್ದಾರೆಂದು ಜನಪದ ಸಾಹಿತ್ಯ ಹೇಳುತ್ತದೆ. ಪ್ರಾಯಶಃ ಆಚರಣೆಗಳಿಗೆ ವ್ಯಕ್ತಿತ್ವ ರೂಪಿಸುವ ಜನಪದರ ಮನೋಭಾವ ಇದೆಂದು ಕಾಣುತ್ತದೆ.

ಬೆಚ್ಚು ಗಡಿಗೆಯು ಗುಂಡ, ನುಚ್ಚು ಜೋಕನು ಚರಗ
ಬೆಚ್ಚಾಕಿ ಹೊಲಕೆ ಒಕ್ಕಲಿಗ | ಚರಗೊಗೆದ
ಬಚ್ಚಿಡಲು ಹುಲುಸು ಹೊಲದೊಳಗ[೧೪]

'ಒಕ್ಕಲಿಗನ ಹೊಲಕೆ ಶ್ರೀ ರಕ್ಷೆಯಾದ, ಬೆದರು ಬೊಂಬೆಯ ಬಂಟನಾದ, ಬೆದರುಗಡಿಗೆ ಮುಚ್ಚಿದ ಹೊಲ ಹುಲುಸು ಒಟ್ಟಿನಲ್ಲಿ ಬೆರ್ಚು ಮತ್ತು ಚರಗ ಹುಲುಸಿನ ಫಲಶಕ್ತಿಯ ಎರಡು ಆಚರಣೆಗಳು[೧೫] ಚರಗ ಚೆಲ್ಲುವಾಗ ಅವರು ಪ್ರತಿಸಲ 'ಓಲಿಗ್ಯ ಓಲಿಗ್ಯ' (ಪೊಲಿ) ಎನ್ನುತ್ತಾರೆ. ಇದರರ್ಥ ಪೈರುಗಳ ಹುಲುಸು ಹೆಚ್ಚಾಗಲಿ ಎಂಬುದನ್ನು ಸಂಕೇತಿಸುತ್ತದೆ. ಪ್ರತಿಯೊಂದು ಸಂದರ್ಭದಲ್ಲಿ ಚರಗವನ್ನು

ಚೆಲ್ಲುವಾಗ ಓಲಿಗ್ಯ, ಓಲಿಗ್ಯ ಎನ್ನವುದು ಮಾಮೂಲಾಗಿರುತ್ತದೆ. ಇದರ ಮೂಲ ರೂಪವು 'ಹುಲಿಗ್ಯೋ' ಆಗಿದ್ದು ಜನಪದರ ಆಡು ನುಡಿಯಲ್ಲಿ ಓಲಿಗ್ಯ, ಓಲಿಗ್ಯ ಎಂದಾಗುತ್ತದೆ. 'ಪೊಲಿ' ಎಂಬುದು ಇದರ ಮೂಲರೂಪವಾಗಿದ್ದು ಅನಂತರ 'ಹುಲಿಗ್ಯೋ' ಎಂದಾಗಿರುತ್ತದೆ. ಪೊಲಿ>ಹುಲಿಗ್ಯೋ> ಓಲಿಗ್ಯ ಎಂದು ಹೇಳಬಹುದು.

'ನಮ್ಮ ನಾಡಿನ ರೈತರು ಸುಗ್ಗಿ ಮಾಡುವಾಗ ಕಣಗಳಲ್ಲಿ ತೂರುವಾಗ, ತೆನೆ ತುಳಿಸುವಾಗ, ಹೀಗೆ ಅನೇಕ ಸಂದರ್ಭಗಳಲ್ಲಿ "ಹುಲಿಗ್ಯೋ" ಎಂದು ಕೂಗುತ್ತಿರುವುದು ಸಾಮಾನ್ಯ. 'ಸಮೃದ್ಧವಾಗಲಿ', ಹೆಚ್ಚು ಫಲವನ್ನು ಕೊಡು ಎಂದು ಇದಕ್ಕೆ ಅರ್ಥವಾಗುತ್ತದೆ.[೧೬] 'ಮೂಲದಲ್ಲಿ ಪಶುಪಾಲಕ ವಲಸೆಗಾರ ದ್ರಾವಿಡರ (ಗೊಂಡರ) ದೇವತೆಗಳಾದ ಕಾಮ ಮತ್ತು ಜೋಕುಮಾರರು 'ಪೊಲಿ ದೇವತೆಗಳು, ಇವರು ನಮ್ಮ ಗ್ರಾಮೀಣ ಸಮಾಜದ ಫಲವತ್ತತೆಗಾಗಿ ಆರಾಧನೆಗೊಳ್ಳುವ ದೇವರುಗಳು, ಇಬ್ಬರಿಗೂ ಹೊಲೆ-ಮಾದಿಗರ ಸಂಬಂಧವಿದೆ, ಬಲಿಯ ಪಂಥವೂ 'ಪೊಲಿ' ಪಂಥವೇ ಆಗಿದೆ'.[೧೭] ಹೊಲಗಳ ಹುಲುಸಿಗೆ ರೈತರು ಚಲ್ಲುವ ಮೊದಲ ಚರಗ ಜೋಕುಮಾರನದೆಂದು ಪ್ರೊ. ಎಸ್. ಎಸ್. ಹಿರೇಮಠ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ.

'ಹೋಲಿಗ್ಯ' ಎಂಬುದರ ನಿಜವಾದ ಅರ್ಥವೇನು ಅವರ ಸ್ಪಷ್ಟವಾದ ಶಬ್ದರೂಪವೇನು ಎಂಬ ಬಗ್ಗೆ ಡಾ.ಬಿ.ಎಸ್.ಗದ್ದಿಗಿಮಠ, ಡಾ. ಎಂ.ಎಸ್.ಲಠ್ಠೆ, ಡಾ.ದೇವೇಂದ್ರಕುಮಾರ ಹಕಾರಿ ಮುಂತಾದವರು ಚರ್ಚೆಮಾಡಿದ್ದಾರೆ. ಹೋಲಿಗ್ಯ, ಹೋಲ್ ಹೋಲಿಗ್ಯ, ಹೂಲ್ಹುಲಿಗೋ, ಹರಗೋಲಿಗೋ, ಹುಲುಸುಗೋ, ಓಲಿಗ್ಯೋ, ಹುಲಿಗ್ಯೋ, ಹೂಲಿ ಹೂಲಿ, ಹಲಂಡ ಹಲ್ಯೋ, ಹುಲ್ ಹುಲಿಗ್ಯೋ, ಮುಂತಾದ ವೈವಿಧ್ಯಮಯ ಪ್ರಯೋಗಗಳು ಸಿಗುತ್ತವೆ. ಇವೆಲ್ಲವುಗಳ ಅರ್ಥ ಹುಲುಸಾಗಲಿ, ತಾವು ಮಾಡಿದ ಕಾರ್ಯದ ಫಲ ವೃದ್ಧಿಯಾಗಲಿ ಎಂಬುದೇ ಇರಬೇಕೆಂದು ವಿದ್ವಾಂಸರ ಅಭಿಪ್ರಾಯ. ಈ ಘೋಷಣೆ ಕಣಕ್ಕೆ ಮಾತ್ರ ಸೀಮಿತವಾದುದಲ್ಲ ಎಂಬುದನ್ನೂ ನಾವು ಗಮನಿಸಬೇಕು. ಬೆಳೆಗಳಿಗೆ ಚರಗ ಉಗ್ಗುವಾಗಲು 'ಹೋಲಿಗ್ಯ ಹೆಚ್ಚಲಿ' 'ಹೊಲಿಹೊಲಿ' ಎನ್ನುತ್ತಾರೆ. ಅಷ್ಟೇ ಅಲ್ಲದೆ ದವಸಧಾನ್ಯಗಳನ್ನು, ಅಳೆಯುವಾಗ ಎಣಿಕೆಯಲ್ಲಿ ಒಂದನ್ನು ಲಾಭ ಎಂದೂ, ಏಳನ್ನು ಹೋಲಿಗ್ಯ ಹೆಚ್ಚಲಿ ಎನ್ನುತ್ತಾರೆ. ಏಳು ಎನ್ನುವುದು ಬೀಳು ಆಗುವುದರಿಂದ ಅದರ ಉಚ್ಚಾರ ನಿಷೇಧ. ಬದಲಾಗಿ ಹೋಲಿಗ್ಯ ಎನ್ನುತ್ತಾರೆ. ಈ ಎಲ್ಲ ಅಂಶಗಳನ್ನು ಅಮನಿಸಿದರೆ 'ಹೋಲಿಗ್ಯ' ಎನ್ನುವ ಘೋಷಣೆಯ ವಿವಿಧ ರೂಪಗಳು ಫಲೋತ್ಪತ್ತಿ ಹೆಚ್ಚಳದ ಮಂತ್ರ ಶಬ್ದಗಳು, ಶುಭ ಸೂಚಕಗಳು ಆದ ಅವ್ಯಯಗಳಿರಬೇಕೆಂದೆನಿಸುತ್ತದೆ.[೧೮]

ಸಂಪ್ರದಾಯ

'ಮಾನವ ಜೀವನವನ್ನು ರೂಪಿಸುವಲ್ಲಿ, ಸಂಸ್ಕೃತಿಯನ್ನು ಪೋಷಿಸುವಲ್ಲಿ ನಾಗರಿಕತೆಯನ್ನು ಬೆಳೆಸುವಲ್ಲಿ ಸಂಪ್ರದಾಯಾಚರಣೆಗಳಿಗೆ ವಿಶೇಷ ಮಹತ್ವವಿದೆ. ಅವು ಅವನ ಬಾಳಿನ ಅವಿಭಾಜ್ಯ ಸಂಗತಿಗಳಾಗಿವೆ;

ಸಮಾಜವನ್ನು ಒಂದುಗೂಡಿಸುವ ಮತ್ತು ಮುಂದಕ್ಕೊಯ್ಯುವ ಶಕ್ತಿಪುಂಜಗಳಾಗಿವೆ. ಅವನ ನಡೆವಳಿ ಹಾಗೂ ವ್ಯವಹಾರಗಳು ಸಂಪ್ರದಾಯಬದ್ಧವಾಗಿಯೇ ಜರುಗುತ್ತವೆ. ಜಗತ್ತಿನ ಸಕಲ ರಾಷ್ಟ್ರಗಳ ಕಾನೂನು ರಚನೆಗೆ ಸಂಪ್ರದಾಯಗಳೇ ಆಧಾರ. ಇಂಗ್ಲೆಂಡಿನಂಥ ಕೆಲವು ರಾಷ್ಟ್ರಗಳಲ್ಲಂತು ಸಂಪ್ರದಾಯಗಳೇ ಕಾನೂನಾಗಿ ಪರಿಣಮಿಸುತ್ತವೆ. ಆದ್ದರಿಂದಲೇ ನಾಗರಿಕ ಪ್ರಪಂಚದ ಸರ್ವ ವ್ಯವಸ್ಥೆಗಳಿಗೆ ಅವೇ ಮೂಲ ಮಾತೃಕೆಗಳೆಂದು ಗಣನೆಗೊಂಡಿವೆ. ಪ್ರದೇಶದಿಂದ ಪ್ರದೇಶಕ್ಕೆ, ಕುಲದಿಂದ ಕುಲಕ್ಕೆ ವ್ಯತ್ಯಾಸಗೊಳ್ಳುವ ಕೆಲವು ಸಂಪ್ರದಾಯಗಳು ಸಾರ್ವತ್ರಿಕ ವ್ಯಾಪ್ತಿಯೊಳಗೆ ಸೇರದೆ ಹೊರಚ್ಚಾಗಿಯೇ ನಿಲ್ಲುವ ಸಂಭವವುಂಟು.'[೧೯]

ಸಂಪ್ರದಾಯಗಳಲ್ಲಿ ಎರಡು ದೊಡ್ಡ ವಿಭಾಗಗಳನ್ನು ಮಾಡಬಹುದು. ಅ. ಸುಗ್ಗಿಯ ಸಂಪ್ರದಾಯಗಳು. ಆ. ಜನಪದ ಸಂಪ್ರದಾಯಗಳು.

ಅ. ಸುಗ್ಗಿಯ ಸಂಪ್ರದಾಯಗಳು: ಇದರಲ್ಲಿ ಒಕ್ಕಲುನಾಡಿನ ಒಕ್ಕಲು ತನಕ್ಕೆ ಸಂಬಂಧಿಸಿದ ಎಲ್ಲ ಸಂಪ್ರದಾಯಗಳು ಬರುವುವು. ಈ ಸಂಪ್ರದಾಯಗಳು ಹೆಚ್ಚಾಗಿ ಶಿವಶರಣರ ಹಂತಿಯ ಹಾಡುಗಳಲ್ಲಿ ಅಡಕವಾಗಿರುವುವು.

ಆ. ಜನಪದ ಸಂಪ್ರದಾಯಗಳು: ಜನಾಂಗದ ನಡೆನುಡಿಗಳನ್ನೊಳಗೊಂಡ ಈ ಅನೇಕ ಸಂಪ್ರದಾಯಗಳು ಇಲ್ಲಿ ಹೇಳಲ್ಪಟ್ಟಿವೆ.

೧. ಬನ್ನಿಯ ಹಬ್ಬವು ಕನ್ನಡಿಗರಿಗೆ ನಾಡಹಬ್ಬ; ಬನ್ನಿಯ ಮುಡಿಯುವುದೆಂದರೆ ಕಾಡ ಸಂಪತ್ತನ್ನು ನಾಡಿಗೆ ತಂದಂತೆ. ಇದರಲ್ಲಿ ಜನತೆಗೆ ದಿವ್ಯ ಸಂದೇಶವಿದೆ.

೨. ಗುರ್ಜಿ, ಜೋಕುಮಾರರು ಮಳೆ ತರುವ ದೇವತೆಗಳು.

೩. ನಾಗರ ಪಂಚಮಿ ಹೆಣ್ಣು ಮಕ್ಕಳ ಹಬ್ಬ. ತವರು ಮನೆಗೆ ಬಂದ ಹೆಣ್ಣಿನ ಗಂಡಿನ ಮನೆಯ ಆಸೆ, ನಿರಾಸೆ, ಸುಖ-ದುಃಖಗಳ ರಾಗ.

೪. ಗೌರಿಸೀಗೆ :ದೇವರು ತಾನು ನಿರ್ಮಿಸಿದ ಸೃಷ್ಟಿಯಲ್ಲಿ ಮಾನವನನ್ನು ನಿರ್ಮಿಸಿದ್ದಾನೆ. ಹೀಗಿದ್ದರೂ ಮಾನವನು ದೇವರನ್ನು ನಿರ್ಮಿಸಿದ್ದಾನೆ. ಈ ಮಾನವ ನಿರ್ಮಿತ ದೇವರ ಜೀವನವು ಗೌರಿಸೀಗೆಯ ಹಾಡುಗಳಲ್ಲಿ ಸವತಿ-ಸವತಿಯ ಪ್ರಪಂಚದಲ್ಲಿ ಹೇಗೆ ಹೆಣೆಯಲ್ಪಟ್ಟದೆ.

೫. ಹೋಳಿ: ಗಂಡಿನ ಪಾಲಿಗೆ ಬಂದ ಒಂದೇಹಬ್ಬ-ಕನ್ನಡಿಗರಿಗೆ ಹೋಳಿ ಪ್ರಾಪಂಚಿಕ ಮಾತು.

ಹೀಗೆ ಸಂಪ್ರದಾಯಗಳು ನಮಗೆ ಪರಪಂರೆಯಿಂದ ಹಬ್ಬಗಳಾಗಿಯೂ, ಉತ್ಸವಗಳಾಗಿಯೂ ಇಲ್ಲಿಯವರೆಗೆ ಬಂದಿವೆ.[೨೦] ಹಲವು ಸಂಪ್ರದಾಯಗಳು (Customs) ಮತ್ತು ಆಚರಣೆಗಳು (Rituals) ವ್ಯವಸಾಯಕ್ಕೆ ಸಂಬಂಧಪಟ್ಟಿರುತ್ತವೆ. ಬಹುತೇಕ ಅವೆಲ್ಲವುಗಳು ಕೃಷಿಗೆ ಪೂರಕವಾಗಿ ನಮ್ಮ ಅರಿವಿಗೆ

ಬರುತ್ತವೆ. ಇವೆರಡನ್ನು ಬೇರೆ ಬೇರೆ ಎಂದು ಹೇಳುವುದು ಕಷ್ಟಸಾಧ್ಯ. ಸಂಪ್ರದಾಯ ಮತ್ತು ಆಚರಣೆಗಳು ಪರಸ್ಪರ ಸಂಬಂಧಪಟ್ಟ ಎರಡು ಜಾನಪದ ವಿಧಗಳೆಂದು ಹೇಳಬಹುದು. ಸಂಪ್ರದಾಯ ನಮ್ಮ ಪರಪಂರೆಯಿಂದ ಬೆಳೆದು ಬಂದ ಒಂದು ಗುಂಪಿನ ಆಚರಣೆಗಳ ಮೊತ್ತವೆಂದೇ ಹೇಳಬಹುದು. ಅದು ಕೇವಲ ಒಬ್ಬ ವ್ಯಕ್ತಿ ಆಚರಿಸುವ ವ್ಯಕ್ತಿಗತ ನಡಾವಳಿಯಾಗದೆ ಒಂದು ವರ್ಗ ಸಮೂಹ ರೂಢಿಸಿಕೊಂಡು ಬಂದುದಾಗಿರುತ್ತದೆ. ಮೊತ್ತದಲ್ಲಿ ಹೇಳುವದಾದರೆ ಧರ್ಮದ ಚೌಕಟ್ಟಿನಲ್ಲಿ ಬರುವ ಆಚರಣೆಗಳನ್ನು ಧಾರ್ಮಿಕ ವಿಧಿಗಳೆಂದು ಕರೆಯಬಹುದಾಗಿದೆ. ಇಂತಹ ಆಚರಣೆಗಳೂ ಸಂಪ್ರದಾಯದಲ್ಲಿ ಬೇರೆ ಮಾಡದ ರೀತಿಯಲ್ಲಿ ಬೆಸೆದಿರುತ್ತವೆ. ಒಮ್ಮೊಮ್ಮೆ ಅವು ಸಂಪ್ರದಾಯಗಳು ಆಗಬಹುದು, ಆಚರಣೆಗಳೂ ಆಗಬಹುದು. ಡಾ.ಜೀ.ಶಂ. ಪರಮಶಿವಯ್ಯ ಅವರ ಮಾತಿನಂತೆ "ಸಂಪ್ರದಾಯಗಳು ಕೇವಲ ಗೊಡ್ಡು ಕಂದಾಚಾರಗಳಲ್ಲ; ಸಾಮಾಜಿಕ ಜೀವನದೊಡನೆ ಅವು ಜೀವಂತವಾದ ಸಂಬಂಧವನ್ನು ಇಟ್ಟುಕೊಂಡಿರುತ್ತವೆ. ಒಂದು ಸಂಸ್ಕೃತಿ ಬೆಳೆದು ಬಂದ ರೀತಿಯನ್ನು ಅದರ ಆಳ ಅಗಲಗಳನ್ನು, ರೀತಿ ನೀತಿಗಳನ್ನು ಸಮರ್ಥವಾಗಿ ಪ್ರತಿಬಿಂಬಿಸುತ್ತವೆ. ಒಂದೊಂದು ಸಂಪ್ರದಾಯದ ಆಳಕ್ಕೆ ಇಳಿದಂತೆಲ್ಲಾ ಆಯಾ ಸಂಸ್ಕೃತಿಗೆ ಹೊಸ ಅರ್ಥವನ್ನು ತಂದು ಕೊಡುವಲ್ಲಿ ಸಂಪ್ರದಾಯಗಳು ಸಹಕಾರಿಯಾಗುತ್ತವೆ."

ಯಾವುದೇ ಸಮುದಾಯವಿರಲಿ, ನಿರ್ದಿಷ್ಟ ಕಾಲದಲ್ಲಿ ನಿರ್ದಿಷ್ಟ ಜಾಗದಲ್ಲಿ, ಎಲ್ಲಾ ಬಗೆಯ ಪೂಜೆ ಪುನಸ್ಕಾರಗಳನ್ನು ಚಾಚೂ ತಪ್ಪದೆ ಒಂದು ಕ್ರಮದಲ್ಲಿ ನಡೆಸುವ ವಿಧಿಯೇ ಆಚರಣೆಯಾಗುತ್ತದೆ. ಅದು ಪರಂಪರೆಯಿಂದ ಬೆಳೆದು ಬಂದ ಶ್ರದ್ಧೆಯಿಂದ, ಧಾರ್ಮಿಕ ವಿಧಿ-ವಿಧಾನಗಳಿಂದ, ದೈವದ ಭಯದಿಂದ ನಡೆಯುತ್ತದೆ. ಆಚರಣೆ ಕೇವಲ ಪೂಜೆ ಆಗಿರುವುದಿಲ್ಲ. ಅದು ಮಾನವನ ಬದುಕಿನ ಒಂದು ಅಂಗವಾಗಿ ಮುಂದುವರೆಯುತ್ತದೆ. ಅವನಿಗೆ ಅದು ಮಾನಸಿಕ ನೆಮ್ಮದಿಯನ್ನೋ ಅಥವಾ ಬೇರೆ ಇನ್ನಾವುದೋ ಉದ್ದೇಶಿತ ಫಲವನ್ನು ನೀಡಬಹುದು. ವ್ಯವಸಾಯ, ಮಳೆಗೆ ಸಂಬಂಧಪಟ್ಟ ಎಲ್ಲಾ ಆಚರಣೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅಲ್ಲಿ ಶ್ರದ್ಧೆ, ಭಯ, ಭಕ್ತಿ ಇದ್ದೇ ಇರುತ್ತದೆ. ನಿರ್ದಿಷ್ಟ ಕ್ರಮದಲ್ಲಿ ನಡೆಸುವ ಒಂದು ಧಾರ್ಮಿಕ ಕ್ರಿಯೆ ಆಚರಣೆ ಆಗುತ್ತದೆ. ಇಂತಹ ಎಲ್ಲಾ ಆಚರಣೆಗಳಲ್ಲಿ ಪ್ರಾರ್ಥನೆ, ದೇವರನ್ನು ಕುರಿತು ಹಾಡುವ ಹಾಡುಗಳು, ಅಂತಹ ಹಾಡುಗಳಿಗೆ ಪೂರಕವಾಗಿ ನೃತ್ಯ, ದೇವತೆಗೆಬಲಿ ಕೊಡುವುದು ಅಥವಾ ನೈವೇದ್ಯ ನೀಡುವುದು ಇವೆಲ್ಲವುಗಳು ಸೇರಿಕೊಳ್ಳುತ್ತವೆ. ಆದುದರಿಂದ ಈ ಎಲ್ಲಾ ಬಗೆಯ ಆಚರಣೆಗಳ ಅಧ್ಯಯನವು ಸಾಂಸ್ಕೃತಿಕ ಮಾನವ ಶಾಸ್ತ್ರದ ಮತ್ತು ಮೌಖಿಕ ಸಾಹಿತ್ಯದ ಅಧ್ಯಯನವಾಗುತ್ತದೆ.

ರೈತಾಪಿ ವರ್ಗದವರ ಎಲ್ಲಾ ಕೆಲಸ ಕಾರ್ಯಗಳು ವರುಷ ಪೂರ ನಡೆಯುತ್ತವೆ. ಅವನು ಕಾಲಕಾಲಕ್ಕೆ ಸರಿಯಾಗಿ ಮಳೆ ಬಂದರೆ ಉತ್ತಮ ಬೆಳೆಯನ್ನು ಬೆಳೆಯಬಹುದು ಸದಾ ಒಂದಲ್ಲ ಒಂದು ಆಚರಣೆಯಲ್ಲಿ ಮಗ್ನನಾಗುವುದು ಗೋಚರಿಸುತ್ತದೆ. ಮಳೆ ಸಕಾಲದಲ್ಲಿ ಬಂದರೆ ಉತ್ತಮ ಬೆಳೆ

ಬೆಳೆಯುವಂತೆ ನೋಡಿಕೊಳ್ಳುವುದು ಅವನ ಮುಖ್ಯಗುರಿ ಆಗಿರುತ್ತದೆ. ಉಳುಮೆ ಮಾಡುವಾಗ, ಬಿತ್ತುವಾಗ, ಕಳೆ ತೆಗೆಯುವಾಗ, ಕೊಯಿಲು ಮಾಡುವಾಗ, ಒಕ್ಕಲು ಮಾಡುವಾಗ ಎಲ್ಲಾ ಅಗತ್ಯ ಆಚರಣೆಗಳು ನಡೆಯುವುದು ಸರ್ವವಿಧಿತ. ಬೆಳೆ ಹುಲುಸಾಗಿ ಬೆಳೆಯಬೇಕಾದರೆ ಅವನು ಫಲೋತ್ಪತ್ತಿ (Fertility) ಆಚರಣೆಗಳನ್ನು ನಡೆಸುತ್ತಾನೆ. ಸಮೃದ್ಧವಾಗಿ ಬೆಳೆದ ಪೈರನ್ನು ಹಾಳು ಮಾಡುವ ದುಷ್ಟಶಕ್ತಿಯನ್ನು ನಿವಾರಿಸಲು ಪೂಜೆ ಮಾಡುತ್ತಾನೆ. ತನಗೆ ಉತ್ತಮವಾದ ಫಸಲು ದೊರೆಯಬೇಕೆಂದು ಹರಕೆಯನ್ನೂ ಹಾಕಿಕೊಳ್ಳುತ್ತಾನೆ ಸಮೃದ್ಧಗಾಗಿ ಚರಗ ಚೆಲ್ಲುವುದು, ಬೆರ್ಚು ನಿಲ್ಲಿಸುವ ಕ್ರಿಯೆಗಳು ಅವ್ಯಾಹತವಾಗಿ ನೆರವೇರುತ್ತವೆ. ಮೇಲ್ನೋಟಕ್ಕೆ ಆಚರಣೆಗಳು ಭಿನ್ನವಾಗಿ ಗೋಚರಿಸಿದರೂ ಸಹ ಮೂಲ ಆಶಯ ಮಾತ್ರ ಒಂದೇ ತೆರನಾಗಿರುತ್ತದೆ. ಆಚರಣೆಗಳನ್ನು ಮೂರು ವಿಧದಲ್ಲಿ ವಿಂಗಡಿಸಬಹುದು.

ಅ. ಮಳೆ ಸಂಬಂಧಿ ಆಚರಣೆಗಳು.

ಆ. ಬೆಳೆ ಸಂಬಂಧಿ ಆಚರಣೆಗಳು.

ಇ. ಇತರೆ ಆಚರಣೆಗಳು.

ಧಾರ್ಮಿಕತೆ

ಸನಾತನ ಧರ್ಮವನ್ನು ಅಳವಡಿಸಿಕೊಂಡು, ಬಂದಿರುವ ಭಾರತ ದೇಶವು, ತನ್ನೊಳಗೆ ಎಲ್ಲಾ ಧರ್ಮಗಳನ್ನು ಸಮಾನವಾಗಿ ಕಾಣುತ್ತಾ ಬಂದಿರುತ್ತದೆ. ಧರ್ಮದ ಹೆಸರಿನಲ್ಲಿ ಅನೇಕ ಲೋಕ ಕಲ್ಯಾಣ ಕೆಲಸಗಳನ್ನು ಅವ್ಯಾಹತವಾಗಿ ನಿರ್ವಹಿಸಿಕೊಂಡು ಬಂದಿದೆ. ಹಿಂದೂಸ್ತಾನದಲ್ಲಿ ಇರುವಷ್ಟು ಧರ್ಮಗಳು ಬಹುಶಃ ಬೇರೆಯಾವ ರಾಷ್ಟ್ರದಲ್ಲಿಯೂ ನಮಗೆ ಕಾಣಸಿಗುವುದಿಲ್ಲ. Unity in Diversity ಎನ್ನುವ ಉಕ್ತಿಯಂತೆ ಎಲ್ಲಾ ಧರ್ಮಗಳನ್ನು ಸಮಾನವಾಗಿ ಕಂಡುಕೊಳ್ಳುತ್ತಿರುವವರೆಂದರೆ ಭಾರತೀಯರೇ ಆಗಿದ್ದಾರೆ ಎಂದರೆ ಅತಿಶಯೋಕ್ತಿಯಾಗುವುದಿಲ್ಲ.

ಪ್ರಪಂಚದ ಯಾವ ಮೂಲೆಯಲ್ಲಿ ನೋಡಿದರೂ ಸಹ ಪ್ರಜ್ಞಾವಂತರಾದ ನಾಗರಿಕರು ತಂತಮ್ಮ ಧರ್ಮದ ಅಸ್ತಿತ್ವಕ್ಕಾಗಿ ಹೋರಾಟ ಮಾಡಿಕೊಂಡು ಬಂದಿರುವುದು ಎಲ್ಲರಿಗೆ ತಿಳಿದ ಸಂಗತಿಯಾಗಿದೆ. ತಂತಮ್ಮಧರ್ಮ ಶ್ರೇಷ್ಠ ಎಂಬ ಭಾವನೆಯನ್ನು ಸಹ ತಳೆದಿರುತ್ತಾರೆ. ನಮ್ಮ ಧರ್ಮ ಉನ್ನತವಾದ ಆಚಾರ ವಿಚಾರಗಳಿಂದ ಕೂಡಿದ್ದು. ಅದು ಪ್ರಪಂಚದಲ್ಲಿ ಚಾಲ್ತಿಯಲ್ಲಿರುವ ಇನ್ನಿತರ ಧರ್ಮದೊಂದಿಗೆ ಹೊಂದಾಣಿಕೆ ಮಾಡಿಕೊಂಡು ಬರುವಲ್ಲಿ ಶ್ರಮಿಸುತ್ತದೆ. 'ನೀನು ಬಾಳು ಇತರರನ್ನು ಬಾಳಲು ಬಿಡು' ಎಂಬ ಉಕ್ತಿಯನ್ನು ಅನುಸರಿಸಿಕೊಂಡು ಇಂದಿಗೂ ಧರ್ಮ ಪಾಲಿಸಿಕೊಂಡು ಬಂದಿದೆ. ಧರ್ಮವನ್ನು ನೀನು ರಕ್ಷಿಸಿದ್ದೇ ಆದರೆ ಧರ್ಮ ನಿನ್ನನ್ನು ರಕ್ಷಿಸುತ್ತದೆ ಎಂಬ ಅಂಶವನ್ನು ನಾವು ಅವಶ್ಯಕವಾಗಿ ಗಮನಿಸಲೇಬೇಕು 'ಧರ್ಮೋರಕ್ಷಿತೋ ರಕ್ಷಿತಃ' ಎಂಬ ಉಕ್ತಿಯನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ.

ಪ್ರತಿಯೊಬ್ಬ ಪ್ರಜೆಗೂ ತಾವು ಅನುಸರಿಸಿಕೊಂಡು ಬರುತ್ತಿರುವ ಧರ್ಮ ಅವರಿಗೆ ಅದೇ ದೊಡ್ಡದಾಗಿರುತ್ತದೆ. ಪ್ರಪಂಚದಲ್ಲಿರುವ ಯಾವುದೇ ಧರ್ಮವನ್ನು ಇದು ಮೇಲು, ಕೀಳು ಎನ್ನಲುಬಾರದು. ಅವರ ಧರ್ಮ ಅವರಿಗೆ ಶ್ರೇಷ್ಠ. ಯಾವುದೇ ಒಂದು ಧರ್ಮವನ್ನು ಹಳಿಯಲು ಬಾರದು ಇವತ್ತಿನ ಅನಿವಾರ್ಯ ಹಾಗೂ ಸಂಕೀರ್ಣ ಬದುಕಿನಲ್ಲಿ ಧರ್ಮ, ಧರ್ಮಗಳ ಮಧ್ಯೆ ಕಂದರಗಳು ಸೃಷ್ಟಿಯಾಗುತ್ತಿರುವುದು ವಿಪರ್ಯಾಸವೇ ಸರಿ. ಧರ್ಮಗಳಮಧ್ಯೆ ಹೊಯ್ದಾಟಗಳು ಪ್ರಾರಂಭವಾಗುತ್ತಿವೆ. ಅನೇಕ ಧರ್ಮಗಳ ಮತಪ್ರಚಾರಕರು ತಮ್ಮ ಧರ್ಮಕ್ಕೆ ಮತಾಂತರಗೊಳಿಸುವ ಪ್ರಕ್ರಿಯೆ, ಹುನ್ನಾರಗಳು ನಡೆಯುತ್ತಲೇ ಸಾಗಿವೆ. ಮತ, ಮತಗಳ ನಡುವೆ ಅಸಮಾಧಾನದ ಹೊಗೆ ಭುಗಿಲೆದ್ದಿದೆ. ಎಲ್ಲೆಲ್ಲು ಹಿಂಸೆ ತಾಂಡವನೃತ್ಯವಾಡುತ್ತಿದೆ. ಮತಾಂತರಗೊಳಿಸುವ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ರಕ್ತಪಾತವಾಗುತ್ತಿದೆ. ಮತಗಳ ನಡುವೆ ಜಿಜ್ಞಾಸೆ ಏರ್ಪಡುತ್ತದೆ. ಇದರ ಪರಿಣಾಮವಾಗಿ ಸ್ವಾಸ್ಥ್ಯ ಸಮಾಜದ ಮೇಲೆ ತೀವ್ರತರವಾದ ದುಷ್ಪರಿಣಾಮ ಬೀರುತ್ತದೆ. ಇವೆಲ್ಲದರಿಂದ ಹೊರಗೆ ಬರಬೇಕಾದರೆ ಸಾಕಷ್ಟು ಏಗ ಬೇಕಾಗುತ್ತದೆ. ನಮ್ಮ ಪರಿಧಿಯ ಸುತ್ತಣ ನಾವೆ ಎಲ್ಲೆಯ ಚೌಕಟ್ಟನ್ನು ಹಾಕಿಕೊಳ್ಳಬೇಕಾದ ಅನಿವಾರ್ಯ ಸಂದರ್ಭ ಬಂದೊದಗಿದೆ. ಇದು ಅತ್ಯಂತ ಶೋಚನೀಯ ಹಾಗು ವಿಪರ್ಯಾಸದ ಸಂಗತಿಯೇ ಆಗಿದೆ.

ಇನ್ನು ಮುಂದುವರೆದು ಹೇಳುವುದಾದರೆ ದೇವರಿಗೂ, ಧರ್ಮಕ್ಕೂ ಅವಿನಾಭಾವ ಸಂಬಂಧವಿದೆ. ಹಿಂದೂ ಧರ್ಮ, ಜೈನ, ಬೌದ್ಧ, ಪಾರ್ಸಿ,ಇಸ್ಲಾಂ, ಕ್ರೈಸ್ತ.........ಮುಂತಾದ ಧರ್ಮಗಳಿಗೂ ಇರುವ ನಂಟು ಬಹುಶಃ ಇದೇ ಆಗಿರುತ್ತದೆ. ಜೋಕುಮಾರನ ಆಚರಣೆಗೆ ಸಂಬಂಧಪಟ್ಟಂತೆ ವಿವರಿಸುವುದಾದರೆ. ಪ್ರತಿಯೊಂದು ಹಳ್ಳಿಯಲ್ಲಿಯೂ ಸಹ ಇವನಿಗೆ ಪೂಜೆಯನ್ನು ಸಲ್ಲಿಸುತ್ತಾರೆ. ಎಲ್ಲಾ ಸಮುದಾಯದವರೂ ಸಹ ಭೇದ ಭಾವ ಮಾಡದೇ ಇವನನ್ನು ಆದರದಿಂದ ಬರಮಾಡಿಕೊಳ್ಳುತ್ತಾರೆ. ಬಹುತೇಕ ಹಳ್ಳಿಗಳಲ್ಲಿ ಜೋಕುಮಾರನ ಆರಾಧಕರನ್ನು ಸತ್ಕರಿಸಿ ಉಪಚಾರ ಮಾಡುತ್ತಾರೆ. ಏಕೆಂದರೆ ಪ್ರತಿ ವರುಷಕ್ಕೊಮ್ಮೆ ಜೋಕುಮಾರನ ಆಗಮನ ಆಗುತ್ತದೆ. ಅವನ ಅಂಗಾರ ಮತ್ತು ಅಂಬಲಿಯನ್ನು ಎಲ್ಲಾ ಮತದವರೂ ಕೇಳಿ ಪಡೆಯುತ್ತಾರೆ. ಬಹುಶಃ ಈ ಪದ್ಧತಿ ಅಥವಾ ಸಂಪ್ರದಾಯ ನಗರದಲ್ಲಿ ವಿರಳ. ಕಾರಣ ಇಂದು ಎಲ್ಲಾ ಆಚರಣೆಗಳೂ ರೂಢಿ ನಂಬಿಕೆಗಳು, ಸಂಪ್ರದಾಯಗಳು ಹಳ್ಳಿಗಳಲ್ಲಿಯೇ ಹೆಚ್ಚು ಜೀವಂತಿಕೆಯನ್ನು ಪಡೆದುಕೊಂಡಿವೆ ಎಂದರೆ ಅತಿಶಯೋಕ್ತಿ ಎನಿಸಲಾರದು.

ಜೋಕುಮಾರನನ್ನು ಹೊತ್ತು ತಿರುಗುವ ಕಬ್ಬಾರರು ಹೇಳುವಂತೆ ಪಟ್ಟಣದ ಜನರು ಇಂತಹ ಆಚರಣೆಗಳನ್ನು ಕಡೆಗಣ್ಣಿನಿಂದ ನೋಡುತ್ತಾರೆ. ಆದರೆ ಹಳ್ಳಿಯಲ್ಲಿರುವ ಜನರಿಗೆ ಈ ಎಲ್ಲಾ ಬಗೆಯ ಸಂಪ್ರದಾಯಗಳನ್ನು ಚಾಚೂ ತಪ್ಪದೇ ಅನುಸರಿಸಿಕೊಂಡು ಬರುತ್ತಾರೆ. ನಗರ ಪ್ರದೇಶದಲ್ಲಿರುವ ಎಲ್ಲಾ ಸಮುದಾಯದವರು ಸಹಕಾರ ಕೊಡುವುದಕ್ಕೂ ಹಳ್ಳಿಗರು ಸಹಕಾರ ಕೊಡುವುದಕ್ಕೂ ಅಜಗಜಾಂತರವಿದೆ.

ಪಟ್ಟಣದ ಜನರಿಗೆ ಒಂದು ರೀತಿಯಲ್ಲಿ ನಿರ್ಲಕ್ಷ್ಯವೇ ಕಾರಣವಿರಬಹುದು. ಇವೆಲ್ಲವುಗಳಿಂದ ನಮಗಾಗುವ ಪ್ರಯೋಜನವಾದರೂ ಏನು? ಎಂಬಂತಹ ಪ್ರಶ್ನೆಗಳು ಅವರನ್ನು ಕಾಡುತ್ತಿದ್ದಿರಬಹುದು.

ಕ್ಷೇತ್ರಕಾರ್ಯದಲ್ಲಿ ಗಮನಿಸಿದಾಗ ಪ್ರತಿಹಳ್ಳಿಯಲ್ಲಿಯೂ ಸಹ ಇಂತಹ ಸಮುದಾಯದ ಜನರು, ಅವರ ಮನೆಯ ಬಾಗಿಲಿಗೆ ಜೋಕುಮಾರನನ್ನು ಹೊತ್ತೊಯ್ಯುವುದು ಬೇಡ! ಎಂಬಂತಹ ಭಾವನೆಗಳು ಜೋಕುಮಾರನ ಆರಾಧಕರಿಗೆ ಎಂದಿಗೂ ಅವರ ಮನಪಟಲದಲ್ಲಿ ಸುಳಿದಿರುವುದಿಲ್ಲ. ಅವರಿಗೆ ಯಾವ ಧರ್ಮದವರಾದರೇನು? ತಾವು ಅನುಸರಿಸಿಕೊಂಡು ಬಂದಿರುವ ಕಾಯಕವನ್ನು ಸಾಂಗವಾಗಿ ನೇರವೇರಿಸಬೇಕು ಅಷ್ಟೇ.

ಭಾರತವು ಹಳ್ಳಿಗಳಿಂದ ಕೂಡಿರುವ ದೇಶವಾಗಿದೆ. ಇವತ್ತಿನ ಸಂದರ್ಭದಲ್ಲಿ ಎಲ್ಲಾ ರಿಚ್ಯುಯಲ್‌ಗಳು ಉಳಿದು ಬೆಳೆದುಕೊಂಡು ಬಂದಿರುವುದು ಇಂತಹ ಮುಗ್ಧ ಜನಪದರಿಂದಲೇ ಎಂಬ ಅಭಿಪ್ರಾಯ ಸಾರ್ವಕಾಲಿಕ ಸತ್ಯ. ಹಾಗಾಗೀಯೇ ಅವರು ತಮ್ಮ ಬದುಕಿನಲ್ಲಿ ಒಂದು ಅವಿಭಾಜ್ಯ ಅಂಗದಂತೆಯೇ ಇರುವ ಇಂತಹ ಆಚರಣೆಗೆ ಮೊರೆ ಹೋಗುತ್ತಾರೆ. ಹಳ್ಳಿಗಳಲ್ಲಿ ಇಂದಿಗೂ ಜೀವಂತವಿರುವ ಬಹುತೇಕ ಎಲ್ಲಾ ಸಂಪ್ರದಾಯಗಳೂ ವ್ಯಷ್ಟಿಯಾಗಿನಿಲ್ಲದೆ ಸಮಷ್ಟಿಯಾಗಿ ನಿಂತಿರುವುದು ಧಾರ್ಮಿಕತೆಗೆ ಹಿಡಿದ ಕನ್ನಡಿಯಾಗಿದೆ.

ಪ್ರತಿಯಂದನ್ನು ನಾವು ಧರ್ಮದ ಹಿನ್ನೆಲೆಯಲ್ಲಿ ಅರ್ಥೈಸುತ್ತೇವೆ. ಆದರೆ ಇಂತಹ ರೂಢಿನಂಬಿಕೆ, ಸಂಪ್ರದಾಯ-ಆಚರಣೆಗಳನ್ನು ಆಚರಿಸುವುದರ ಮೂಲ ಉದ್ದೇಶ ಜನಪದರ ಕಲ್ಯಾಣಕ್ಕಾಗಿ. ಇಲ್ಲಿ ಧಾರ್ಮಿಕತೆ ಗೌಣವಾಗುತ್ತದೆ. ಅಂದರೆ ಬಹುತೇಕವಾಗಿ ಎಲ್ಲಾ ಹಳ್ಳಿಗರು ಇಂತಹ ಸಂಪ್ರದಾಯಗಳನ್ನು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಪುರಸ್ಕರಿಸುತ್ತಾರೆ. ಒಟ್ಟಾರೆಯಾಗಿ ಇವುಗಳು ಸಮಾಜದಲ್ಲಿರುವ ಎಲ್ಲಾ ಸ್ತರದ ಜನರಿಗೆ ಹಿತವನ್ನೇ ಬಯಸುತ್ತವೆ. ಯಾವುದೇ ಸಮಯ, ಸಂದರ್ಭಗಳಲ್ಲಿ ಇವುಗಳಿಂದ ಎಲ್ಲಾ ವರ್ಗದ ಜನರು ಪ್ರಯೋಜನವನ್ನು ಪಡೆದಿರುತ್ತಾರೆ. ಒಳಿತು-ಕೆಡುಕುಗಳ ಬಗ್ಗೆ ಜನಪದರು ತೀವ್ರ ನಿಗಾವಹಿಸುವುದರಲ್ಲಿ ಮಗ್ನರಾಗಿರುತ್ತಾರೆ. ಸಾಮಾನ್ಯವಾಗಿ ಇಂತಹ ಆಚರಣೆಗಳು ಸಮಾಜದಲ್ಲಿರುವ ಎಲ್ಲಾ ವರ್ಗದ ಜನರಿಗೆ, ಎಲ್ಲಾ ಮತ ಧರ್ಮದವರಿಗೆ ಹಿತವನ್ನೇ ಬಯಸುತ್ತವೆ. ಯಾರೊಬ್ಬರ ಹಿತಾಸಕ್ತಿಗೂ ಕೂಡ ಧಕ್ಕೆಯನ್ನು ತರುವುದಿಲ್ಲ.

ಪ್ರತಿಯೊಂದು ಗ್ರಾಮಸಮಾಜದಲ್ಲಿಯೂ ಸಹ ಧಾರ್ಮಿಕತೆ ತನ್ನದೇ ಆದ ಸ್ಥಾನವನ್ನು ಹೊಂದಿರುತ್ತದೆ. ಗ್ರಾಮದಲ್ಲಿ ವಾಸಿಸುವ ಎಲ್ಲಾ ವರ್ಗದ, ಧರ್ಮದ ಜನರೂ ಸಹ ಮುಕ್ತ ಮನಸ್ಸಿನಿಂದ, ಪರಂಪರೆಯಿಂದ ಬೆಳೆದು ಬಂದ ಇಂತಹ ಎಲ್ಲಾ ವಿಧವಾದ ಆಚರಣೆಗಳನ್ನು ಆಚರಿಸುತ್ತಾರೆ. ಅವರು ಯಾವುದೇ ವರ್ಗಕ್ಕೆ ಸೇರಿದ್ದರೂ ಸಹ ಗ್ರಾಮ್ಯ ಜನರು ತೆರೆದ ಮನಸ್ಸಿನಿಂದ ಇಂತಹವುಗಳನ್ನು ಆಸ್ವಾದಿಸುತ್ತಾರೆ. ಅವೆಲ್ಲವುಗಳನ್ನು ಆಚರಣೆಗೆ ತರುವುದರ ಮೂಲಕ ಜೀವಂತವಾಗಿರಿಸುವ ಯತ್ನ ಮಾಡಿರುತ್ತಾರೆ.

ಬಹುತೇಕವಾಗಿ ಇಂದು ಗ್ರಾಮಗಳಲ್ಲಿ ವಾಸಿಸುತ್ತಿರುವ ಎಲ್ಲಾ ವರ್ಗದ ಜನರು ಯಾವುದೇ ಧರ್ಮ, ಪಂಥಕ್ಕೆ ಸೇರಿದ್ದರೂ ಸಹ ಅವರು ಅದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಮುಕ್ತಮನಸ್ಸಿನಿಂದ ಜೋಕುಮಾರನನ್ನು ಆದರದಿಂದ ಬರಮಾಡಿಕೊಳ್ಳುತ್ತಾರೆ. ಹಿಂದೂ, ಮುಸ್ಲಿಂ, ಇನ್ನಿತರ ಯಾವುದೇ ದರ್ಮಕ್ಕೆ ಸೇರಿದ ಜನರೂ ಸಹ ಯಾವುದೇ ರೀತಿಯಲ್ಲಿ ಭೇದ-ಭಾವ ತೋರದೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಇಂತಹವುಗಳನ್ನು ಪೋಷಿಸಿಕೊಂಡು ಬಂದಿದ್ದಾರೆ. ಒಟ್ಟಾರೆಯಾಗಿ ಹೇಳಬೇಕೆಂದರೆ ಅನನ್ಯ ಕಳಕಳಿ ಅವರಲ್ಲಿ ಮನೆಮಾಡಿಕೊಂಡಿರುತ್ತದೆ. ಇಲ್ಲಿ ಜನಪದ ಧರ್ಮವನ್ನು ಕಾಣುತ್ತೇವೆ. ಅಂತಹ ಜನಪದರ ಧರ್ಮವು ಲಿಖಿತಪಠ್ಯ. ಆ ಮೂಲಕ ಏರ್ಪಟ್ಟ ತಾತ್ವಿಕ ಚಿಂತನದ ಮೂಲಕ ಆಕಾರ ಪಡೆದಿರುವುದಿಲ್ಲ. ಅದು ಬಹುಮಟ್ಟಿಗೆ ಅನುಕರಣೆ ಮತ್ತು ಆಚರಣೆಗಳಿಂದ ಹರಿದು ಬಂದಿರುತ್ತದೆ. ಅತಿಮಾನುಷ ಕಲ್ಪನೆ. ಅಲೌಕಿಕ ಜೀವಿಗಳ ಆರಾಧನೆ ಹಾಗೂ ಅನೇಕ ಬಗೆಯ ಧಾರ್ಮಿಕ ನಂಬಿಕೆಗಳಿಂದ ಕೂಡಿರುತ್ತದೆ.

ವಿಶ್ವಕೋಶವೊಂದರಲ್ಲಿ ವಿವರಿಸಿರುವಂತೆ "ಅದರಲ್ಲಿ ಕಂಡು ಬರುವ ಆಚಾರ ವಿಚಾರಗಳು, ನಡಾವಳಿಗಳೂ, ನಂಬಿಕೆಗಳು, ಕಲೆಗಳು ಮತ್ತು ಹುಟ್ಟುಸಾವುಗಳ ಮಧ್ಯೆ ಅನುಸರಿಸಲೇಬೇಕಾದ ಸಂಪ್ರದಾಯಗಳು, ಜನರ ಜೀವನ ವಿಧಾನ. ಮತ್ತು ಅವರ ಮನೋದೃಷ್ಟಿಯನ್ನು ಪ್ರತಿನಿಧಿಸುತ್ತವೆ. ತಾವು ಪರಿಪಾಲಿಸುವ ಧರ್ಮಗಳ ಧ್ಯೇಯೋದ್ದೇಶಗಳ ಅರಿವಿಲ್ಲವಾದರೂ ತಮ್ಮ ಸುತ್ತ ಕಾಪಾಡುವ ಒಂದು ಶಕ್ತಿಯಿದೆ ಎಂಬುದನ್ನು ಜನಪದರು ನಂಬುತ್ತಾರೆ. ಹೀಗಾಗಿ ಅವರು ನದಿ, ಜಲಪಾತಗಳು, ಬೆಟ್ಟಗುಡ್ಡಗಳು, ದಟ್ಟವಾದ ಕಾಡು ಎಲ್ಲವುಗಳಲ್ಲೂ ದೈವತ್ವವನ್ನು ಅರಸುತ್ತಾರೆ. ಇವುಗಳ ಒಡೆಯನೇ ಆ ಪ್ರದೇಶದಲ್ಲಿ ವಾಸವಾಗಿದ್ದು ಕಾಯಿಲೆ ಮತ್ತು ಅನಿಷ್ಟಗಳಿಗೆ ಕಾರಣನೆಂದು ನಂಬಿ ಅವುಗಳನ್ನು ಪೂಜಿಸುತ್ತಾರೆ. ಇಂಥ ಸರ್ವಚೇತನವಾದ ವಾಸ್ತವವಾಗಿ ಜನಪದ ಧರ್ಮದ ಅಡಿಗಲ್ಲಾಗಿದೆ ಎಂದು ಹೇಳಬಹುದು." (ಕನ್ನಡ ವಿಶ್ವಕೋಶ ೧೯೭೯) ಅಲ್ಲದೆ ಜನಪದ ಧರ್ಮವು ತನ್ನ ಸುತ್ತಮುತ್ತಲಿರುವ ಪ್ರಕೃತಿಯ ಸುತ್ತಲೂ ಅನೇಕ ಪುರಾಣ, ಐತಿಹ್ಯ, ಕಾವ್ಯಗಳನ್ನೂ, ನಿರ್ಮಾಣ ಮಾಡುತ್ತದೆ. ಆಲ, ಬೇವು, ಅಶ್ವತ್ಥ, ಮುಂತಾದ ಮರಗಿಡಗಳನ್ನು ಪೂಜೆಮಾಡುವುದರಿಂದ ತಮ್ಮ ಇಷ್ಟಾರ್ಥ ಸಿದ್ಧಿಸುತ್ತದೆ. ಎಂಬ ನಂಬಿಕೆ ಅವರದು.

ಪ್ರಕೃತಿ ಪೂಜೆ ಜನಪದ ಧರ್ಮದ ಪ್ರಧಾನಲಕ್ಷಣಗಳಲ್ಲೊಂದು. ತಾವು ವಾಸಿಸುವ ಭೂಮಿ, ಸಮೀಪದ ಕಡಲು, ಅವರಿಗೆ ಆರಾಧ್ಯವಸ್ತು. ಮುಂಗಾರು ಹಬ್ಬ ಅಥವಾ ಕಾರುಹಬ್ಬ ಮಳೆರಾಯನಿಗೆ ಕೃತಜ್ಞತೆಯನ್ನು ಸೂಚಿಸುವ ಹಬ್ಬವಾಗಿದೆ. ಮಳೆಬಾರದೆ ಹೋದಾಗ ತಿಂಗಳು ಮಾನವ ಪೂಜೆ, ಮಾರಿ ಆರಾಧನೆ, ಜೋಕುಮಾರನ ಆರಾಧನೆ, ತೊಗಲುಗೊಂಬೆ ಆಡಿಸುವುದು ಕಂಡುಬರುತ್ತದೆ. ಹಸು, ಕೋಣ, ಎತ್ತುಗಳನ್ನು ದೇವರ ವಾಹನವೆಂದು ಭಾವಿಸಿ ಪೂಜಿಸುವುದು ರೂಢಿಯಲ್ಲಿದೆ.

ಕುಲದೇವತಾರಾಧನಾ ಪದ್ಧತಿ ಜನಪದ ಧರ್ಮದ ಭಾಗವಾಗಿದೆ. ಈ ಪದ್ಧತಿಯಂತೆ ಒಂದು ಬುಡಕಟ್ಟಿನ ಅಥವಾ ಸಮುದಾಯದ ಜನ ತಮ್ಮ ಕುಲದ ಮೂಲವನ್ನು ಒಂದು ಪ್ರಾಣಿ ಅಥವಾ ಸಸ್ಯಗಳಲ್ಲಿ ಆರೋಪಿಸಿಕೊಂಡು ಅವುಗಳನ್ನೇ ತಮ್ಮ ಕುಲದೇವರು ಎಂದು ಪೂಜಿಸಿಕೊಂಡು ಬಂದಿರುತ್ತಾರೆ. ತಮ್ಮ ಕುಲದೇವತೆಯ ಲಾಂಛನವಾದ ಸಸ್ಯವನ್ನು ಅವರು ಕಡಿಯುವುದಿಲ್ಲ. ಪ್ರಾಣಿಯನ್ನು ಬೇಟೆಯಾಡುವುದಿಲ್ಲ. ಅಲ್ಲದೆ ಆಹಾರ ಸೇವಿಸುವುದಿಲ್ಲ. ಗ್ರಾಮದೇವತೆಗಳು ಊರನ್ನು, ಊರಿನೊಳಗಿನ ಜನರನ್ನು, ಜಾನುವಾರಗಳನ್ನು ಆಗಿಂದಾಗ್ಗೆ ವಿಶೇಷ ದಿನಗಳಲ್ಲಿ, ವಾರ್ಷಿಕ ಆಚರಣೆಗಳಲ್ಲಿ ಪೂಜಿಸುವ ಸಂಪ್ರದಾಯವಿದೆ. ಹೀಗೆ ಪೂಜಿಸದಿದ್ದರೆ. ಈ ದೇವತೆಗಳು ರೋಗರುಜಿನಗಳನ್ನು ತರುತ್ತವೆ. ಎಂದು ಜನಪದರ ನಂಬಿಕೆಯಿದೆ. ರೈತಾಪಿ ಸಮುದಾಯದವರು ಕೃಷಿಯ ಕೆಲಸದ ಸಂದರ್ಭದಲ್ಲಿ ಬಹುಬಗೆಯ ಆರಾಧನೆಯನ್ನು ನಡೆಸುತ್ತಾರೆ.

ಜೋಕುಮಾರ ಮತ್ತು ಇತರ ದೈವಗಳ ಸಂಬಂಧ

ಜೋಕುಮಾರನ ಆಚರಣೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಉತ್ತರ ಕರ್ನಾಟಕ ಹಾಗೂ ಹೈದ್ರಾಬಾದ್ ಕರ್ನಾಟಕದಲ್ಲಿ ಹೆಚ್ಚಿನ ಮಟ್ಟಿಗೆ ಇದು ಆಚರಣೆಯ ರೀತಿಯಲ್ಲಿ ಇಂದಿಗೂ ಉಳಿದುಕೊಂಡು ಬಂದಿರುತ್ತದೆ. ವರ್ಷಋತುವಿನಲ್ಲಿ ಬರುವ ಭಾದ್ರಪದ ಮಾಸದಲ್ಲಿ ಇವನು ಸಮಾಜದ ಎಲ್ಲಾ ಸ್ತರಗಳ ಜನರಿಂದ ವಿಶೇಷವಾಗಿ ಪೂಜೆಗೊಳ್ಳುತ್ತಾನೆ. ಇದು ಎಲ್ಲೆಡೆ ಸಾರ್ವತ್ರಿಕವಾಗಿ ಕಂಡುಬರುವ ಸಂಗತಿ. ಇಂದಿಗೂ ಸಹ ಜನಪದರು ಇವನು ಮಳೆ ತರಿಸುವುದಕ್ಕಾಗಿ ಜನ್ಮ ತಳೆದಿದ್ದಾನೆ ಎಂಬ ನಂಬಿಕೆಯನ್ನಿಟ್ಟುಕೊಂಡಿದ್ದಾರೆ.

ಸಾಮಾನ್ಯವಾಗಿ ತಿಳಿದುಬರುವ ಸಂಗತಿಗಳೆಂದರೆ ಜನಪದರ ಭಕ್ತಿಗೆ ಸಂಬಂಧ ಪಟ್ಟಂತೆ ಪ್ರಮುಖವಾಗಿ ಎರಡು ಮುಖ್ಯವಾದ ಸಂಗತಿಗಳನ್ನು ಗಮನಿಸಬೇಕು. ಮೊದಲನೆಯದಾಗಿ ಸ್ಥಾಯಿಯಾಗಿರುವ ದೈವಭಕ್ತಿ ಹಾಗೂ ಆ ಭಕ್ತಿಯ ಆಶ್ರಯದಲ್ಲಿ ಬೆಳೆದು ಬಂದ ಸಾಂಪ್ರದಾಯಿಕ ಆಚರಣೆಗಳು. ನಮ್ಮ ಸುತ್ತ ಮುತ್ತ ನಡೆಯುವ ಜಾತ್ರೆ ಉತ್ಸವಗಳಲ್ಲಿ ಜನ ಪಡೆಯುವ ಸಡಗರ, ತಲ್ಲೀನತೆಗಳು ಅವರ ಬತ್ತದ ಜೀವನೋತ್ಸಾಹಕ್ಕೆ ಸಂಕೇತಗಳಾಗುತ್ತವೆ.

ಭಯದಿಂದ ಭಕ್ತಿ ಎನ್ನುವ ರೀತಿಯಲ್ಲಿ ಜನಪದರು, ಆ ಭಯದ ಬೆನ್ನಹಿಂದೆಯೇ ದೇವರ ಪರಿಕಲ್ಪನೆಯನ್ನು ಮಾಡಿಕೊಂಡು ಬಂದಿದ್ದಾರೆ. ಸೂರ್ಯಗ್ರಹಣ, ಚಂದ್ರಗ್ರಹಣಗಳಂತಹ ಪ್ರಕೃತಿ ವೈಚಿತ್ರ್ಯಗಳು, ಗುಡುಗು-ಸಿಡಿಲು, ಭೂಕಂಪ, ಜ್ವಾಲಾಮುಖಿಗಳಂತಹ ಪ್ರಕೃತಿಯ ವಿಕೋಪಗಳು ಆದಿಮಾನವನನ್ನು ಗಾಬರಿಗೊಳಿಸಿರಬೇಕು. ಮೊದಲು ಬೇಟೆಯಾಡುತ್ತ ಕಷ್ಟ-ನಿಷ್ಠುರಗಳನ್ನು ಎದುರಿಸುತ್ತಿದ್ದ ಜನಕ್ಕೆ ತಮ್ಮ ಅಂದಿನ ಮನೋ ಮಟ್ಟಕ್ಕೆ ಸಮಾನಾಂತರವಾದ ಹಿಂಸಾತ್ಮಕವಾದ ಭಕ್ತಿಯೇ ಇತ್ತು.

ಕಾಲಗಳುರಿಳಿದ ಹಾಗೆಯೆ ನಾಗರಿಕತೆ ಕಾಲಿಟ್ಟಂತೆ ಜನಪದರ ದೇವರ ಪರಿಕಲ್ಪನೆ ಹಾಗೂ ಭಕ್ತಿಯ ರೀತಿ ಬೇರೆ ತೆರನಾಗಿಯೇ ಬೆಳೆದು ಬಂದವು.

ಜನಪದರು ಸಾಮಾನ್ಯವಾಗಿ ಅನೇಕ ತೆರನಾದ ದೇವರುಗಳನ್ನು ಪೂಜಿಸುತ್ತಾರೆ. ಉದಾಹರಣೆಗೆ ಮನೆದೇವರು, ಕುಲದೇವರು, ಗ್ರಾಮದೇವರು, ಸೀಮೇದೇವರು ಎಂದು ವರ್ಗೀಕರಿಸಿಕೊಂಡಿರುತ್ತಾರೆ. ಅನೂಚಾನಾಗಿ ಕುಟುಂಬದ ಹಿರಿಯರಿಂದ ಪೂಜಿಸಲ್ಪಡುವ ಕುಟುಂಬದ ದೇವರು 'ಮನೆದೇವರು' ಎಂದು ಕರೆಸಿಕೊಳ್ಳುತ್ತದೆ. ಇಂತಹ ದೈವ ತಾವು ವಾಸಮಾಡುವ ಊರಿನಲ್ಲಿಯೇ ಇರಬೇಕೆಂಬ ನಿಯಮವೇನೂ ಇರುವುದಿಲ್ಲ. ದೂರದ ಊರಿನಲ್ಲಿರಬಹುದು. ಜನಪದರಿಗೆ ಅನುಕೂಲವಾದಾಗ ಆಯಾ ನಿಗದಿತ ಸ್ಥಳಕ್ಕೆ ಹೋಗಿ ಪೂಜೆಯನ್ನು ಮಾಡಿಕೊಂಡು ಬರುತ್ತಾರೆ. ಅಪವಾದವೆನ್ನುವಂತೆ ಒಂದು ಮನೆತನದವರಿಗೆ ಅವರ ಮನೆದೇವರು ಎರಡು ಅಥವಾ ಮೂರು ಇರುವ ಸಂಭವವಿರುತ್ತದೆ. ಇನ್ನು 'ಕುಲದೇವತೆ' ಅವರ ಕುಲವನ್ನು ಪ್ರತಿನಿಧಿಸುವ ದೇವರು 'ಗ್ರಾಮದೇವತೆ' ಊರಲ್ಲಿಯೇ ಇದ್ದು ಎಲ್ಲ ವರ್ಗದವರಿಗೆ ಸಮಾನವಾದ ದೈವವಾಗಿರುತ್ತದೆ. ಇಂತಹ ದೇವರ ಜಾತ್ರೆ ಪರಿಕ್ಷೆ ಸಾಮಾನ್ಯವಾಗಿ ವರ್ಷಕ್ಕೊಂದಾವರ್ತಿಯಂತೆ ಸಂಭ್ರಮ, ಸಡಗರಗಳಿಂದ ನೆರವೇರುತ್ತವೆ. ಇಂತಹ ದೈವಗಳಿಗೆ ಉದಾಹರಣೆಯೆಂದರೆ, ದುರುಗಮ್ಮ, ದ್ಯಾಮವ್ವ, ಚೌಡಮ್ಮ ಇತ್ಯಾದಿ.

ಇನ್ನು 'ಸೀಮೆ ದೇವರು' ಎನ್ನುವುದು ಆಯಾ ಪ್ರದೇಶದ ಸೀಮೆಯೊಂದರ ಅಧಿಪತಿ. ಕೃಷಿಯನ್ನು ಮಾಡುವ ಜಮೀನು, ಬೇಟೆಯಾಡುವ ಕಾಡುಗಳಲ್ಲಿ ಇದು ಸ್ಥಾನವನ್ನು ಪಡೆದಿರುತ್ತವೆ. ಕಾಡುಮೃಗಗಳಿಂದ ಪ್ರಕೃತಿಯ ವಿಕೋಪದಿಂದ ತಮ್ಮ ಭೂಸಂಪತ್ತು ಹಾಳಾಗದಿರುವಂತೆ ನೋಡಿಕೊಳ್ಳುವ ಉತ್ಕಟವಾದ ಇಚ್ಛೆಯಿಂದ ಇಂತಹ ದೇವರನ್ನು ಆರಾಧಿಸುವ ಉದ್ದೇಶವಿರುತ್ತದೆ. ಯಾವುದೇ ಗ್ರಾಮದ ತುಂಬ ಇರುವ ಗುಡಿಗಳು ಗ್ರಾಮೀಣರ ದೈವಶ್ರದ್ಧೆಯನ್ನು ಪ್ರತಿನಿಧಿಸುತ್ತವೆ. ಕೆಲವು ದೇವರು ನಿರ್ದಿಷ್ಟ ಜಾತಿಯವರಿಂದ ಪೂಜಿಸಲ್ಪಡಬಹುದಾದರೂ ಅನ್ಯಜಾತಿಯವರು ಇಡಿಯಾಗಿ ಈ ದೇವರನ್ನು ತಿರಸ್ಕರಿಸುವುದಿಲ್ಲ.

ಪ್ರತಿಯೊಂದು ಊರಿನಲ್ಲಿ ಎಲ್ಲಾ ದೇವರ ದೇವಸ್ಥಾನಗಳಿರುತ್ತವೆ. ಎಲ್ಲಾ ವರ್ಗದ ದೈವಗಳನ್ನು ಜನರು ಹಿಂದಿನಿಂದಲೂ ಆರಾಧಿಸಿಕೊಂಡು ಬರುತ್ತಿರುವ ಪರಿಪಾಠವಿದೆ. ಆದರೆ ಅಪವಾದ ಎನ್ನುವಂತೆ ಕೆಲವು ದೇವರುಗಳ ದೇವಸ್ಥಾನಗಳಿರುವುದಿಲ್ಲ. ಸುಮ್ಮನೆ ಹಾಗೆಯೇ ಯಾವುದೋ ಒಂದು ಮರದ ಕೆಳಗೆ ಜನರು ಅಂತಹುಗಳನ್ನು ಆರಾಧಿಸುತ್ತಾರೆ. ಇನ್ನು ಕೆಲವೊಂದು ದೇವರುಗಳನ್ನು ನಿರ್ದಿಷ್ಟ ಸಮಯದಲ್ಲಿ ಮಾತ್ರ ಪೂಜಿಸಿ ವರ್ಷದ ಇನ್ನುಳಿದ ದಿನಗಳಲ್ಲಿ ಮರೆಯುವ ಲಕ್ಷಣಗಳನ್ನು ಮೈಗೂಡಿಸಿಕೊಂಡಿದ್ದಾರೆ. ಜನಪದರ ಅನಾದರಣೀಯ ಧೋರಣೆ ಎಂದು ಹೇಳಲುಬಾರದು. ಏಕೆಂದರೆ ಅಂತಹ ಎಲ್ಲಾ ಆಚರಣೆಗಳ ಸ್ಥಿತಿಗತಿ ಹಾಗೆಯೇ ಇರುತ್ತದೆ. ಕೇವಲ ಆಚರಣೆಗಳಿಗಾಗಿ ಎಷ್ಟೋ ದೇವರುಗಳು ನಮ್ಮ ಸುತ್ತಮುತ್ತ ಜಗತ್ತಿನಲ್ಲಿವೆ.

ಅಂತಹ ಎಲ್ಲಾ ದೈವಗಳಿಗೂ ತನ್ನದೇ ಆದ ಇತಿಹಾಸ, ಮತ್ತು ಪ್ರಾಮುಖ್ಯತೆಯಿರುತ್ತದೆ. ಕ್ಷೇತ್ರಕಾರ್ಯಕ್ಕೆ ಸಂಬಂಧಪಟ್ಟ ಮಾಹಿತಿಯಂತೆ ಹೇಳುವುದಾದರೆ ಎಲ್ಲಾ ಜನಪದ ದೈವಗಳು ಸಹ ಪೂಜಿಸಲ್ಪಟ್ಟರೂ ಸಹ ಕೆಲವು ದೇವರಿಗೆ ಮಾತ್ರ ಮಾನ್ಯತೆ ದೊರಕುತ್ತದೆ. ಇನ್ನು ಕೆಲವು ದೇವರಿಗೆ ಮಾನ್ಯತೆ ದೊರಕುವುದಿಲ್ಲ. ನನ್ನ ಅಭಿಪ್ರಾಯದಂತೆ ನಮ್ಮ ನಾಡಿನಲ್ಲಿ ಸಾಕಷ್ಟು ದೈವಗಳಿದ್ದರೂ ಸಹ ಒಂದೊಂದು ದೇವರಿಗೂ ಒಂದು ರೀತಿಯ ಹಿನ್ನೆಲೆಯಿದೆ. ಅಂತಹ ಹಿನ್ನೆಲೆಯಿಂದ ನಾವು ನೋಡಿದಾಗ ಮಾತ್ರ ಆಚರಣೆಯ ಹಿಂದಿನ ಮುಖ್ಯ ಉದ್ದೇಶ, ಸ್ಪಷ್ಟವಾಗಿ ನಮ್ಮ ಅರಿವಿಗೆ ಬರುತ್ತದೆ. ಅದೇನೆಂದರೆ ಅಂತಹ ದೇವರುಗಳು ಜನ್ಮ ತಳೆದಿರುವುದು ಲೋಕಕಲ್ಯಾಣಕ್ಕಾಗಿ. ಒಂದಿಲ್ಲೊಂದು ರೂಪದಲ್ಲಿಯಾದರೂ ಸಹ ಅಂತಹ ಆಚರಣೆಗಳಿಂದ ಮಾನವನಿಗೆ ಒಳಿತೇ ಆಗಿರುತ್ತದೆ. ಒಳಿತು ಮತ್ತು ಕೆಡಕು ಇವೆರಡರ ನಡುವೆ ಜೀವನ ಸಾಗಿಸುವ ಜನರು ಆದಷ್ಟು ಮಟ್ಟಿಗೆ ಒಳಿತೇ ಆಗಬೇಕು ಎಂದು ಬಯಸುವುದು ಮಾನವನ ಸಹಜ ಬಯಕೆ ಆಗಿದೆ. ಈ ಎಲ್ಲಾ ದೃಷ್ಟಿಕೋನಗಳನ್ನಿಟ್ಟುಕೊಂಡು ಈ ರೀತಿಯ ಎಲ್ಲಾ ರಿಚ್ಯುಯಲ್ ಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬಂದಿರುತ್ತಾರೆ. ಕೆಲವೊಂದು ಆಚರಣೆಗಳ ಹಿಂದಿನ ಉದ್ದೇಶವನ್ನು ಗಮನಿಸಿದಾಗ, ವೈಜ್ಞಾನಿಕವಾಗಿಯೂ ಸಹ ಅವುಗಳ ಮಹತ್ವದ ಬಗ್ಗೆ ಒರೆಹಚ್ಚಿ ನೋಡಿದಾಗ ನಮಗೆ ಗೊತ್ತಿಲ್ಲದ ಎಷ್ಟೋ ವಿಚಾರಗಳು ಬೆಳಕಿಗೆ ಬರುತ್ತವೆ. ಅಂದಾಗ ಮಾತ್ರ ಆಚರಣೆಗಳ ಮಹತ್ವ, ಹಿಂದಿರುವ ಸದುದ್ದೇಶ ಎಲ್ಲರಿಗೂ ಗೋಚರಿಸುತ್ತವೆ.

ಮಾಹಿತಿಗೆ ಸಂಬಂಧಪಟ್ಟಂತೆ ವಿವರಿಸುವುದಾದರೆ (ಕ್ಷೇತ್ರಕಾರ್ಯದಲ್ಲಿ ವಕ್ತೃಗಳು ನೀಡಿದ ಮಾಹಿತಿಯಂತೆ) ಜೋಕುಮಾರನ ಹುಟ್ಟಿನಿಂದ, ಅವನು ಸಾಯುವ ತನಕ ಮಾಡಿದ ಎಲ್ಲಾ ಕಾರ್ಯಗಳು ಅವನ ಬಗ್ಗೆ ಹಾಡಿದ ಹಾಡುಗಳಲ್ಲಿ ವ್ಯಕ್ತವಾಗಿವೆ. ಇಂತಹ ಹಾಡುಗಳನ್ನು ಹಾಡುವವರು ಹಳ್ಳಿಯ ಅನಕ್ಷರಸ್ಥ ಮುಗ್ಧ ಜನರೇ ಆಗಿದ್ದಾರೆ. ಅವರ ಕಂಠಸಿರಿಯಿಂದ ಹೊರಹೊಮ್ಮಿದ ಹಾಡುಗಳಲ್ಲಿ ಜೋಕುಮಾರನ ಜನ್ಮ ವೃತ್ತಾಂತವೇ ಅಡಗಿದೆ. ಅವನ ಬಾಲ್ಯ, ಯೌವ್ವನ ಹಾಗೂ ಮೃತ್ಯು ಇವೆಲ್ಲವುಗಳ ಒಟ್ಟು ಫಲಿತವೇ ಅಂತಹುಗಳಲ್ಲಿ ಅಡಗಿವೆ.

ಕೆಲವು ಊರುಗಳಲ್ಲಿ ನಾನು ಗಮನಿಸಿದಂತೆ ಜೋಕುಮಾರನ ಬಗ್ಗೆ, ವಿಷಯಗಳನ್ನು ಸಂಗ್ರಹಿಸುವಾಗ ಅನೇಕ ದೇವರುಗಳ ಹಾಗೂ ಆಚರಣೆಗಳ ಸಂಬಂಧವನ್ನು ಇವನ ಆಚರಣೆಯೊಂದಿಗೆ ತಳಕು ಹಾಕುತ್ತಾರೆ. ಅಂದರೆ ಪ್ರಾದೇಶಿಕ ಹಿನ್ನೆಲೆಯಿಂದ ಅನೇಕ ಆಚರಣೆಗಳು ಒಂದರೊಳಗೊಂದು ಸಮ್ಮಿಳಿತಗೊಂಡಿರುತ್ತವೆ. ಹೊರನೋಟಕ್ಕೆ ಅಂತಹ ಎಲ್ಲಾ ಆಚರಣೆಗಳು ಒಂದೆ ಎನಿಸಿದರೂ ಸಹ ಆಚರಣೆಯಲ್ಲಿ ಸ್ವಲ್ಪ ಮಟ್ಟಿನ ರೀತಿಯಲ್ಲಿ ವ್ಯತ್ಯಾಸವಿರುತ್ತದೆ. ಒಂದು ಆಚರಣೆಗೂ, ಮತ್ತೊಂದು ಆಚರಣೆಗೂ ತನ್ನದೇ ಆದ ಮಹತ್ವವಿರುತ್ತದೆ. ಆ ಮಹತ್ವದ ಹಿನ್ನೆಲೆಯಿಂದ ನಾವು ವಿಶ್ಲೇಷಿಸಿದಾಗ ಮಾತ್ರ ಅದರಲ್ಲಿ ಹುದುಗಿರುವ ಅನೇಕ ಸೂಕ್ಷ್ಮ ಹೊಳಹುಗಳು ಹೊರಬರಲು ಸಾಧ್ಯ.

ಜೋಕುಮಾರನಿಗೂ ಹಾಗೂ ಇತರೆ ದೈವಗಳೊಂದಿಗೆ ಸಂಬಂಧವಿರುವ ಅನೇಕ ಜನಪದ ಕಥೆಗಳನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವಕ್ತೃಗಳು ವಿವರಿಸಿದ್ದಾರೆ. ಅಂತಹ ಕೆಲವೊಂದು ನಿದರ್ಶನವನ್ನು ನಾನು ಇಲ್ಲಿ ವಿವರಿಸಲು ಇಚ್ಛೆ ಪಡುತ್ತೇನೆ.

- ಜೋಕುಮಾರ ಹಾಗೂ ಗುಳ್ಳವ್ವರ ಸಂಬಂಧ.
- ಈ ಎರಡು ಆಚರಣೆಗಳ ವಿವಿಧ ಆಯಾಮಗಳು
- ಇಂತಹ ಆಚರಣೆಯಲ್ಲಿ ಬರುವ ಸೂಕ್ಷ್ಮ ಸಂವೇದಿ ವಿಚಾರ ಗ್ರಹಿಕೆಗಳು
- ಆಚರಣೆಗಳ ಹಿಂದಿರುವ ಉದ್ದೇಶ

ಈ ವಿಧದ ಎಲ್ಲಾ ವಿವರಗಳನ್ನು ಜೋಕುಮಾರನೊಂದಿಗೆ ಸಮೀಕರಿಸಿ, ಹೊಂದಿಸಿ, ನಡೆಸುತ್ತಾರೆ. ಏಕೆಂದರೆ ಜನಪದರದು ಮುಗ್ಧ ಮನಸ್ಸು. ಅಲ್ಲಿ ಶೀಲ-ಅಶ್ಲೀಲಗಳ ಪರಿಧಿಯೇ ಬರುವುದಿಲ್ಲ. ನಾವು ಸುಶಿಕ್ಷಿತ ಜನರು ಅವರನ್ನು ಕಂಡು, ಅವರ ಮೌಢ್ಯತೆ ಅಥವಾ ಕಂದಾಚಾರ ಎಂದು ಹೇಳಲುಬಾರದು. ಏಕೆಂದರೆ ಈ ಎಲ್ಲಾ ಚೌಕಟ್ಟನೊಳಗೆ ಅವರು ನಂಬಿಕೆಯೊಂದಿಗೆ ಇದುವರೆಗೂ ತಮ್ಮ ಜೀವನವನ್ನು ನಡೆಸುತ್ತಾ ಬಂದಿದ್ದಾರೆ. ಇಂತಹ ನಂಬಿಕೆಗಳು ಅವರ ಜೀವನದಲ್ಲಿ ಎಷ್ಟರ ಮಟ್ಟಿಗೆ ಪರಿಣಾಮವನ್ನು ಬೀರಿವೆ ಎಂಬ ಇತ್ಯಾದಿ ವಿಚಾರಗಳನ್ನು ಆನಂತರ ಪರಿಶೀಲಿಸೋಣ. ಜೋಕುಮಾರ ಹಾಗೂ ಗುಳ್ಳವ್ವ ಆಚರಣೆಯ ಹಿನ್ನೆಲೆಯಲ್ಲಿ ವಿವರಿಸಿದ್ದೇನೆ. ಉತ್ತರ ಕರ್ನಾಟಕದಲ್ಲಿ ಬರುವ ಮಹತ್ವದ ಆಚರಣೆಗಳಲ್ಲಿ ಇದು ಒಂದು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

ಗುಳ್ಳವ್ವ

ಏಳುತಲಿ ನಾನೆದ್ದು ಯಾರ್ಯಾರ ನೆನೆಯಾಲಿ
ಎಳ್ಳು ಜೀರಿಗಿ ಬೆಳೆಯೋಳ | ಭೂಮಿತಾಯಿ
ಎದ್ದೊಂದುಗಳಿಗೆ ನೆನೆದೇವ||

ಜಾನಪದರ ದೃಷ್ಟಿಕೋನದಲ್ಲಿ ಭೂತಾಯಿಯ ಮೊತ್ತ ಮೊದಲ ದೈವ (ದೇವರು) ಅವಳು ಜಗತ್ತಿಗೇ ಆಧಾರಳಾಗಿದ್ದಾಳೆ. ಅವಳಿತ್ತ ಬೆಳೆ ಇಡೀ ಮನುಷ್ಯ ಕುಲಕ್ಕೆ ಪ್ರಸಾದ. ಹಾಗಾಗಿಯೇ ಜನರು ಪ್ರಾತಃ ಕಾಲ ಎದ್ದೊಡನೆ ಅವರು ಒಂದು ಗಂಟೆ(ತಾಸು)ಯಾದರೂ ಆ ಮಾತೆಯನ್ನು ನೆನೆಯುವ ಪರಿಪಾಠವನ್ನು ಇಟ್ಟುಕೊಂಡು ಬಂದಿದ್ದಾರೆ. ಅಂದರೆ ನಮ್ಮ ಜನಪದರು ಆ ಭೂಮಿತಾಯಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ.

ನಮ್ಮ ಪೂರ್ವಿಕರು ಮಣ್ಣಿನ ಪೂಜೆಯನ್ನು ಹಲವು ಬಗೆಯಲ್ಲಿ ಮಾಡುತ್ತಾ ಬಂದಿರುತ್ತಾರೆ. ಮಳೆಗಾಲದಲ್ಲಿ ವಿಶೇಷವಾಗಿ ಅಂದರೆ ಜೇಷ್ಠಮಾಸದಿಂದ ಭಾದ್ರಪದದವರೆಗಿನ ಅವಧಿಯಲ್ಲಿ ಈ ಪೂಜೆ

ಕಂಡು ಬರುವುದು. ಈ ಎಲ್ಲಾ ಆಚರಣೆಗಳಿಗೆ ಪೂರಕವಾಗಿ ಹೇಳುವುದಾದರೆ ಆರಳೆಲೆ ಬಸವ, ಗುಳ್ಳವ್ವ, ನಾಗಪ್ಪ, ಗಣಪತಿ, ಗಂಗೆಗೌರಿ.... ಮುಂತಾದವರನ್ನು ಹೆಸರಿಸಬಹುದು. ಇಂತಹ ಆಚರಣೆಯಲ್ಲಿ ಗುಳ್ಳವ್ವನ ಆಚರಣೆಯೂ ಸಹ ಒಂದು. ಈ ಹಬ್ಬ ಉತ್ತರ ಕರ್ನಾಟಕದಲ್ಲಿ ವಿಶಿಷ್ಟವಾಗಿದೆ.

ಭೂತಾಯಿ ಮಳೆಯಿಂದ ಸಂತೃಪ್ತಿಗೊಳ್ಳುತ್ತಾಳೆ. ರೈತಾಪಿ ವರ್ಗದವರು ಆಗ ತಾನೇ ಬಿತ್ತನೆ ಕೆಲಸವನ್ನು ಪ್ರಾರಂಭಿಸಿರುತ್ತಾರೆ. ತಾವು ಬಿತ್ತನೆ ಮಾಡಿದ ಪೈರುಗಳು ಸಮೃದ್ಧವಾಗಿ ಬೆಳೆಯಬೇಕೆಂಬ ಹಂಬಲವನ್ನು ಎಲ್ಲಾ ಕೃಷಿಕರು ಹೊಂದಿರುತ್ತಾರೆ. ಅದಕ್ಕೆ ಭೂಮಿತಾಯಿ ಆಶೀರ್ವಾದ, ಅತ್ಯವಶ್ಯಕವಾಗಿರುತ್ತದೆ. ಈ ಎಲ್ಲಾ ಭಾವನೆಗಳಿಂದ ಕೃಷಿಕರು ಭೂತಾಯಿಯ ಪ್ರತೀಕವಾದ ಮಣ್ಣನ್ನು ಪೂಜಿಸಲು ಪ್ರಾರಂಭಿಸಿದರೆಂದು ಊಹಿಸಬಹುದು. ಈ ಭಾವನೆ ನಮ್ಮ ಜನಪದರ ಮುಗ್ಧತೆಯನ್ನು ಪ್ರತಿಬಿಂಬಿಸುತ್ತದೆ. ಹಾಗೆಯೇ ಈ ಗುಳ್ಳವ್ವ ಎಂಬ ಕಾಲ್ಪನಿಕ ದೇವರನ್ನು ಪೂಜಿಸಲು ತೊಡಗಿದರೆಂದು ಕಂಡುಬರುತ್ತದೆ. ಮಣ್ಣಿನ ಮುದ್ದೆಯನ್ನು ಸ್ತ್ರೀ ಆಕಾರದಲ್ಲಿ ನಿರ್ಮಿಸಿ, ಅದಕ್ಕೆ 'ಗುಳ್ಳವ್ವ' ಎಂಬ ಹೆಸರಿನಿಂದ ಕರೆಯತೊಡಗಿದರು. ಗುಳುಕಲವ್ವ>ಗುಳ್ಳವ್ವ>ಗುರ್ಜಿ ಎಂಬ ಹೆಸರು ರೂಢಿಗೆ ಬಂದಿತು.

"ಗುಳ್ಳವ್ವ ದೇವರಲ್ಲ, ಉಡಕಿ ಗಂಡನಲ್ಲ", "ಗುಳ್ಳವ್ವಗ ಗಂಡ ಇಲ್ಲ, ಜೋಕುಮಾರಗ ಹೆಂಡ್ತಿ ಇಲ್ಲ" ಎಂಬ ಗಾದೆ ಪ್ರಚಲಿತದಲ್ಲಿದ್ದರೂ ಸಹ ಗುಳ್ಳವ್ವ ದೇವರಂತೆ ಜನಪದರಿಂದ ಆರಾಧನೆಗೊಂಡು ಬರುತ್ತಿದ್ದಾಳೆ. ಹೆಣ್ಣು ಮಕ್ಕಳಿಗಾಗಿಯೇ ಮೀಸಲಾದ ಇಂತಹ ಆಚರಣೆಗಳು ಹಳ್ಳಿಗರಲ್ಲಿ ಇಂದಿಗೂ ಜೀವಂತವಾಗಿವೆ. 'ಗುಳ್ಳವ್ವ' ಪದದ ವ್ಯುತ್ಪತ್ತಿಯ ಬಗ್ಗೆ ಇರುವ ವಿಚಾರಗಳು ಈ ತೆರನಾಗಿವೆ.

ಗೋಲ (ಪೃಥ್ವಿ), ಅವ್ವ(ತಾಯಿ) = ಗೋಲವ್ವ(ಭೂತಾಯಿ, ಭೂಮಿತಾಯಿ) ಗೋಲ>ಗುಲ್ಲ>ಗುಳ್ಳ> ಗುಳ್ಳವ್ವ>ಗುರ್ಜಿ ಎಂಬ ಪದ ರೂಢಿಗೆ ಬಂದಿರಬೇಕು. ಗುಳ್ಳ(ಗಿಡ್ಡ, ಕುಳ್ಳಿ) ಅವ್ವ=ಗುಳ್ಳವ್ವ ಸುಂದರ ವಾಗಿದ್ದು, ಅಕಾಲ ಮರಣ ಹೊಂದುವುದು ಗುರುಳಿ. ಅಂತೆಯೇ ಇವಳೂ ಸಹ ಸುಂದರವಾಗಿದ್ದು, ಅಕಾಲ ಮರಣಕ್ಕೆ ತುತ್ತಾಗಿದ್ದಾಳೆ. ಗುಳ್ಳೆವ್ವ>ಗುಳ್ಳುವ್ವ ಆಗಿರಬಹುದು!?

ಮಣ್ಣೆತ್ತಿನ ಅಮವಾಸ್ಯೆಯಿಂದ, ನಾಗರ ಅಮವಾಸ್ಯೆಯವರೆಗೆ ಅಂದರೆ ಆಷಾಢ ಮಾಸದ ತಿಂಗಳಿನಲ್ಲಿ ಬರುವ ನಾಲ್ಕು ಇಲ್ಲವೇ ಐದನೆಯ ಮಂಗಳವಾರ ಹಾಗೂ ಬುಧವಾರಗಳಂದು ಗುಳ್ಳವ್ವನ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬದ ವಿಶೇಷತೆ ಏನೆಂದರೆ ಹನ್ನೆರಡು ವರ್ಷದೊಳಗಿನ ಬಾಲಕಿಯರು ಈ ಹಬ್ಬದಲ್ಲಿ ಭಾಗವಹಿಸುತ್ತಾರೆ. ಆಗ ತಾನೆ ವೈವಾಹಿಕ ಜೀವನಕ್ಕೆ ಪ್ರವೇಶ ಮಾಡಿದ ಹೆಂಗಳೆಯರು ಈ ಹಬ್ಬಕ್ಕಾಗಿ ತವರು ಮನೆಗೆ ಬರುವ ಪದ್ಧತಿ ಉಂಟು. ಆಷಾಢ ಮಾಸದಲ್ಲಿ ಹೊಸ ಸೊಸೆ ಅತ್ತೆಯ ಮನೆಯಲ್ಲಿರಬಾರದು ಎಂಬ ಜನಪದರ ನಂಬಿಕೆಯಿದೆ. ಬಹುಶಃ ಗುಳ್ಳವ್ವನ ಹಬ್ಬಕ್ಕೆ ಹೋಗಲು ಅವರಿಗೆ ಅನುಕೂಲವಾಗಿರಬೇಕೆಂಬುದೇ ಈ ಲೋಕೋಕ್ತಿಯ ಹಿನ್ನೆಲೆಯಾಗಿದ್ದಿರಬಹುದು.

ಗುಳ್ಳವ್ವನ ಹಬ್ಬದಲ್ಲಿ ಮನರಂಜನೆಯ ಹಾಡು, ಆಟ-ಪಾಟಗಳು, ಮನದಣಿ ತಿನಿಸು ಇವು ಮುಖ್ಯ. ಹೊಸ ವಾತಾವರಣದಲ್ಲಿ ಹೊಂದಿಕೊಳ್ಳಲು ಸಾಧ್ಯವಾಗದೇ ನವ ವಿವಾಹಿತ ತರುಣಿಗೆ ಮನೆಯತ್ತ ಹಂಬಲವಿರುವುದು ಸಹಜವೆಂದೇ ಹೇಳಬಹುದು. ಪ್ರತಿಯೊಬ್ಬ ಹೆಣ್ಣುಮಕ್ಕಳು ಸ್ವಾಭಾವಿಕವಾಗಿ ತನ್ನ ತವರಿನ ಹಂಬಲವನ್ನು ಹೊಂದಿರುತ್ತಾಳೆ. ತನ್ನ ತವರಿನ ಸದಸ್ಯರು ತನ್ನನ್ನು ಕರೆದುಕೊಂಡು ಹೋಗಲು ಬಾರದೇ ಇದ್ದಾಗ ಅವಳು

ಆಷಾಢ ಮಾಸ ಬಂದೀತವ್ವ
ಅಣ್ಣಾ ಬರಲಿಲ್ಲ ಕರಿಯಾಕೆ
ಎಷ್ಟು ನೋಡಲಿ ಅಣ್ಣ ನದಾರಿ | ಸುವ್ವನಾರಿ ||
ರೊಟ್ಟಿ (ಗಿಟ್ಟಿ) ಮಾಡಿಕೊಂಡು
ಎತ್ತಿನ ಮ್ಯಾಲ ಹೇರಿಕೊಂಡು
ಯಾವಾಗ ನೋಡೇನವ್ವ ತಾಯಿಮಾರಿ | ಸುವ್ವನಾರಿ ||
ಗುಳ್ಳವ್ನ ಮಣ್ಣ ತರಲಿಲ್ಲ |
ಗುಲಗಂಜಿ ಹಚ್ಚಿ ಆಡಲಿಲ್ಲ |
ಸುಳ್ಳೆ ಬಂತಲ್ಲವ್ವ ನಾಗರ ಪಂಚಮಿ | ಸುವ್ವನಾರಿ ||

ಎಂಬುದಾಗಿ ಪರಿತಪಿಸುತ್ತಾಳೆ. ಆ ಸಮಯದಲ್ಲಿ ಅವಳ ಅಣ್ಣ ಬಂದು ತಂಗಿಯನ್ನು ಕರೆದುಕೊಂಡು ಹೋದಾಗ ಅವಳಿಗೆ ಸಮಧಾನ ಆಗುತ್ತದೆ; ಹಸಿವಾದಾಗ ಊಟ ಮಾಡಿದ ಅನುಭವ ಉಂಟಾಗುತ್ತದೆ.

ಹೊತ್ತು ಮುಳುಗು ವ್ಯಾಳ್ಯಾದೊಳಗ
ದೀಪಾ ಹಚ್ಚು ವ್ಯಾಳ್ಯಾದೊಳಗ
ಅಣ್ಣ ಕರಿಯಾಕ ಬಂದಾನ ನಾರಿ | ಸುವ್ವನಾರಿ ||
ತಾಯಿ ಬಂದು ನೀರು ಕೊಟ್ಲು
ತಾಯಿ ಮಾರಿ ಕಂಡೇನವ್ವ |
ಹಸಿದ ಹೊಟ್ಟಿ ಉಂಡಾಂಗಾತ ನಾರಿ | ಸುವ್ವನಾರಿ ||

ಆಷಾಢ ಮಾಸದಲ್ಲಿ ಪ್ರತಿ ಮಂಗಳವಾರ ಹತ್ತು ಗಂಟೆಯ ಹೊತ್ತಿನಲ್ಲಿ ಆ ಓಣಿಯಲ್ಲಿದ್ದ ಹೆಣ್ಣು ಮಕ್ಕಳು ಬಂದು ಸೇರುತ್ತಾರೆ. ಅವರೆಲ್ಲರ ತಲೆಯ ಮೇಲೆ ಒಂದೊಂದು ಚೌಕಿಮಣೆ ಇರುತ್ತದೆ. ಅದರ ಮೇಲೆ ಅರಿವೆಯಲ್ಲಿ (ಬಟ್ಟೆ) ಕಟ್ಟಿದ ಮಂಡಕ್ಕಿ (ಮಂಡಾಳು, ಚುರುಮರಿ) ಹುರಿದ ಅರಳು, ಹುರಿದಕಡಲೆ, ವಿವಿಧ ಬಗೆಯ ಸಿಹಿ(ಉಂಡಿ) ತಿನಿಸುಗಳ ಗಂಟು ಇರುತ್ತದೆ. ಇವರೆಲ್ಲರೂ ಸೇರಿ ಹಾಡುತ್ತಾ ಸಮೀಪದಲ್ಲಿರುವ ಹೊಳೆ, ಹಳ್ಳ, ಕೆರೆ, ಇಲ್ಲವೆ ಬಾವಿಗೆಬರುತ್ತಾರೆ ಬರುವ ಸಂದರ್ಭದಲ್ಲಿ

ಓಹೊ ! ಗುಳ್ಳವ್ವ ನಾಡೋಣ ಬಾ |
ಕೆರಿದಂಡಿ ಮಣ್ಣ ತರೋಣ ಬಾ |
ಗಿಂಡಿಲೆ ನೀರ ಹಾಕೋಣ ಬಾ |
ಕಾಡಿನ ಹೂವ ಚುಚ್ಚೋಣ ಬಾ |
ಓಹೋ ! ಗುಳ್ಳುವ್ವನಾಡೋಣ ಬಾ ||

ಈ ರೀತಿಯ ಹಾಡುಗಳನ್ನು ಹಾಡುತ್ತಾ ಬರುತ್ತಾರೆ. ಜಲಾಶಯದ ದಂಡೆಯಲ್ಲಿರುವ ಅರಲ (ಅರ್ಲು, ಮಣ್ಣು)ನ್ನು ತೆಗೆದುಕೊಂಡು ದುಂಡನೆಯ ಆಕಾರದಲ್ಲಿ ಮಾಡಿ, ಒಂದು ಮಣೆಯ ಮೇಲಿಡುತ್ತಾರೆ. ಅರಿಷಿಣ, ಕುಂಕುಮ ಹಾಗೂ ಹೂಗಳಿಂದ ಪೂಜಿಸುತ್ತಾರೆ. ತಾವು ತಂದಿರುವ ತಿನಿಸುಗಳನ್ನೆ ನೈವೇದ್ಯ ಮಾಡುತ್ತಾರೆ. ತದನಂತರ ಎಲ್ಲರೂ ಸೇರಿ ಅದನ್ನು ತಿಂದು ಹಾಡುತ್ತಾ ಮನೆಗೆ ಬರುವ ರೂಢಿ. ಅವರು ಫಲಾಹಾರ ತಿನ್ನುವ ಸಮಯದಲ್ಲಿ

ಇವನೆಂಥ ಗಂಡ ಒಣಕಿಮಿಂಡ |
ಹುಚ ನನ್ನ ಹಾಟ್ಯಾ ತಳವಾರ ತಾಟ್ಯಾ |
ಗುಳ್ಳವ್ವ.... ಗುಗ್ಗರಿ ಬಿದ್ದಾವ ಆಯ್ಕೊಂಡು ತಿನ್ನೋ ತಳವಾರ.

ಎಂದು ತಳವಾರನನ್ನು ಬಯ್ಯುತ್ತಾರೆ. ಇವತ್ತಿನ ಪೊಲೀಸ್ ಕೆಲಸವನ್ನು ಅಂದು ತಳವಾರನೇ ನಿರ್ವಹಿಸುತ್ತಿದ್ದನು. ಅಂತಹ ಸಂದರ್ಭದಲ್ಲಿ ಬಾಲಕಿಯರ ತಿನಿಸನ್ನು ಕಾಡಿಸಿ ತಿನ್ನುತ್ತಿರಬಹುದು. ಹಾಗಾಗಿ ತಳವಾರನನ್ನು ಬಯ್ಯುವುದು ಸಂಪ್ರದಾಯವಾಗಿ ಬಂದಿರಬಹುದು. ಹೆಂಗಳೆಯರು ಹೀಗೆ ತಂದ ಮಣ್ಣನ್ನು ಮುದ್ದೆಯಾಕಾರವನ್ನು ಮಾಡಿ, ತಿದ್ದಿ, ತಿದ್ದಿ ಅದಕ್ಕೊಂದು ರೂಪಕೊಡುತ್ತಾರೆ. ಮೊದಲನೆಯ ಮಂಗಳವಾರ ಕೋಟೆಯಲ್ಲಿ ಲಿಂಗ, ಎರಡನೆಯ ಮಂಗಳವಾರ ನವಿಲು, ಮೂರನೆಯ ಮಂಗಳವಾರ ನಂದಿ, ಐದು ವಾರಗಳ ಆಚರಣೆ ಬಂದರೆ ನಾಲ್ಕನೆಯ ಮಂಗಳವಾರ ಕುಂಬಾರರಿಂದ ತಂದ ತಿಗರಿಗುಳವ್ವ ಹೀಗೆ ಇರುವುದು ವಾಡಿಕೆ. ಆದರೆ ಆಯಾವಾರ ಇದೇ ಆಕಾರವಿರಬೇಕೆಂಬ ನಿಯಮ ಇರುವುದಿಲ್ಲ. ಹೀಗೆಮಾಡಿದ ಕೋಟೆಯಲ್ಲಿ ಒಂದು ಸ್ತ್ರೀ ಮೂರ್ತಿ ಮಾಡಿ ಕೂಡಿಸುವರು. ಇವಳೇ ಗುಳ್ಳವ್ವ. ಇವಳ ಮುಂದೆ ಇನ್ನೊಂದು ಹೆಣ್ಣಿನಾಕಾರದ ಗೊಂಬೆ ನಿಲ್ಲಿಸುತ್ತಾರೆ. ಇವಳೇ ಗೊಗ್ಗವ್ವ. ಇದು ಮೊದಲು ದೀಪಸ್ಥಂಬವಾಗಿದ್ದು ನಂತರ ಮಾನವಾಕೃತಿ ತಾಳಿದಂತಿರುತ್ತದೆ. ದೀಪದ ಗೊಗ್ಗವ್ವ ಎಂಬ ಹೇಳಿಕೆ ಇದನ್ನು ಪುಷ್ಟೀಕರಿಸುತ್ತದೆ. ಗೊಗ್ಗವ್ವ ಒಂದು ವಿದೂಷಕ ಮೂರ್ತಿಯಂತಿರುವುದು. ವೀರಶೈವರಲ್ಲಿ ಗೊಗ್ಗವ್ವ ಎಂಬ ಒಬ್ಬ ಶಿವಶರಣೆ ಆಗಿ ಹೋಗಿದ್ದಾಳೆ. ಗೊಗ್ಗವ್ವಳಿಗೆ ಕೊಂತೆವ್ವ, ಗುಳುಕವ್ವ ಎಂಬ ಪರ್ಯಾಯ ಹೆಸರೂ ಇರುತ್ತದೆ.

ಹೀಗೆ ಅಂದವಾಗಿ ಸಿದ್ಧಗೊಳಿಸಿದ ಗುಳ್ಳವ್ವನಿಗೆ ಬಣ್ಣದಲ್ಲಿ ಅದ್ದಿದ ಕುಸುಬೆಕಾಳು. ಜವೆ ಹಾಗೂ ಗುಲಗಂಜಿಗಳಿಂದ ಚುಚ್ಚಿ ಸಿಂಗರಿಸುವರು. ಅವರ ಮುಂದೆ ಅರಲಿನ ಖಣ ಹಣ್ಣುಗಳನ್ನು ಮಾಡಿ

ಹೂಗಳನ್ನು ಏರಿಸುವರು. ಅರಳೆಯ ಮೂರು ಬತ್ತಿಗಳನ್ನು ಅವಳ ಹಣೆಗೆ ಸಮಾನಾಂತರವಾಗಿ ಹಚ್ಚುತ್ತಾರೆ. ಸಂಜೆ ಪ್ರಣತಿಯ ದೀಪ ಹಚ್ಚಿಟ್ಟು ನೈವೇದ್ಯ ಮಾಡಿ ಪೂಜೆ ಮಾಡುತ್ತಾರೆ. ರಾತ್ರಿಯ ಹೊತ್ತು ಬಾಲೆಯರು ಒಟ್ಟುಗೂಡಿ ಮನೆ ಮನೆಗೆ ಹೋಗಿ ಗುಳ್ಳವ್ವನಿಗೆ ಆರತಿ ಮಾಡಿ ಹಾಡು ಹೇಳುತ್ತಾರೆ. ಆಗ ಅರಲಿನ ಖಣ ಹಣ್ಣುಗಳಿಂದ ಉಡಿತುಂಬುವ ಪದ್ಧತಿಯಿದೆ. ಆರತಿ ಕಾಲಕ್ಕೆ ಹಾಡುವ ಹಾಡು

೧. ಒಂದ ಮೂಲ್ಯಾಗ ಒಂದು ಪತ್ತರಿ
ಸಾಲ ಮೂಲ್ಯಾಗ ಬೆಲ್ಲಪತ್ತರಿ
ಪತ್ತರ್ಯಾಗ ಪನಿವಾರ
ಗುಳ್ಳವ್ವ ನಿನ್ನ ಮುತ್ತಿನ ಜನಿವಾರ ||

೨. ಒಂದ ಸೇರ ಎಣ್ಣಿ ತಂದು
ಒಂದೆಳಿ ಬತ್ತಿ ಮಾಡಿ
ಕಲ್ಲಂಗಡ್ಯಾಗ ಕಲ್ಲಪ್ಯಾಟ್ಯಾಗ
ಕಂಡಿರೇ ನಮ್ಮ ಗುಳ್ಳವ್ವನ ||
ಎರಡು ಸೇರ ಎಣ್ಣಿ ತಂದು
ಎರಡೆಳಿ ಬತ್ತಿ ಮಾಡಿ
ಕರಿಯ ಸೀರಿಯನುಟ್ಟು, ಕರಿಯ ಕುಪ್ಪಸ ತೊಟ್ಟು
ಕರನಾಟಕದವರು ನಮ್ಮವರು | ನಾರಿ | ಗುಳ್ಳವ್ವ
ಕರಕೀಯ ಮುಯ್ಯ ತಂದಾರ | ನಾರಿ ||

ಈ ರೀತಿಯಲ್ಲಿ ಹಾಡು ಮುಂದುವರಿಯುತ್ತದೆ. ಬಿಳಿಯ ಬಟ್ಟೆಗಳನ್ನು ಧರಿಸಿದ ಬಿಳಿಮಲ್ಲಿಗೆ ಮುಯ್ಯ ತಂದರೆಂದೂ, ಕೆಲವು ವಸ್ತ್ರಗಳನ್ನು ಧಿರಿಸಿದ ಮುಲ್ಲಾಡದವರು ಸಂಪಿಗೆ ಮುಯ್ಯತಂದರೆಂದೂ ಹಾಡು ಸಾಗುತ್ತವೆ.

೩. ಗೋದಿ ಹೊಲಕ ಹೋಗಿದ್ದೆನಾ
ಗೋದಿ ಸರಾ ಹರತ
ಹ್ಯಾಂಗ ಹೋಗಲಿ ಮನ್ಯಾಗ
ನಮ್ಮತ್ತಿ ಬೈತಾಳ ನನಗೆ
ಕೇಳ ಗೆಳತಿ ಕೇಳ | ಹೇಳ ಗೆಳತಿ ಹೇಳ ||
ಕಡ್ಲಿ ಹೊಲಕ್ಕೆ ಹೋಗಿದ್ದೆನಾ
ಕಡ್ಲಿ ಸರಾ ಹರತ |

ಹ್ಯಾಂಗ ಹೋಗಲಿ ಮನ್ಯಾಗ
ನಮ್ಮತ್ತಿ ಬೈತಾಳ ನನಗ
ಕೇಳ ಗೆಳತಿ ಕೇಳ | ಹೇಳಗೆಳತಿ ಹೇಳ ||

೪. ಮಾವಿನ ಹೂ ಕೊಯ್ದು ತಂದೀನ
ಗುಳ್ಳವ್ವ ನಿನ್ನ ಮಾಯಮಾಡಿ ಕರದ ತಂದೀನ
ನೀ ಬಂದೀದೆಂತ ನಾ ಬಂದೀನ ||
ಜಾಲಿ ಹೂ ಕೊಯ್ದು ತಂದೀನ
ಗುಳ್ಳವ್ವ ನಿನ್ನ ಮಾಯಾ ಮಾಡಿ ಕರದ ತಂದೀನ
ನೀ ಬಂದೀದೆಂತ ನಾ ಬಂದೀನ ||
ಜಾಲಿ ಹೂ ಕೊಯ್ದು ತಂದೀನ
ಗುಳ್ಳವ್ವ ನಿನ್ನ ಮಾಯಮಾಡಿ ಕರದ ತಂದೀನ
ನೀ ಬಂದೀದೆಂತ ನಾ ಬಂದೀನ ||

೫. ಒಂದ ಗಣಕಿ ಕಬ್ಬ ನಾ ಮಾಡಿನಿ ತುಪ್ಪ |
ಭೀಮಾರತಿ ಹೊಳಿಯ, ಹೊಳಿ ನೀರ ತಿಳಿಯ |
ಗುಳ್ಳವ್ವ ನಿನ್ನ ಸಳಿ ಬಾಗಿಲ ತೆರಿಯs ತೆರಿಯs ||

ಹೀಗೆಯೇ ಎರಡು ಗಣಕಿ ಕಬ್ಬ ...ಇತ್ಯಾದಿಯಾಗಿ ಹಾಡು ಮುಂದುವರಿಯುತ್ತದೆ.

೬. ಮುತ್ತಿನಂಥ ಗುಳ್ಳವ್ವನಿಗೆ ಮುತ್ತೈದೆರೆಲ್ಲಾ ಕೂಡಿ |
ಮುತ್ತಿನ ಆರತಿಯ ಎತ್ತಿರೆ ||
ಸಣ್ಣ ಮಾರಿಯ ಮಲ್ಲೇಶನ ಮಡದಿಗೆ
ಸಡಗರದಿಂದ ನೀವು ಎತ್ತಿರೆ ||
ಮಂದಗಮನೇರು ನೀವು ಚಂದದಿಂದಲಿ
ಮಾಣಿಕದಾರತಿಯ ಎತ್ತಿರೆ ||

ಹೀಗೆ ಕೆಲವು ಹಾಡುಗಳನ್ನು ಮಕ್ಕಳು ಸರಾಗವಾಗಿ ಹಾಡುತ್ತಾರೆ. ಮಂಗಳವಾರ ರಾತ್ರಿ ಆರತಿ ಮಾಡಲು ಬಂದ ಹುಡುಗಿಯರು ಬೇರೆಯವರ ಮನೆಯಲ್ಲಿ ಗೊಗ್ಗವ್ವಳನ್ನು ಅಪಹರಿಸಿ ತಂದು ಬೀದಿಯಲ್ಲಿ ಒನಕೆಯಿಂದ ಬಡಿಯುತ್ತಾರೆ. ಆಗ ಹೇಳುವ ಹಾಡು ಈ ರೀತಿಯಲ್ಲಿರುತ್ತದೆ.

ಗೊಗ್ಗಿ ಕುಟ್ಟಿನವ್ವ ಗೊಗ್ಗಿ ಕುಟ್ಟಿನವ್ವ |
ಬಣ್ಣದ ಒನಕೀಲೆ ||
ಅವರು ಕುಟ್ಯಾರವ್ವ ಅವರು ಕುಟ್ಯಾರವ್ವ |

ಮುರುಕ ಒನಕೀಲೆ ||
ಅಕ್ಕಿ ಕೇರೇನವ್ವ ಅಕ್ಕಿ ಕೇರೇನವ್ವ |
ಮುತ್ತಿನ ಸುಪಲೀಲೆ ||
ಅವರು ಕೇರ್ಯಾರವ್ವ ಅವರು ಕೇರ್ಯಾರವ್ವ
ಮುರುಕ ಸುಪಲೀಲೆ ||
ಅನ್ನಾ ಮಾಡೇನವ್ವಾ ಅನ್ನಾ ಮಾಡೇನವ್ವ
ಬಂಗಾರ ತಪೇಲ್ಯಾಗ ||
ಅವರು ಮಾಡ್ಯಾರವ್ವ ಅವರು ಮಾಡ್ಯಾರವ್ವ |
ಒಡಕ ಗಡಿಗ್ಯಾಗ ||
ನಾವು ಉಂಡೇನವ್ವ ನಾವು ನಾವು ಉಂಡೇನವ್ವ
ಬೆಳ್ಳೀ ತಟ್ಟ್ಯಾಗ ||
ಅವರು ಉಂಡಾರವ್ವ ಅವರು ಉಂಡಾರವ್ವ |
ಮುಕ್ಕ ಪರ್ಯಾಣದಾಗ ||
ನಾವು ಮಲಗೀವವ್ವ ನಾವು ಮಲಗೀಗವ್ವ
ಸೆಳಿs ಮಂಚದಾಗ ಮತ್ತ ರತನ ಕಂಬಳ್ಯಾಗ ||
ಅವರು ಮಲಗ್ಯಾರವ್ವ ಅವರು ಮಲಗ್ಯಾರವ್ವ |
ಅಡಕಲ ಸಂದ್ಯಾಗ ಮತ್ತ ಹರಕ ದುಬಟ್ಯಾಗ ||

ಇಂತಹ ಹಾಡುಗಳನ್ನು ಹಾಡುವಾಗ ಬೇರೆ ಬೇರೆ ಬಣಗಳ ಎರಡು ಗುಂಪುಗಳಿದ್ದು, ಅವರು ಪರಸ್ಪರ ತಮಾಷೆಯ ಮಾತುಗಳನ್ನಾಡುತ್ತಾರೆ. ಆಗ ಉಳಿದವರು ನಗುತ್ತಾರೆ. ತದನಂತರ ಸಹಭೋಜನ ದೊಂದಿಗೆ ಅಂತ್ಯವಾಗುತ್ತದೆ. ಮರುದಿವಸ (ಬುಧವಾರ) ಗುಳ್ಳವ್ವಳ ವಿಸರ್ಜನೆ ಇರುತ್ತದೆ. ಅಂದು ಮಧ್ಯಾಹ್ನದ ಹೊತ್ತಿಗೆ ಬಗೆ ಬಗೆಯ ಭಕ್ಷ್ಯ ಭೋಜ್ಯಗಳೊಂದಿಗೆ ಜಲಾಶಯಗಳ ತೀರಕ್ಕೆ ಹೋಗುತ್ತಾರೆ. ಹೋಗುವಾಗ ಮಕ್ಕಳು ಹಾಡುತ್ತಾ ಇರುತ್ತಾರೆ. ನಿಗದಿತ ಸಮಯದಲ್ಲಿ ಆಯಾ ಸ್ಥಳವನ್ನು ತಲುಪಿದಾಗ ಸಾಮೂಹಿಕ ಊಟವನ್ನು ಮಾಡುತ್ತಾರೆ. ಎಳ್ಳು ಹಚ್ಚಿದ ಸಜ್ಜೆಯ ರೊಟ್ಟಿ, ಕೆನೆಮೊಸರು, ಬದನೆಯ ಕಾಯಿಯಪಲ್ಯ, ಶುಂಠಿ, ಏಲಕ್ಕಿ, ದ್ರಾಕ್ಷಿಗಳಿಂದ ಕೂಡಿದ ಮೊಸರನ್ನ, ಪುಂಡಿಯ ಪಲ್ಲೆ, ಮೊಳಕೆ ಬಂದಿರುವ ಎಲ್ಲಾ ದ್ವಿದಳ ಧಾನ್ಯಗಳ ಪಲ್ಲೆ. ಸಿಹಿ ಖಾದ್ಯಗಳ ಊಟ ಇರುತ್ತದೆ. ನಂತರ ಆಟ ಪ್ರಾರಂಭವಾಗಿ ಹಾಡನ್ನು ಹೇಳುತ್ತಾರೆ.

ಅಲ್ಲಿ ಸೇರಿಸುವ ಮಕ್ಕಳಲ್ಲಿ ಎರಡು ಗುಂಪುಗಳಾಗುತ್ತವೆ. ಒಂದು ಪಂಗಡ ವಧುವಿನ ಪಕ್ಷದ್ದು. ಇನ್ನೊಂದು ವರನ ಪಕ್ಷದ್ದು. ಈ ಎರಡು ಗುಂಪಿನಲ್ಲಿ ಹಾಡಿನ ಪ್ರಶ್ನೋತ್ತರ ನಡೆಯುತ್ತದೆ. ಮೊದಲಿಗೆ

ಗಂಡಿನ ಕಡೆಯವರು

ಗುಜು ಗುಜು ಮಾಪುರೆ ಹೆಣ್ಣು ಕೊಡಿರೆ
ಗುಜೇರಿ ಮಾಪುರೆ ಹೆಣ್ಣು ಕೊಡಿರೆ ||
ಎಂದು ಕೇಳುತ್ತಲೇ ಹೆಣ್ಣಿನ ಕಡೆಯವರು
ಗುಜು ಗುಜು ಮಾಪುರೆ ಯಾತರವರು |
ಗುಜೇರಿ ಮಾಪುರೆ ಯಾತರವರು |
ಗುಜೇರಿ ಮಾಪುರೆ ಯಾತರವರು |
ಸಾಮದಂಡಿಲ್ಯಾತರದವರು ||
ಶ್ರೀ ಲೋಕಕ್ಕೆಲ್ಲಾ ಯಾತರವರು ?

ಎಂಬುದಾಗಿ ಅವರ ಸಮುದಾಯವನ್ನು ವಿಚಾರಿಸುವ ರೂಢಿ ಇದೆ. ಆಗ ಗಂಡಿನ ಪಕ್ಷದವರು ಹೊಲೆಯರು. ಕುರುಬರು, ಕಬ್ಬಲಿಗರು, ಬೇಡರು, ಹಾರುವರು ಮುಂತಾಗಿ ಹೇಳುತ್ತಾ ಸಾಗುತ್ತಾರೆ. ಹೆಣ್ಣಿನ ಕಡೆಯವರು ಹೆಣ್ಣನ್ನು ಕೊಡಲು ನಿರಾಕರಿಸುತ್ತಾರೆ. ನಂತರ ಮೇಲ್ವರ್ಗದ ಸಮುದಾಯಕ್ಕೆ ಸೇರಿದವರು ಎಂದಾಗ ಒಪ್ಪಿ ಹೆಣ್ಣನ್ನು ಕೊಡಲು ಒಪ್ಪುತ್ತಾರೆ. ಆ ನಂತರ ಹೆಣ್ಣಿಗೆ ಹಾಕಬೇಕಾದ ಅಲಂಕಾರಗಳ ಬಗ್ಗೆ ಹಾಡನ್ನು ಹೇಳುತ್ತಾರೆ. ಕನ್ಯಾಮಣಿಗೆ ಏನೇನು ಆಭರಣಗಳನ್ನು ಹಾಕುತ್ತೀರಿ ಎನ್ನಲು-

ವಂಕಿ ಸರಗೀಯ ಇಡತೀವಿ
ಹೆಣ್ಣು ಕೊಡು ಅತ್ತಿಗೆ ಹೆಣ್ಣುಕೊಡು ಅತ್ತಿಗೆ
ಎಂಬ ಗಂಡಿನವರ ಉತ್ತರ, ಆಗ ಹೆಣ್ಣಿನವರು-
"ವಂಕಿ ಸರಗೀಯ ಬಂಗಾರ
ಮೈಯೊಳು ಅದು ಭಾರ
ಮಗಳಿಗೆ ದುಡಿತದ
ಕಟಕಟೆ ಬಲು ಜೋರಾ
ನಿನ್ನಂಥ ಬಿಡಕಿಗೆ

ಹೆಣ್ಣಿಲ್ಲ ಹೆಣ್ಣಿಲ್ಲ ಎಂದು ನಿರ್ದಾಕ್ಷಿಣ್ಯವಾಗಿ ಹೇಳುವರು. ಕೊನೆಯಲ್ಲಿ ಎರಡೂ ಪಕ್ಷದವರು ಹೊಂದಾಣಿಕೆ ಮಾಡಿಕೊಂಡು ಒಂದು ಜೊತೆ ಮಕ್ಕಳನ್ನು ಆರಿಸಿ ಮದುವೆ ಮಾಡಿ ಅಕ್ಷತೆ ಹಾಕುತ್ತಾರೆ. ಇವರೇ 'ಚಿನಮಿರಿ' ಮತ್ತು 'ಮಲ್ಲೇಶಿ' ಎಂಬ ದಂಪತಿಗಳು. ಆಗ

ಅಂಗಡ್ಯಾಗ ಕಸ ಕಸಿ ; ಗಂಡ ಹೆಂಡ್ತಿ ಕುಶಿಕುಶಿ
ಅಂಗಡ್ಯಾಗ ಲಾಬಾನ ; ಗಂಡ ಹೆಂಡ್ತಿ ಸೋಬಾನ

ಮಾಡದಾಗ ಸೂಜಿ : ಗುಳ್ಳವ್ವ ನಿನ್ನ ಪೂಜಿ
ಮಾಡದಾಗ ಡಬ್ಬಣ : ಗುಳ್ಳವ್ವ ನಿನ್ನ ನಿಬ್ಬಣ

ಈ ರೀತಿಯಲ್ಲಿ ಎರಡೂ ಪಂಗಡದವರು ಒಂದೊಂದಾಗಿ ಹೇಳುತ್ತ ಸಂತಸಪಡುತ್ತಾರೆ. 'ಗುಳ್ಳವ್ವಗ ಗಂಡ ಇಲ್ಲ, ಜೋಕಮಾರಗ ಹೆಂಡ್ತಿ ಇಲ್ಲ' ಎಂಬ ಗಾದೆ ಪ್ರಚಲಿತವಿದ್ದರೂ ಇಲ್ಲಿ ಮದುವೆ ನಡೆಯುತ್ತಿರುವುದು ಗಮನಿಸಬೇಕಾದ ಅಂಶ. ಮದುವೆಯ ನಂತರ ಗಂಡಿನವರು ಹೆಣ್ಣನ್ನು ಕರೆತರಲು ಹೋದಾಗ, ಅವಳು ಅನಾರೋಗ್ಯದಿಂದ ಬಳಲುತ್ತಿರುತ್ತಾಳೆ. ಕೆಲ ದಿವಸಗಳ ನಂತರ ಹೋದಾಗಲೂ ಇದೇ ರೀತಿ ಆಗುತ್ತದೆ. ಮೂರನೆಯ ಬಾರಿ ಹೋದಾಗ ಅವಳು ಸಾವನ್ನಪ್ಪಿರುವ ವಿಷಯವು ತಿಳಿಯುತ್ತದೆ. ಆಗ ಎಲ್ಲರೂ ಹಾಡಿಕೊಂಡು ಅಳುತ್ತಾರೆ.

ಏನ ಸತ್ತೇ ಚಿನಮಿರಿ
ನಿನ್ನ ಗಂಡ ಮಲ್ಲೇಶಿ
ಹಾವೇರಿ ಪ್ಯಾಟ್ಯಾಗ | ಬಳ್ಳೊಳ್ಳೀ ಮಾರ್ವಾಗ
ಉಳ್ಳಾಡ್ಡಿ ಹೊಡಿತಿದ್ದ
ಬಿಡಬಿಡಂತ ಬಿಡಿಸಿಕೊಳ್ಳುತ್ತಿದ್ದೇವಲ್ಲ ಚಿನಮಿರಿ.

ಅಷ್ಟರಲ್ಲಿ ಅವಳ ಗಂಡನಾದ ಮಲ್ಲೇಶಿ ಈ ಘಟನೆಯಿಂದ ಎದೆಯೊಡೆದು ಸಾಯುತ್ತಾನೆ. ಇವರೀರ್ವರ ಅಂತ್ಯ ಸಂಸ್ಕಾರ ಮಾಡಿ ಮುಗಿಸುತ್ತಾರೆ. ಇಲ್ಲಿಗೆ ಆಟ ಮುಕ್ತಾಯವಾಗುತ್ತದೆ.

ಆದರೆ ಮಳೆ ಬಾರದೇ ಇದ್ದಾಗ ಜನಪದರು ಗುಳ್ಳವ್ವಳ ಮೈತುಂಬಾ ಮುಳ್ಳು ಚುಚ್ಚಿ, ಅವಳನ್ನು ಕಂಟಿಯಲ್ಲಿ ಇಟ್ಟು ಬರುತ್ತಾರೆ. ಮುಂದೆ ಕೂಡಲೇ ಮಳೆಬಂದರೆ ಗುಳ್ಳವ್ವಳೇ ಮಳೆ ತಂದಳೆಂದು ನಂಬುತ್ತಾರೆ. ಇನ್ನು ಹಲವು ಭಾಗಗಳಲ್ಲಿ ಗುಳ್ಳವ್ವಳನ್ನು ಮುಂದಿನ ಆಷಾಢದವರೆಗೆ ಮನೆಯ ಕಂಬಿಯ ಮೇಲೆ ಇಡುವ ಪದ್ಧತಿ. ಮಕ್ಕಳು ಬುಧವಾರ ಮನೆಗೆ ಬರುವಾಗ ಹಾಡುವ ಹಾಡು

ಗುಡ್ಡಕ್ಕ ಹೋಗತೀನಿ ಗುಲಗಂಜಿ ತರತೀನಿ : ಬಂದ ಬರತಿ ಗುಳ್ಳವ್ವಾ ಗುಳ್ಳವ್ವಾ
ಮೈಸೂರಕ ಹೋಗತೀನಿ ಹೂಮಾಲಿ ತರತೀನಿ : ಎಂಬ ಬರತಿ ಗುಳ್ಳವ್ವಾ ಗುಳ್ಳವ್ವಾ
ಸುರಪೂರಕ ಹೋಗತೀನಿ ಸುರಮಾತರತೀನಿ : ಎಂದ ಬರತಿಗುಳ್ಳವ್ವಾ, ಗುಳ್ಳವ್ವಾ
ರಾಯಭಾಗಕ ಹೋಗತೀನಿ ರಾಗಿ ತರತೀನಿ : ಎಂದ ಬರತಿ ಗುಳ್ಳವ್ವಾ, ಗುಳ್ಳವ್ವಾ
ಧಾರವಾಡಕ ಹೋಗತೀನಿ ದ್ರಾಸಿ ತರತೀನಿ : ಎಂದ ಬರತಿ ಗುಳ್ಳವ್ವಾ, ಗುಳ್ಳವ್ವಾ
ಅಥಣಿಗೆ ಹೋಗತೀನಿ ಕುತನಿ ತರತೀನಿ : ಎಂದ ಬರತಿ ಗುಳ್ಳವ್ವಾ, ಗುಳ್ಳವ್ವಾ
ಹುಬ್ಬಳ್ಳಿಗೆ ಹೋಗತೀನಿ ಹಚ್ಚಡಾ ತರತೀನಿ : ಎಂದ ಬರತಿ ಗುಳ್ಳವ್ವಾ ಗುಳ್ಳವ್ವಾ

ಹೀಗೆ ಹಾಡುತ್ತ ಮನೆಗೆ ಬರುವರು.

ಗುಳ್ಳವ್ವನ ಕುರಿತು ಕೆಲವು ಕಥೆಗಳು ಪ್ರಚಲಿತವಾಗಿವೆ. ಅವುಗಳಲ್ಲಿ ಒಂದು; ಹೆಣ್ಣು ಮಕ್ಕಳು ಹುಟ್ಟುವಾಗ ದೇವರನ್ನು ಕಂಡು "ನಮಗೆ ಆಡಲು ಒಂದು ಆಟಿಗೆಯನ್ನು ಕೊಡಿರಿ" ಎಂದು ಕೇಳಿದರಂತೆ. ಆಗ ದೇವರು "ಭೂಮಿಯ ಮಣ್ಣನ್ನೇ ಅರಲು ಮಾಡಿ ನಿಮ್ಮ ಆಕಾರದ ಮೂರ್ತಿ ಮಾಡಿ 'ಗುಳ್ಳವ್ವ' ಎಂದು ಪೂಜಿಸಿರಿ" ಎಂದು ಹೇಳಿದನಂತೆ. ಅದಕ್ಕಾಗಿ ಆಷಾಢಮಾಸ ಮೀಸಲು ಎಂದು ಹೇಳಿದ ಕಾರಣ ಆಚರಣೆ ರೂಢಿಯಲ್ಲಿ ಬಂದಿದೆ ಎಂದು ಹೇಳಲಾಗುತ್ತದೆ. ಇನ್ನೊಂದು ಕಥೆ ಹೀಗಿದೆ; ಒಬ್ಬ ರಾಜನಿಗೆ ಪುತ್ರನು ಜನಿಸುತ್ತಾನೆ. ಭವಿಷ್ಯ ನುಡಿಯುವವರು ಮಗುವಿನ ಆಯುಷ್ಯ ೧೮ ವರ್ಷ ಮಾತ್ರ ಎಂದು ಹೇಳುತ್ತಾರೆ. ತಂದೆ ಇದನ್ನು ತಿಳಿದು ಯೋಚಿಸುತ್ತಾನೆ. ದಿನಗಳು ಕಳೆಯುತ್ತವೆ. ರಾಜಕುಮಾರನು ಸಾವನ್ನಪ್ಪುತ್ತಾನೆ. ಮದುವೆಯಾಗಿಲ್ಲವಾದ್ದರಿಂದ ಅವನಿಗೆ ಸದ್ಗತಿಯಿಲ್ಲವೆಂಬುದು ತಂದೆಯ ಇನ್ನೊಂದು ಚಿಂತೆ. ಶವದೊಂದಿಗೆ ಮದುವೆಯಾಗಲು ಒಪ್ಪುವ ಕುಮಾರಿಗೆ ಅರ್ಧರಾಜ್ಯಕೊಡುವುದಾಗಿ ರಾಜ ಡಂಗುರ ಸಾರಿಸುತ್ತಾನೆ. ಈ ವಿಷಯವನ್ನು ಕೇಳಿದಾಗ ಕಡುಬಡವನ ಎಂಟು ಜನ ಪುತ್ರಿಯರಲ್ಲಿ ಕೊನೆಯವಳು ಒಪ್ಪುತ್ತಾಳೆ. ಕಾರಣ, ತನ್ನ ತಂದೆಯ ಬಡತನ ದೂರಾಗುತ್ತದೆ ಎಂಬ ಚಿಂತೆ ಅವಳನ್ನು ಕಾಡುತ್ತಿರುತ್ತದೆ. ಸ್ಮಶಾನದಲ್ಲಿ ಶವದೊಂದಿಗೆ ಮದುವೆ ಮುಗಿಯುತ್ತದೆ. ಆಗ ವಿಪರೀತವಾಗಿ ಮಳೆ ಬರುತ್ತದೆ. ಅಂತ್ಯ ಸಂಸ್ಕಾರಕ್ಕೆ ಬಂದವರೆಲ್ಲ ದಿಕ್ಕಾಪಾಲಾಗುತ್ತಾರೆ. ಆದರೆ ನವವಧು ಗಂಡನ ಹತ್ತಿರವೇ ಕುಳಿತು ಬದಿಯ ಕೆಸರಿನಿಂದ ನಂದಿಯನ್ನು ತಯಾರಿಸಿ ಪೂಜೆ ಮಾಡುತ್ತಾಳೆ. ಶವದೊಂದಿಗೆ ವಿವಾಹವಾಗಿ ವಿಧವೆಯಾಗಬೇಕೇನು? ಕೃಪೆಮಾಡು ತಂದೆ ಎಂದು ನಂದಿಯನ್ನು ಪ್ರಾರ್ಥಿಸುತ್ತಾಳೆ. ಆಗ ಪ್ರಸನ್ನನಾದ ನಂದಿ ರಾಜಕುಮಾರನಿಗೆ ಪ್ರಾಣವನ್ನು ನೀಡುತ್ತಾನೆ. ಇಬ್ಬರೂ ದಂಪತಿಗಳು ಜೊತೆಯಾಗಿ ಊರಲ್ಲಿ ಬರಲು ಸರ್ವರೂ ಜಯಕಾರ ಮಾಡುತ್ತಾರೆ. ರಾಜನು ಮಗನಿಗೆ ಪಟ್ಟಕಟ್ಟಿ ತಾನೂ ಸನ್ಯಾಸವನ್ನು ಸ್ವೀಕರಿಸುತ್ತಾನೆ.

ಗುಳ್ಳವ್ವಳ ಆಚರಣೆ ಪರಸ್ಪರರಲ್ಲಿ ಪ್ರೀತಿ ವಿಶ್ವಾಸಗಳನ್ನು ಬೆಳೆಸುತ್ತದೆ. ಈ ಹಬ್ಬದಲ್ಲಿ ಕಾಣುವ ಹಳ್ಳಿಯ ಮಕ್ಕಳ ಮುಗ್ಧ ಭಾವನೆಗಳು ಮನರಂಜನೆಯನ್ನು ನೀಡಿ ಬಾಳಿನ ಎಲ್ಲಾ ದುಗುಡ, ದುಮ್ಮಾನಗಳನ್ನು ಹೋಗಲಾಡಿಸುತ್ತವೆ.

ಡಿ.ಬಿ.ನಾಯಕ ಅವರು ತಮ್ಮ 'ದೇಸೀ ಸಂಸ್ಕೃತಿ' ಎಂಬ ಕೃತಿಯಲ್ಲಿ ಹೀಗೆ ವಿವರಿಸುತ್ತಾರೆ. ನಾಗರ ಪಂಚಮಿ ಹಬ್ಬದಂದು ಬುಲಾಯಿ ಹಾಕಿದ ನಂತರ ಮೂರನೆಯ ದಿನ ಶಿರೋಳ ಶೆಟ್ಟಿಯ ಆಚರಣೆ ಮಾಡಲಾಗುತ್ತದೆ. ಕೆಸರಿನಿಂದ ಶಿರೋಳ ಶೆಟ್ಟಿಯ ಮೂರ್ತಿ ಮಾಡಿ ಮಧ್ಯದಲ್ಲಿಟ್ಟು, ಸುತ್ತುವರಿದು ಹಾಡುಗಳನ್ನು ಹಾಡುತ್ತಾರೆ. ಈ ಶಿರೋಳ ಶೆಟ್ಟಿಯ ಬಗೆಗಿರುವ ಪೌರಾಣಿಕ ಹಿನ್ನೆಲೆಯು ಹೀಗಿದೆ : ಶಿರೋಳ ಎಂಬ ಊರಿನಲ್ಲಿ ಒಬ್ಬ ರಾಜನಿದ್ದು, ಬಹಳ ದಿನಗಳವರೆಗೆ ಅವನಿಗೆ ಸಂತಾನ ಪ್ರಾಪ್ತವಾಗಲಿಲ್ಲ. ಹೀಗಾಗಿ ಅವನು ಈಶ್ವರನ ಆರಾಧನೆಗೆ ತೊಡಗುತ್ತಾನೆ. ಈಶ್ವರನು ಇವನ ಭಕ್ತಿಗೆ ಮೆಚ್ಚಿ ವರಕೇಳಿದಾಗ

ಹೆಚ್ಚು ಆಯುಷ್ಯವುಳ್ಳ ಮಗನಾಗದಿದ್ದರೂ, ಕನಿಷ್ಠ ಏಳು ದಿನಗಳ ಆಯುಷ್ಯವುಳ್ಳ ಮಗನನ್ನಾದರೂ ದಯಪಾಲಿಸಬೇಕೆಂದಾಗ ಭಗವಂತನು ಅವನ ಹರಕೆಯನ್ನು ಈಡೇರಿಸುತ್ತಾನೆ. ಆ ಶೆಟ್ಟಿಗೆ ಹುಟ್ಟಿದ ಮಗನೇ 'ಶಿರೋಳ ಶೆಟ್ಟಿ' ಎಂದು ಹೆಸರು ಪಡೆದನು. ನಂತರ ಶಿರೋಳ ಶೆಟ್ಟಿಯು ಅಗಸರ ಹೆಣ್ಣಿನ ಮೇಲೆ ಮನಸು ಮಾಡಿದ್ದರಿಂದ ಆ ಹೆಣ್ಣು ಇವನನ್ನು ಕೊಲೆ ಮಾಡಿಸಿ ಬಂಡಿಯ ಕೆಳಗೆ ಹೂಳಿಟ್ಟಳು. ಹುಟ್ಟಿದ ಏಳು ದಿವಸಕೆ ಮರಣ ಹೊಂದಿದ ಶಿರೋಳ ಶೆಟ್ಟಿಯು ಪಂಚಮಿಯ ಮಾರನೆಯ ದಿವಸ 'ಹುತ್ತು' ಆದರೆಂಬ ನಂಬಿಕೆಯಿಂದ ಶೆಟ್ಟಿಯ ಮಣ್ಣಿನ ಮೂರ್ತಿಯನ್ನು ಮಾಡಿ ಪೂಜಿಸಲಾಗುತ್ತದೆ. ಶಿರೋಳ ಶೆಟ್ಟಿಯ ಸ್ಮರಣೆಯೇ ಇದರ ಮುಖ್ಯವಾದ ಉದ್ದೇಶ. ಹುತ್ತಿನ ಮಣ್ಣನ್ನು ತಂದು ಮೀಸಲು ನೀರಿನಲ್ಲಿ ಹದ ಮಾಡಿ ತಲೆ, ಕೈಕಾಲು, ಮೂಗು, ಹೊಟ್ಟೆ ಹೀಗೆ ಎಲ್ಲ ಅಂಗಾಂಗಳಿರುವ ಪುರುಷಾಕೃತಿಯನ್ನು ತಯಾರಿಸಲಾಗುತ್ತದೆ. ಈ ಮೂರ್ತಿಗೆ ಕುಂಕುಮ, ಅರಿಶಿಣಗಳನ್ನು ಹಚ್ಚಿ, ಅಲಂಕರಣಗೊಳಿಸಿ ದೀಪ, ಧೂಪ, ನೈವೇದ್ಯಗಳಿಂದ ಪೂಜಿಸುತ್ತಾರೆ. ಮಕ್ಕಳಿಲ್ಲದ ಹೆಣ್ಣು ಮಕ್ಕಳು ಪೂಜೆ ಮಾಡುವುದರಿಂದ ಅವರಿಗೆ ಸಂತಾನ ಪ್ರಾಪ್ತಿಯಾಗುತ್ತದೆಂಬ ನಂಬಿಗೆ ಇಂದಿಗೂ ಇಲ್ಲಿಯ ಹೆಣ್ಣು ಮಕ್ಕಳಲ್ಲಿದೆ. ಈ ಶಿರೋಳ ಶೆಟ್ಟಿಯ ಪೂಜೆಯು ವಿಜಾಪುರ ಭಾಗದಲ್ಲಿರುವ ಜೋಕುಮಾರ ಆರಾಧನೆಯನ್ನು ಹೋಲುತ್ತದೆ. (ಡಾ.ಡಿ.ಬಿ.ನಾಯಕ 'ದೇಸಿ ಸಂಸ್ಕೃತಿ' ಬಂಜಾರ ಪ್ರಕಾಶನ ಗುಲ್ಬರ್ಗ ೨೦೦೨, ಶಿರೋಳ ರೊಟ್ಟಿಯ ಆಚರಣೆ, ಜೋಕುಮಾರನ ಆಚರಣೆಯ ಹೋಲಿಕೆ, ಪು.೪-೫) ಈ ಮೇಲಿನ ಕಥೆಯ ಹಿನ್ನೆಲೆಯಿಂದ ವಿಶ್ಲೇಷಿಸಿದಾಗ ಜೋಕುಮಾರನ ಹಾಗೂ ಶಿರೋಳ ರೊಟ್ಟಿಯ ಆಚರಣೆಗಳೆರಡೂ ಒಂದು ರೀತಿಯಲ್ಲಿ ಸಾಮ್ಯತೆಯೊಂದಿಗೆ ಗುರುತಿಸಿಕೊಂಡಿರುತ್ತವೆ. ಅಂದರೆ ಜನರು ಯಾವುದೇ ದೈವಗಳನ್ನು ಸ್ಮರಿಸಿಕೊಂಡು ಪ್ರತಿ ವರುಷಕ್ಕೊಮ್ಮೆಯಾದರೂ ಅಂತಹುಗಳನ್ನು ಆಚರಿಸಿಕೊಂಡು ಬರುವ ರೂಢಿಯನ್ನಿಟ್ಟುಕೊಂಡಿರುತ್ತಾರೆ. ಅಲ್ಲದೆ ಅವುಗಳ ಪರಂಪರೆಯನ್ನು ಸಹ ಚಾಚೂ ತಪ್ಪದೇ ಉಳಿಸಿಕೊಂಡು ಬಂದಿರುವುದು ನಮ್ಮೆಲ್ಲರ ಗಮನಕ್ಕೆ ಬಂದಿರುವ ಸಂಗತಿ.

ಜೋಕುಮಾರನ ಉಡಾಳತನ ಅಥವಾ ಘಟಿಂಗತನಕ್ಕೆ ಸಂಬಂಧಿಸಿದಂತೆ ಜನಪದರು ತಮ್ಮದೇ ಆದ ಕಥೆಗಳೊಂದಿಗೆ ನಿರೂಪಿಸುತ್ತಾರೆ. ಜೈನದೇವರೊಂದಿಗೆ ಇವನು ಕಾಮಕಠನವನ್ನು ನಡೆಸಿರುವ ಬಗ್ಗೆ ಪ್ರತೀತಿಗಳಿವೆ.

ಪೂರಕ ಮಾಹಿತಿಗೆ ಸಂಬಂಧಪಟ್ಟಂತೆ ವಿವರಿಸುವುದಾದರೆ ಲಕ್ಷ್ಮೇಶ್ವರದಲ್ಲಿ ವಕ್ತೃವನ್ನು ಮಾಹಿತಿಗಾಗಿ ಸಂಪರ್ಕಿಸಿದಾಗ ಅವರು ಈ ಕಥೆಯ ಬಗ್ಗೆ ತೀವ್ರವಾಗಿ ವಿರೋಧಿಸಿದರು. ಇದು ತೀವ್ರ ಕೆಳಮಟ್ಟದ, ಕುತ್ಸಿತ ಟೀಕೆಯಾಗಿದೆ. ಇಂತಹ ಕಥೆಯನ್ನು ನಾನು ಒಬ್ಬ ಜೈನನಾಗಿ ಇದುವರೆವಿಗೂ ಕೇಳಿಲ್ಲ. ಅಷ್ಟೇ ಅಲ್ಲದೆ ಜೋಕುಮಾರನಿಗೂ, ನಮ್ಮ ತೀರ್ಥಂಕರರಿಗೂ ಇಂತಹ ಅನೈತಿಕ ಸಂಬಂಧ ಸೂಚಿಸುವ ಕಥೆಯನ್ನು ಯಾರು ಹುಟ್ಟು ಹಾಕಿದರೋ ನನಗಂತೂ ಗೊತ್ತಿಲ್ಲ. ಆದರೆ ಪೂಜಾ ಸಮಯದಲ್ಲಿ

ನಮ್ಮದೇ ಆದ ರೀತಿ, ರಿವಾಜುಗಳಿವೆ. ಅವಕ್ಕೆ ಅನುಗುಣವಾಗಿ ನಾವು ಪೂಜಿಸಿಕೊಂಡು ಬರುತ್ತಿದ್ದೇವೆ. ಅಂದ ಮಾತ್ರಕ್ಕೆ ನಮ್ಮ ದೇವರಿಗೂ, ಜೋಕುಮಾರನಿಗೂ ಸಂಬಂಧ ಕಲ್ಪಿಸುವುದು ಎಷ್ಟರ ಮಟ್ಟಿಗೆ ಸರಿ? ಎಂದು ಪ್ರತಿಪಾದಿಸಿದರು. ಆ ಕಥೆಯ ಹಿನ್ನೆಲೆಯನ್ನು ಈಗ ಪ್ರಸ್ತಾಪಿಸುತ್ತೇನೆ. ಅತಿಕಾಮುಕನಾದ ಜೋಕುಮಾರನು ಒಮ್ಮೆ, ತನ್ನ ಕಾಮವನ್ನು ಪೂರೈಸಿಕೊಳ್ಳಲು ಜೈನ ಬಸದಿಗೆ ಹೋಗುತ್ತಾನೆ. ಇವನನ್ನು ದೂರದಿಂದ ನೋಡಿದ ತೀರ್ಥಂಕರರು ಜೋಕುಮಾರನನ್ನು ಕಂಡು ಅವನ ಉಡಾಳತನಕ್ಕೆ ಹೆದರಿ ಕೂಡಲೇ ಮಂದಿರದ ಬಾಗಿಲನ್ನು ಮುಚ್ಚುತ್ತಾರೆ. ಸರಿ ಹೇಗಾದರೂ ಮಾಡಿ ತನಿಚ್ಛೆಯನ್ನು ಪೂರೈಸಿಕೊಳ್ಳಬೇಕೆಂದು ಇವನು ನಿರ್ಧರಿಸುತ್ತಾನೆ. ಮಂದಿರದ ಒಂದು ಪಕ್ಕದಲ್ಲಿ ಒಂದು ಚಿಕ್ಕ ಕಿಂಡಿಯಿರುತ್ತದೆ. ಅದರ ಮೂಲಕ ತನ್ನ ಜನನೇಂದ್ರಿಯ ಬಿಟ್ಟು, ಅವರನ್ನು ಸಂಭೋಗಿಸುತ್ತಾನೆ. ಹೇಗಾದರೂ ಸರಿ ತನ್ನ ಮನದಾಳದ ಬಯಕೆಯನ್ನು ಪೂರೈಸಿಕೊಂಡು ಹೊರಡುತ್ತಾನೆ. ಈ ಕಥೆಯನ್ನು ಅನೇಕ ವಕ್ತೃಗಳು ಕ್ಷೇತ್ರಕಾರ್ಯ ಸಂದರ್ಭದಲ್ಲಿ ನಿರೂಪಿಸಿದ್ದಾರೆ.

ಇಂತಹ ಕಥೆಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಿದಾಗ ತಿಳಿದು ಬರುವ ಅಂಶವೇನೆಂದರೆ, ಜನಪದ ಕಥೆಗಳು ಕಟ್ಟುಕತೆಗಳಿರಬಹುದು ಆದರೆ ಅವುಗಳಲ್ಲಿರುವ 'ಆಶಯ'ದ ಹಿನ್ನೆಲೆಯಿಂದ ಗಮನಿಸಿದಾಗ ಮಾತ್ರ ಹಿಂದಿನ ಮುಖ್ಯ ಉದ್ದೇಶ ತಿಳಿದುಬರುತ್ತದೆ. ಇಲ್ಲಿ ಜೋಕುಮಾರನು ಅತಿಕಾಮಿ, ಬೆದೆಬಡುಕ' ಎಂತೆಲ್ಲಾ ಕರೆದರೂ, ಜನಪದರು ಅವನನ್ನು 'ಪ್ರಜನನ' (Fertility God) ದೇವರೆಂದು ಇಂದಿಗೂ ನಂಬಿ ಆರಾಧಿಸುತ್ತಿದ್ದಾರೆ.

ಅಂದರೆ ನಂಬಿಕೆಗಳು ನಮ್ಮ ಸುತ್ತಣದ ಸಮಾಜದ ಮೇಲೆ ಎಷ್ಟು ಗಾಢವಾಗಿ ಪರಿಣಾಮ ಬೀರುತ್ತವೆ? ಎನ್ನುವ ಪ್ರಶ್ನೆ ನಮಗೆ ಉದ್ಭವವಾಗುತ್ತವೆ.

ಜೈನ ತೀರ್ಥಂಕರರೊಂದಿಗೆ ಇವನು ನಡೆಸಿದ ಉಡಾಳತನದ ಬಗ್ಗೆ ಸವಿವರವಾಗಿ ಮಾಹಿತಿಯನ್ನು ಪಡೆಯಲು ಲಕ್ಷ್ಮೇಶ್ವರದಲ್ಲಿ, ನಿವೃತ್ತ ಪ್ರಾಧ್ಯಾಪಕರಾದ ಬರಿಗಾಲಿ ಎನ್ನುವವರನ್ನು ಭೇಟಿ ಮಾಡಿ ಕೇಳಿದಾಗ ಅವರು ತಮ್ಮದೇ ಆದ ಪೂಜಾ ವಿಧಾನದ ಕ್ರಿಯೆಯನ್ನು ವಿವರಿಸತೊಡಗಿದರು. ಜೈನ ಸಮುದಾಯದವರು 'ತ್ರಯೋದಶಿ' 'ಚತುರ್ದಶಿ' ಮತ್ತು ಅನಂತನ ಹುಣ್ಣಿಮೆಯ ದಿನ ಕೆಲವು ನಿಯಮಗಳನ್ನು ಅನುಸರಿಸುತ್ತೇವೆ. ತ್ರಯೋದಶಿಯಂದು ಒಂದು ಹೊತ್ತು ಊಟ ಮಾಡುತ್ತೇವೆ. ಚತುರ್ದಶಿಯಂದು ಹಾಲು, ಹಪ್ಪಳದೊಂದಿಗೆ ಇರುತ್ತೇವೆ. ಹುಣ್ಣಿಮೆಯ ದಿನದಂದು ಒಂದು ಹೊತ್ತು ಊಟ ಮಾಡುತ್ತೇವೆ.

ನಿರ್ದಿಷ್ಟ ದಿನದಲ್ಲಿ ನೋಂಪಿ ಪೂಜೆ, ಅನಂತನಾಥ ತೀರ್ಥಂಕರರ ಪೂಜೆ ಮತ್ತು ಅಷ್ಟಕರ್ಮ ಪೂಜೆಯನ್ನು ನೆರವೇರಿಸುತ್ತೇವೆ. ಅಷ್ಟ ಕರ್ಮ ಪೂಜೆಯೆಂದರೆ

೧. ಜಲ

೨. ಗಂಧ

೩. ಅಕ್ಷತೆ

೪. ಪುಷ್ಪ

೫. ಚರು

೬. ದೀಪ

೭. ಧೂಪ

೮. ಅರ್ಘ್ಯ (ಫಲ)

ಈ ಮುಂತಾದ ವಿಧಿ ವಿಧಾನಗಳಿಂದ ನಾವು ಪೂಜಿಸಿ, ನಮಗೆ ಪಾರಮಾರ್ಥಿಕ ಸುಖವನ್ನು ದಯಪಾಲಿಸು ಎಂದು ತೀರ್ಥಂಕರರಲ್ಲಿ ಬೇಡಿಕೊಳ್ಳುತ್ತೇವೆ. ಅಲ್ಲದೆ ಭಾದ್ರಪದ ತ್ರಯೋದಶಿ, ಶುದ್ಧ ತ್ರಯೋದಶಿಯನ್ನು ನಾವು ಆಚರಿಸುತ್ತೇವೆ. ಇಂತಹ ಆಚರಣೆಯನ್ನು ಮಾಡುವಾಗ ಯಾರೂ ನೋಡಬಾರದು ಎಂಬ ಕಾರಣಕ್ಕಾಗಿ ನಾವು ಬಸದಿಯ ಬಾಗಿಲನ್ನು ಮುಚ್ಚುತ್ತೇವೆ. ಇದು ಸಕಾರಣ ಈ ಒಂದು ಕಾರಣಕ್ಕಾಗಿ ಅನೇಕ ಹಳ್ಳಿಗರು ಇಂತಹ ಕಟ್ಟುಕಥೆಗಳನ್ನು ಹುಟ್ಟು ಹಾಕಿರಬಹುದು ಎಂಬ ತಮ್ಮ ಇಂಗಿತವನ್ನು ವ್ಯಕ್ತಪಡಿಸಿದರು. ಅಲ್ಲದೆ ನಾವು, ಜೈನ ಸಮುದಾಯದವರು ಬಹುಬೀಜ ತರಕಾರಿಗಳನ್ನು ಸೇವಿಸುವುದಿಲ್ಲ. ಏಕೆಂದರೆ ನಮ್ಮಲ್ಲಿ ಹಿಂದಿನಿಂದಲೂ ಬೆಳೆದು ಬಂದಿರುವ ಪರಂಪರೆ ಏನೆಂದರೆ ಆದಷ್ಟು ಅಹಿಂಸೆಯನ್ನು ಪಾಲಿಸಬೇಕು. ಬಹುಬೀಜ ತರಕಾರಿಗಳೆಂದರೆ, ಉದಾಹರಣೆಗೆ ಈರುಳ್ಳಿ, ಬೆಳ್ಳುಳ್ಳಿ, ಬೆಂಡೆಕಾಯಿ ಇತ್ಯಾದಿ. ಇವುಗಳನ್ನು ನಮ್ಮ ದೈನಂದಿನ ಬದುಕಿನಲ್ಲಿ ಆದಷ್ಟು ಕಡಿಮೆ ಉಪಯೋಗಿಸುತ್ತೇವೆ. ಯಾವುದನ್ನೇ ಆಗಲಿ ಹಿಂಸಿಸಬಾರದು ಎಂಬ ನಿಲುವು ನಮ್ಮದಾಗಿದೆ. ಈ ಹಿನ್ನೆಲೆಯಲ್ಲಿ ನಾವು ಇಂದಿಗೂ ಸಹ ಪಾಲಿಸಿಕೊಂಡು ಬರುತ್ತಿದ್ದೇವೆ ಎಂದರು.

ಇಷ್ಟೆಲ್ಲಾ ವಿಚಾರಗಳನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ವಕ್ತೃಗಳು ನೀಡಿದ ಮಾಹಿತಿಯಂತೆ. ಬರೀ ಅದನ್ನು ದಾಖಲಿಸುವ ಬದಲು, ಸಂಬಂಧಪಟ್ಟ ಸಮುದಾಯದವರು ಏನನ್ನು ಹೇಳುತ್ತಾರೆ? ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವವಾಗುತ್ತದೆ. ಅದಕ್ಕೋಸ್ಕರ ಅವರಿಂದ ಪಡೆದ ಮಾಹಿತಿಯನ್ನು ಇಲ್ಲಿ ದಾಖಲಿಸಿದ್ದೇನೆ.

ಡಾ.ಎಂ.ಚಿದಾನಂದ ಮೂರ್ತಿ ಅವರು 'ಸಾಧನೆ' ಎಂಬ ಗ್ರಂಥದಲ್ಲಿ 'ಜೋಕುಮಾರನ ಕಥೆಯ ಇನ್ನೊಂದು ಪ್ರಭೇದ' ಎಂಬ ಶೀರ್ಷಿಕೆಯ ಲೇಖನದಲ್ಲಿ ಹೀಗೆ ಉಲ್ಲೇಖಿಸಿದ್ದಾರೆ. "ಜೋಕುಮಾರನ ಘಟಿಂಗತನವನ್ನು ಕುರಿತಂತೆ ಗಂಗಾ ಮತಸ್ಥರಲ್ಲಿ ಅನೇಕ ಕತೆಗಳು ಹಬ್ಬಿವೆ. ಅವನ ಕಾಮುಕತೆಗೆ ಹೆದರಿ ಹಾರುವ ಹೆಂಗಸರು ಕಚ್ಚೆ ಹಾಕಲು ಆರಂಭಿಸಿದರಂತೆ.

ಮುಸಲ್ಮಾನನೊಬ್ಬ ಮುಂದಕ್ಕೆ ಬಗ್ಗಿ ನಮಾಜು ಮಾಡುವಾಗ ಇವನು ನಡೆಸಿದ ಘಟಿಂಗತನ ನೋಡಲಾರದೆ ಮುಸಲ್ಮಾನನ ಹೆಂಡತಿ ಬುರುಕಿ ಹಾಕಿಕೊಂಡಳಂತೆ. ಅಷ್ಟೇ ಅಲ್ಲ ಅವನಿಗೆ ಹೆದರಿ ಬಾದಾಮಿಯ ಬನಶಂಕರಿ ದೇವಿ ಏಳು ದಿನವೂ ಬಾಗಿಲು ಹಾಕಿ ಒಳಗೆ ಕುಳಿತುಬಿಟ್ಟಳು. ಈಗಲೂ ಆ ಏಳುದಿನ ಗುಡಿಗೆ ಬೀಗ ಹಾಕಿರುತ್ತದೆ. ಧಾರವಾಡದ ಶಂಕರಮ್ಮನ ಗುಡಿ, ಜೈನರ 'ದಿಗಂಬರನ ಗುಡಿ' ಇವಕ್ಕೂ ಆ ಏಳು ದಿನ ಬೀಗ ಹಾಕಿರುತ್ತದೆ. ಎಲ್ಲ ದೇವತೆಗಳೂ ಅವನ ಕಾಮುಕತನಕ್ಕೆ ಭಯಪಟ್ಟಿದ್ದರು." ಈ ಎಲ್ಲಾ ಹಿನ್ನೆಲೆಯಿಂದ ಗಮನಿಸಿದಾಗ ನನಗೆ ತಿಳಿದು ಬಂದ ಅಂಶವೇನೆಂದರೆ ಎಲ್ಲಾ ಕಥೆಗಳಲ್ಲಿ ಜೋಕುಮಾರನ ಅತಿ ಕಾಮುಕತನ ಪ್ರತಿಬಿಂಬಿತವಾಗಿದೆ. ಅವನ ಈ ಕೆಟ್ಟ ಹವ್ಯಾಸದಿಂದಾಗಿ ಎಲ್ಲರೂ ದೂರ ಇರುತ್ತಿದ್ದರು. ಅವನ ಉಸಾಬರಿಯೇ ಬೇಡ ಎನ್ನುವ ಧೋರಣೆ ಇದ್ದಿರಬಹುದು. ಉತ್ತರ ಕರ್ನಾಟಕದ ಬಹುತೇಕ ಹಳ್ಳಿಗಳಲ್ಲಿ ಇಂತಹ ಕಥೆಗಳಿವೆ. ನಂಬಿಕೆಗಳಿವೆ, ಪ್ರತೀತಿಗಳಿವೆ.

ಇನ್ನು ಕೊನೆಯದಾಗಿ ಜೋಕುಮಾರ ಹಾಗೂ ಗಣಪತಿ ಇವರ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಪ್ರಥಮ ಮಾಹಿತಿ ಆಕರದಂತೆ ಹೇಳುವುದಾದರೆ ಇವನಿಗೂ ಹಾಗೂ ಗಣಪತಿಗೂ ನೇರದರ್ಶನ ಮಾಡಿಸುವುದಿಲ್ಲ. ಅಂದರೆ ಭಾದ್ರಪದ ಅಷ್ಟಮಿಯ ದಿನದಂದು ಜೋಕುಮಾರನು ಹುಟ್ಟುತ್ತಾನೆ. ಆ ಸಂದರ್ಭದಲ್ಲಿ ಜನರು ಗಣೇಶನನ್ನು ಕುಳ್ಳಿರಿಸಿ ಪೂಜಿಸುತ್ತಿರುತ್ತಾರೆ. ಇವರಿಬ್ಬರಿಗೂ ನೇರ ದರ್ಶನ ಮಾಡಿಸುವುದಿಲ್ಲ. ಕಾರಣವೇನೆಂದರೆ ಈ ಎರಡೂ ದೇವರ ಮೂರ್ತಿಗಳು ಭಿನ್ನವಾಗುತ್ತವೆ ಎಂಬ ನಂಬಿಕೆ ಇವರದು. ಹಾಗಾಗಿ ಜೋಕುಮಾರನ ಮಣ್ಣಿನ ಮೂರ್ತಿಯನ್ನು ತಯಾರಿಸುವಾಗ ಗಣಪನ ದೃಷ್ಟಿ ಜೋಕುಮಾರನ ಮೂರ್ತಿಗೆ ಬೀಳದ ಹಾಗೆ ಒಂದು ಬಟ್ಟೆಯಿಂದ ಮುಚ್ಚುತ್ತಾರೆ. ಇದಕ್ಕೆ ಸರಿಯಾದ ಹಾಗೂ ಸಮಂಜಸವಾದ ಕಾರಣವನ್ನು ಹೇಳುವುದು ಅಸಾಧ್ಯ. ಆದರೂ ನನ್ನ ಊಹೆಯಂತೆ ಇವರಿಬ್ಬರೂ ಸಹೋದರರು. ಸಹೋದರರ ಸ್ವಭಾವ ವೈರುಧ್ಯವಾಗಿರುತ್ತದೆ. ಹಾಗಾಗಿ ವಿಘ್ನೇಶ್ವರ ಶ್ರೀಮಂತಿಕೆಯನ್ನು ಸುಖವನ್ನು ಬಯಸುವವನಾಗಿರುತ್ತಾನೆ. ಇದಕ್ಕೆ ವ್ಯತಿರಿಕ್ತವಾಗಿ ಜೋಕುಮಾರನು ಸಾಮಾನ್ಯರ ಹಾಗೆ ಸಾಮಾನ್ಯ ಜೀವನವನ್ನು ಬಯಸುತ್ತಾನೆ. ಗಣಪನು ಪ್ರತಿಷ್ಠಿತರ ಹಾಗೂ ಸಿರಿವಂತರ ದೇವರಾದರೆ, ಜೋಕುಮಾರನು ಶ್ರೀಸಾಮಾನ್ಯರ, ಒಕ್ಕಲಿಗ ದೇವನಾಗಿದ್ದಾನೆ. ಈ ಕಾರಣಕ್ಕಾಗಿ ಇವರಿಬ್ಬರಲ್ಲಿ ಹೊಂದಾಣಿಕೆ ಸಾಧ್ಯವಾಗುವುದಿಲ್ಲ. ನಮ್ಮ ಸುತ್ತಣದ ಜಗತ್ತಿನಲ್ಲಿ ಉಳ್ಳವರ ಹಾಗೂ ಇಲ್ಲದವರ ನಡುವೆ ಸಂಘರ್ಷ, ವರ್ಗಕಲಹದ ಉದಾಹರಣೆಗಳು ಅಪಾರವಾಗಿವೆ. ಇವುಗಳೆಲ್ಲವುಗಳ ಒಟ್ಟು ಫಲಿತಗಳ, ಸಂಕೇತವೂ, ದ್ಯೋತಕವೂ ಆಗಿರಬಹುದು.

ಟಿಪ್ಪಣಿಗಳು

೧. ಡಾ.ದೇ.ಜವರೇಗೌಡ ಜಾನಪದ ಅಧ್ಯಯನ, ಸಂಪ್ರದಾಯಗಳು ಮತ್ತು ಹಬ್ಬಗಳು, ಚೇತನ ಬುಕ್ ಹೌಸ್, ಮೈಸೂರು, ೧೯೯೩, ಪು.೨೯೩

೨. Festival is a complex unit of customs and other folklore to celebrate a special occasion, usually annually; and of public interest; SDFML, Bogs, Vol II, Pp.1144

೩. ಡಾ.ದೇ.ಜವರೇಗೌಡ, ಪೂರ್ವೋಕ್ತ, ಪು.೩೫, ೧೯೯೩

೪. ಎಸ್.ಎಸ್.ಭದ್ರಾಪುರ, ಜೋಕುಮಾರ, ಜಾನಪದ ಸಾಹಿತ್ಯದರ್ಶನ ೧೦, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು.೯೬

೫. ಎಸ್.ಎಸ್.ಹಿರೇಮಠ, ಜಾತ್ರೆಗಳು, ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ ಭಾಗ ೨, ಸಮತಾ ಪ್ರಕಾಶನ, ಹೊಸಪೇಟೆ, ೧೯೯೩, ಪು.xiv

೬. ಡಾ.ಎಂ.ಜಿ.ಈಶ್ವರಪ್ಪ, ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫, ಪು.೨೦೪-೨೦೫

೭. ಅದೇ, ಪು.೨೦೫

೮. H.M.Nayak, **Tree cult in Karnataka,** Published in Tree symbol worship in India, Pp.121-122, ಉದ್ಧೃತ ಡಾ.ದೇ.ಜವರೇಗೌಡ, ಜಾನಪದ ಅಧ್ಯಯನ, ಚೇತನ ಬುಕ್ ಹೌಸ್, ಮೈಸೂರು, ೧೯೯೩, ಪು.೪೦೮

೯. ಕಿಟೆಲ್ ಕೋಶ, ೧೮೯೪, ಪು.೯೫೬

೧೦. ಉಲ್ಲೇಖ ಪಿ.ಲಂಕೇಶ್(ಸಂ), ಅಕ್ಷರ ಹೊಸಕಾವ್ಯ, ಪು.೧೭೪, ಉದ್ಧೃತ ಡಾ.ಎಂ.ಜಿ.ಈಶ್ವರಪ್ಪ, ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫, ಪು.೧೭೩-೧೭೪

೧೧. ಡಾ.ಎಚ್.ಜೆ.ಲಕ್ಕಪ್ಪಗೌಡ(ಪ್ರ.ಸಂ) ಡಾ.ಪುರುಷೋತ್ತಮ ಬಿಳಿಮಲೆ(ಸಂ.ಸಂ) ಜಾನಪದ ಕೈಪಿಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೭ ಪು.೪೭೧

೧೨. ಡಾ.ಎಂ.ಜಿ.ಈಶ್ವರಪ್ಪ, ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ, ಪು.೨೯೬, ಪಿಎಚ್.ಡಿ.ಪ್ರಬಂಧ (ಪ್ರಕಟಿತ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೧೩. ಸಿ.ಕೆ.ಕುಮುದಿನಿ(ಅನು), ಪ್ರಾಚೀನ ಭಾರತದಲ್ಲಿ ಬೇಸಾಯ, ೧೯೮೭, ಪು.೧೪೧, ಉದ್ಧೃತ, ಡಾ.ಎಂಜಿ.ಈಶ್ವರಪ್ಪ, ಪು.೨೯೬

೧೪. ಡಾ.ಬಿ.ಎಸ್.ಗದ್ದಗಿಮಠ, ಕನ್ನಡ ಜಾನಪದ ಗೀತೆಗಳು, ೧೯೯೮, ಪು.೧೩೪, ಪಿಎಚ್.ಡಿ.ಮಹಾಪ್ರಬಂಧ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೫. ಡಾ.ಎಂ.ಜಿ.ಈಶ್ವರಪ್ಪ, ಪೂರ್ವೋಕ್ತ, ೧೯೯೫, ಪು.೧೯೬

೧೬. ಎಸ್.ಎಸ್.ಹಿರೇಮಠ, ಪೂರ್ವೋಕ್ತ, ೧೯೯೩, ಪು.೨೧೩-೨೧೪

೧೭. ಅದೇ, ಪು.೨೧೭

೧೮. ಅದೇ, ಪು.೨೨೫

೧೯. ಡಾ.ದೇ.ಜವರೇಗೌಡ, ಪೂರ್ವೋಕ್ತ, ೧೯೯೧, ಪು.೨೭೮

೨೦. ಡಾ.ಬಿ.ಎಸ್.ಗದ್ದಗಿಮಠ, ಗದ್ದಗಿ ಮಠದ ಬರಹಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೮, ಪು.೧

ಅಧ್ಯಾಯ ೫

ಜೋಕುಮಾರನ ಹಾಡುಗಳು, ಕಥೆಗಳು, ನಂಬಿಕೆಗಳು

೫

ಜೋಕುಮಾರನ ಹಾಡುಗಳು, ಕಥೆಗಳು, ನಂಬಿಕೆಗಳು

ಜೋಕುಮಾರನ ಹಾಡುಗಳು

ಅಡ್ಡಡ್ಡ ಮಳೆ ಬಂದು ದೊಡ್ಡ ದೊಡ್ಡ ಕೆರೆ ತುಂಬಿ
ಗೊಡ್ಡುಗಳೆಲ್ಲ ಹೈನಾಗಿ |ಗೌಡರ
ರಾಸಿಯ ಮೇಲೆ ಸಿರಿ ಬರಲಿ ಜೋಕುಮಾರ ||

ರಾಣೇದ ಹಚ್ಚಡ ಹೊತ್ತಾನ ಕೊಮರ
ರಾಯರ ಓಣ್ಯಾಗ ಸುಳದಾನ | ನನ ಕೊಮರ
ರಾಯರ ಹೆಂಡರು ತನಗೆಂದ ||

ಹಾರೂರ ಗೇರ್ಯಾಗ ಹೊಕ್ಕಾನ ನನಕೊಮರ
ಗಾರೂಡಿಗಣ್ಣ ತಿರವೂತ | ತನ್ನಯ
ತಾಯಂದಿರಿದ್ದರು ಬಿಡಲಿಲ್ಲ ||

ಪುಂಡನ ಪುಂಡಾಟ್ಕ ಹಿಂಡ ಮಂದಿ ಕೂಡ್ಯಾರ
ಕಂಡಲ್ಲಿ ಕಲ್ಲೀಗಿ ಬಡದಾರ | ರಾತ್ರ್ಯಾಗ
ಅಗಸಾರ ಕಲ್ಲಾಗ ತುರಕ್ಯಾರ ||

ಅಷ್ಟಮಿ ದಿನ ಹುಟ್ಯಾನ ನನಕೊಮರ
ಸೆಟ್ಟೇರ ನೋಡಿ ಬೆಸಗೊಂಡ | ಜೋಕುಮಾರ
ಹುಟ್ಟಿದೇಳು ದಿವಸಕೆ ಮರಣವ ||

ಒಕ್ಕಲ ಗೇರ್ಯಾಗೆ ಹೊಕ್ಕಾನ ನನಕೊಮರ
ಚಕ್ಕರಗಣ್ಣ ತಿರವೂತ | ಜೋಕುಮಾರ
ಒಕ್ಕಲಿಗೆರ ಹೆಣ್ಣು ನನಗೆಂದ ||

ಹರಗೀದ ಹೊಲದಾಗ ಹರಿದು ಚೆಂಡಾಡ್ಯಾನ
ಹರದೀಯ ಮಗನ ಕೊಮರಯ್ಯ | ಚೆಂಡಾಡಿದಲ್ಲಿ
ಹವಳ ಮುತ್ತುಗಳು ಬೆಳೆದಾವ ||

ಹಾಡುಗಳ ವರ್ಗೀಕರಣ

- ಗಂಡಸರ ಹಾಡು
  - ಉಪಜೀವನದ ಹಾಡು
    - ಚೌಡಿಕೆ ಹಾಡು
    - ಕೊರವಂಜಿ ಹಾಡು
    - ಹಣಚಿ ಚುಚ್ಚುವ ಹಾಡು
    - ಗಂಗಮ್ಮ ಗೌರಮ್ಮ ಆಡಿಸುವ ಹಾಡು
    - ನಾಗೇಶಿ ಲಾವಣಿ ಹಾಡು
    - ವೇಷಗಾರರ ಹಾಡು
    - ದಾಸರ ಹಾಡು
    - ಪಾತ್ರದವರ ಹಾಡು
    - ಚಿಕ್ಕಲಿಗರ ಹಾಡು
- ಹೆಂಗಸರ ಹಾಡು
  - ಉತ್ಸವದ ಹಾಡು
    - ಹಬ್ಬಹುಣ್ಣಿಮೆ ಹಾಡು
      - ಅರಳೆಲೆ ಬಸವನ ಹಾಡು
      - ಗುಳ್ಳವ್ವನ ಹಾಡು
      - ಬುಲಾಯಿ ಹಾಡು
      - ಸಿರಿಯಾಳ ಸೆಟ್ಟಿಹಾಡು
      - ಜೋಕುಮಾರನ ಹಾಡು
      - ಸೀಗೆ ಹಾಡು
      - ಗೌರಿಹಾಡು
      - ಹೋಳಿಹುಣ್ಣಿಮೆ ಹಾಡು
    - ಮಂಗಲ ಪ್ರಸಂಗದ ಹಾಡು
      - ಜೋಗುಳ ಹಾಡು
      - ಮೈನೆರೆದ ಹಾಡು
      - ಕುಪ್ಪಸ ಹಾಡು
      - ಮದುವೆ ಹಾಡುಗಳು
        - ಹೊಸ್ತಿಲಹಾಡು
        - ಹಸೆಯಹಾಡು
        - ಹಂದರದಹಾಡು
  - ಉತ್ಸಾಹದ ಹಾಡು
    - ದುಡಿಮೆಯ ಹಾಡು
      - ಬಿಸುವ ಹಾಡು
      - ಕುಟ್ಟುವಹಾಡು
      - ಇತ್ಯಾದಿ
    - ವಿರಾಮದ ಹಾಡು
      - ಕೋಲಾಟದ ಹಾಡು
- ಮಕ್ಕಳಹಾಡು

ಬಲವಂದು ನಿಮ್ಮ ಬಾಗಲಕ ಕುಂತಾನ
ಬಾಗೀನಗಳ ಕೊಡಿರವ್ವ | ಜೋಕುಮಾರ
ಬಾಗಲಕ ಹರಕಿ ಕೊಡತಾನ ||

ಬಸಲಿಕ್ಕ ಸೋಪ್ಪೀಗಿ ಹೋದಾಳ ಹನುಮವ್ವ
ಬಸುರಿಲ್ಲವಂತೆ ಅಳುತಾಳೆ | ನನಕೊಮರ
ಬಸುರು ಮಾಡಿ ಮನೆಗೆ ಕಳುವ್ಯಾನೆ ||

ಹಾಲಬೇಡಿ ಹರಿದತ್ತ ಕೋಲಬೇಡಿ ಕುಣಿದತ್ತ
ಮೊಸರ್ಬೇಡಿ ಕೆಸರ ತುಳಿದತ್ತ | ನನಕೊಮರ
ಕುಸುಲಾದ ಗೆಜ್ಜೆ ಕೆಸರಾಗ ||

ಹಾಡಿದವರು : ಲಕ್ಷ್ಮವ್ವ ದೇವಪ್ಪ, ಬಾರಿಕೇರ, ಚನ್ನವ್ವ, ನೀಲವ್ವ, ಶಿವಮ್ಮ, ಲಕ್ಕುಂಡಿ, ಗದಗ (ತಾ.ಜಿ)

ಹದಮಳೆ ಬಂದು ದೊಡ್ಡ ಕೆರೆಗಳೆಲ್ಲಾ ತುಂಬುತ್ತವೆ. ಎಲ್ಲೆಲ್ಲೂ ಹಸಿರಿನ ವಾತಾವರಣವಿರುತ್ತದೆ. ಜಾನುವಾರಗಳಿಗೆ ಉತ್ತಮವಾದ ಮೇವು ದೊರೆಯುತ್ತದೆ. ಸಮೃದ್ಧಿ ಮಳೆಯಿಂದಾಗಿ ಗೌಡರ ಹೊಲದಲ್ಲಿ ಉತ್ಕೃಷ್ಟವಾದ ಫಸಲು ಬಂದು ಅವರ ಸಿರಿ ಹೆಚ್ಚುತ್ತದೆ. ಅವರು ಜೋಕುಮಾರನಿಗೆ ಚೆಂದದ ಹಚ್ಚಡವನ್ನು ಹೊದಿಸುತ್ತಾರೆ. ಜೋಕುಮಾರನು ಯಾವ ಓಣಿಗೆ ಹೋಗುತ್ತಾನೆಯೋ ಅಲ್ಲಿ ಪುಂಡಾಟಿಕೆ ಮಾಡುತ್ತಾನೆ. ರಾಯರ ಓಣಿಯಲ್ಲಿ ಸುಳಿದಾಗ ರಾಯರ ಹೆಂಡಿರು ತನಗೆ ಎನ್ನುತ್ತಾನೆ. ಹಾರುವರ(ಬ್ರಾಹ್ಮಣ) ಓಣಿಯಲ್ಲಿ ಹೋಗುತ್ತಾನೆ. ಅಲ್ಲಿಯೂ ಕೂಡ ಹಾರುವರ ಹೆಂಡತಿಯನ್ನು ತನಗೆ ಬೇಕೆನ್ನುತ್ತಾನೆ. ಅಷ್ಟಮಿಯ ದಿನ ಹುಟ್ಟಿದ ಇವನನ್ನು ಸೆಟ್ಟರು ನೋಡಿ ಬೆಸಗೊಳ್ಳುತ್ತಾರೆ. ಹುಟ್ಟಿದೇಳು ದಿನ ಮಾತ್ರ ಇವನಿಗೆ ಆಯುಷ್ಯ ಇರುತ್ತದೆ. ಒಕ್ಕಲಿಗರ ಓಣಿಯಲ್ಲಿ ಹೋಗುತ್ತಾನೆ. ಅಲ್ಲಿ ತನ್ನ ತೀಕ್ಷ್ಣವಾದ ಕಣ್ಣುಗಳಿಂದ ಒಕ್ಕಲಿಗರ ಹೆಂಗಸರನ್ನು ನೋಡುತ್ತಾನೆ. ಅವರನ್ನು ಕಾಡುತ್ತಾನೆ. ಜೋಕುಮಾರನು ಹೊಲದಲ್ಲಿ ಹೋಗಿ ಚೆಂಡಾಟವನ್ನು ಆಡುತ್ತಾನೆ. ಅವನು ಆಟವಾಡಿದ ಸ್ಥಳದಲ್ಲಿ ಹವಳ, ಮುತ್ತುಗಳು ಬೆಳೆಯುತ್ತವೆ. ಅವನು ಹೋದಲ್ಲೆಲ್ಲಾ ಸಮೃದ್ಧಿ ಇಮ್ಮಡಿಯಾಗುತ್ತದೆ. ಜೋಕುಮಾರನು ನಿಮ್ಮ ಮನೆಗೆ ಬಂದಿದ್ದಾನೆ. ಅವನಿಗೆ ದವಸ-ಧಾನ್ಯಗಳನ್ನು ನೀಡಿರಿ, ನಿಮಗೆ ಉತ್ತಮವಾದ ಫಲವನ್ನು ನೀಡುತ್ತಾನೆ. ಹನುಮವ್ವ ಎಂಬ ಮಹಿಳೆ ಬಸಲಿ ಸೊಪ್ಪು ತರಲಿಕ್ಕೆ ಹೋಗುತ್ತಾಳೆ. ಅವಳಿಗೆ ಮಕ್ಕಳಿರುವುದಿಲ್ಲ. ಸಹಜವಾಗಿಯೇ ತಾಯ್ತನದ ಬಯಕೆ ಆಗುತ್ತದೆ. ಜೋಕುಮಾರನು ಅವಳಿಗೆ ಸಂತಾನ ಭಾಗ್ಯವನ್ನು ಕರುಣಿಸುತ್ತಾನೆ.

ಅಡ್ಡ ಮಳೆ ಬಡಿದ ದೊಡ್ಡೊಡ್ಡ ಕೆರಿ ತುಂಬಿ
ಗುಡ್ಡಗಳೆಲ್ಲ ಹೈನಾಗಿ ಜೋ | ಗೌಡರ
ಸೆಡ್ಡಿಯ ಮ್ಯಾಲ ಸಿರಿ ಬಂದು ಜೋಕುಮಾರ ||

ಬಲವಂದು ನಿಮ್ಮ ಬಾಗಲಕ ಕುಂತಾನ
ಬಾಗೀನಗಳ ಕೊಡಿರೆವ್ವ | ಜೋಕುಮಾರ
ಬಾಗಲಕ ಹರಕಿ ಕೊಡತಾನ ||

ಬಸಲಿಕ್ಕ ಸೋಪ್ಪಿಗಿ ಹೋದಾಳ ಹನುಮವ್ವ
ಬಸುರಿಲ್ಲವಂತೆ ಅಳುತಾಳೆ | ನನಕೊಮರ
ಬಸುರು ಮಾಡಿ ಮನೆಗೆ ಕಳುವ್ಯಾನೆ ||

ಹಾಲಬೇಡಿ ಹರಿದತ್ತ ಕೋಲಬೇಡಿ ಕುಣಿದತ್ತ
ಮೊಸರ್ಬೇಡಿ ಕೆಸರ ತುಳಿದತ್ತ | ನನಕೊಮರ
ಕುಸುಲಾದ ಗೆಜ್ಜೆ ಕೆಸರಾಗ ||

ಹಾಡಿದವರು : ಲಕ್ಷ್ಮವ್ವ ದೇವಪ್ಪ, ಬಾರಿಕೇರ, ಚನ್ನವ್ವ, ನೀಲವ್ವ, ಶಿವಮ್ಮ, ಲಕ್ಕುಂಡಿ, ಗದಗ (ತಾ.ಜಿ)

ಹದಮಳೆ ಬಂದು ದೊಡ್ಡ ಕೆರೆಗಳೆಲ್ಲಾ ತುಂಬುತ್ತವೆ. ಎಲ್ಲೆಲ್ಲೂ ಹಸಿರಿನ ವಾತಾವರಣವಿರುತ್ತದೆ. ಜಾನುವಾರಗಳಿಗೆ ಉತ್ತಮವಾದ ಮೇವು ದೊರೆಯುತ್ತದೆ. ಸಮೃದ್ಧಿ ಮಳೆಯಿಂದಾಗಿ ಗೌಡರ ಹೊಲದಲ್ಲಿ ಉತ್ಕೃಷ್ಟವಾದ ಫಸಲು ಬಂದು ಅವರ ಸಿರಿ ಹೆಚ್ಚುತ್ತದೆ. ಅವರು ಜೋಕುಮಾರನಿಗೆ ಚೆಂದದ ಹಚ್ಚಡವನ್ನು ಹೊದಿಸುತ್ತಾರೆ. ಜೋಕುಮಾರನು ಯಾವ ಓಣಿಗೆ ಹೋಗುತ್ತಾನೆಯೋ ಅಲ್ಲಿ ಪುಂಡಾಟಿಕೆ ಮಾಡುತ್ತಾನೆ. ರಾಯರ ಓಣಿಯಲ್ಲಿ ಸುಳಿದಾಗ ರಾಯರ ಹೆಂಡಿರು ತನಗೆ ಎನ್ನುತ್ತಾನೆ. ಹಾರುವರ(ಬ್ರಾಹ್ಮಣ) ಓಣಿಯಲ್ಲಿ ಹೋಗುತ್ತಾನೆ. ಅಲ್ಲಿಯೂ ಕೂಡ ಹಾರುವರ ಹೆಂಡತಿಯನ್ನು ತನಗೆ ಬೇಕೆನ್ನುತ್ತಾನೆ. ಅಷ್ಟಮಿಯ ದಿನ ಹುಟ್ಟಿದ ಇವನನ್ನು ಸೆಟ್ಟರು ನೋಡಿ ಬೆಸಗೊಳ್ಳುತ್ತಾರೆ. ಹುಟ್ಟಿದೇಳು ದಿನ ಮಾತ್ರ ಇವನಿಗೆ ಆಯುಷ್ಯ ಇರುತ್ತದೆ. ಒಕ್ಕಲಿಗರ ಓಣಿಯಲ್ಲಿ ಹೋಗುತ್ತಾನೆ. ಅಲ್ಲಿ ತನ್ನ ತೀಕ್ಷ್ಣವಾದ ಕಣ್ಣುಗಳಿಂದ ಒಕ್ಕಲಿಗರ ಹೆಂಗಸರನ್ನು ನೋಡುತ್ತಾನೆ. ಅವರನ್ನು ಕಾಡುತ್ತಾನೆ. ಜೋಕುಮಾರನು ಹೊಲದಲ್ಲಿ ಹೋಗಿ ಚೆಂಡಾಟವನ್ನು ಆಡುತ್ತಾನೆ. ಅವನು ಆಟವಾಡಿದ ಸ್ಥಳದಲ್ಲಿ ಹವಳ, ಮುತ್ತುಗಳು ಬೆಳೆಯುತ್ತವೆ. ಅವನು ಹೋದಲ್ಲೆಲ್ಲಾ ಸಮೃದ್ಧಿ ಇಮ್ಮಡಿಯಾಗುತ್ತದೆ. ಜೋಕುಮಾರನು ನಿಮ್ಮ ಮನೆಗೆ ಬಂದಿದ್ದಾನೆ. ಅವನಿಗೆ ದವಸ-ಧಾನ್ಯಗಳನ್ನು ನೀಡಿರಿ, ನಿಮಗೆ ಉತ್ತಮವಾದ ಫಲವನ್ನು ನೀಡುತ್ತಾನೆ. ಹನುಮವ್ವ ಎಂಬ ಮಹಿಳೆ ಬಸಲಿ ಸೊಪ್ಪು ತರಲಿಕ್ಕೆ ಹೋಗುತ್ತಾಳೆ. ಅವಳಿಗೆ ಮಕ್ಕಳಿರುವುದಿಲ್ಲ. ಸಹಜವಾಗಿಯೇ ತಾಯ್ತನದ ಬಯಕೆ ಆಗುತ್ತದೆ. ಜೋಕುಮಾರನು ಅವಳಿಗೆ ಸಂತಾನ ಭಾಗ್ಯವನ್ನು ಕರುಣಿಸುತ್ತಾನೆ.

ಅಡ್ಡ ಮಳೆ ಬಡಿದ ದೊಡ್ಡೊಡ್ಡ ಕೆರಿ ತುಂಬಿ
ಗುಡ್ಡಗಳೆಲ್ಲ ಹೈನಾಗಿ ಜೋ | ಗೌಡರ
ಸೆಡ್ಡಿಯ ಮ್ಯಾಲ ಸಿರಿ ಬಂದು ಜೋಕುಮಾರ ||

ಹಾಸ್ಯಾಸಿ ಮಳಿ ಬಡಿದು ಬೀಸ್ಬೀಸಿ ಕೆರಿ ತುಂಬಿ
ಬಾಸಿಂಗದಂತ ತೆನಿಬಾಗಿ | ಗೌಡರ
ರಾಸಿಯ ಮ್ಯಾಲೆ ಸಿರಿ ಬಂದ ||

ಕರುಣುಳ್ಳ ಕೊಮರಾಯ್ನ ಕೆರೆ ನೋಡ ಹೋದಾರ
ಕರೆದು ಕಾರ್ಗಲ ಮಳೆಬಂದು | ಗೌಡರು
ಕರೆದು ಹಚ್ಚಡ ಹೊಚ್ಚಾರ ||

ಕೆಂಚ ನಮ್ಮ ಕೊಮರಾ ಬೆಂಚೀಯ ನೋಡ ಹ್ಯಾದ
ಮಿಂಚ್ಯಾವ ಕಾರ ಮಳೆ ಬಂದು | ಗೌಡರು
ಕೆಂಪು ಹಚ್ಚಡ ಹೊಚ್ಚ್ಯಾರ ||

ಹುಟ್ಟಿದೇಳು ದಿವಸಕ ಪಟ್ಣಾವ ತಿರುಗ್ಯಾನ
ದಿಟ್ಣಾದೇವಿ ನಿನಮಗನ | ಕೊಮರಾಗ
ಕೊಟ್ಟರೇಳು ದಿನಗಳಾ ||

ಪುಂಡಿಯ ಪಲ್ಲೆ ನಂಜುಕೊಂಡ ತಾನುಣಲಿಲ್ಲ
ದಂಡನಾಳವನ ಬಂಕ್ಯಾಗ | ನಮದೇವಿ
ಹೊಂಬಳಿ ಸರವ ಬಗಿಸ್ಯಾಳ ||

ಚಕ್ಕೋಟಿ ರಸಪಲ್ಲೆ ಇಕ್ಕೊಂಡು ಉಣಲಿಲ್ಲ
ದಿಕ್ಕನಾಳ್ನ ಬಂಕ್ಯಾಗ | ನಮ ದೇವಿ
ಚೊಕ್ಕ ಮುತ್ತಿನ ಸರ ಬಗಿಸೆ ||

ಅರಕೊಂಬ ಅರಿಷಿಣವು ದರಬಟ್ಲ ಒಳ್ಳೆಣ್ಣೆ
ನರನಮ್ಮ ದೇವಿ ಕುಲಿಹೊಕ್ಕು | ಎರಕೊಂಡ
ತೆರೆ ಬಂದ ನೀರು ಬಾಗಿಲಕ ||

ಬಾಲ ಹುಟ್ಟಿದ ನಂತ ಬನಕ ತೊಟ್ಟಿಲ ಕಟ್ಟಿ
ಬಾಲಗನ್ನೇರು ನೆರದಾರ | ಹಾಡುತಲಿ
ಕೋಲೆನ್ನು ಜನಕ ಜಯಯವೊ ||

ಕಬ್ಬುಳ್ಳ ತ್ವಾಟ್ದಾಗ ಇಟ್ಟನ್ನಿ ವರದ್ಹಾಂಗ
ಇಬ್ಬರು ತೂಗಲು ಮಲಗಾನ | ನಮದೇವಿ
ಹೆಬ್ಬುಲಿ ಮಗನ ಹಡದಾಳ ||

ಹಾರೂರ ಕೇರ್ಯಾಗ ಹಾರಿ ಚೆಂಡಾಡ್ಯಾನ
ನಾರಿ ನಿನ ಮಗ ಕೊಮರಯ್ಯ | ಚೆಂಡಾಡಿ
ಊರ ಭೂಮೆಲ್ಲ ಬೆಳಿಬಂದ ||

ಒಕ್ಕಲಗೇರಿ ತಾಸೇರಿ ಹೊಕ್ಕು ಚೆಂಡಾಡ್ಯಾನ
ಅಕ್ಕನ ಮಗನು ಕೊಮರಯ್ಯ | ಆಡಿದರ
ಅಕ್ಕಿನಾಡೆಲ್ಲ ಬೆಳೆದಾವ ||

ಹಾಲ್ಬೇಡಿ ಹಲುಬ್ಯಾನ ಕೆನಿಬೇಡಿ ಕುಣಿದಾನ
ಮೊಸರ ಬೇಡಿ ಕೆಸರ ತುಳದಾನ | ಕೊಮರಾನ
ಕುಸುರಾದ ಗೆಜ್ಜಿ ಕೆಸರಾಗಿ |

ಸಂದೀಯ ಮನಿಯನ್ನ ಗೊಂದೀಯ ಮನಿಯನ್ನ
ಗೊಂಜಾಳದನ್ನ ಕೆಸರನ್ನ | ನನಕೊಮರ
ಸಂದೀಯ ಹೊಕ್ಕನು ನಡುಕೇರಿ ||

ಹಾದೀಯ ಮನೆಯನ್ನ ಬೀದೀಯ ಮನೆಯನ್ನ
ಬಾಜರದನ್ನ ಮೊಸರನ್ನ | ನಮಕೊಮರ
ಗೌಳೇರೋಣೆ ಹೊಕ್ಕಾನ ||

ಹಳ್ಳಕ್ಕ ತಾ ಹೋಗಿ ಸಣ್ಣವ್ನ ಇಟ್ಯಾನ
ಕನ್ನಡಿ ತೆಗೆದು ಮೊಕ ನೋಡೊ | ಕೊಮರಾಯ
ಕಣ್ಣು ಮೂಗಿಲೆ ಕರ ಚೆಲುವ ||

ಅಳಕೂತ ಬಳಕೂತ ಬಂದಾಳ ಗುಳಕವ್ವ
ಬಂದು ನಿಂತಾಲ ಅಗಸ್ಯಾಗ | ಗೌಡರು
ತಂದು ಇಳಿಸ್ಯಾರ ಸೆಳಿ ಮಂಚ ||

ಕೊಮರಾ ತಾ ಬರ್ತಾನಂತ ಕೋಣೀಯ ಸಾರಿಸಿ
ಜಣ ಚಕ್ಕಲಗಿಪ್ತಿ ಚದರೀಯ | ಮನಿಯಾಗ
ಒಂದಾರ ಜ್ಯಾವ ಇರಲಿಲ್ಲ ||

ಹೋಗತ ಹೊನ್ನ ಮುರಿದ ಬರತ ಬನ್ನಿಯ ಮುರಿದ
ಕಂಡ ಕಂಡಲ್ಲಿ ಕರಿಬೇವು | ಮುಡುವಂತ
ಪುಂಡನ್ನ ದೇವಿ ಹಡೆದಾಳ ||

ಅಕ್ಕ ಹಡದಾಳಂತ ಏನೊಯ್ದೆ ಬಸವಯ್ಯ
ಮುತ್ತಿನ ಚೆಂಡ ಕಾರ್ಮುಗಿಲ, ಸುರಿಮಳೆಯ
ಅರತಿಲೊಯೆ ಹರಳೆಲೆಯ ||

ಬೆಣ್ಣೀಯ ತಾ ಮುದ್ದಿ ಕನ್ನುಳ್ಳ ಕೊಮರಾಗ
ಹೊನ್ನ ಮಾಳಿಗೆಯ ಮನೆಯವ | ಕೆನೆ ಮೊಸರ
ಬಿನ್ನಾಯ ಹೇಳ ಕೊಮರಾಗ ||

ಹಾಲ ತಾ ಮಗಿ ತುಂಬಿ ಬಾಲನಮ್ಮ ಕೊಮರಾಗ
ಮೇಲ ಮಾಳಿಗೆಯ ಮನೆಯವ್ವ | ನೀ ಕೊಟ್ರ
ಮೇಲಾಗಿ ಬೆಳಲಿ ನಿಂಭೂಮಿ ||

ಅಳವುತ ಸಿರಿ ತಾನು ಬಳಲುತಲಿ ಬಂದಾಳು
ಅಳಕಾದಂಬಲಿ ತಡೆದಾವು | ನಮ ಕೊಮರ
ಕಳೆದೇಳು ದಿನಕ ಮರಣವ್ವ ||

ಹುಟ್ಟೀದಾ ಏಳ್ದಿನಕ ಪಟ್ಣಾವ ತಿರುಗ್ಯಾನ
ದಿಟ್ನಾದೇವಿ ನಿನ ಮಗನ | ಕೊಮರಾಗ
ಬರದಾಳ ಸೆಟವಿ ಏಳ್ದೀನ ||

ಪುಂಡಾನ ಪುಂಡಾಟ್ಕ ಹಿಂಡಮಂದಿ ಕೂಡ್ಯಾರ
ಕಂಡಲ್ಲಿ ಕಲ್ಲಿಗೆ ಬಡಿದಾರ | ರಾತ್ರ್ಯಾಗ
ಅಗಸರ ಕಲ್ಲಾಗ ತುರಿಕ್ಯಾರ ||

ಜಂಗಮ ನಾನಲ್ಲ ಜೋಗಯ್ಯ ನಾನಲ್ಲ
ತಿಂಗಳ್ಗೆ ಬರುವ ತಿರುಕಲ್ಲ | ತಾಯವ್ವ
ತುಂಬಿ ಮೊರ ಜೋಳ ನೀಡವ್ವ ||

ಕಲ್ಲಳಿಗಿ ಕಬ್ಬಣದ ಮೆಟ್ಟುತ್ತಿ ಏರ್ಯಾಳ
ಬಳಕುತ ಬಳತ ತಗೆದಾಳ | ತಾಯವ್ವ
ಬಿಳಿಯೆಳ್ಳು ತುಂಬಿ ನೀಡ್ಯಾಳ ||

ಜಯ ಜಯ ಕೊಮರಾಗ ಜಯ ಜಯ ಹಾಡಿರೆ
ಜಯ ಜಯ ಭೂಮಿ ಬೆಳಸೀಗೆ | ಹಡದವ್ವ
ಜಯ ಜಯ ಇರಲಿ ಜಗದಾಗ ||

ಉತ್ತಮವಾಗಿ ಮಳೆಬಂದು ಎಲ್ಲಾ ಕೆರೆಗಳು ತುಂಬುತ್ತವೆ. ಗುಡ್ಡಗಳೆಲ್ಲ ಹಸಿರಿನಿಂದ ತುಂಬಿ ಕಂಗೊಳಿಸುತ್ತವೆ. ಗೌಡರ ಸಿರಿ ಹೆಚ್ಚಾಗುತ್ತದೆ. ಆರ್ಭಟದ ಮಳೆಬಂದು, ಕೆರೆಗಳು ತುಂಬುತ್ತವೆ. ಪೈರಿನ ತೆನೆಗಳು ಬಾಸಿಂಗದಂತೆ ಬಾಗುತ್ತವೆ. ಕರುಣೆ ಉಳ್ಳ ಕೊಮರಾಯನು ಕೆರೆ ನೋಡಲು ಹೋದಾಗ ಆರ್ಭಟದಿಂದ ಕೂಡಿದ ಮಳೆ ಬರುತ್ತದೆ. ಊರಿನ ಗೌಡರು ಆತನನ್ನು ಕರೆದು ಹಚ್ಚಡವನ್ನು ಹೊದಿಸುತ್ತಾರೆ. ಹುಟ್ಟಿದ ಏಳು ದಿನದಲ್ಲಿ ಪಟ್ಟಣವನ್ನು ತಿರುಗುತ್ತಾನೆ. ದಿಷ್ಣಾದೇವಿ ಮಗನಾದ ಜೋಕುಮಾರನಿಗೆ ಕೇವಲ ಏಳುದಿನಗಳ ಆಯುಷ್ಯ ಪುಂಡಿಯ ಪಲ್ಲೆಯನ್ನು ತಾನು ನಂಚಿಕೊಂಡು ಉಣಲಿಲ್ಲ. ಹೊಂಬಳಿ ಸರವನ್ನು ದೇವಿ ಬಯಸುತ್ತಾಳೆ. ಅರಿಶಿಣ ಮತ್ತು ಒಳ್ಳೆಣ್ಣೆಯನ್ನು ದಿಷ್ಣಾ ದೇವಿ ಬಯಸುತ್ತಾಳೆ. ಬಾಲಕ ಜನಿಸಿದನೆಂದು ಬಾಲಗನ್ನೆಯರು ತೊಟ್ಟಿಲು ಕಟ್ಟುತ್ತಾರೆ. ಕಬ್ಬಿಣದ ತೊಟ್ಟಿಲಿನಲ್ಲಿ

ಜೋಕುಮಾರನನ್ನು ಮಲಗಿಸಿ ಇಬ್ಬರು ತೂಗಿದರೆ ಮಾತ್ರ ಮಲಗುತ್ತಾನೆ. ಹೆಬ್ಬುಲಿಯಂತೆ ಅವನು ಇದ್ದಾನೆ. ಹಾರುವರ ಓಣಿಯಲ್ಲಿ ಅವನು ಚೆಂಡಾಟವಾಡುತ್ತಾನೆ. ಅವನು ಆಟ ಆಡಿದಲ್ಲಿ ಸಮೃದ್ಧಿ ನೆಲೆಸುತ್ತದೆ. ಒಕ್ಕಲುಗೇರಿಯಲ್ಲಿ ಅನೇಕ ತಾಸುಗಳ ಕಾಲ ಆಟವಾಡುತ್ತಾನೆ. ಅವನು ಆಟ ಆಡಿದಲ್ಲೆಲ್ಲ ಪೈರುಗಳು ಸಮೃದ್ಧವಾಗಿ ಬೆಳೆಯುತ್ತವೆ. ಹಾಲುಬೇಡಿ ಅಳುತ್ತಾನೆ. ಕೆನೆ ಬೇಡಿ ಕುಣಿಯುತ್ತಾನೆ. ಅಕ್ಕಪಕ್ಕದ ಮನೆಯಲ್ಲಿ ಗೋವಿನ ಜೋಳದ ಅನ್ನವನ್ನು ಬೇಡುತ್ತಾನೆ. ಗೌಳೇರ ಓಣಿಯಲ್ಲಿ ಮೊಸರನ್ನವನ್ನು ಬೇಡಿ ಪಡೆಯುತ್ತಾನೆ. ಕನ್ನಡಿಯನ್ನು ತೆಗೆದುಕೊಂಡು ತನ್ನ ಸೌಂದರ್ಯವನ್ನು ನೋಡಿಕೊಳ್ಳುತ್ತಾನೆ. ಜೋಕುಮಾರನಿಗೂ ಗುಳಕಲ್ಲವ್ವನಿಗೂ ಸಂಬಂಧವಿರುತ್ತದೆ. ಕೊಮರಾಯ ಬರುತ್ತಾನೆಂದು ಕೋಣೆಯನ್ನು ಸಾರಿಸಿದರೆ ಇವನು ಸ್ವಲ್ಪ ಕಾಲವೂ ಮನೆಯಲ್ಲಿರುವುದಿಲ್ಲ. ಇಂತಹ ಪುಂಡನಿಗೆ ದಿಷ್ಣಾದೇವಿ ಜನ್ಮವಿತ್ತಿರುತ್ತಾಳೆ. ಜೋಕುಮಾರನಿಗೆ ಕೆನೆಮೊಸರನ್ನು, ಬೆಣ್ಣೆಯನ್ನು ಕೊಡಬೇಕು. ತುಂಬಿದ ಮಗಿಯಲ್ಲಿ ಹಾಲನ್ನು ಕುಡಿಯುತ್ತಾನೆ. ಹುಟ್ಟಿದ ಏಳು ದಿನಗಳಲ್ಲಿ ಇವನು ಸಾವನ್ನಪ್ಪುತ್ತಾನೆ. ಇವನ ಪುಂಡಾಟಿಕೆಗೆ ಹೆದರಿದ ಜನರು ಕಂಡ ಕಂಡ ಕಲ್ಲಿನಿಂದ ಬಡಿದು ಕೊಲ್ಲುತ್ತಾರೆ. ರಾತ್ರಿಯಲ್ಲಿ ಅಗಸರು ಬಟ್ಟೆ ಒಗೆಯುವ ಕಲ್ಲಿನಡಿಯಲ್ಲಿ ತುರುಕುತ್ತಾರೆ.

ಅಡ್ಡಡ್ಡ ಮಳಿ ಬಂದು ದೊಡ್ಡ ದೊಡ್ಡ ಕೆರೆತುಂಬಿ
ಗೊಡ್ಡುಗಳೆಲ್ಲ ಹೈನಾಗಿ ಜೋಕುಮಾರ
ಗೌಡರ ಸೆಡ್ಡಿಯ ಮೇಲಿ ಸಿರಿ ಬಂದು ಜೋಕುಮರ ॥

ಅತ್ತಾಗ ಮಳಿ ಬಂದು ಇತ್ತಾಗ
ಕೆರಿ ತುಂಬಿ ಸತಿಸಾಗರದಾಗ ಬಿಸ್ಲಕಾದ ಜೋಕುಮಾರ
ಗೌಡರ ರಾಸಿಯ ಮೇಲೆ ಸಿರಿ ಬಂದು ಜೋಕುಮಾರ ॥

ಹಸಿರಿನ ಹೊಲದ ಹೊಕ್ಕಾನ ಚೆಂಡಾಽಡ್ಯಾನ
ನಿತ್ರೆರು ಮಗನ ಕೊಮರಾಯ ಜೋಕುಮಾರ
ನಿತ್ರೆರು ಮಗನ ಕೊಮರಾಯ ಚೆಂಡಾಡ್ಯಾನ ಗೋಧಿಕಾಳುಗಳು ಬೆಳೆಯಾಲಿ ಜೋಕುಮಾರ॥

ಹರಗೀದ ಹೊಲದಾಽಗೊಕ್ಕು ಚೆಂಡಾಡ್ಯಾನ ಹರದೇವ್ರು ಮನೆಗ್ಯಾನ ಕೊಮರಾಯ
ಹರದೇರು ಮನೆಯ ಚೆಂಡಾಡಿದಲ್ಲಿ
ಹತ್ತಿ ನೇಣೆಗಽಳೂ ಬೆಳೆಯಾಲಿ ಜೋಕುಮಾರ ॥

ಪಟ್ಟೆನೂಕ್ಯಾರಂತ ಪಟ್ಟೆಮಂಚ ತೆರಮಾಡಿ
ಪಟ್ಟೋಳಿದಿಟ್ಟ ಬಿಳಿನೂಟ್ಟ ಜೋಕುಮಾರ
ಪಟ್ಟೋಳಿದಿಟ್ಟ ಬಿಳಿನೂಟ್ಟ ನನದೇವಿ ಪಟಕೋ ಮಗನ ಹಡದಾಳ ಜೋಕುಮಾರ ॥

ಬ್ಯಾನಿ ಬಂದವಂತ ಕ್ವಾಣೇಲಿ ಹೊರಸ್ಹಾಕಿ
ನ್ಯಾಣ್ಯಾವ ಬಿಟ್ಟ ಬಿಳಿನೂಟ್ಟ ಜೋಕುಮಾರ

ನ್ಯಾಣ್ಯಾವ ಬಟ್ಟ ಬಿಳಿನೊಟ್ಟ ನನ್ನ ದೇವಿ ನಾಡಿಗೊಬ್ಬ ಮಗನ ಹಡದಾಳಾ ಜೋಕುಮಾರ||

ಹತ್ತೀಯ ಹೊಲಕಂತ ಹೋದಾವ್ನೆ ನನ್ನ ಕೊವರ
ಹೊತ್ತು ಚತ್ತುರೀಗಿ ನೆರಳಾಗ ಜೋಕುಮಾರ
ಹೊತ್ತು ಚತ್ತುರೀಗಿ ನಿಂತಗೊಂಡು ದೂರಾಲ ಮಳೆಯ ಕರೆದವ್ನೆ ಜೋಕುಮಾರ ||

ಜ್ವಾಳಾದ ಹೊಲಕಂತ ಹೋದಾವ್ನ ನನಕೊಮರಾ
ಹೊಲ ಚತ್ತುರಿಗೀ ನೆರಳ್ಳಾಗೀ ಜೋಕುಮಾರ
ಹೊಲ ಚತ್ತುರಿಗೀ ನೆರಳಾsಗ ನಿಂತಗೊಂಡು ಸುತ್ತಾಲ ಮಳೆಯ ಕರೆದವ್ನೆ ಜೋಕುಮಾರ||

ಗೊಂಡ್ಯಾಗಿ ಕುಂದರಲಿ ದುಂಡ ಮುತ್ತೊಂದು ಹೊಳೆಯಾಲಿ ಜೋಕುಮಾರ
ದುಂಡ ಮುತ್ತೊಂದು ಹೊಳೆಯಾಲಿ ನನ ಕೊಮರ
ನನ ಕೊಮರಾ ರಂಭೇರ ಸೆರಗೊಂದು ಹಿಡಿದಾನಾ ಜೋಕುಮಾರ ||

ಕಬ್ಬಿಣ ತೊಟ್ಲುದಾಗ ಜಗ್ಗಾಕ್ಕ ಕೌದಿಗಾಸಿ ಇಬ್ರ ತೂಗಿದರಾ ಮಲಗ್ಯಾವ್ನಜೋಕುಮಾರ
ಇಬ್ರ ತೂಗಿದರ ಮಲಗ್ಯಾವ್ನ ನನಕೊಮರಾ
ಅಬ್ರದ ಮಗನಾ ಹಡದಾಳೆ ಜೋಕುಮಾರ ||

ತರೆಗಲ್ಲ ಮೇಲೆ ಮಳಿ ಇಳದಾ ಜೋಕುಮಾರ
ನನಕೊಮರಾ ತರಗಲ್ಲ ಹೆಣ್ಣ ತರಹೋದಾಜೋಕುಮಾರ
ಬಿಳಿಯಾದ ಉಟ್ಯಾನ ಬಿಳಿಯಾಗ ಹೊಕ್ಯಾನ ಜೋಕುಮಾರ ||

ಬಿಳಿಯಾಗ ಹೊಕ್ಯಾನ ಬೆಳಗಾವಿ ಮ್ಯಾಲೆ ಮಳೆ ಇಳಿದಾಜೋಕುಮಾರ
ಬೆಳಗಾವಿ ಮ್ಯಾಲೆ ಮಳೆ ಇಳಿದಾ ನನ ಕೊಮಾರಾ
ಬೆಳಗಾವಿ ಹೆಣ್ಣ ತರುಹೋದಾ ಜೋಕುಮಾರ ||

ಹಾಡಿದವರು : ನಿಂಗಮ್ಮ ಸುಣ್ಣಗಾರ್, ಲಕ್ಷ್ಮೇಶ್ವರ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ

ಅಡ್ಡಡ್ಡ ಮಳಿ ಬಂದು ದೊಡ್ಡ ಕೆರಿ ತುಂಬಿ
ಗೊಡ್ಡುಗಳೆಲ್ಲ ಹೈನಾಗಿ ಜೋಕುಮಾರ
ಗೌಡರ ಸೆಡ್ಡಿಯ ಮೇಲೆ ಸಿರಿ ಬರಲೀs ಜೋಕುಮಾರ ||

ಹುಟ್ಟಿದೇಳೂ ದಿನ ಪಟ್ಟಣಾ ತಿರುಗ್ಯಾನೆ
ದಿಷ್ಣಾದೇವಿ ನಿನ ಮಗನ ಜೋಕುಮಾರ
ಆನಾಡ ಮಳಿ ಬಂದು ಈ ನಾಡಾ ಕೆರಿತುಂಬಿ
ಸತಿ ಸಾಗರದಾಗ ಬಿಸ್ಲಕಾದು ಜೋಕುಮಾರ

ವಕ್ಕಲುಗೇರ್ಯಾಗ ಹೊಕ್ಕಾನ ನನಕೊಮರ
ಜೋಕಾಲಿ ಹಿಡಿದು ಉಳದಾsನ ಜೋಕುಮಾರ

ಜೋಕಾಲ ಹಿಡಿದೆಳೆದು ಬೀಸ್ಬೀಸಿ ಎಳೆದಾನಾ
ಜೋಕಾಲಿ ಕೊಡಿ ನನ ಕೊಮರಾಗ ಜೋಕುಮಾರ

ಹಾರೂರ ಗೇರ್ಯಾಗ ಹೊಕ್ಕಾನ ನನ ಕೊಮರಾ
ಗಾರೀಗಿ ಬೇಡ್ಬೇಡಿ ಅಳುತಾನ ಗಾರೀಗಿ ಕೊಡು ನನಕೊಮರಾಗೆ ಜೋಕುಮಾರ
ಈರೀಯ ಹೂವೊಂದು ನೀರೀಯ ಕಾಯಂಗೆ
ಈರೀಯ ಎಳಗೊನೆಯಂಗೆ ಜೋಕುಮಾರ

ಈರೀಯ ಎಳಗೊನೆಯಂಗೆ ನನಕೊಮರ
ಕುಂಬಾರಗೇರ್ಯಾಃಗ ಹೊಕ್ಕಾನೆ ನನಕೊಮರಃ
ಕುಂಬಾರ ಹೆಂಡ್ರ ನನಗೆಂದಾ ಜೋಕುಮಾರ
ಜೋಕುಮಾರ ಹುಟ್ಟಿ ಲೋಕೆಲ್ಲಾ ಬೆಳಿಯಾಲಿ

ಆಕಳ ಹಾಲ ಕರೆಯಾಲಿ ಜೋಕುಮಾರ
ಹುಟ್ಟಿದಾಃ ಏಳುದಿನಾ ಪಟ್ಟಣಾ ತಿರುಗ್ಯಾಃನೆ
ದಿಷ್ಣಾದೇವಿ ನಿನಮಗನಃ ಜೋಕುಮಾರ
ಈರ್ಬೀಯ ಹೂವೊಂದು ದೀರ್ಬೀಯ ಕಾಯಾಲಿ

ಈರೀಯ ಎಳಗೊನೆಯಂಗೆ ಜೋಕುಮಾರ
ಈರೀಯ ಎಳ ಗೊನೆಯಂಗೆ ನನಕೊಮರ
ಹಿರೀರ ಹೆಂಡ್ರ ಹೌದಂದ ಜೋಕುಮಾರ
ಹಾಗಲ ಹೂವೊಂದ ಹಾದ್ಯಾಗ ಕಾಯೆಂದ

ಹಾಗಲ ಎಳ ಗೊನೆಯಂಗೆ ಜೋಕುಮಾರ
ಹಾಗಲ ಎಳಗೊನೆಯಂಗೆ ನನಕೊಮರ
ಹಾರೂರ ಹೆಂಡ್ರನನಗೆಂದಾ ಜೋಕುಮಾರ
ಕುಂಬಳ ಹೂವೊಂದ ಕುಂಬಳ ಕಾಯೇಲಿ

ಕುಂಬಳ ಎಳ ಗೊನೆಯಂಗೆ ಜೋಕುಮಾರ
ಕುಂಬಳ ಎಳ ಗೊನೆಯಂಗೆ ನನಕೊಮರ
ಕುಂಬಾರ ಹೆಂಡ್ರ ನನಗೆಂದಾ ಜೋಕುಮಾರ
ಎಕ್ಕೀಯ ಹೂವೊಂದು ಎಕ್ಕೀಯ ಕಾಯಂದ

ಎಕ್ಕೀಯ ಎಳಗೊನೆಯಂಗೆ ಜೋಕುಮಾರ
ಎಕ್ಕೀಯ ಎಳಗೊನೆಯಂಗೆನನ ಕೊಮರಾ
ವಕ್ಕಲ್ರ ಹೆಂಡ್ರ ನನಗೆಂದ ಜೋಕುಮಾರ
ಆಷಾಢ್ದ ಗಾಳಿ ಬೀಸ್ಬೀಸಿ ನದಿಯಾಗೆ

ಕುತ್ಗಂಡು ಕಂದ ನಡಿಗ್ಯಾನ ಜೋಕುಮಾರ
ಕುತ್ಗಂಡು ನನಕಂದ ನಡಿಗ್ಯಾನ ಶಾಂತವ್ವ
ಕುಂಚಿಗಿಕಟ್ಟಿ ಕಳುಹವ್ವ ಜೋಕುಮಾರ
ಕುತ್ಗಂಡು ನನಕಂದ ನಡಿಗ್ಯಾನ ನೀಲವ್ವ

ಕುಂಚಿಗಿಕಟ್ಟಿ ಕಳುಹವ್ವ ಜೋಕುಮಾರ
ಚೆಂದೊಟ್ಟಟ್ಟಿ ಒಡಕೊಂಡು ಕಟ್ಟೀಯ
ಮ್ಯಾಕೆ ಇಳಿವೊಲ್ಲೆ ಜೋಕುಮಾರ
ಕಟ್ಟೀಯ ಬಿಟ್ಟು ಇಳಿವೊಲ್ಲೆ ನನಕೊಮರಾ

ರೊಟ್ಟಿಯ ಕೊಟ್ಟು ಕಳುಹವ್ವ
ಹಳ್ಳಾಕ ಹೋಗ್ಯಾನ ನನ ಕೊಮರಾ ಜೋಕುಮಾರ
ಹಳ್ಳಾಗ ಶೇಮ ಬಿಟ್ಟುನ
ಮುತ್ತೀನ ಚೆಂಡು ಮುಗಿಲ್ಬಾನು ಜೋಕುಮಾರ

ಹಾಡಿದವರು : ಲಕ್ಷ್ಮಮ್ಮ, ಗಂಗಮ್ಮ, ಫಕೀರವ್ವ, ಶಾಂತವ್ವ, ತಳವಾರ್, ಶಿಗ್ಲಿ, ಶಿರಹಟ್ಟಿ ತಾಲೂಕು, ಗದಗ ಜಿಲ್ಲೆ

ಬಾಲನಾ ತಾಯಿ ಬಂದು ಬಾಗಲ್ದಾಗ ನಿಂತಾಳ
ಬೇಗನ ಬೆಣ್ಣೆಯ ಕೊಡಿರವ್ವ
ಬೇಗನ ಬೆಣ್ಣೆಯ ಕೊಡಿರವ್ವ ನಿಮಗೊಳ್ಳೇ ಬಾಲಮ್ಮ ಸಿಗಲಿ
ಹೊನ್ನ ಮಾಳಿಗೆಯ ಮನೆಯವ ತಾಯವ್ವ

ಎಣ್ಣೆಯ ತಾ ನನ ಕೊಮರಾಗೆ
ಹಬ್ಬದಾ ತಾ ಒಪ್ಪವುಳ್ಳಕೊಮರಾಗ
ಸುತನಾಳಿಗೆಯ ಮನಿಯವರ
ಸುತನಾಳಿಗೆಯ ಮನಿಯವರ ತಾಯವ್ವ

ತುಪ್ಪ ವಾ ತಾ ನನ ಕೊಮರಾಗೆ
ಅಷ್ಟಮಿ ಎಳಿಯಗೆ ಹುಟ್ಟಿದವನಾ ನನ ಕೊಮರಾ
ದುಷ್ಟರಾ ಕರದಾ ಬೆಸಿಗಳೋ
ದುಷ್ಟರಾ ಕರದಾ ಬಿಸಿಗಳೋ ಕೊಮರಾಗೆ

ಕೊಟ್ಟರಾ ಏಳು ದಿನಗಳಾ
ಶಿವಶಂಕರೆಂಬ ಚಿನದಾರೀ ಕಂಬುಳಿ
ಆ ನ್ಯಾಡ ನೆಲೆಯ ಕುಡುಗೋಲು
ಆ ನ್ಯಾಡ ನೆಲೆಯ ಕುಡುಗೋಲು ತಗೊಂಡು

ಕನ್ನಿ ನಿನ್ನ ಕುಲುವಾ
ಬಲಹೊಟ್ಟೆಯಿಂದ ಬೆನಕಾ ತೋಟ್ಟೆಲ ಕಟ್ಟಿ
ಸುಣ್ಣಗಾ ನ್ಯಾರ ನೆರದೋರ
ಸುಣ್ಣಗಾ ನ್ಯಾರನೆರದೋರ ಜೋಗುಳ ಕೊಮ್ರು ನಿನ್ನೂರಿಗೆ

ಕಬ್ಬಣಾ ತೋಟ್ಲಕ ಜಗ್ಗಾಕ ನೀರ್ಹಾಕಿ
ಇಬ್ರು ತೂಗಿದರೆ ಮಲಗೌವ್ನ
ಇಬ್ರು ತೂಗಿದರೆ ಮಲಗೌವ್ನ ನಮದೇವಿ

ಅಬ್ರೂದ ಮಗನ್ನ ಹಡದಾಳೆ
ಅತ್ಲಾನ್ನ ಮಳಿ ಬಂದು ಇತ್ಲಾನ್ನ
ಕೆರಿ ತುಂಬಿ ಸತಿ ಸವಿರದಾ ಬಿಸ್ಲಕಾದ
ಸತಿ ಸಾವಿರದಾ ಬಿಸ್ಲಕಾದ ಚಂದ್ರಾಮನಂಥ ಮುತ್ತಿನ

ಕೂರಿಗೆಯ ಕರೆಯೋಣ
ಹಸಿ ಹಸಿ ಮಳಿ ಬಂದು ಬಿಸಿ ಬಿಸೀ ಕೆರಿ ತುಂಬಿ
ಬಾಸಿಂಗದ್ಹಂಗ ತೆನಿಬಾಗಿ
ಬಾಸಿಂಗದ್ಹಂಗ ತೆನಿಬಾಗಿ ಚಂದಾಮನ

ರಾಶಿಯ ಮೇಲೆ ಸಿರಿ ಬರಲಿ
ಜೋಕುಮಾರ ಹುಟ್ಟಲಿ ಲೋಕವೆಲ್ಲಾ ಬೆಳಿಯಾಲಿ
ಆಕಳು ಹಾಲು ಕರಿಯಲಿ
ಆಕಳು ಹಾಲು ಕರಿಯಲಿ ಈ ರಮಣ ಕಾಕೆದ್ನು ಮೊಸರಾ ಕಡೆಯಾಲಿ
ಹರಿ ಹರಿಗುಂಟ ಹಯಲೀರಾ ನನ ಕೊಮಾರಾ ನೀನಳಗಣ್ಣಾ ತಿರುವೂಲಿ
ನೀನಳಗಣ್ಣಾ ತಿರುವೂಲೀರಾ ಈ ಊರಾ ನ್ಯಾರಾರ ನೆದರಾ ನೆನದೇವು
ಬಟಿಬಟಿಗುಂಟ ಹಯಲೀರಾ ನನಕೊಮರಾ ನಿನ ಬಟಲಗಣ್ಣು
ತಿರುವಲೀರಾ ಈ ಊರ ನಿತ್ಯಾರ ನೆದರ
ಹೊಲಕ ಹೋದನವ್ವ ಹರಿನ್ಯಾಮ ಹಚ್ಯಾಕ್ನ
ಕನ್ನಡಿ ಹಿಡಿದು ಮಕ ನೋಡಿ
ಕನ್ನಡಿ ಹಿಡಿದು ಮಕ ನೋಡಿ ಸಿರಿಬರಿಕೆವ್ವ
ದಿಟಕೋ ನೋಡಿ ನನಕೊಮರ
ಗೆಣೆ ಬಂದುಗೊಂಡ ಕೊಣೆ ಮಣೆಯಾ ಜಸಮಾಡಿ
ನೆಡೆದ ಸಿರಿಯಾ ತೆರಿಯಾಕೆ
ನೆಡೆದ ಸಿರಿಯಾ ತೆರಿಯಾಕೆ ನಮದೇವಿ
ರಜಗೌರಿ ಮಗನ ಹಡದಾಳೆ

ಗೆಣೆಬಂದಳಂತ ಕ್ವಾಣಿ ಮನಿಯಾ ತೆರ್ವ ಮಾಡಿ
ನೆಣೆದ ಸಿರಿಯಾ ತೆರಿಯಾಕೆ
ನೆಣೆದ ಸಿರಿಯಾ ತೆರಿಯಾಕೆ ನಮದೇವಿ ಅಬ್ಬರ್ಲೇ ಮಗನ ಹಡದಾಳೆ
ಪಟ್ಟಣಕೆ ಬಂದು ಸುಟ್ಟು ಸುಣ್ಣಾಚೆಂದು
ಕಟ್ಟಿದವು ಒಂದು ಕರಿಯಾಲಿ
ಕಟ್ಟಿದವು ಬಂದು ಕರಿಯಾಲೀ ನಮದೇವಿ ಅಬ್ಬರ್ಲೇ ಮಗನ ಹಡದಾಳೆ
* * *
ಅಡ್ಡಡ್ಡ ಮಳಿಬಂದು ದೊಡ್ಡ ದೊಡ್ಡ ಕೆರಿತುಂಬಿ
ಗೊಡ್ಡುಗಳೆಲ್ಲ ಹೈನಾಗಿ
ರೈತರ ಸೆಡ್ಡಿಯ ಮ್ಯಾಲೆ ಸಿರಿಬರಲಿ
ಹಾಸ್ಯಾಸಿ ಮಳಿ ಬಂದು ಬೀಸ್ಬೀಸೀ
ನನ ಕೊಮರ ಬಾಸಿಂಗನಾಗಿ ಹೊಳದಾನ ಜೋಕುಮಾರ
ಬಾಸಿಂಗನಾಗಿ ಹೊಳದಾನs ರೈತರಾ ರಾಸಿಯ ಮ್ಯಾಲೆ ಸಿರಿಬರಲಿ
ಹುಟ್ಟಿದ ಏಳು ದಿನ ಪಟ್ಣಾವ ತಿರುಗ್ಯಾನು
ದಿಷ್ಣಾದೇವಿ ನಿನ ಮಗನ
ದಿಷ್ಣಾದೇವಿ ನಿನ ಮಗನ ಕೊಮರಾಗಾ ಕೊಟ್ಟಾರ ಏಳಾ ದಿನಗಳಾ
ಕೊಟ್ಟಾರ ಏಳ ದಿನಗಳಾ ಜೋಕುಮಾರ ಹುಟ್ಟಿ ಲೋಕವೆಲ್ಲಾ ಬೆಳೆಯಾಲಿ ಆಕಳ ಹಾಲ ಕರಿಯಾಲಿ
ಆಕಳ ಹಾಲ ಕರಿಯಾಲೀ ನಮ್ಮ ದೇವಿ ಕಾಕೆದ್ದು ಮೊಸರಾ ಕಡಿಯಾಲಿ
ಅಕ್ಕಡದಳಂತಾ ಏನು ತಂದ್ಯೇ ಬೆನುವಯ್ಯ ಮುತ್ತಿನ ಚೆಂಡs ಮುಗಿಲ್ಯಾನ
ಹೊಕ್ಕಾನ ನನ ಕೊಮರ ಗೌಡರ ಹೆಂಡ್ರ ತನಗೆಂದ ಜೋಕುಮಾರ
ಕುಂಬಾರ ಓಣಿಗೆ ಹೊಕ್ಕಾನ ನನ್ನ ಕೊಮರ ಕುಂಬಾರಗಣ್ಣ ತಿರುವ್ಯಾನ
ಕುಂಬಾರಗಣ್ಣ ತಿರುವ್ಯಾನ ನನ್ನ ಕೊಮರ ಕುಂಬಾರ ಹೆಂಡ್ರ ನನಗೆಂದ ಜೋಕುಮಾರ
ಹೂವೆಂದರೆ ಕಂಚೀಯ ಕಾಯೆಂದೆ ಈ ಊರಿಗೆ ನಾನೆ ಪಂಚೆಂದೆ ಜೋಕುಮಾರ
ಹಾಗಲ ಹೂವೆಂದೆ ಹಾಗಲಾ ಕಾಯೆಂದೆ ಈ ಊರಿಗೆ ನಾನೆ ಹಗಲೆಂದೆ ಜೋಕುಮಾರ

ಹಾಡಿದವರು - ತಿಪ್ಪವ್ವ, ಲಕ್ಷ್ಮವ್ವ, ಸರಸವ್ವ, ದ್ಯಾಮಕ್ಕ, ಸಂಕ್ಲೀಪುರ, ಕುಂದಗೋಳ(ತಾ), ದಾರವಾಡ(ಜಿ)
* * *
ಜೋಕಪ್ಪ ಹುಟ್ಟಲಿ ಲೋಕೆಲ್ಲಾ ಬೆಳಿಯಾಲಿ ಆಕಳ ಹಾಲ ಕರಿಯಾಲಿ
ಜೋಕಪ್ಪ ಹುಟ್ಟಲೀ ನಮದೇವಿ ಕಾಕೆದ್ದು ಮೊಸರ ಕಡೆಯಾಲಿ
ಹುಟ್ಟಿದೇಳು ದಿನಾ ಪಟ್ಣಾ ತಿರುಗ್ಯಾನ ನಮದೇವಿ ದಿಷ್ಣಾದೇವಿ ನಿನ ಮಗನ
ದಿಷ್ಣಾದೇವಿ ನಿನ ಮಗನ ಕೊಮರಾಗ ಕೊಟ್ಟಾರ ಏಳ ದಿನಗಳಾ
ಸುಗ್ಗೀಯ ಅನ್ನ ಸಬ್ಬಸಿಗೆ ಪಲಕಾಣಾ ಲಗ್ಯಾಡಿ ಕೊಮರ ಉಣ್ಣಬಂದ

ಲಗ್ನಾಡಿ ಕೊಮರ ಉಣ್ಣ ಬಂದ ನಮದೇವಿ ಸುಗ್ಯಾಗೆ ಮಗನ್ನ ಹಡದಾಳ
ಅಕ್ಕಹಡದಾಳಂತ ಏನು ತಂದೆ ಬೆನುಮಯ್ಯ ಮುತ್ತಿನ ಚೆಂಡ ಮುಗಿಲಬಾನ
ಮುತ್ತಿನ ಚೆಂಡ ಮುಗಿಲ್ಬಾನು ಗಣಪಯ್ಯ ಹಟ್ಟೇಲಿ ತಂದದೊರಳೀಯ
ದಾಸವಾಳದ ಹೂವು ಏಸೊಂದು ಮುಡಿದ್ಯಾನ ಸೂಸುಗೊಂಡೇವ ಹಿಡಿದಾನ
ಸೂಸು ಗೊಂಡೇವ ಹಿಡಿದಾನ ನನ ಕೊಮರ ಸೂಸ್ಯಾಡ್ತಿ ಒಂದು ಪುರುದಾಗ
ಸಣ್ಣಂಗಿ ತೊಟ್ಟು ನೆಣ್ಣೆ ಬಟ್ಟೊಟ್ಟಟಾನ ಕನ್ನೀಯ ಮಗನ ಕೊಮರಯ್ಯ
ಕನ್ನೀಯ ಮಗನ ಕೊಮರಯ್ಯ ಅಲ್ಲಿಗೀ ಹಳ್ಳ್ಯಾಗ ಹುಟ್ಟ ಬರುವೋನಾ
ಅಕ್ಕಡದಾಳಂತ ಏನು ತಂದೀ ಬೆನುವಯ್ಯ ಮುತ್ತಿನ ಚೆಂಡು ಮುಗಿಲ್ಬಾನು
ಮುತ್ತೀನ ಚೆಂಡು ಮುಗಿಲ್ಬಾನು ಗಣಪಯ್ಯ ಅರ್ತೀಲಿ ತಂದೊಂದೆರಳಲೀಯ
ಹೊಟ್ಟೆ ನೋಯ್ತಾವಂತ ಪಟ್ಟೀಮಂಚಽನೇರ್ಯಾಳೆ ಇಟು ಬಂಗಾರ ತಗದಾಳೆ
ಇಟ್ಟು ಬಂಗಾರ ತಗದ್ಯಾಳೆ ನಮದೇವಿ ಪಟಕೋಬ ಮಗನ್ನ ಹಡದಾಳೆ
ಬ್ಯಾನಿನೋಯ್ತಾವಂತ ಕ್ಯಾಣೀಯ ಹೊಕ್ಯಾಳೆ ನಾಣ್ಯಾವ ತಗದು ಮಣಿ ನೋಡ
ನಾಣ್ಯಾವ ತಗದು ಮಣಿನೋಡಿ ನಮದೇವಿ ನಾಡಿಗೊಬ್ಬ ಮಗನ್ನ ಹಡದಾಳೆ
ಅಡ್ನಡ್ನ ಮಳಿ ಬಂದು ದೊಡ್ನಡ್ನ ಕೆರಿತುಂಬಿ
ಗೊಡ್ನುಗಳೆಲ್ಲ ಹೈನಾಗಿ ರೈತರ
ಸೆಡ್ಡಿಯ ಮ್ಯಾಲಿ ಸಿರಿಬರಲಿ
ಹಾಸ್ಯಾಸಿ ಮಳೀ ಬಂದು ಬೀಸ್ಬೀಸಿ ಕೆರಿತುಂಬಿ
ಬಾಸಿಂಗನಾಗಿ ಹೊಳದಾನ ರೈತರ
ರಾಸಿಯ ಮ್ಯಾಲೆಸಿರಿಬರಲಿ
ಹರಗಿದ ಹೊಲಗಿಡದ ಹೊದಿ ಚೆಂಡ ಹೊಳದಾಸ
ಹರದೀಯ ಮಗನ ಕೊಮರಯ್ಯ
ಹರದೀಯ ಮಗನನ ಕೊಮರಯ್ಯ ಚೆಂಡಾಡಿದಲ್ಲಿ
ಹತ್ತೀಗೊನೆಗಳೂ ಬೆಳಿಯಾಲಿ
ಬಿತ್ತಿದಾ ಹೊಲದಾಗ ಹೊಕ್ಕ ಚೆಂಡಾಡ್ಯಾನ ನಿಸ್ತ್ರೀಯ ಮಗನನ ಕೊಮರಯ್ಯ
ನಿಸ್ತ್ರೀಯ ಮಗ ನನ ಕೊಮರಯ್ಯ ಹೊಕ್ಕು ಚೆಂಡಾಡಿದಲ್ಲಿ ಹತ್ತಿಗೊನಿಗಳೂ ಬೆಳೆಯಾಲಿ
ಜೋಕಪ್ಪ ಹುಟ್ಟಲಿ ಲೋಕೆಲ್ಲಾ ಬೆಳಿಯಾಲಿ ಆಕಳ ಹಾಲ ಕರಿಯಾಲಿ
ಆಕಳ ಹಾಲ ಕರಿಯಾಲಿ ನಮದೇವಿ ಕಾಕೆದ್ದ ಮೊಸರ ಕಡಿಯಾಲಿ
ಹುಟ್ಟಿದೇಳು ದಿನಾ ಪಟ್ಟಣಾ ತಿರುಗ್ಯಾನ ದಿಷ್ಣಾದೇವಿ ನಿನಮಗನ
ದಿಷ್ಣಾದೇವಿ ನಿನ ಮಗನಾ ಕೊಮರಾಗ ಕೊಟ್ಟೂರ ಏಳು ದಿನಗಳಾ

ಹಾಡಿದವರು : ಶಾಂತವ್ವ, ಗಂಗವ್ವ, ಗೌರವ್ವ, ಗಂಗವ್ವ, ಕಳಸ, ಕುಂದಗೋಳ(ತಾ), ಧಾರವಾಡ(ಜಿ)

ಅಡ್ನಡ್ನ ಮಳಿ ಬಂದು ದೊಡ್ನ ದೊಡ್ನ ಕೆರಿ ತುಬಿ
ಗೊಡ್ನುಗಳೆಲ್ಲ ಹಯನಾಗಿ

ರೈತರಾ ಸೆಡ್ಡಿಯ ಮ್ಯಾಲಿ ಸಿರಿ ಬಂದ
ಬಾಸಿಂಗರಾಯರ ಬಲಬಂದು
ಬಾಸಿಂಗರಾಯರ ಬಲಬಂದು ರೈತರಾ ರಾಸಿಯ ಮ್ಯಾಲೆ ಸಿರಿಬಂದ
ಹರಗೀದ ಹೊಲದಾಽಗ ಹರಿದು ಚೆಂಡ್ಯಾಡಿದ ಹರಿದೇವ್ರಮಗ ಕೊಮರಯ್ಯ
ಹರದೇವ್ರ ಮಗ ಕೊಮರಯ್ಯ ಹರಿದು ಚೆಂಡಾಡೀದಲ್ಲಿ ಗೊರಸಾವೀರ ಬೆಳಿಯಾಲೀ
ಬಿತ್ತೀದಾ ಹೊಲದಾಽಗ ಹೊಕ್ಕು ಚೆಂಡಾಡಿದಲ್ಲಿ ಸೆಟ್ಟೇರ ಮಗ ಕೊಮರಯ್ಯ
ಸೆಟ್ಟೇರ ಮಗ ಕೊಮರಯ್ಯ ಹೊಕ್ಕು ಚೆಂಡಾಡಿದಲ್ಲಿ ಹತ್ತೀ ಗೋಧಿ ಬೆಳೆಯಾಲಿ
ಪುಂಡಿಯ ಪಲ್ಲೆ ನಂಚಿಕೊಂಡು ಉಂಡ್ಯಾಳೊ ದೊಡ್ಡನಾಳ್ನವ ಜೋಕೀಲಿಜೋಕೀಲಿ
ನಮ್ಮ ದೇವಿ ಪಟ್ಟಿ ಮುತ್ತುಗಳೋ ಬಗಿಸ್ಯಾಳೊ
ಬ್ಯಾನಿ ನೋಯ್ತಾವಂತ ಕ್ಯಾಣೀಲೀ ನಕ್ಯಾಳೋ ನಾಣ್ಯಾವ ತಗದು ಮಡಿನೋಡ
ನಾಣ್ಯಾವ ತಗದು ಮಡಿ ನೋಡಿ ನಮದೇವಿ ರಜಗೌಮಗನಾ ಹಡದಾಽಳ
ಹೊಟ್ಟಿನೋಯ್ತಾವಂತ ಪಟ್ಟಿಮಂಚನೇರ್ಯಾಳೆ ಇಟ್ಬು ಬಂಗಾರ ತಗಿವೋಳೆ
ಇಟ್ಬು ಬಂಗಾರ ತಗಿವೋಳೆ ನಮ್ಮ ದೇವಿ ಪಟಕೊಬ್ಬ ಮಗನ್ನ ಹಡದಾಳೆ
ಸವಿನನಕಜ್ಜ ಜಗ್ಗೋ ತೋಟ್ಟಿಲಕಟ್ಟಿ ಇಬ್ರ ತೂಗಿದರ ಮಲಗ್ಯೋನ
ಸವಿನನಕಜ್ಜ ಜಗ್ಗೋ ತೋಟ್ಟಿಲಕಟ್ಟಿ ನಮದೇವಿ ಅಬ್ರದ ಮಗನ್ನಾ ಹಡದಾಳೆ
ಜೋಕುಮಾರ ಹುಟ್ಟಲಿ, ಲೋಕವೆಲ್ಲಾ ಬೆಳೆಯಾಲಿ

ಹಾಡಿದವರು : ಬಸಮ್ಮ, ರತ್ನವ್ವ, ಚನ್ನವ್ವ, ನಿರ್ಮಲ, ಸವಣೂರು ಶಿಗ್ಗಾಂವಿ(ತಾ), ಹಾವೇರಿ(ಜಿ)

ಅಡ್ನಾಡ್ನ ಮಳೆಬಡಿದ, ದೊಡ್ಡೊಡ್ಡ ಕೆರಿ ತುಂಬಿ
ಗುಡ್ಡಗಳೆಲ್ಲ ಹೈನಾಗಿ | ಜೋಕುಮಾರ || ಗೌಡರ
ಸೆಡ್ಡಿಯ ಮ್ಯಾಲೆ ಸಿರಿಬಂದು || ಜೋಕುಮಾರ ||೧||

ಹಾಸ್ಯಾಸಿ ಮಳೆ ಬಡಿದು, ಬೀಸ್ಬೀಸಿ ಕೆರೆತುಂಬಿ
ಬಾಸಿಂಗದಂತ ತೆನಿಬಾಗಿ | ಗೌಡರ
ರಾಸಿಯ ಮ್ಯಾಲೆ ಸಿರಿ ಬಂದ ||೨||

ಕರುಣುಳ್ಳ ಕೋಮರಾಮ್ನ ಕೆರೆನೋಡ ಹೋದಾರ
ಕರದು ಕಾರ್ಗಲ ಮಳೆ ಬಂದು | ಗೌಡರು
ಕರೆದು ಹಚ್ಚಡ ಹೊಚ್ಯಾರ ||೩||

ಕೆಂಚೆ ನಮ ಕೊಮರಾ, ಬೆಂಚೀಯ ನೋಡಹ್ವಾದ
ಮಿಂಚ್ಯಾವ ಕಾರಮಳೆಬಂದು | ಗೌಡರು
ಕೆಂಪು ಹಚ್ಚಡ ಹೊಚ್ಯಾರ ||೪||

ಹುಟ್ಟಿದೇಳು ದಿವಸಕ ಪಟ್ಣಾವ ತಿರುಗ್ಯಾನ
ದಿಟ್ನಾ ದೇವಿನಿನ ಮಗನ | ಕೊಮರಾಗ
ಕೊಟ್ರವ್ವೇಳು ದಿನಗಳ ||೫||

ಪುಂಡಿಯ ಪಲ್ಲೆ ನಂಜು ಕೊಂಡ ತಾನುಣಲಿಲ್ಲ
ದಂಡನಾಳವನ ಬಂಕ್ಯಾಗ | ನಮದೇವಿ
ಹೊಂಬಳಿ ಸರವ ಬಗಿಸ್ಯಾಳ ||೬||

ಚಕ್ಕೋಟಿ ರಸಪಲ್ಲೆ, ಇಕ್ಕೊಂಡು ಉಣಲಿಲ್ಲ
ದಿಕ್ಕನಾಳವ್ನ ಬಂಕ್ಯಾಗ | ನಮದೇವಿ
ಚೊಕ್ಕ ಮುತ್ತಿನ ಸರಬಗಿಸೆ ||೭||

ಅರಕೊಂಬ ಅರಷಿಣವು, ದರಬಟ್ಲ ಒಳ್ಳೆಣ್ಣೆ
ನರನಮ್ಮ ದೇವಿ ಕುಲಿಹೊಕ್ಕು | ಎರಕೊಂಡ
ತೆರೆ ಬಂದ ನೀರು ಬಾಗಿಲಕ ||೮||

ಬಾನ ಹುಟ್ಟಿದನಂತ ಬನಕ ತೊಟ್ಟಿಲ ಕಟ್ಟಿ
ಬಾಗಲನ್ನೇರು ನೆರದಾರ | ಹಾಡುತಲಿ
ಕೋಲೆನ್ನು ಜನಕೆ ಜಯಜಯವೊ ||೯||

ಕಬ್ಬುಳ್ಳ ತ್ಯಾಟ್ಯಾಗು ಇಟ್ಟನ್ನಿ ವರದ್ಯಾಂಗ
ಇಬ್ಬರು ತೂಗಲು ಮಲಗಾನ | ನಮದೇವಿ
ಹೆಬ್ಬೂಲಿ ಮಗನ ಹಡೆದಾಳ ||೧೦||

ಹಾರೂರ ಕೇರ್ಯಾಗ ಹಾರಿ ಚೆಂಡಾಡ್ಯಾನ
ನಾರಿ ನಿನಮಗ ಕೊಮರಯ್ಯ | ಚೆಂಡಾಡಿ
ಊರ ಭೂಮೆಲ್ಲ ಬೆಳೆಬಂದ ||೧೧||

ಒಕ್ಕಲಗೇರಿ ತಾ ಸೇರಿ, ಹೊಕ್ಕು ಚೆಂಡಾಡ್ಯಾನ
ಅಕ್ಕನ ಮಗನು ಕೊಮರಯ್ಯ | ಆಡಿದರ
ಅಕ್ಕಿನಾಡೆಲ್ಲ ಬೆಳೆದಾವ ||೧೨||

ಹಾಲ್ಬೇಡಿ ಹಲುಬ್ಯಾನ ಕೆನೆಬೇಡಿ ಕುಣಿದಾನ
ಮೊಸರ ಬೇಡಿ ಕೆಸರ ತುಳಿದಾನ | ಕೊಮರಾನ
ಕುಸುರಾದ ಗೆಜ್ಜಿ ಕೆಸರಾಗ್ಯೊ ||೧೩||

ಸಂದೀಯ ಮನೆಯನ್ನ ಗೊದೀಯ ಮನೆಯನ್ನ
ಗೊಂಚಾಳದನ್ನ ಕೆಸರನ್ನ | ನಮಕೊಮರ
ಸಂದೀಯ ಹೊಕ್ಕನು ನಡುಗೇರಿ ||೧೪||

ಹಾದೀಯ ಮನೆಯನ್ನ ಬೀದೀಯ ಮನೆಯನ್ನ
ಬಾಜರದನ್ನ ಮೊಸರನ್ನ | ನಮಕೊಮರ
ಗೌಳೇರೋಣೆ ಹೊಕ್ಕಾನ ||೧೫||

ಹಳ್ಳಕ್ಕ ತಾಹೋಗಿ, ಸಣ್ಣಾವ್ನ ಇಟ್ಟಾನ
ಕನ್ನಡಿ ತೆಗೆದು ಮೊಕನೋಡೋ | ಕೊಮರಾಯ
ಕಣ್ಣು ಮೂಗಿಲೆ ಕರ ಚೆಲುವ ||೧೬||

ಅಳಕೂತ ಬಳಕೂತ ಬಂದಾಳ ಗುಳಕವ್ವ
ಬಂದು ನಿಂತಾಳ ಅಗಸ್ಯಾಗ | ಗೌಡರು
ತಂದು ಇಳಿಸ್ಯಾರ ಸೆಳಿಮಂಚ ||೧೭||

ಕೊಮರಾ ತಾ ಬರ್ತಾನಂತ ಕೋಣೇಯ ಸಾರೀಸಿ
ಜಣಚಕ್ಕಲಗಿತ್ತಿ ಚದುರೀಯ | ಮನಿಯಾಗ
ಒಂದಾರ ಜ್ಯಾವ ಇರಲಿಲ್ಲ ||೧೮||

ಹೋಗತ ಹೊನ್ನ ಮುರಿದ ಬರತ ಬನ್ನಿಯ ಮುರಿದ
ಕಂಡಕಂಡಲ್ಲಿ ಕರಿಬೇವು | ಮುಡುವಂತ
ಪುಂಡನ್ನ ದೇವಿ ಹಡದಾಳ ||೧೯||

ಅಕ್ಕ ಹಡದಾಳಂತ ಏನೊಯ್ದೆ ಬಸವಯ್ಯ
ಮುತ್ತಿನ ಚೆಂಡ ಕಾರ್ಮುಗಿಲ | ಸುರಿ ಮಳೆಯ
ಅರತಿ ಲೊಯೆ ಹರಳೆಲೆಯ ||೨೦||

ಬೆಣ್ಣೀಯ ತಾ ಮುದ್ದಿ, ಕನ್ನ್ಯಳ್ಳ ಕುಮರಾಗ
ಹೊನ್ನ ಮಾಳಿಗೆಯ ಮನೆಯವ್ವ | ಕೆನೆ ಮೊಸರು |
ಬಿನ್ನಾಯ ಹೇಳ ಕೊಮರಾಗ ||೨೧||

ಹಾಲ ತಾ ಮಗಿ ತುಂಬಿ, ಬಾಲ ನಮ್ಮ ಕೊಮರಾಗ ||
ಮೇಲ ಮಾಳಿಗೆ ಮನೆಯವ್ವ | ನೀ ಕೊಟ್ರ
ಮೇಲಾಗಿ ಬೆಳಿಲಿ ನಿಂಭೂಮಿ ||೨೨||

ಅಳವುತ ಸಿರಿತಾನು, ಬಳಲುತಲಿ ಬಂದಾಳು
ಅಳಕಾದಂಬಲಿ ತಡೆದಾವು | ನಮಕೊಮರ
ಕಳೆದೇಳು ದಿನಕೆ ಮರಣವ್ವ ||೨೩||

ಹುಟ್ಟಿದಾ ಏಳ್ದಿನಕ, ಪಟ್ಣಾವ ತಿರಗ್ಯಾನ
ದಿಟ್ಟಾದೇವಿ ನಿನಮಗನ | ಕೊಮರಾಗ
ಬರೆದಾಳ ಸೆಟವಿ ಏಳ್ದೀನ ||೨೪||

ಪುಂಡಾನ ಪುಂಡಾಟ್ಕೆ, ಹಿಂಡ ಮಂದಿ ಕೂಡ್ಯಾರ
ಕಂಡಲ್ಲಿ ಕಲ್ಲಿಗೆ ಬಡಿದಾರ | ರಾತ್ರ್ಯಾಗ
ಅಗಸರ ಕಲ್ಲಾಗ ತುರಿಕ್ಯಾರ ||೨೫||

ಜಂಗಮ ನಾನಲ್ಲ, ಜೋಗಯ್ಯ ನಾನಲ್ಲ
ತಿಂಗಳ್ಗೆ ಬರುವ ತಿರುಕಲ್ಲ | ತಾಯವ್ವ
ತುಂಬಿ ಮೊರಜೋಳ ನೀಡವ್ವ ||೨೬||

ಕಲ್ಲಳಿಗಿ ಕಬ್ಬಿಣದ, ಮೆಟ್ಟುತ್ತಿ ಏರ್ಯಾಳ
ಬಳಕುತ ಬಳತ ತಗೆದಾಳ | ತಾಯವ್ವ
ಬಿಳಿಯೆಳ್ಳು ತುಂಬಿ ನೀಡ್ಯಾಳ ||೨೭||

ಜಯ ಜಯ ಕೊಮರಾಗ ಜಯ ಜಯ ಹಾಡೀರೆ
ಜಯ ಜಯ ಭೂಮಿ ಬೆಳಸೀಗೆ | ಹಡದವ್ವ
ಜಯ ಜಯ ಇರಲಿ ಜಗದಾಗ ||೨೮||

ಕಾಯಿ ಕತ್ತರಿಸಿ ತೂಗ ತೂಗಿ ನೋಡುತಾವೆ
ಜೋಗ್ಯಾಗಿ ನಿಂತ ಜತನಿಂಗ | ಇನ್ನ
ತರಿಸಯ್ಯ ಹೊನ್ನ ಮಳೆಯ ||

ಯಾಕೆ ಕೊಮರಯ್ಯ ನಿನ್ನ ಬಾಯಿಗೆ ಬೆಣ್ಣೆಲ್ಲ
ಮೇಲೆ ಮಾಣಿಕದ ಹರಳಿಲ್ಲ | ಈ ಊರ
ಓಣ್ಯಾಗ ನಿನ್ನ ಸುಳಿವಿಲ್ಲ ||

ರಾಯ ರಾಯರೆಲ್ಲ ಚಾವಡ್ಯಾಗ ಕುತಗೊಂಡು
ರಾಜ ಕೊಮರನ ಕರಸ್ಯಾರ | ಕೇಳ್ಯಾರಲ್ಲಿ
ಆರದ್ರಿ ಮಳೆಯು ಬರಲಿಲ್ಲ ||

ಶೆಟ್ಟಿ ಶೆಟ್ಟ್ಯಾರೆಲ್ಲ ಕಟ್ಟಿ ಮ್ಯಾಲೆ ಕುತಗೊಂಡು
ಪುತ್ರ ಕೊಮರಾನ ಕರಸ್ಯಾರ
ಪುತ್ರ ಕೊಮರಾನ ಕರೆಸಿ ಕೇಳ್ಯಾರಲ್ಲಿ
ಉತ್ತರಿ ಮಳೆಯ ಬರಲಿಲ್ಲ ||

ಅತ್ತಲ ಮಳಿ ಬಂದಿತ್ತಲ ಕೆರಿ ತುಂಬಿ
ಗುತ್ತಿ ಮಲೆನಾಡ ಕೊಳಿಕಟ್ಟ ಗೌರವ್ವ | ನಿನ್ನ
ಪುತ್ರ ನಂದಲ ತಡದ್ದವೆ ||

ಅಡ್ಡಡ್ಡ ಮಳಿ ಬಂದು ದೊಡ್ಡ ದೊಡ್ಡ ಕೆರಿ ತುಂಬಿ
ಗುಡ್ಡಗಳೆಲ್ಲಾ ಹಯನಾಗಿ | ಗೌಡರ
ಸಡ್ಡೆಯ ಮೇಲೆ ಸಿರಿ ಬರಲಿ ||

ಒಂದೆತ್ತು ನಿಮಗೆ ಹಿಂಡೆತ್ತು ಆಗಲೋ
ಸೇರಿದ ಭೂಮಿ ಬೆಳೆಯಲಿ | ಜೋಕುಮಾರಣ್ಣನ
ನಾರೆರು ಕೊಟ್ಟು ಹರಕೆಯು ||

ಜೋಕುಮಾರ ಸಮೃದ್ಧಿಯದೇವ
ಜ್ವಾಳಾದ ಹೊಲಕೆ ಆರೇಳು ಮುಂಚಿಗೆ ಹಾಕಿ
ಆರೇಳು ಕರೆದರೆ ಓ ಎನ್ನು | ಗೌರಮ್ಮ
ಮಾಯದಿಂದ ಮರ್ಗ ಹಡದಳೆ ||

ಹುಟ್ಟಿದೇಳು ದಿವಸಕ ಪಟ್ನಾವ ತಿರುಗ್ಯಾನ
ದಿಟ್ನಾವ ನಿನಮಗನ | ಕೊಮರಾಯ
ಕೊಟ್ಟಾರ ಏಳ ದಿನಗಳನು ||

ರಾಣೇದ ಹಚ್ಚಡ ಹೊತ್ತಾನ ಕೊಮರ
ರಾಯರ ಓಣ್ಯಾಗ ಸುಳಿದಾನ | ನನಕೊಮರಾ
ರಾಯರ ಹೆಂಡರು ತನಗೆಂದ ||

ಹಾರೋರ ಗೇರ್ಯಾಗ ಹೊಕ್ಕಾನ ನನಕೊಮರ |
ಗಾರೂಡಿಗಣ್ಣು ತಿರುವೂತ | ತನ್ನಯ್ಯ
ತಾಯಂದಿರಿದ್ದರು ಬಿಡಲಿಲ್ಲ ||

ಪುಂಡನ ಪುಂಡಾಟ್ಕ ಹಿಂಡ ಮಂದಿ ಕೂಡ್ಯಾರ
ಕಂಡಲ್ಲಿ ಕಲ್ಲಿಗಿ ಬಡಿದಾರ | ರಾತ್ರ್ಯಾಗ
ಅಗಸರ ಕಲ್ಲಾಗ ತುರಕ್ಯಾರ ||

ಅಷ್ಟಮಿ ದಿನ ಹುಟ್ಟ್ಯಾನ ನನ ಕೊಮರ
ಸೆಟ್ಟೇರ ನೋಡಿ ಬೆಸಗೊಂಡ | ಜೋಕುಮಾರ
ಹುಟ್ಟಿದೇಳು ದಿವಸಕ ಮರಣವ ||

ಒಕ್ಕಲಗೇರ್ಯಾಗ ಹೊಕ್ಕಾನ ನನಕೊಮರ
ಚಕ್ಕರಗಣ್ಣ ತಿರವೂತ ಜೋಕುಮಾರ
ಒಕ್ಕಲಿಗೇರೆ ಹೆಣ್ಣು ತನಗೆಂದ ||

ಹರಗೀದ ಹೊಲದಾಗ ಹರಿದು ಚಂಡಾಡ್ಯಾನ
ಹರದೀಯ ಮಗನ ಕೋಮರಯ್ಯ ಚಂಡಾಡಿಯದಲ್ಲಿ
ಹವಳ ಮುತ್ತುಗಳು ಬೆಳೆದಾವ ||

ಬಲವಂದು ನಿಮ್ಮ ಬಾಗಿಲಕ ಕುಂತಾನ
ಬಾಗೀನಗಳ ಕೋಡಿರವ್ವ | ಜೋಕುಮಾರ
ಬಾಗಲಕೆ ಹರಕಿ ಕೊಡತಾನ ||

ಬಸಲಿಕ್ಕೆ ಸೊಪ್ಪೀಗಿ ಹೋದಾಳ ಹನುಮವ್ವ
ಬಸುರಿಲ್ಲವಂತೆ ಅಳುತಾಳೆ |
ನನ ಕೊಮರ ಕುಸಲಾದ ಗೆಜ್ಜೆ ಕೆಸರಾಗ ||

ಯಾಕೆ ಕೊಮರಾ ನಿನ್ನ ಬಾಯಿಗೆ ಬೆಣ್ಣಿಲ್ಲ
ಮೇಲೆ ಮಾಣಿಕದಾ ಹರಳಿಲ್ಲ ಈ ವೂರ
ಓಣ್ಯಾಗ ನಿನ್ನ ಸುಳುವಿಲ್ಲ ||

ಕರಿಹಣಮ ಹಾನ ಮುರಡೊಂಕಿ | ಹಾರಿದಾ ಲಂಕಿ
ಹಚ್ಚಿ ಅವ ಬೆಂಕಿಸುಟ್ಟ ಎಲ್ಲಾ
ಕೆಂಪು ಮೊಡಿಯಂಥ ಜೊಕ್ಮಾರ
ವೆರೆದ ಬಿಟ್ಟಾರ ಕವಿಯ ಹೊಲ್ಯಾರರ
ಹೊಡೆದ ಅವನ ಪ್ರಾಣಾ ||

ಹುಟ್ಟಿದೇಳು ದಿವಸಾಕೆ ಪಟ್ಟಣವ ತಿರುಗ್ಯಾನೆ
ದೃಷ್ಟಿದೇವಿ ನಿನಮಗ ಕೊಮರಾಗೆ |
ಕೊಟ್ಟಾರೆ ಏಳು ದಿನಗಳ ||

ಆರೇಳು ದಿನಕೇನ ಆಳಿದನೆ ರಾಜ್ಯಾವ
ದಿನೇಲ ದೇವಿ ನಿನಮಗ ಕೊಮರಾಯ
ತೋರ್ಯಾರೆ ಏಳು ದಿನಗಳ ||

ಬಿತ್ತಿದಾ ಪೈರು ಒಣಗಿ ಹೋಗ್ತಾವೇ
ಹೆತ್ತವ್ವ ಹಿಟ್ಟು ಕೊಡಲೊಲ್ಲು | ಶಿವರಾಯ
ಉತ್ತರೆಯ ಮಳೆ ಕರುಣಿಸು ||

ಕಟ್ಟೀಯ ಹತ್ಯಾನ ಹೊತ್ತುಗಳ ನೋಡ್ಯಾನ
ಹತ್ಯಾನೆ ನೀಲ ಗುದರೆಯ ನಮ | ಕೊಮರ
ಕೈ ಬೀಸಿ ಮಳೆಯ ಕರೆದ್ಯಾನೆ ||

ಏರಿಯ ಹತ್ಯಾನ ಯೇಳ್ಯಾವ ನೋಡ್ಯಾನ
ಏರ್ಯಾನ ನೀಲಗುದರೆಯ ನಮ | ಕೊಮರ
ಶಲ್ಯೇವ ಬೀಸಿ ಕರೆದಾನೆ ||

ಜೋಕುಮಾರ ಬಾಗಿಲಿಗೀ ಬಂದಾಽರ
ಬೇಡುತಾರವ್ವ ಸೆವಿ ಬೆಳಸ ಜೋ ‖ ನಿಮಿಗೊಳ್ಳಿ
ಬಾಲಯ್ನದರ ಸಿರಿಯಾಗ ‖

ಹುಟ್ಟಿದಾವ ಏಳುದಿನ ಪಟ್ನಾವ ತಿರಿಗಿ ಬಾ
ದಿಷ್ನಾದೇವಿ ನಿನ ಮಗಽ ಜೋ ‖ ಕೊಮರಾಗ
ಕೊಟ್ಟಾರೇಳ ದಿನಗಳ ಜೋಕುಮಾರ ‖

ಅಡ್ನಡ್ನ ಮಳಿ ಬಂದು ದೊಡ್ನೊಡ್ನ ಕೆರಿ ತುಂಬಿ
ಗೊಡ್ಡುಗಳೆಲ್ಲ ಹೈನಾಗಿ ಜೋ ‖ ರೈತರ
ಸೆಡ್ನೆದ ಮ್ಯಾಲೆ ಸಿರಿ ಬಂದಽ ಜೋಕುಮಾರ ‖

ನಮ್ಮಳು ಕೊಮರ ನಿಮ್ಮನ್ಸ ಅಳಿಯಾನೆ
ಇನ್ನೇಳು ದಿನಗಳ ದೂರಾಽನೆ ಜೋ ‖ ಕೊಮರಾಗ
ಕೈಬೀಸಿ ಮಳಿಯಾ ಕರೆದಾನೆ ಜೋಕುಮಾರ ‖

ಹಾ ಸ್ಯಾಸಿ ಮಳಿ ಬಡ್ಡು ಬೀಸ್ಬೀಸಿ ಕೆರಿ ತುಂಬಿ
ಬಾಸಿಂಗದಂಗೆ ತೆನಿಬಾಗಿ ಜೋ ‖ ರೈತರ
ರಾಸಿಯ ಮ್ಯಾಲೆ ಸಿರಿ ಬಂದ್ಯ ಜೋಕುಮಾರ ‖

ಅಕ್ಕ ಹಡದಳಂತ ಏನು ತಂದೇ ಬೆನುವಯ್ಯ
ಮುತ್ತಿನ ಚೆಂಡು ಮುಗಿಲ್ಬಾನು ಜೋ ‖ ನನಕೊಮರಾಗ
ಅರಿಶಿನ ತನ್ನನೊಂದಳಲಿಯೋ ಜೋಕುಮಾರ ‖

ಅವಳಗಿ ತಂದ ಕೊರಳಿಗೆ ಜುಂಗಾ ತನ್ನೆ
ಕಾಲಿಗಿ ತಂದ ಕಿರುಗೆಜ್ಜೆ ಜೋ ‖ ಪುಂಡೀಯ ಪಲ್ಯಾವೆ
ನಂಜಿ ನಂಜಿ ನೋಡ್ಯಾಳ ಜೋಕುಮಾರ ‖

ದಂಡಿನಾಳವ್ನ ಬಯಕೀಲೆ ಜೋಕುಮಾರ
ನಿಮ್ಮವ್ವ ಬೆಂಡ ಬತ್ತಾಸೊ ಬಯಸವ್ವೆ ಜೋ ‖ ಆಯ್ತಾರವೀ
ಅಡ್ನ ನ್ಯಾಮಾನಾದೇ ಜೋಕುಮಾರ ‖

ಸೂಳಗೇರ್ಯಾಗೇ ಸುಳದಾನೋ ಜೋಕುಮಾರ
ಸೂಳಗೇರ್ಯಾಗೇ ಸುಳದಾನೋ ನನ ಕೊಮರಾಗೇ
ಈಳ್ಯಾವೆ ಕೊಟ್ಟು ಕರೆದ್ಯಾರೋ ಜೋಕುಮಾರ ‖

ಮಾದರಗೇರಿ ಯೇಳ್ಯಾವ ನೋಡಿದಾಽ
ಏರಬೇಕೆಂದ ಕುದರೀಯ ಜೋ ‖ ಈ ಊರ
ನಾರ್ಯಾರ ಕೂಡ ನಡೆದಾಽನೆ ಜೋಕುಮಾರ ‖

ಉತ್ತರಗತ್ತಿ ಹೊತ್ತಾವಾs ನೋಡಿದಾs ಹತ್ಶೇಕಂದ
ಕುದರೀಯ ಜೋಕುಮಾರ ಈ ಊರ|
ಅತ್ಯಾಗ್ಯಾರ ಕೂಡ ನಡದಾನಾ ಜೋಕುಮಾರ||

ಏಣು ಕೊಟ್ಟರಾ ಸೀಮಿಗೊಂಡೇವಾ ದೇಸಕ
ಮ್ಯಾಲಿ ಮಲಗೋವ್ನ ಜೋಕುಮಾರ ನನಕೊಮರಾಗಾs
ಸೂಸಿ ಮಲ್ಲಗೀ ಕಳುವ್ಯಾರ ಜೋಕುಮಾರ ||

ಉದ್ದಾರಂಗ ರೆಬ್ಬಳ್ಯಾಗೀಟ್ಟುಕೊಂಡು ಮಧ್ಯಾನ್ನ
ದವ್ನ ತಿರುಗೌವ್ನ ಜೋ || ನನಕೊಮರಾಗ
ರೊಕ್ಕದ ಮಳಿಯ ಸುರಿಯಾಲೀ ಜೋಕುಮಾರ ||

ಹರಕಲ್ಲ ನನ ಕೊಮರ ತಿರುಕಲ್ಲ ನನಕೊಮರ
ವರ್ಸಕ್ಕೊಮ್ಮೆ ಬರುವೋನಿ ನನ ಕೊಮರಾಗೆ
ಹರುಸದಿ ನೀಡು ಮರ ತುಂಬ ಜೋಕುಮಾರ ||

ಹುಟ್ಟೀದೀ ನನ ಕೊಪ್ಪೀಯಾ ನನ ಕಿವಿಯಾಗೆ
ಸುತ್ತ ಮಾಳಿಗೀ ಕೊನೆಯವ್ವ, ಸುತ್ತಮಾಳಿಗೀ ಮನೆಯವ್ವ ಜೋ || ತಾಯವ್ವ
ಉಪ್ಪು ತಾ ನನಕೊಮರಾಗೆ ||
ಹರಗೀದ ಹೊಲದಾಗೆ ಹರಚೆಂಡನಾಡೀದ
ಹರಗೇರ ಕಂಡ ಕೊಮರಯ್ಯ ಜೋ || ಚೆಂಡಾಡಿದಲ್ಲಿ
ಹತ್ತಿರಾಗೆಲ್ಲ ಬೆಳೆದಾವೋ ಜೋಕುಮಾರ ||
ಹತ್ತಿರಾಗೆಲ್ಲ ಬೆಳೆದಲ್ಲಿ ಕಟ್ಟರೀ ಹಿಡಿದಾನೋ
ಬೀಳು ಬನ್ನವರ ಹೆಗಲಿಗೇ ಜೋ || ಕೊಮರಾಗೇ
ಈಲಂದಗಿರಿಯ ಇಳದಾsನೋ ಜೋಕುಮಾರ ||
ಈ ವೇಳ್ಯಾಗ ಸೂಲಗಿತ್ತೀ ಬರುತಾಳೊ
ಕಂದ ಬಾಲ್ಯಾರೋ ಬೆಸಗೊಳ್ಳಿ ಜೋ || ನಮದೇವಿ
ಹರೆಂದೊಳು ಮಗನ ಹಡದಾಳೋs ಜೋಕುಮಾರ ||
ಜೋಕುಮಾರ ರಿಂಡ ಮೀ ಮಗವಿಲ್ಲ
ಹೆಂಡರ ಮಕ್ಕಳ ಕಳಸ್ಯಾರೋ ಜೋ || ಕಳಸಿ ನಾಕೊಟ್ಟರಾ
ಗಡ ನೊಳಂಗಾದೀ ಬಿಡನೊಂದ ಜೋಕುಮಾರ ||
ಇಂದರೀ ಹುಣ್ಣವೀ ಬಂಡಾಳಾs ನಮ್ಮ ದೇವಿ
ಕಂದನ ಕೈಯಾಗ ರಣಧೀರ ಜೋ || ಇಳಕೊಂಡ
ಬಂದರ ತೆಲಿಯಾನಡಸುತಾ ಜೋಕುಮಾರ ||
ಬಂದಳಂತ ಕ್ಯಾಣೀಯಾ ಸಾರೀಸೆ

ಜನವಳ ಕಲಗೆ ಚೆದರೀದೇ ಜೋ ‖ ಚೆದರೀದಾ ನಾ ಮನಿಯಾಗ
ತಾನೊಂದ ಜಾವ ಇರಲಿಲ್ಲ ಜೋಕುಮಾರ ‖
ಜನವಳಕಲಗೀ ಚೆದುರಿದಾ ನಾ ಮನಿಯಾಗ
ತಾನೊಂದು ಜಾವ ಇರಲಿಲ್ಲ ಜೋ ‖ ಬೆಟ್ಟಗೀರ ಕನ್ನಿ
ಬಟ್ಟಲೀ ಅರಸಿನ ಆ ನಮ ಕಂದನ ಸುಳಿನೀರಾ ಜೋಕುಮಾರ ‖
ವಟ್ಟಿನ ತೆರೆಯಾ ಹೊಳೆದ್ಯಾವೋ
ಜೋಕುಮಾರ ರಂಗಡ್ಯಾಗಾ ಕುಂತಾನೋ
ದುಂಡ ಮೊಗ್ಗಾಗಿ ಹೊಳೆದಾನೋ ಜೋಕುಮಾರ ‖
ದುಂಡ ಮಲ್ಲಿಗೀ ಕಳುವ್ಯಾರೋ ಜೋ ‖
ಕೆಂಪೊಂದುಟ್ಟಿದ ಕೆಂಪೊಂದಾ ನಾಚ್ಚಿದಾ
ಕೆಂಪನನ ಸೆರಗಾ ಮರಿ ಮಾಡಿ ಜೋಕುಮಾರ ‖
ಕೆಂಪನ್ನ ಸೆರಗ ಮರಿ ಮಾಡಿ ನನ
ಕೊಮರ ಜೋಕುಮಾರ
ಸತಗಾ ಹೆಣ್ಣ ನನಗೆಂದ ಜೋಕುಮಾರ ‖
ಬಿಳಿನೊಂದುಟ್ಟಿದ ಬಿಳಿದೊಂದಾ ನಚ್ಚಿದ
ಬಿಳಿನನ ಸೆರಗಾ ಮರಿ ಮಾಡಿ ಜೋ ‖ ನನ ಕೊಮರಾ
ಬೆಳಗಾವಿ ಹೆಣ್ಣ ನನಗೆಂದ ಜೋಕುಮಾರ ‖
ಕರಿಯನ್ನುಟ್ಟಿದ ಕರಿದೊಂದ ನಚ್ಚಿದಾ
ಕರಿನನ ಸೆರಗಾ ಮರಿ ಮಾಡಿ ಜೋ ‖ ನನಕೊಮರ
ಕಲಬಾವಿ ಹೆಣ್ಣ ನನಗೆಂದಾ ಜೋಕುಮಾರ ‖
ಜೋಕುಮಾರ ಹೊತ್ತಾರ ಬರುತಾರ ತಾರವ್ವ
ಸುತ್ತ ಮಾಳಗೀ ಮನೆಯವ್ವ ಜೋ ‖ ತಾಯವ್ವ
ಬತವಾ ತಾ ನನ ಕೊಮರಾಗೆ ಜೋಕುಮಾರ ‖
ಅಷ್ಟಮಿ ಎಳಿಯಾಗ ಹುಟ್ಟಿದವ್ವ ನನ ಕೊಮರ
ದಿಷ್ಟಾದೇವಿ ನಿನ ಮಗ ಜೋ ‖ ಕೊಮರಾಗ
ಕೊಟ್ಟರೇಳೂ ದಿನಗಳಾ ಜೋಕುಮಾರ ‖
ಹಾಸ್ಯಾಸಿ ಮಳಿ ಬಡ್ಡು ಬೀಸ್ಬೀಸೀ ಕೆರಿ ತುಂಬಿ
ಬಾಸಿಂಗದಂಗೆ ತೆನಿಬಾಗೀ ಜೋ ‖ ರೈತರ
ರಾಸೀಯ ಮ್ಯಾಗೆ ಸಿರಿ ಬಂದ ಜೋಕುಮಾರ ‖
ಮೂವತ್ತಾ ಮಲಕೀಲ ತುಂಗಬಿಟ್ಟಾನ
ಕರುಗರಯ ಜೋ ‖ ಕೊಮರಾಗ
ಹೂವಿಟ್ಟಾನ ತರ ತರದೀ ಜೋಕುಮಾರ ‖
ದಿನದಾ ಹಾಲ ತಂದಿಡ ನನ ಕೊಮರಾಗ

ಸಣ ಮನಿಕಿಂತ ಚೆಲುವಾಗೋ ಜೋ || ಕೊಮರಾಗ
ಇನ್ನೇಳು ದಿನ ಬಲುವೈತೆ ಜೋಕುಮಾರ ||
ನಿನ ಜತ್ತಿ ಪಾವೊಡುಕೂತೆ ಜರ ಪೈ ಅಂಗಿ
ಬಲಗೈ ಜೋ || ಜತ್ತಿಜರಪೈ ಅಂಗಿ
ಹಿಡಕೊಂಡು ಬಂದನ ಗೌಡರ ಸಂದರೀಲೀ ಜೋಕುಮಾರ ||

ಹಾಡಿದವರು : ಗಂಗವ್ವ ಮಹದೇವಪ್ಪ, ಮಲ್ಲವ್ವ ಬಸಪ್ಪ ಕಕ್ಕೇರಿ, ಗಂಗವ್ವ ಬಿಟ್ಟಪ್ಪ ಸುಣ್ಣಗಾರ್, ಗಂಗವ್ವ ಬಸಪ್ಪ ಸುಣ್ಣಗಾರ್ ಕಿತ್ತೂರು ಬೈಲಹೊಂಗಲ(ತಾ)

ಸಾರಾಂಶ : ಜೋಕುಮಾರನನ್ನು ಹೊತ್ತುಕೊಂಡು ನಿಮ್ಮ ಮನೆ ಬಾಗಿಲಿಗೆ ಬಂದಿದ್ದೇವೆ. ಒಳ್ಳೆಯ ಬೆಳಸಿ ಕಾಳುಗಳನ್ನು ಅವನಿಗೆ ನೀಡಿರಿ. ನಿಮಗೆ ಸುರದ್ರೂಪಿಯಾದ ಮಗನು ಜನಿಸುತ್ತಾನೆ. ಮಕ್ಕಳಿಲ್ಲದವರು ಇವನನ್ನು ಬೇಡಿಕೊಂಡರೆ ಮಕ್ಕಳನ್ನು ಕರುಣಿಸುತ್ತಾನೆ. ದಿಷ್ಟಾದೇವಿ(ಜೇಷ್ಠಾದೇವಿ)ಯ ಮಗನಾದ ಜೋಕುಮಾರನು ಹುಟ್ಟಿದ ಏಳುದಿನದಲ್ಲಿ ಪಟ್ಟಣವನ್ನೆಲ್ಲ ತಿರುಗುತ್ತಾನೆ. ಇವನ ಆಯಸ್ಸು ಏಳುದಿನ ಮಾತ್ರ ಇರುತ್ತದೆ. ಭಾರೀ ಮಳಿ ಬಂದು ದೊಡ್ಡದಾಗಿರುವ ಕೆರಿ ತುಂಬುತ್ತದೆ. ಉತ್ತಮವಾದ ಫಸಲು ಬರುತ್ತದೆ. ಜಾನುವಾರುಗಳೆಲ್ಲ ಉತ್ತಮವಾದ ಹೈನನ್ನು ನೀಡುತ್ತವೆ. ರೈತರ ಬದುಕು ಹಸನಾಗುತ್ತದೆ. ಗಂಗಾಮತಸ್ತರ ಮನೆಯಲ್ಲಿ ಜನಿಸಿದ ಜೋಕುಮಾರನು ಮಳೆ ತರಿಸುವ ದೇವನಾಗಿದ್ದಾನೆ. ಇವನು ಕೈಬೀಸಿ ಮಳೆಯನ್ನು ಕರೆಯುತ್ತಾನೆ. ಇವನಿಂದಾಗಿ ಮಳೆ ಬರುತ್ತದೆ. ಹದ ಮಳೆ ಬಂದದ್ದರ ಪರಿಣಾಮ ಬಾಸಿಂಗದಂತೆ ಎಲ್ಲಾ ಪೈರುಗಳು ತೆನೆಯೊಡೆಯುತ್ತವೆ. ಅಕ್ಕ ಹಡೆದಿದ್ದಾಳೆಂದು ಏನು ತಂದಿದ್ದೀಯ ಎಂದು ಕೇಳಿದಾಗ ಮುತ್ತಿನ ಚೆಂಡು ಹಾಗೂ ಅರಿಸಿನವನ್ನು ತಂದಿದ್ದೇನೆಂದು ಹೇಳುತ್ತಾನೆ. ಜೋಕುಮಾರನು ಗರ್ಭದಲ್ಲಿದ್ದಾಗ ಅವನ ತಾಯಿಗೆ ಬೆಂಡುಬತ್ತಾಸು ತಿನ್ನುವ ಬಯಕೆಯಾಗುತ್ತದೆ. ಬೆದೆಬಡುಕ ಜೋಕುಮಾರನು ಸೂಳೆಯರ ಕೇರಿಯಲ್ಲಿ ಸುಳಿಯುತ್ತಾನೆ. ಅವರು ಇವನನ್ನು 'ವೀಳ್ಯ' ಕೊಟ್ಟು ಕರೆಯಿಸುತ್ತಾರೆ. ಹೊಲೆಯರ ಕೇರಿಯಲ್ಲಿ ವೇಳೆಯನ್ನು ನೋಡಿ ಕುದುರೆಯನ್ನು ಏರಿಕೊಂಡು ಊರ ಹೆಂಗಸರ ಮನೆಗೆ ಹೋಗುತ್ತಾನೆ. ಕೈಯಲ್ಲಿ ಖಡ್ಗವನ್ನಿಡಿದು ಕುದುರೆಯ ಮೇಲೆ ಕುಳಿತುಕೊಂಡು ಹೆಂಗಸರ ಬಳಿಗೆ ಹೋಗುತ್ತಾನೆ. ಇವನಿಗೆ ಏನು ಕೊಟ್ಟರೂ, ಎಷ್ಟು ಕೊಟ್ಟರೂ ಕಡಿಮೆಯೇ. ಮೇಲೆ ಮಲಗಿರುವ ಜೋಕುಮಾರನಿಗೆ ಮಲ್ಲಿಗೆ ಹೂವನ್ನು ಕೊಡಿರಿ. ಮಧ್ಯಾಹ್ನದಲ್ಲಿ ತಿರುಗುವ ಇವನು ಕೈಬೀಸಿ ಮಳೆಯನ್ನು ಕರೆದರೆ ರೊಕ್ಕದ ಮಳಿಯೇ ಸುರಿಯುತ್ತದೆ. ಇವನು ಹರುಕನಲ್ಲ, ತಿರುಕನಂತೂ ಮೊದಲೇ ಅಲ್ಲ. ವರ್ಷಕ್ಕೊಮ್ಮೆ ಮಾತ್ರ ಬರುವ ಇವನಿಗೆ ಸಂತೋಷದಿಂದ ಮೊರದ ತುಂಬ ಧಾನ್ಯಗಳನ್ನು ನೀಡಿರಿ. ಹಾಗೆಯೇ ಇವನಿಗೆ ಪ್ರಿಯವಾಗಿರುವ ಉಪ್ಪು, ಒಣಮೆಣಸಿನ ಕಾಯಿ, ಬೆಣ್ಣೆಯನ್ನು ತನ್ನಿರಿ. ಇವನು ಹರಗೀದ ಹೊಲದಲ್ಲಿ ಚೆಂಡಾಟವನ್ನಾಡುತ್ತಾನೆ. ಇವನು ಆಡಿದ ಜಾಗದಲ್ಲಿ ಹತ್ತಿ, ರಾಗಿ ಬೆಳೆಗಳು ಸಮೃದ್ಧವಾಗಿ ಬೆಳೆಯುತ್ತವೆ. ಫಸಲುಗಳು ಸಮೃದ್ಧವಾಗಿರುವ

ಹೊಲದಲ್ಲಿ ಇವನು ಆನಂದದಿಂದ ಕಾಲಕಳೆಯುತ್ತಾನೆ. ಮನೆಯಲ್ಲಿ ಸ್ವಲ್ಪ ಕಾಲವೂ ಇರದ ಜೋಕುಮಾರನು ಸದಾ ಅಡ್ಡಾಡುತ್ತಿರುತ್ತಾನೆ. ತನ್ನ ಮೆಚ್ಚಿನ ಹೆಂಗಸರ ಬಳಿ ಕಾಲಕಳೆದು ದುಂಡು ಮೊಗ್ಗಿನಂತೆ ಹೊಳೆಯುತ್ತಾನೆ. ಕೆಂಪನೆಯ ವಸ್ತ್ರವನ್ನು ಧರಿಸಿದ ಇವನು ಕೆಂಪನೆಯ ಹುಡುಗಿಯೇ ಬೇಕೆಂದು ಹಠ ಮಾಡುತ್ತಾನೆ. ಬಿಳಿಯ ಬಟ್ಟೆಯನ್ನು ಹೊದ್ದ ಜೋಕುಮಾರನು ಬೆಳಗಾವಿ ಹೆಣ್ಣು ಬೇಕೆನ್ನುತ್ತಾನೆ. ಕಪ್ಪನೆಯ ಪೋಷಾಕನ್ನು ಧರಿಸಿದ ಇವನು ಕಲಬಾವಿ ಹೆಣ್ಣು ಬೇಕೆನ್ನುತ್ತಾನೆ. ಇವನಿಗೆ ಭತ್ತವನ್ನ ನೀಡಿರಿ. ದಿಷ್ಮಾದೇವಿ(ಜೇಷ್ಮದೇವಿ)ಯ ಮಗನಾಗಿ ಅಷ್ಟಮಿ ಎಳಿಯಲ್ಲಿ ಹುಟ್ಟಿದ ಇವನಿಗೆ ಕೇವಲ ಏಳು ದಿನಗಳು ಮಾತ್ರ ಆಯುಸ್ಸು.

ಗುಂಡಿಯಾ ನೊಲವ ಕುಲವನೊಂದು ಬಂದಾರ
ದಂಡಿಯಾ ಮಗನ ನೊಲನವನ ಕೊಮರಾಗೆ
ದಂಡಾಕೊರಳಾ ದರಣೆಲ್ಲೇ ಜೋಕುಮಾರ ||
ದಂಡಾ ಕೊಟ್ಟೇರ ಇಂಡೆಮ್ಮಿ ಹಡದೀರೆ
ಹಿಡಿದಾ ಹೆಂಡ್ರ ಮಕ್ಕಳ್ನೇ ಕಳಸ್ಯಾರೆ ಜೋಕುಮಾರ
ಹೆಂಡ್ರ ಮಕಳ್ನಿ ಕಳಿಸ್ಯಾರಿ ಜೋಕುಮಾರ ||
ಕೊಟ್ಟಾರೀ ಬೆಂಡೆಕ್ಕೆನಂದಾ ಬಿಡೆನಂದಾ
ಬನ್ನಿಯಾ ಗಿಡಕ ಬನ್ನಾ ತೊಟ್ಟಿಲ ಕಟ್ಟಿ
ಬಂದೆಯನೆನನ್ನೋ ಬಳಗಲ್ಲೊ ಜೋಕುಮಾರ ||
ಬಂದೆಯನೆನನ್ನೋ ಬಳಗಲ್ಲೊ ಜೋಕುಮಾರ
ಬಂದೆಯನೆನನ್ನೋ ಬಳಗಲ್ಲೊ ನನ್ನವ್ವ
ಚಿನ್ನವ್ವ ಹೆಸರ ಹೇಳವ್ವ ಜೋಕುಮಾರ ||
ಜೋಕುಮಾರ ಹುಟ್ಟಿ ಲೋಕೆಲ್ಲಾ ಮಳಿಯಾಗಿ
ಹೈಕಳೆಲ್ಲಾ ಕರಿಯಾದೆ ಜೋ || ನಮದೇವಿ
ಕತ್ತಿನ ಮೊಸರ ಕಡದಾಽಳ ಜೋಕುಮಾರ ||
ಕತ್ತಿ ಹಿಡದಾ ನುಚ್ಚೋಡಿ ಅತ್ತಾನ
ರಸ್ತೀಲಿ ಸಾಗಿ ನಡೆದಾನ ನನಕೊಮರ
ಬರ್ತಿಯಣ್ಣಾ ನನ ಅರಮನೆಗೆ ಜೋಕುಮಾರ ||
ಏನ ಕೊಮರ ನಿನ ಕಾಲೀಗೇಂಬಿಗಿಯಿಲ್ಲ
ಮ್ಯಾಲಿ ಮಾಣಿಕುದೊರಳಿಲ್ಲ ಜೋ || ಈ ಊರ
ರಾಜ ಬೀದ್ಯಾಗ ಮೆರದಾಽರ ಜೋಕುಮಾರ ||
ಅಡ್ನ ಸುತ್ತಿನ ಮೂವತ್ತ ಮಡಿಕೇಲಿ
ಚುಂಗಬಿಟ್ಯಾನ ಬರಿದೇಲಿ ಜೋಕುಮಾರ ನನಕೊಮರ
ಹೂವಿಟ್ಯಾನ ತರತರಕೆ ಜೋಕುಮಾರ ||

ಎಳಸು ಕಣ್ಣಿನ ಕುಡಿಹುಬ್ಬ
ಎಲಕಂದಾs ಮಲಿ ಉಣ್ಣ ಜೋ ‖ ಬಾಗ್ಯೇವು
ಕುಬ್ಬಿಲಿ ಮಗನ್ನ ಕರೆದಾಳೊ ಜೋಕುಮಾರ ‖
ಹೆಸ್ರ ಕಾಳಂಗ ಹಸೂ ನಿನ್ನ ಕುಡಿಹುಬ್ಬ
ಹೆತ್ತಾಕಂದ ಮಲಿಉಣ್ಣ ಜೋ ‖ ಬತ್ತೇವಾ
ಇಷ್ಟದ ಮಗನಾ ಕರದಾsಳೋ ಜೋಕುಮಾರ‖
ಅಡ್ಡಡ್ಡ ಮಳಿ ಬಂದುದೊಡ್ಡೊಡ್ಡ ಕೆರಿತುಂಬಿ
ಗೊಡ್ಡುಗಳೆಲ್ಲ ಹೈನಾಗಿ
ಗೌಡರ ಸೆಡ್ಡೇದ ಮ್ಯಾಲೆ ಸಿರಿಬಂದೆ ಜೋಕುಮಾರ |.
ಹರಗೀದ ಹೊಲದಾಗೆ ಹರ ಚಂಡಾ ನಾಡೀsದ
ಹರಬೇವ್ರ ಮಗ ನನಕೊಮರಯ್ಯ
ಚೇಂಡಾಡಿದಲ್ಲಿ ಹತ್ತಿಗೊನೆಗಳೂ ಬೆಳಿಯಾಲಿ ಜೋಕುಮಾರ ‖
ಬಿತ್ತೀದ ಹೊಲದಾಗ ಮುತ್ತ ಚೆಂಡಾನಾಡೀsದ
ಮುತ್ತೊಂದು ಬಾ ನನ ಕೊಮರಯ್ಯ ಜೋ ‖ ಚೆಂಡಾsಡಿದಲ್ಲಿ
ಮುತ್ತು ಸಾವೀರು ಬೆಳಿಯಾಲಿ ಜೋಕುಮಾರ ‖
ಮಾಳಿಗೀ ಮ್ಯಾಲೇಡ್ಯಾನ
ಏರಬೇಕೆಂದs ಕುದರೀಯ ಜೋಕುಮಾರ ಈ ಊರ
ನಾರೇರ ಕೂಡ ನಡದಾನಾ ಜೋಕುಮಾರ ‖
ಓ ನನ ಕೊಮರ ಅಂಗಡ್ಯಾಗ ಕುಂತ್ಯಾನ
ದುಂಡು ಮುತ್ನಂಗೆ ಹೊಳದಾನ ಜೋ ‖ ಈ ಊರ
ಗಂಡನ ಗಾದಿ ನನಗೆಂದ ಜೋಕುಮಾರ ‖
ಕುಂಬಾರೋಣಿಗೆ ಹೋಗ್ಯಾವ್ನೆ ನನ ಕೊಮರ
ಕುಂಬಳಕಾಯಿ ಗುರಿನಿಟ್ಟ ಜೋ ‖ ಕೇಳ್ಯಾನೆ
ಕುಂಬಾರ ಹುಡುಗೀ ನನಗೆಂದ ಜೋಕುಮಾರ ‖
ಹಾರೂರೋಣಿಗೆ ಹೊಕ್ಕಾನ ನನ ಕೊಮರ
ಹಾಗಲಕಾಯ ಗುರಿನಿಟ್ಟ ಜೋ ‖ ಕೇಳಾವ್ನೆ
ಹಾರೂರ ಹುಡುಗೀ ನನಗೆಂದ ಜೋಕುಮಾರ ‖
ಪತ್ತಾರೋಣಿಗೆ ಹೋಗ್ಯಾನೆ ನನ ಕೊಮರ
ಪಡ್ಡಲಕಾಯಿ ಗುರಿನಿಟ್ಟ ಜೋ ‖ ಕೇಳವ್ನೆ
ಪತ್ತಾರ ಹುಡುಗಿ ನನಗೆಂದ ಜೋಕುಮಾರ ‖

ಹಾಡಿದವರು : ರುದ್ರವ್ವ ಮಾರುತಿ, ಕಾಶವ್ವ ಹನುಮಂತಪ್ಪ, ಶಾಂತಪ್ಪ ರಾಯಪ್ಪ, ಭೀಮವ್ವ ಭಗವಂತ
ಬಸವ್ವ ಭೀಮಪ್ಪ, ಗದ್ದಗಿ ವಾಡ (ಖಾನಪುರ ತಾ, ಬೆಳಗಾವಿ ಜಿಲ್ಲೆ)

ತಾಯಿ ಬಾಗಿಲಗೀ ಬಂದಾsರ ಬೇಗನಾಕವ್ವ ಚೌಕೀಯ ಜೋಕುಮಾರ
ಬೇಗನಾಕವ್ವ ಚೌಕೀಯ ನನ ಕೊಮರ
ಬಾಲವ್ವ ನಾಗರ ಸಿಡಿಯಾದ ಜೋಕುಮಾರ ||
ಗುಂಡೀಯ ಮುಂಡಸ ಗನವೆಂದೂ ಬಂಗಾರ
ದಂಡಗಿ ಮ್ಯಾಲೆ ಮಲಗವ್ನೆ ಜೋ ||
ಕೊಮರಾಗೆ ದುಂಡು ಮಲ್ಲಿಗೆ ಕಳುವ್ಯಾರೆ ಜೋಕುಮಾರ ||
ಹಾದಿ ಹಾದಿಗುಂಟ ಹಾದೀರು ಕೊಮರಯ್ಯ
ನಿನ್ನಾಗಲಹಣ್ಣು ತಿರವೂತ ಜೋಕುಮಾರ ಈ ಊರ
ಹರದಾರಿ ಕಂಡು ಮಲಕೋತ ಜೋಕುಮಾರ ||
ಒಕ್ಕಲ ಗೇರ್ಯಾಗ ಒಕ್ಕ ಚೆಂಡಾನಾಡೀದ
ಅಕ್ಕನ ಮಗ ಬೆನುವಯ್ಯ ಜೋ ||
ಚೆಂಡಾಡಿದಲ್ಲಿ ಹತ್ತಿಜ್ವಾಳಾ ಬೆಳಿಯಾಲಿ ಜೋಕುಮಾರ ||
ಹಾರೂರಗೇರ್ಯಾಗ ಹರಚೆಂಡಾ ನಾಡೀದ
ನಾರೀ ಮಗ ಬೆನುವಯ್ಯ ಜೋ ||
ಚೆಂಡಾಡಿದಲ್ಲಿ ರಾಗರಾಜ್ಯೇವ ಬೆಳಿಯಾಲಿ ಜೋಕುಮಾರ ||
ಬಟ್ಟದಂತ ಬಾವೀಲಿ ತುಪ್ಪದಂತ ತಿಳಿನೀರ
ಪಟ್ಟಳಿದಂತ ಒಗಿವೋಳಾ ಜೋ || ನನಕೊಮರಾಗೆ
ದಿಷ್ಟಾದೇಳಾ ಮಡಿ ಬೇಕಾ ಜೋಕುಮಾರ ||
ಕಾಜಿನ ಕಂಬಕೆ ಕಟ್ಯಾರಾ ತೊಟ್ಟಿಲs
ಕಾಳಿಂಗರಾಯ ಮನಿ ಮಾಡಿ ಜೋ || ನಮದೇವಿ
ತೂಗ್ಯಾಳ ಮಗನ್ನ ಇಳಿವೊಲ್ಲ ಜೋಕುಮಾರ ||
ಇಂದ್ರ ಹುಣ್ಣಿವಿಲ್ಲಿ ಬಂದ್ರವ್ವ ನಮದೇವಿ
ಕಂದನ ಕೈ ರಣಜೋಗಿ ಜೋ || ತಕ್ಕೊಂಡು
ಬಂದಳು ಸವಿಯ ನಡೆಸುತ್ತ ಜೋಕುಮಾರ ||
ಚಟ್ಟಗೀಲೆಣ್ಣೀಲಿ ಬಟ್ಟಲೀ ಅವು ನನ
ಕಂದನ ಸುಳಿನೀರ ಜೋ || ಎರೆದಾರು
ಹೊಟ್ಟಿಲಿ ತೆರವಾ ಹೊಯ್ದಂಗೆ ಜೋಕುಮಾರ ||
ಅಡ್ನಾಡ್ಡ ಮಳಿಬಂದು ದೊಡ್ಡೊಡ್ಡ
ಕೆರಿ ತುಂಬಿ ಗೊಡ್ಡುಗಳೆಲ್ಲ ಹೈನಾಗಿ ಜೋ ||
ಗೌಡರ ರಾಸಿಯ ಮೇಲೆ ಸಿರಿ ಬರಲಿ ಜೋಕುಮಾರ ||
ಹಾಸಿಗೇರಿ ಗೊಟ್ಟಲಿ ಬೀಸಿಗೇರಿ ತುಂಬಲಿ
ಬಾಸಿಂಗದಂತೆ ಹೊಳೆಯಾಲಿ
ಗೌಡರ ರಾಸಿಯ ಮ್ಯಾಲಿ ಸಿರಿಬರಲಿ ಜೋಕುಮಾರ ||

ಅಕ್ಕಡದಳಂತ ಏನು ತಂದೆ ಬೆನುವಯ್ಯ
ಮುತ್ತಿನ ಚೆಂಡ ಮುಗಿಲ್ಬಾನು ಜೋ ॥ ಅಕ್ಕನ ಮಗ
ಅರಿಶಿನ ತಂದ ಅರಳೆಲೆಯ ಜೋಕುಮಾರ ॥
ಅರಳೆಲೆ ತಂದವ್ನೆ ಕೊರಳೀಗುಂಗುರ ತನ್ನಿ
ಕಾಲೀಗೀ ತನ್ನಿ ಕಿರುಗೆಜ್ಜೆ ಜೋ ॥
ಬೆಟ್ಟವಾನ್ನತ್ತಿ ಬೆದರಾನ್ಯಲಾಡೀದ ಜೋಕುಮಾರ ॥
ಮಲಗೀದುಲಿಯಾ ಕೆಣಕೀದ ಜೋ ॥
ಸಿರಿಬಳಕೆವ್ವ ಕಂದನ ಜೋ ॥
ಕರೆದ ಮರಿಗೋಽಳ ಜೋಕುಮಾರ ॥
ಕೊಮರ ಬರ್ತಾನಂತ ಕ್ವಾಣೀಯಾ ಸಾರೀಸೆ
ಬೆನ ವಕ್ಕಲಿಂಗೇ ಜೋ ॥ ಮನಿಯಾಗೆ
ತಾನೊಂದು ಜಾವ ಇರವೊಲ್ಲ ಜೋಕುಮಾರ ॥
ಹಾದೀಯ ಮನಿಯ ಬೀದೀಽಯ ಮನಿಯಾನ್ನ
ರಾಜಂಗಳೆಲ್ಲ ಕೆಸರೆಂದಾ ಜೋ ॥ ನನ ಕೊಮರ
ಸಾದೀ ಸ್ವಾವಿ ಹೊರ ಮನಿಗೆ ಜೋಕುಮಾರ ॥

ಹಾಡಿದವರು : ಸಂಗವ್ವ ಶಂಕ್ರಪ್ಪ, ಸೋಮವ್ವ ಸಿದ್ಲಿಂಗಪ್ಪ ಕೋಲ್ಕಾರ, ಕಾಶವ್ವ ರಾಜೇಂದ್ರ ಕೋಲ್ಕಾರ
ನಿಂಗವ್ವ ನಾಗಪ್ಪ ಕೋಲ್ಕಾರ ಬೈಲಹೊಂಗಲ, ಬೆಳಗಾವಿ(ಜಿಲ್ಲೆ)

ಹತ್ತೀಯ ಕೂರಿಗೀ ಹವಳೇದಾ ಎಳಿಸೆಡ್ಡೆ
ಮುತ್ನೊಳು ಬಾರಾ ಹೆಗಲ್ನೊಂದೆ ಜೋ ॥ ಕನುಮಾಗೇ
ವರ್ಸಾ ಈರೇಳು ಬೆಳಿಯಾಲೀ ಜೋಕುಮಾರ ॥
ಪುಂಡಿಯ ಪಲ್ಲೆ ನಂಜಿ ನಂಜಿ ನೋಡ್ಯಾರ
ದಂಡಿನಾಳವ್ನರ ಬಯಕೀಲಿ ಜೋ ॥ ನಮದೇವಿ
ಬೆಂಡಬತ್ಯಾಸು ಬಗಿಸ್ಯಾಳೊ ಜೋಕುಮಾರ ॥
ಹಾರೂಗೇರ್ಯಾಗ ಹರ ಚೆಂಡ್ಯಾ ನಾಡೀದ
ನಾರೀಯ ಮಗ ಕೊಮರಯ್ಯ ಜೋ ॥ ಚೆಂಡಾಡಿದಲ್ಲಿ
ರಾಗಿ ರೋಜೆಲ್ಲ ಬೆಳಿಯಾಲೀ ಜೋಕುಮಾರ ॥
ಪಟ್ನೋಣದಾಗ ಪಟ್ಯಾಣಾ ಹೋಗ್ಯಾಗ
ಸೆಟ್ಟಿ ಸೆಟ್ಟರೆಲ್ಲ ನೆರೆದಾರ್ರ ಜೋ ॥ ನೆರೆಯ ಕೇಳಿದಾಽರೊ
ಉತ್ತರೀ ಮಳಿ ಗನವೊಂದೋ ಜೋಕುಮಾರ ॥
ಹಾಲ್ಬೇಡಿ ಅಳುತಾನ ಕೂಳ್ಬೇಡಿ ಕುಣಿದಾನ
ಮೊಸರ್ಬೇಡಿ ಕೆಸರಾ ತುಳಿದಾನ ಜೋ ॥ ನನ ಕೊಮರಯ್ಯ
ಕುಸಲಾದ ಗೆಜ್ಜೆ ಕೆಸರಾಗೆ ಜೋಕುಮಾರ ॥
ಮದ್ದಿಗೂರಿ ಹವಳಾದ ಎಳೆಸೆಡ್ಡೆ

ಮುತ್ತೊಳು ಬಾರಾ ಹೆಗಲಾಗೆ ಜೋ ॥ ಕನುವಾಗೆ
ಹೊತ್ತಾಯಿರೇಳು ಬೆಳಿಯಾಲಿ ಜೋಕುಮಾರ ॥
ಮಾಣಿಕದಳ್ಳಿ ಮಂಚೇವಾ ನಾಕೀದ
ಮುರುಗೋಡು ಪ್ಯಾಟಿ ಮನೆಗಚ್ಚ ಜೋಕುಮಾರ ನನ ಕೊಮರ
ಇನ ಬಂದೂರ ಹೊಗಿನಂದ ಜೋಕುಮಾರ ॥
ಈರಿಕಾಯಂಗೆ ದಾರಿ ಮುಂಡಾಸುತ್ತಿ
ಧರತ್ತೀಯಂಗಿ ಬಲಗೈಯ ಜೋ ॥
ಧರತ್ತೀಯಂಗಿ ಬಲಗೈಯಾಗಿಡಕೊಂಡ ಜೋಕುಮಾರ ॥
ಹ್ಯಾದರ ದೇಸದಸದರೀಗೆ ಜೋಕುಮಾರ
ಸೆಡ್ನನ್ನೆತ್ತಿ ಬಿದರಾನ ಲಾಡೀದ ಜೋ ॥ ಮಲಗೀದುಲಿಯ
ಕೆಣಕೀದ ಜೋಕುಮಾರ ॥
ಮಲಗೀದುಲಿಯ ಕೆಣಕೀ ಸಿರಿ ಬಳಕೆಲವ್ವ
ಸಿರಿಬಳಕೆಲವ್ವ ಜೋ ॥ ಕರಪುತ್ರನ್ನ
ಮರಿಗೋಳಾ ಜೋಕುಮಾರ ॥

ಹಾಡಿದವರು : ನಾಗವ್ವ ಪೂಜಾರಿ, ಶಾಂತವ್ವ ಪೂಜಾರಿ, ಫಕೀರವ್ವ ಪೂಜಾರಿ, ಸಾವಮ್ಮ ಕಲ್ಲಪ್ಪ ಮರಕುಂಬಿ, ಸೌಂದತ್ತಿ(ತಾ)

ಉದ್ದಿನ ಕಾಯಂಗೆ ತಿದ್ದೀದಾ ಕುಡಿ ಹುಬ್ಬ
ಎದ್ದೇಳು ಕಂದ ಮಲಿ ಉಣ್ಣ ಜೋ ॥ ನಿಮ್ಮವ್ವ
ಮುದ್ದಿನ ಮಗನ್ನ ಕರೆದಾಳೋ ಜೋಕುಮಾರ ॥
ಹೆಸರ ಕಾಯಂಗೆ ಟಿಸಿಲೊಡ್ಡಾ ಕುಡಿಹುಬ್ಬ
ಎದ್ದೇಳು ಕಂದ ಮಲಿ ಉಣ್ಣು ಜೋ ॥ ನಿಮ್ಮವ್ವ
ಮುಸಿಗಾನ ಮಗನ ಕರದಾಳೋ ಜೋಕುಮಾರ ॥
ಓ ನನ ಕಂದ ಕಾಗದಾ ಬರಿವೋಗ
ಹೋಗಿ ನನ ಕೊಮರಾ ತರುಬ್ಯಾನ ಜೋ ॥ ಕೇಳ್ಯಾನ
ನಿನ್ನುಂಗುರ ನನಗೆಂದಾ ಜೋಕುಮಾರ ॥
ಹಾಲ್ಬೇಡಿ ಚೆಂದಾದ ಅಳತಾನ
ಅಂಗಳಾ ಬಿಟ್ಟು ಏಳವೊಲ್ಲೋ ಜೋ ॥ ತಾಯವ್ವ
ಉಂಡಿಕೊಟ್ಟು ಕಳುವವ್ವ ಜೋಕುಮಾರ ॥
ಉಂಡಿ ಬೇಡಿ ಒಳ್ಳೊಳ್ಳಿ ಅಳುತಾನ
ಮಾಳಗಿ ಬಿಟ್ಟು ಏಳುವಲ್ಲ ಜೋಕುಮಾರ ತಾಯವ್ವ
ಉಂಡಿ ಕೊಟ್ಟು ಕುಳುವವ್ವ ಜೋಕುಮಾರ ॥
ರೊಟ್ಟಿ ಬೇಡಿ ಬಿಕ್ಕಿ ಬಿಕ್ಕ ಅತ್ತಾನ
ಬೀಸ್ಬೇಕವ್ವ, ಸುಡಬೇಕ ಜೋ ॥ ನನ ಕೊಮರಾಗೆ

ತುಪ್ಪಾಗದ್ದಿ ಕೊಡಬೇಕು ಜೋಕುಮಾರ ||
ಅಡ್ನಡ್ನ ಮಳಿ ಬಂದು ದೊಡ್ನಡ್ನ ಕೆರಿ ತುಂಬಿ
ಗೊಡ್ನುಗಳೆಲ್ಲ ಹೈನಾಗಿ ಜೋ || ದಿಷ್ಠಾದೇವಿ ನಿನ ಮಗ
ಕೊಟ್ಟಾರೇಳ ದಿನಗಳಾ ಜೋಕುಮಾರ ||
ಜೋಕುಮಾರ ಹುಟ್ಟಿ ಲೋಕೆಲ್ಲಾ ಬೆಳಿಯಾಲಿ
ಆಕಳ ಹಾಲ ಕರಿಯಾಲಿ ನಮದೇವಿ
ಕಾಕೆದ್ದು ಮೊಸರ ಕಡಿಯಾಲಿ ಜೋಕುಮಾರ ||
ಮುತ್ತಿನಂತ ತೆನಿ ಬಾಗಿ ರೈತರ
ರಾಸಿಯ ಮ್ಯಾಲೆ ಸಿರಿ ಬರಲಿ ಜೋ ||
ಗೌಡರ ಸೆಡ್ಡೀಯ ಮ್ಯಾಲೆ ಸಿರಿ ಬರಲಿ ಜೋಕುಮಾರ ||
ಹೋಗುತಾ ಬನ್ನಿ ಮುಡಿದು ಬರುತಾ ಬನ್ನೀ ಮುಡಿದು
ಕಂಡ ಕಂಡಲ್ಲೆ ಎಳಿಬೇವ ಜೋ || ಮುಡಿವಂತ
ಪುಂಡ ನಮದೇವಿ ಒಂದು ಹಡದಾಳೊ ಜೋಕುಮಾರ ||
ಹಾಗಲ ಹೂವೊಂದು ಮುಡಿದಾಽನ ಜೋ ||
ಹಾರೂರ ಗೇರ್ಯಾಗ ಹೊಕ್ಕಾನ ನನ ಕೊಮರ
ಹಾರೂರ ಓಣಿಯೆ ನನಗೆಂದ ಜೋಕುಮಾರ ||
ಕುಂಬಾರ ಓಣಿಗೆ ಹೊಕ್ಕಾನ ನನಕೊಮರ
ಕುಂಬಳ ಹೂವ ಮುಡಿದಾನ ಜೋ || ಕುಂಬಳ
ಹೂವ ಮುಡಿದು ಕೇಳ್ಯಾನ ಕುಂಬಾರ ಹುಡುಗಿ ನನಗೆಂದ ಜೋಕುಮಾರ ||
ಈರೀಯ ಹೂವೊಂದ ಹಿಡಕೊಂಡು ಬಂದಾನ
ಗೌಡರಽ ಅರಮನೆಗೆ ನನಕೊಮರ
ಗೌಡರ ಹೆಂಡ್ರ ನನಗೆಂದ ಜೋಕುಮಾರ ||

ಹಾಡಿದವರು : ಗದಿಗೆವ್ವ ಯಲ್ಲಪ್ಪ ಬಾರಿಕೇರ, ಸರಸ್ವತಿ ರಾಯಪ್ಪ ಬಾರಿಕೇರ, ಮುಳ್ಳೂರ, ರಾಯದುರ್ಗ(ತಾ) ಬೆಳಗಾವಿ(ಜಿ)

ಅಡ್ನಡ್ನ ಮಳಿ ಬಂದು ದೊಡ್ನೊಡ್ನ ಕೆರಿ ತುಂಬಿ
ಗೊಡ್ನುಗಳೆಲ್ಲ ಹೈನಾಗಿ ಜೋ ||
ಗೌಡರ ಸೆಡ್ಡೇದ ಮ್ಯಾಗೆ ಸಿರಿ ಬಂದ ಜೋಕುಮಾರ ||
ಹಾಸ್ಯಾಸಿ ಮಳಿ ಬಂದು ಬೀಸ್ಬೀಸಿ
ಕೆರಿ ತುಂಬಿ ಬಾಸಿಂಗದಂಗ ತೆನಿಬಾಗಿ ಜೋ ||
ರೈತರ ರಾಸಿಯ ಮ್ಯಾಗಿ ಸಿರಿ ಬಂದ ಜೋಕುಮಾರ ||
ಅಷ್ಟಮಿ ದಿನದಾಗ ಹುಟ್ಯಾನ ನನ ಕೊಮರ
ದಿಷ್ಠಾದೇವಿ ನಿನ ಮಗ ಜೋ || ಕ್ಯಾಳಾಗ ಕೊಟ್ಟಾರ
ಏಳು ದಿನಗಳಾ ಜೋಕುಮಾರ ||

ಏನು ಕೊಮರ ನಿನ ಕಾಲಿಗೋಂದೀಗಿಲ್ಲ
ಮೇಲೆ ಮಾಣಿಕುದೋಹರಳಿಲ್ಲ ಜೋ ‖ ಸುರೇಬಾನದಾ
ರಾಜ ಬೀದ್ಯಾಗ ನಿನ ಸುಳವಿಲ್ಲ ಜೋಕುಮಾರ ‖
ಹಾವಿನ ಹಗ್ಗ ಹೂವೀಸಾ ಬಲಕೋದು
ರೋಜಾದ ಬಂಡಿ ಅದನ್ಯಾರೋ ಜೋ ‖ ತಗೊಂಡು
ಹರಿ ನಿಂಗಯ್ನ ಕರಿಹೋದಾs ಜೋಕುಮಾರ ‖
ಹರಿ ನಿಂಗಯ್ನ ಬಾsರದಾಂಬುದುಕ್ಯಾಳೇ
ರಾಮನ ಚಿಂತಿ ಗನುವಾದೆ ಜೋ ‖ ಚಿಂತೆ ಮಾಡಬ್ಯಾಡ್ರಿ
ಸಂತಸಗೊಳ್ಳಿರೇ ಕಣ ಮುಚ್ಚಿ ಕಣ್ಣ ತೆರೆತನಕ ಜೋಕುಮಾರ ‖
ನಾವಿನ್ನು ಬಂದಾರೆ ನಿಮ್ಮ ಹೊಲಗಳಿಗೆ
ಅತ್ತಗಿಂದ ಕೂಸು ಹೊತ್ತಗೊಂಡು ನಾ ಬಂದೆ ಜೋ ‖ ಹೆತ್ತವ್ವ
ಹೇಳು ಹೊಳಿಯಾಕ ಜೋಕುಮಾರ ‖
ಬಟ್ಟಗಿ ಉಂಗ್ರ ಇಡಿಸವ್ವ
ಆರಗಿಂದ ಕೂಸ ತೊಳದೇನು ನಾ ತಂದೆ ತಾಯವ್ವ
ಹೇಳು ಹೊಳಿಯಾಕಾ ಜೋಕುಮಾರ ‖
ತೋಳಿಗೀ ಅಂಗೀ ತೊಡಿಸವ್ವ ಜೋ ‖
ಉಪ್ಪು ಕೊಡ ನನ್ನ ಉಪ್ಪರಗೀ ಮನೆಯವ್ರ
ಕೊಪ್ಪನ್ನಾಗಿ ಗಿಳಿಯವ್ರಾ ಜೋಕುಮಾರ ‖
ಉಪ್ಪುಕೊಡ ನನ ಕೊಮರಾಗೇ
ಹಾಲಕೊಡು ನನ್ನ ದಾನೀಯ ಮನಿಯವ್ರ ತಾಯವ್ವ
ಸಣ್ಣ ಮಾಳಗೀ ಮನಿಯವ್ವ ಜೋಕುಮಾರ ‖
ಹಾಲಕೊಡು ನನ ಕೊಮರಾಗೇ
ಬೆಣ್ಣೀಯ ಕೊಡು ನನ ಕನ್ನೀಯ ಕೊಮರಾಗೆ
ಹೊನ್ನ ಮಾಳಿಗೀ ಮನೆಯವ್ವ ಜೋಕುಮಾರ ‖
ಬೆಣ್ಣಯ ಕೊಡು ನನ ಕೊಮರಾಗೆ ಜೋ ‖
ಹುಗ್ಗಿ ಹೂರಣದ ಕಡುಬು, ಸಬ್ಬಸಗೀ ಪಲ್ಯೇವ ಜೋ ‖
ನೆಗ್ಗರಿ ಕೊಮರ ಉಣಲಿಲ್ಲ ಜೋಕುಮಾರ ‖
ನೆಗ್ಗರಿ ಕೊಮರ ಉಣಲಿಲ್ಲ ನಮದೇವಿ
ಸುಣ್ಯಾಗ ಮಗನ್ನ ಹಡದಾಳೆ ಜೋ ‖
ಸುಣ್ಯಾಗ ಮಗನ್ನ ಅಬ್ರದಿಲೆ ಹಡದಾಳೆ ಜೋಕುಮಾರ ‖
ಬಾಲಾsಗ ದೃಷ್ಟಿ ತಗದೇವಾ
ನಾರ್ಯಾರ ದೃಟ್ಟಿ ದರಳೇವಾ ಕೊಮರಾಗ
ನಾರ್ಯಾರ ದೃಟ್ಟಿ ದರಳೇವಾ ಜೋಕುಮಾರ ‖

ಹೊಟ್ಟಿ ನೋಯ್ತ್ಯಾವಂತ ಪಟ್ಟಿ ಮಂಚ
ನೇರ್ಯಾಳೆ ಪಟ್ಟಾಲಿ ಕಳದೆ ಬಿಳಿನೂಟ್ಟ ಜೋ || ನಮದೇವಿ
ಪಟಿಗೊಬ್ಬ ಮಗನ್ನ ಹಡದಾsಳೆ ಜೋಕುಮಾರ ||
ಬ್ಯಾನೀಯ ತಿನ್ನುತ ಕ್ಯಾಣೀಯ ಹೋಗುವುತ್ತ
ನಾಣ್ಯಾವ ಕಳದ ಬಿಳಿನೂಡ ಜೋ || ನಮದೇವಿ
ರಾಜಗೌ ಮಗನ ಹಡದಾಳೆ ಜೋಕುಮಾರ ||
ಪುಂಡೀಯ ಪಲ್ಲೆ ನಂಚಿಕಂಡು ಉಣಲಿಲ್ಲ
ದಂಡನಾಳವ್ವ ಬಯಕೀಲೀ ಜೋ || ನಮದೇವಿ
ದಂಡಿಗೊಬ್ಬ ಮಗನ್ನ ಹಡದಾsಳೆ ಜೋಕುಮಾರ ||

ಹಾಡಿದವರು : ದೊಡ್ಡ ಹನುಮವ್ವ ತಳವಾರ, ಯಲ್ಲವ್ವ ತಳವಾರ, ಪಾರವ್ವ ತಳವಾರ, ಶಾಂತವ್ವ ತಳವಾರ, ಶೈಲ ಸುಣ್ಣಗಾರ್, ಸಣ್ಣ ಹನುಮವ್ವ ತಳವಾರ, ಸುರೇಬಾನ, ರಾಮದುರ್ಗ(ತಾ)

ಅಡ್ಡಡ್ಡ ಮಳಿ ಬಂದು ದೊಡ್ಡೊಡ್ಡ ಕೆರಿ ತುಂಬಿ
ಗೊಡ್ಡುಗಳೆಲ್ಲ ಹೈನಾಗಿ ಗೌಡರ
ಸೆಡ್ಡೆಯ ಮ್ಯಾಗೆ ಸಿರಿ ಬಂದ ಜೋಕುಮಾರ ||
ಕೆಂಪಾನ್ನ ತೊಟ್ಯಾನ ಕೆಂಪೊಂದು ಉಟ್ಯಾನ
ಕೆಂಪೊನಿ ದಾರಿ ಹಿಡಿದಾsನ ಜೋ ||
ಕಂಪೂನಿ ಹೆಣ್ಣ ನನಗೆಂದು ಜೋಕುಮಾರ ||
ಬಿಳೀದಾ ತೊಟ್ಯಾನ ಬಿಳೀದಾ ಹೊದ್ದಾನ
ಬೀಳಗಿ ದಾರಿ ಹಿಡಿದಾsನ ಜೋ ||
ಬೀಳಗಿ ಹೆಣ್ಣ ನನಗೆಂದಾs ಜೋಕುಮಾರ ||

ಹಾಡಿದವರು : ಹನುಮವ್ವ ವಿಠ್ಠಲ, ಮುಗುತಾಬಾಯಿ ವೆಂಕಣ್ಣ, ಲೋಕಾಪುರ, ಮುಧೋಳ (ತಾ)

ಅಡ್ಡಡ್ಡ ಮಳಿ ಬಂದು ದೊಡ್ಡ ದೊಡ್ಡ ಕೆರಿ ತುಂಬಿ
ಗೊಡ್ಡುಗಳೆಲ್ಲ ಹೈನಾಗಿ ಜೋ ||
ಗೌಡರ ಸೆಟ್ಟಿಯ ಮ್ಯಾಲಿ ಸಿರಿ ಬಂದ ಜೋಕುಮಾರ ||
ಬಣ್ಣಾದ ತರಿಗೊಳ್ಳ ಸಣ್ಣ ಕ್ಯಾದೀಗೀ
ಮುಸಗೀಲೀ ಜೋಕುಮಾರ
ಸಣ್ಣಕ್ಯಾದಿಗೀ ಮುಸಗೀಲಿ ಮಲಗಿರುವ ಜೋಕುಮಾರ ||
ಚಿನ್ನಾವ ನಿದ್ದಿ ತಿಳಿಯವ್ವ ಜೋ ||
ಅರಿಬಟ್ಲ ಅರಿಸಿನ ತಾಳಿಬಟ್ಲ ಒಳ್ಳೆಣ್ಣೆ
ನಾರಿ ನನದೇವ ಕುಲಿ ಹೊಕ್ಕ ಜೋಕುಮಾರ ||
ಬಾಗಿಲ ತೆರೆಯ ಒಯ್ದಾವೋ ಜೋ ||
ಉಕ್ಕಟ್ಟಿನ ಬುತ್ತಿ ನಾ ಎಲ್ಲೋ ಎಲೆ ಸಿವನೆ

ಭಿಮಾ ರತಿಯೆಂಬ ಹೊಳಿಯಾಗೆ ಜೋಕುಮಾರ ||
ಭೀಮಾರತಿಯೆಂಬ ಹೊಳಿಯಾಗೆ ಉಕ್ಕಿದರೆ
ತಲಿಹೂ ಕಟ್ಯಾಳೊ ಮಲಿ ನನ ಕೊಮರ
ತಲಿಹೂ ಕಟ್ಯಾಳೊ ಮಲಿಯಾಗೋ ಜೋಕುಮಾರ ||
ಹಾಲ್ಬೇಡಿ, ಕೂಳ್ಬೇಡಿ ಕುಣದಾನೊ
ಮೊಸರ್ಬೇಡಿ ಕೆಸರ ತುಳಿದಾನೋ ಜೋ || ನನ ಕೊಮರ
ಕುಸುಲಾದ ಗೆಜ್ಜೆ ಗಿಲ್ಲೆಂದ ಜೋಕುಮಾರ ||
ಉಬ್ಬಿದ ಕಾಯಂಗೆ ತಿದ್ದೀದಾ ಕುಡಿ ಹುಬ್ಬಾ
ಎದ್ದೇಳು ಕಂದಾ ಮಲಿ ಉಣ್ಣ ಜೋ || ನಿಮ್ಮವ್ವ
ಉಬ್ಬಿಲಿ ಮಗನ್ನ ಕರೆದಾಳೋ ಜೋಕುಮಾರ ||
ಬಸರೀಕಾಯಂಗೆ ಕೊಸರೀದಾ ಕುಡಿಹುಬ್ಬ
ಎದ್ದೇಳು ಕಂದ ಮಲಿ ಉಣ್ಣ ಜೋ || ನಿಮ್ಮವ್ವ
ಕುಸಿಲಿ ಮಗನ ಕರದಾಳೋ ಜೋಕುಮಾರ ||
ಕುಸಿಲಿ ಮಗನ ಕರದಾಳೋ
ಮಿಂಚೋಳ ತಾರ ಜೋ || ಕೊಮರಾಗೆ
ತಾರ ಮಳಿ ಬಂದು ಜೋಕುಮಾರ ||

ಹಾಡಿದವರು : ರುಕ್ಮವ್ವ ಫಕೀರವ್ವ ಅಂಬಿಗೇರ, ಭರಮವ್ವ ಶಿವಲಿಂಗಪ್ಪ ಅಂಬಿಗೇರ, ಶಿವಗಂಗವ್ವ ಶಿವಪ್ಪ ಅಂಬಿಗೇರ, ನಿಂಗವ್ವ ಯಲ್ಲಪ್ಪ ಅಂಬಿಗೇರ, ಕೆರೂರ, ಬಾದಾಮಿ (ತಾ)

ಅಡ್ಡಡ್ಡ ಮಳಿ ಬಂದು ದೊಡ್ಡ ದೊಡ್ಡ ಕೆರಿ ತುಂಬಿ
ಗೊಡ್ಡುಗಳೆಲ್ಲ ಹೈನಾಗಿ ಜೋ ||
ರೈತರ ಸೆಡ್ಡೇದ ಮ್ಯಾಲಿ ಸಿರಿ ಬರಲಿ ಜೋಕುಮಾರ ||
ಹಾಸ್ಯಾಸಿ ಮಳಿ ಬಂದು ಬೀಸ್ಗೇರೀ ತುಂಬಾಲಿ
ಬಾಸಿಂಗದಾಗಿ ಹೊಳೆಯಾಲೀ ಜೋ ||
ರೈತರ ರಾಸೀ ಮ್ಯಾಲಿ ಸಿರಿ ಬರಲಿ ಜೋಕುಮಾರ ||
ಓ ನನ ಕೊಮರ ಚೆಂಡಾಡಲೋಗ್ಯಾನ
ಮುಸಿಗಿಲ್ಯಾಳ ಕಾರನ ಮಳೆಗಾಲ ಜೋ || ರೈತರ
ತಂದು ಹಚ್ಚಡ ಹೊದಿಸ್ಯಾರ ಜೋಕುಮಾರ ||
ಹೆಸರಕಾಯಂತ ಕುಸಿಲಾದ ಕುಡಿಹುಬ್ಬ
ಹಸಿದೇಳ ಕೊಮರ ಮಲಿ ಉಣ್ಣ ಜೋ || ನಿಮ್ಮವ್ವ
ಮುದ್ದಾಡಿ ಮಗನ ಇಳಿಸ್ಯಾಳ ಜೋಕುಮಾರ ||
ಹಾವಿನಹಗ್ಗ ಹೂವಿನ ಬಾರs ಕೋಲು
ರಾಗಾದಳ ಬಂಡಿ ಹದಿನಾರ ಜೋ || ನನ ಕೊಮರ
ಹರಿ ನಿಂಗಯ್ನು ಕರಿಹೋದ ಜೋಕುಮಾರ ||

ಹರಿನಿಂಗಯ್ನ ಕರಿಹೋದ ಬಾರಿ ನಾಂಬದು ಕೇಳಿ
ಸಿದಿರಾಮ ಚಿಂತಿ ಗನುವಾದ ಜೋ ‖ ನನ ಕೊಮರ
ಸಿದಿರಾಮ ಚಿಂತಿ ಗಮನುವಾದ ಜೋಕುಮಾರ ‖
ಚಿಂತಿ ಮಾಡಿ ಮಾಡಿ ಸಂತೋಸ
ಗೊಳ್ಳೇರಿ ಕಣ್ಣ ಮುಚ್ಚಿ ಕಣ್ಣ ತೆರಿವಲಕ ಜೋ ‖ ತೆರಿವಲಕಾ ನಾವಿನ್ನ
ಬಂದೇವು ನಿಮ್ಮಾ ಹೊಲಗಳಿಗೇ ಜೋಕುಮಾರ ‖
ಅಕ್ಕ ಹಡದಾಳಂತ ತಮ್ಮ ಏನ್ನಂದೆ
ಪದುಮಯ್ಯ ಮುತ್ತಿನ ಚೆಂಡು ಮುಗಿಲ್ಯಾನು ಕೊಮರಾಗ
ಅಗತಿಲಿ ಬಂದ ಅರಳೆಲೆಯಾ ಜೋಕುಮಾರ ‖
ಬೆಣ್ಯಾವ ತಿಂದು ಕನ್ಯಾವ್ನ ತೆಗಿವೋಲ್ಲೆ
ತಲಿಕಾಯವ್ನ ಮರಿವೋಲ್ಲೆ ಜೋ ‖
ಕೊಮರಾಗೆಎಲ್ಲಿದ್ದಿ ಬಂದೆ ಎಲ್ಲಿದ್ದಿ ಜೋಕುಮಾರ ‖
ಹುಟ್ಟಿದೇಳು ದಿನಕೆ ಪಟ್ಟಾನ ತಿರುಗ್ಯಾನ
ದಿಷ್ಣಾದೇವಿ ನಿನ ಮಗಾಃ ಜೋ ‖ ಕೊಮರಾಗ
ಕೊಟ್ಟಾರ ಏಳು ದಿನಗಳಾ ಜೋಕುಮಾರ ‖

ಹಾಡಿದವರು : ಅನಸೂಯ ಕ್ಯಾನಪ್ಪ ಬಾರಿಕೇರ, ಸರಸ್ವತವ್ವ ಬಾಳಪ್ಪ ಬಾರಿಕೇರ, ರತ್ನವ್ವಕ್ಯಾನಪ್ಪ ಬಾರಿಕೇರ, ಶಾರದವ್ವ ಬಾಳಪ್ಪ ಬಾರಿಕೇರ, ಬದಾಮಿ

ಹುಟ್ಟಿದೇಳು ದಿನಕಾ ಪಟ್ಟಾವ ತಿರುಗೀದ
ದಿಷ್ಣಾದೇವಿ ನಿನಮಗಾ ಜೋ ‖ ಕೊಮರಾಗೆ
ಕೊಟ್ಟಾರ ಏಳದಿನಗಳಾ ಜೋಕುಮಾರ ‖
ತೊಗರಿ ಹೋಳಿಗಿ ಮ್ಯಾಲೆ ಸಬ್ಬಸೀಗೇ ಮೇಲೋಗ್ಯವ್ರೆ ಎತ್ತೋಣಿ
ಗಡುಬು ಉಡಿ ಉಡಿಗೆ ಜೋ ‖ ಹೆಗ್ಗಣಗಡಬು ಉಡಿಗಡಿಗೇ ನಮದೇವಿ
ಸುಗ್ಯಾಗ ಮಗನ್ನ ಹಡದಾಃಳೆ ಜೋಕುಮಾರ ‖
ರಾಜಾರ ಮಗ ಬಂದು ಬೀದ್ಯಾಗ ಕುಂತವ್ನೆ
ರಾಜರಾಜವ್ರ ಮೆರದಾಃರ ಜೋ ‖ ರಾಜರಾಜವ್ರ
ನೆರೆದು ಕೇಳಿದಾಃರ ಅದೂರಿ ಮಳೆಯ ‖
ಅಡಕಿನ ಮ್ಯಾಲೊಂದು ಅಡಕಿ ಹುಡಕ್ಯಾರ
ರಯ್ಯ ಸಿಗುವೋಲ್ಲ ಜೋ ‖ ಗಾಜ್ಜನ ಗಿರಿಯ ಮುಂದಿನ
ಹೈತು ಮಳಿರಾಜ ಜೋಕುಮಾರ ‖
ಬಾಯಿಗಿದು ಬೆಳಗೀ ಕೊಂಡುರಲಾರೆ
ಬಡುವಾರೆ ಬಾಯಿ ಬಿಡುತಾರೆ ಜೋ ‖ ಕೊಮರಯ್ಯ
ಬಲಿಯದ್ದ ಕೈ ಮುಗಿದಾವೋ ಜೋಕುಮಾರ ‖
ಜೋಕುಮಾರಣ್ಣ ಬಾಯ್ಗೇಡಿ, ಸ್ವಾಯ್ಗೇಡಿ

ದಂಡಿನಾಗೆ ನಮುನ್ನ ಇಟ್ಟ ಬಂದೋ ಜೋ ‖ ಮಾದಾರ
ಚೆನ್ನಯ್ಯ ಮನಿಗ ಉಂಡು ಬಂದೋ ಜೋಕುಮಾರ ‖
ಕಾತರಕಿ ಹೊಳಿಯಾಗ ದೋತಾಽರ, ಒಗದಾನ
ಯಾತರದವ್ವ ಕುಲುದಲ್ಲೆ ಜೋ ‖ ನಾ ಕಮ್ಮತಗಿ
ದೇಸಂಡಿಗೆರ ಮಗನೇನೂ ಜೋಕುಮಾರ ‖
ಹೊಸಬಟ್ಟಿ ಉಟ್ಟಾನ ಹೊಸದನ್ನೇ ಹೊದ್ದಾನೆ
ಕುಸಬೀಯ ಹೇರು ತರುಬ್ಯಾನೆ ಜೋ ‖ ನಾಕಮ್ಮ ತಗಿ
ಕಟುಬೀ ಬಾರಿಕೇರ ಹೌದೇನೂ ಜೋಕುಮಾರ ‖
ಚೆನ್ನಯ್ನ ಮಗ ಎಣ್ಣಗೀ ಹೋದಾರೆ
ಕಣ್ಣಿಟ್ಟು ಕರ್ಕೊಂಡು ಬರನಿಟ್ಟು ಜೋ ‖ ಕೇಳ್ಯಾನೆ
ಹೆಣ್ಣ ನೀಯಾರ ಮಗಳೆಂದೇ ಜೋಕುಮಾರ ‖
ನನ್ನನು ಕೇಳಾಕೆ ನೀಯಾರೋ ಮಗನಯ್ಯ
ನಿನ್ನ ಕಣ್ಣ ಹುಬ್ಬಗಳಾ ತಗಿಸೇನು ಜೋ ‖ ಅಗಸರ
ಬಂಡಿಯ ಬುಡಕ ನಿನ್ ಹುಗಿಸೇನು ಜೋಕುಮಾರ ‖
ಕ್ಯಾದೀಯ ಹೂವೊಂದು ಕ್ಯಾದೀಯ ಹೊದ್ದಾನ
ಮಾವಿನ ಗಿಡಕ ಮಲಿಗ್ಯಾನ ಜೋ ‖ ಹುಳಿ ನುಚ್ಚು
ಮಾಯಾದನವ್ವ ಮಠದೊಳಗೆ ಜೋಕುಮಾರ ‖

ಹಾಡಿದವರು : ಶಂಕ್ರವ್ವ ಚಂದ್ರಪ್ಪ ಬಾರಿಕೇರ, ಬಸವ್ವ ನಾಗಪ್ಪ ಬಾರಿಕೇರ, ನಾಗಮ್ಮ ಅಡಿವೆಪ್ಪ ಬಾರಿಕೇರ, ಮಲ್ಲಮ್ಮ ರಂಗಪ್ಪ ಬಾರಿಕೇರ, ರಾಮವ್ವ ರಂಗಪ್ಪ ಬಾರಿಕೇರ, ಕಮತಗಿ, ಹುನಗುಂದ (ತಾ)

ಸಟ್ಟೇಳು ಮುಂದ ಪಟ್ಟಣಾ
ಮೂವೊರು ಸೆಟ್ಟ ಸೆಟ್ಟರೆಲ್ಲಾ ಬೆಸಗೊಂಡು ಜೋ ‖ ಕೇಳಿದರೆ
ಉತ್ರೀಯ ಮಳಿಯಾ ಗನುವಂದೋ ಜೋಕುಮಾರ ‖
ಆಲ ನನ ಕೊಮರ ಹರನಾಡೀ ಹೋಗ್ಯಾವ್ರೆ
ಜಲ್ಲನೆ ಬಂತು ಜಡಿ ಮಳಿಯಾ ಜೋ ‖ ರೈತರು
ಶಲ್ಯೇವಾ ತಂದು ಹೊದಿಸ್ಯಾರ ಜೋಕುಮಾರ ‖
ಅಡ್ಡ ಮಳಿ ಬಂದು ದೊಡ್ಡ ದೊಡ್ಡ ಕೆರಿ ತುಂಬಿ
ಗೊಡ್ಡುಗಳೆಲ್ಲ ಹೈನಾಗಿ ಜೋ ‖
ಗೌಡರ ಸೆಡ್ಡಿಯ ಮ್ಯಾಲೆ ಸಿರಿ ಬರಲಿ ಜೋಕುಮಾರ ‖
ಹಾವಿನ ಹಗ್ಗ ಹೂವಿನ ಬಾರಽ ಕೋಲು
ರಾಯದ ಬಂಡಿ ಹದಿನಾರ ಜೋ ‖ ಹೊಡಕೊಂಡು
ಹರಿ ನಿಂಗಯ್ನ ಕರಿಹೋದ ಜೋಕುಮಾರ ‖
ಹುಟ್ಟಿದೇಳು ದಿನಕ ಪಟ್ಣೆಲ್ಲಾ ಮೆರೆದಾನ

ದಿಷ್ಟಾದೇವಿ ನಿನ ಮಗಾ ಜೋ || ಕೊಮರಾಗ
ಕೊಟ್ಟಾರೇಳ ದಿನಗಳಾ ಜೋಕುಮಾರ ||
ಹಾಲಬೇಡಿ ಅತ್ತಾನ ಕೂಳಬೇಡಿ
ಕುಣದಾನ ಮೊಸರಬೇಡಿ ಕೆಸರಾ ತುಳಿದಾಂನ ಜೋ || ತಾಯವ್ವ
ಭಾಗ್ಯದ ಬಟ್ಲು ತಿಳಿಯವ್ವ ಜೋಕುಮಾರ ||
ಬ್ಯಾನಿಯಾಗವ್ವಂತ ದರೀಗಳ್ನ ಎದುರಡ್ನೆ
ನಿಂತಲ್ಲೆ ತೇರಾ ಎಳೆಸ್ಯಾರಾ ಜೋ || ಒಂಟೆಯ ಏರ್ಯಾನ
ಕಟ್ಟೇಸೂರಿ ಮಾಡ್ಯಾರ ಜೋಕುಮಾರ ||
ಬಟ್ಯಾಲ ಗೌಳ್ನ ಬರಿಗೂಲ ಜೋ ||
ಬಂಟಾಲ ದರಿಗಳ್ನ ಎದರೊಡ್ಡಿ ನಿಂತಲ್ಲೆ
ತೇರಾ ಎಳಸ್ಯಾರ ಜೋಕುಮಾರ ||
ಗದ್ದರಿಸಿ ಬಾ ನನ ಗೌರೀಶ
ಉದ್ದ ಶೆನ್ನ ಬಸವಣ್ಣಾ ಜೋಕುಮಾರ, ಮೂವರು
ಗದ್ದರಿಸಿ ಮಳಿಯಾ ಕರೆದಾರೋ ಜೋಕುಮಾರ ||
ಮಲ್ಲಿಗಿ ಹೂವಿನ ದಂಡೆ ಎಲ್ಲಿಟ್ಟೆ, ಇಲ್ಲಿಟ್ಟೆ
ಕಲ್ಲ ಮೇಲಿಟ್ಟೆ, ಕೈಬಿಟ್ಟೆ ಜೋ || ಮಾಂತೇಸ
ಪಲ್ಲಕ್ಕಿಗಿಟ್ಟು ಶರಣೆಂದೇ ಜೋಕುಮಾರ ||
ಕಾಲುಂಗ್ರ ಜೋಣೆ ಕೈನಾಗೇ ಹಿಡಿಸ್ಯಾವಿ
ಕೇಳಲಿಲ್ಲೇನ ಕಿವುಡೇನಾ ಜೋ || ಹುಡುಗೊಬ್ಬ
ಬಲ ಬಂದವ್ನ ಹೊರಹೊಂಡಾ ಜೋಕುಮಾರ ||
ಜಾಲೀಯ ಹೂವ ಜಾಡೀಸಿ ಹೊಕ್ಕಾನೆ
ಜಾಡಾರ ಓಣಿ ಒಳಗೆಲ್ಲ ಜೋ || ನನ ಕೊಮರ
ಜಾಡಾರ ಹೆಂಡ್ರ ತನಗೆಂದ ಜೋಕುಮಾರ ||
ಉಕ್ಕೀಯ ಹೂವೊಂದು ವಕ್ಕಲೇರ ತೂರ ಇಟ್ಟು
ವಕ್ಕಲಗೇರ ಓಣಿಯ ಒಳಗೆಲ್ಲ ಜೋ || ನನ ಕೊಮರ
ವಕ್ಕಲಿಗೇರ ಹೆಂಡ್ರ ತನಗೆಂದ ಜೋಕುಮಾರ ||
ಅಗಸೀಯ ಹೂವ ಸೊಗಸೀಲಿ ತೂರ ಇಟ್ಟು
ಅಗಸಾರ ಓಣಿ ಒಳಗೆಲ್ಲ ಜೋ || ನನಕೊಮರ
ಅಗಸಾರ ಹೆಂಡ್ರ ತನಗೆಂದ ಜೋಕುಮಾರ ||
ಹರಗೀದ ಹೊಲದಾಗ ಹರಿದ ಚೆಂಡಾಡ್ಯಾನ
ನಾರೇರ ಮಗನ ಕೊಮರಯ್ಯ ಜೋ || ನನ ಕೊಮರ
ಬಿತ್ತೀದ ಹೊಲದಾಗ ಬಿದ್ದು ಚೆಂಡಾಡ್ಯಾನ ಜೋಕುಮಾರ ||
ಬಿತ್ತೀದ ಹೊಲದಾಗ ಬಿದ್ದು ಚೆಂಡಾಡ್ಯಾನ ಜೋಕುಮಾರ ||

ಬಿತ್ತೀದ ಹೊಲದಾಗ ಬಿದ್ದು ಚೆಂಡಾಡ್ಯಾನ
ನಿತ್ರೇರ ಮಗ ನನಕೊಮರಯ್ಯ ಜೋ ‖ ನನಕೊಮರ
ನಿತ್ರೇರ ಮಗ ಜೋಕುಮಾರ ‖
ಬಿಳಿದೊಂದ ಉಟ್ಯಾನ ಬಿಳಿದೊಂದಾ ಹೊದ್ದಾನ
ಬಿಳಿದಿಲಿ ಸೆರಗಾ ಮರಿ ಮಾಡಿ ಜೋ ‖ ನನಕೊಮರ
ಬೀಳಗಿ ಹೆಣ್ಣ ತರುಹೋದ ಜೋಕುಮಾರ ‖
ಕೆಂಪನ್ನ ಉಟ್ಯಾನ ಕೆಂಪೊಂದು ಹೊದ್ದಾನ
ಕೆಂಪಿನ ಸೆರಗ ಮರಿ ಮಾಡಿ ಜೋ ‖ ನನ ಕೊಮರ
ಕಂಪಲಿ ಹೆಣ್ಣ ತರುಹೋದ ಜೋಕುಮಾರ ‖
ಕರಿದೊಂದುಟ್ಯಾನ ಕರಿದೊಂದೊದ್ದಾನ
ಕರಿವಿನ ಸೆರಗ ಮರಿ ಮಾಡಿ ಜೋ ‖ ನನಕೊಮರ
ಕಲಬುರುಗಿ ಹೆಣ್ಣ ತರುಹೋದ ಜೋಕುಮಾರ ‖
ಕ್ಯಾವಿಯ ಉಟ್ಯಾನ ಕ್ಯಾವೀಯ ಹೊದ್ದಾನ
ಮಾವಿನ ಗಿಡಕಿ ಮನಗ್ಯಾನ ಜೋ ‖ ನನ ಕೊಮರ
ಮರ್ತ್ಯಕ ಮಳಿಯ ಕರದಾನೋ ಜೋಕುಮಾರ ‖

ಹಾಡಿದವರು : ಸಂಗವ್ವ ಬಾರಿಕೇರ, ಯಲ್ಲವ್ವ ಬಾರಿಕೇರ, ಪಾರ್ವತವ್ವ ಬಾರಿಕೇರ, ಅಮ್ಮಿನಗಡ

ಅಡ್ಡಡ್ಡ ಮಳಿ ಬಂದು ದೊಡ್ಡೊಡ್ಡ ಕೆರಿ ತುಂಬಿ
ಗೊಡ್ಡುಗಳೆಲ್ಲ ಹೈನಾಗಿ ಜೋ ‖ ಗೌಡರ
ಸೆಡ್ಡಿಯ ಮ್ಯಾಲೆ ಸಿರಿ ಬಂದ ಜೋಕುಮಾರ ‖
ಹೌದ ನನ ಕೊಮರ ಹೊಲ ನೋಡ ನಾಗರ
ಜೋಕುಮಾರನಂತ ತೆನಿ ಬೆಳೆಯಾ ಜೋ ‖ ರೈತರಾ
ಸೆಳ್ಳೇವ ತಂದು ಹೊಲಿಸ್ಯಾರ ಜೋಕುಮಾರ ‖
ಕ್ಯಾಲಿ ಉಟ್ಟನವ ಕ್ಯಾವೀಯ ಹೊದ್ದಾನ
ಮಾವಿನ ಗಿಡಕೆ ಮಲಗ್ಯಾನ ಜೋ ‖ ನನ ಕೊಮರ
ಮರ್ತ್ಯಕೆ ಮಳಿಯ ಕರದಾಽನ ಜೋಕುಮಾರ ‖
ಜೋಕುಮಾರ ನನಕೊಮರ
ವರ್ಷಕ್ಕೊಮೆ ಬರುವವನ ಜೋ ‖ ತಾಯವ್ವ
ತಂದು ನೀಡವ್ವ ಮರ ತುಂಬ ಜೋಕುಮಾರ ‖
ಗದ್ರಿಸಿ ಬಾ ನನ್ನ ಗೌರೀಸ
ಗಮನತ್ತದಿಗ್ಗೇ ಚೆನ್ನಬಸವಣ್ಣ ಜೋ ‖ ಮೂವರ
ಗದ್ರಿಸಿ ಮಳಿಯ ಕರೆದಾರೋ ಜೋಕುಮಾರ ‖

ಹಾಡಿದವರು : ನಿಂಬವ್ವ ಅಂಬಿಗೇರ, ರೇಣಕ್ಕ ದ್ಯಾಮಣ್ಣ, ಮಂಗಳವ್ವ ಅರವಿಂದಪ್ಪ, ಗುಂಡವ್ವ

ಪರಶಪ್ಪ, ಸುಳೆಬಾವಿ

ಬಲಬಂದೆ ನಿಮ್ಮ ಬಾಗಲ್ವಾಗ ಕುಂತಾನ
ಹಾಲುಗನ್ನಿಯ ಎರೆದೆಮ ಜೋ ॥ ಇಂದಿನಮ್ಮ ಕಂದನ
ಬಾಗ ಇಂದಿನೋಳಾ ಜೋಕುಮಾರ ॥
ಹಾಲಬೇಡಿ ಅತ್ತಾನ ಕೂಳಬೇಡಿ ಕುಣದಾಽನ
ಮೊಸರ್ಬೇಡಿ ಕೆಸರ ತುಳದಾಽನ ಜೋ ॥ ತಾಯವ್ವ
ಬಾ ನನ ಬಾಸೀ ತಿಳಿಯಾವಾ ಜೋಕುಮಾರ ॥
ಗೌಡರಾ ಮನಿಗೆ ಎಣಿಗೆಂತಾ ಹೋದಾರ
ಕಣಬಿಟ್ಟ ಕಣ ಅಡನಿಟ್ಟ ಜೋ ॥ ಕೇಳ್ಯಾರ
ಹೇಳ ನೀಯಾರ ಮಗನಯ್ಯ ಜೋಕುಮಾರ ॥
ಅದನ್ಯಾರು ಕೇಳಾಕ ನೀನ್ಯಾರು ಮಗನಯ್ಯ
ಬೆನ್ನಿನ ಕಣ್ಣ ತಗಿಸ್ಯಾವಾ ಜೋ ॥ ಅಗಸಾರ
ಬಂಡಿ ಬುಡಕೆ ತೆಲಿಯಾ ಬಡಿಸ್ಯಾನಾ ಜೋಕುಮಾರ ॥
ಎಕ್ಕಿಯ ಹೂವ ಒತ್ತಿಡ್ತಿತು ನಾಯಿಟ್ಟ
ವಕ್ಕಲಿಗ್ಯಾರ ಓಣಿ ಒಳಗೊಂದಾ ಜೋ ॥ ಈ ಊರ
ವಕ್ಕಲಿಗೇರ ಹೆಂಡ್ರ ತನಿಗೆಂದಾ ಜೋಕುಮಾರ ॥
ಅಗಸೀಯ ಹೂವ ಸಗಸೀಡ್ತೂ ರಾಯಿಟ್ಟ
ಕುಂಬಾರ ಓಣಿ ಒಳಗೊಂದಾ ಜೋ ॥ ಈ ಊರ
ಕುಂಬಾರ ಹೆಂಡ್ರ ತನಿಗೆಂದಾ ಜೋಕುಮಾರ ॥
ಸೆಟ್ಟಣ ಕೊಮರ ಪಟ್ಟಣ ವಾ ಹೋಗ್ಯಾಗ
ಸೆಟ್ಟಿ ಸೆಟ್ಟರೆಲ್ಲಾ ಬೆಸಗೊಂಡಾ ಜೋ ॥ ಕೇಳ್ಯಾರ
ಉತ್ರಿ ಮಳಿಯಾ ಗನುವಂದೂ ಜೋಕುಮಾರ ॥
ಏಳು ನನ ಕೊಮರ ಚಾವುಡಿಯಾ ಏರುವಾಗ
ಜಾಣಜಾಣೆಯರ ಬೆಸಗೊಂಡೂ ಜೋ ॥ ಕೇಳ್ಯಾರ
ಉತ್ರೀಯ ಮಳಿಯಗನುವಂದೂ ಜೋಕುಮಾರ ॥
ಹುಗ್ಗಿನಗಡಬು ಸಬ್ಬಸಿಗೀ ಪಲ್ಯೇವು
ಲೆಗ್ಗಿನ ಕೊಮರ ಉಣ ಬಂದಾ ಜೋ ॥ ನಮದೇವಿ
ಸುಗ್ಯಾಗ ಮಗನ್ನ ಹಡೀಲಿಲ್ಲಾ ಜೋಕುಮಾರ ॥

ಹಾಡಿದವರು : ಲಕ್ಷ್ಮಿಬಾಯಿ ಮಹಾದೇವಪ್ಪ ಬಾರಿಕೇರ, ಯಲ್ಲಮ್ಮ ಯಂಕಪ್ಪ ಬಾರಿಕೇರ, ಈರಮ್ಮ ರಾಯಪ್ಪ ಬಾರಿಕೇರ, ಹನುಮಪ್ಪ ರಾಯಪ್ಪ ಬಾರಿಕೇರ, ಬೆನಕಟ್ಟಿ, ಬಾಗಲಕೋಟ (ತಾ)

ಅಡ್ಡಡ್ಡ ಮಳಿ ಬಂದು ದೊಡ್ಡ ದೊಡ್ಡ ಕೆರಿ ತುಂಬಿ
ಗೊಡ್ಡುಗಳೆಲ್ಲ ಹೈನಾಗಿ ಜೋ ॥ ರೈತರ
ಸೆಟ್ಟಿಯ ಮ್ಯಾಲೆ ಸಿರಿ ಬಂದ ಜೋಕುಮಾರ ॥

ಸೆಡ್ಡಿಯ ಮ್ಯಾಲೆ ಸಿರಿ ಬಂದ ಜೋಕುಮಾರ
ರೈತರಃ ತಂದಚ್ಚಡ ಜೋ ‖ ನನ ಕೊಮರಾಗೆ
ತಂದಚ್ಚಡ ಹೊದಿಸ್ಯಾರ ಜೋಕುಮಾರ ‖
ಹಾವಿನ ಹಗ್ಗ ಹೂವಿನ ಬಾರಕೋಲು
ರಾಗದ ಬಂಡಿ ರಾಗನಾಃರ ಜೋ ‖ ಹೊಡಕೊಂಡು
ಹರಿನಿಂಗಯ್ನ ಕರಿಹೋದ ಜೋಕುಮಾರ ‖
ಹರಿನಿಂಗಯ್ನ ಬಾರಾದಾಂಬುರಿ ಕೇಳಿ ರಾಮರ ಚಿಂತಿ
ಗನುವಾಗಿ ಜೋ ‖ ನನಕೊಮರ
ರೈತರ ತಂದಚ್ಚಡ ಹೊದಿಸಾರ ಜೋಕುಮಾರ ‖
ಚಿಂತಿ ಮಾಡಬ್ಯಾಡ್ರಿ ಸಂತೋಸಗೊಳ್ಳಿರಿ
ಕಣ್ಣಮುಚ್ಚಿ ಕಣ್ಣ ತೆರೆವನಕಾ ಜೋ ‖ ನಮದೇವಿ
ಬಂದಾರ ನಿಮ್ಮ ಹೊಲಗಳಿಗೇಃ ಜೋಕುಮಾರ ‖
ನಾರೂನ ತರಿಸಿ ರೊಟ್ಟಿಗೀ ತಗಿಸ್ಯಾರ
ಹೊತ್ತಿಗಾರೂರ ಏನೆಂದಾ ಜೋ ‖ ಕೊಮರಾಗೆ
ಹುಟ್ಟಿದೇಳ ದಿನಕಾ ಮರಣಂದಾ ಜೋಕುಮಾರ ‖
ಹುಟ್ಟಿದೇಳು ದಿನ ಪಟ್ಟಾವ ತಿರುಗ್ಯಾನ
ದಿಷ್ಣಾದೇವಿ ನಿನ ಮಗಾ ಜೋ ‖ ಕೊಮರಾಗೆ
ಕೊಟ್ಟಾರೇಳ ದಿನಗಳಾಃ ಜೋಕುಮಾರ ‖
ಪುಂಡೀಯ ಪಲ್ಯವ ನಂಜಿ ನಮದೇವಿ
ಉಣಲಿಲ್ಲ ದಂಡಿನಾಳವ್ನ
ಬಯಕ್ಯಾಗ ಜೋಕುಮಾರ ‖
ದಂಡಿನಾಳವ್ನ ಬಯಕ್ಯಾಗ ನಮದೇವಿ
ಹೊಂಬಾಳೆ ಸರವ ಬಗಸ್ಯಾಳ ಜೋ ‖ ನನ ಕೊಮರ
ಚಕ್ಕೋಟಿ ರಸಪಲ್ಲೆ ಬಗಸೀ ಜೋಕುಮಾರ ‖
ಚಟ್ಕೋಟಿ ರಸಪಲ್ಲೆ ಇಕ್ಕಂಡು ಉಣಲಿಲ್ಲ
ದಿಟ್ಟನಾಳವ್ನ ಬಯಕ್ಯಾಗ ಜೋ ‖ ನಮದೇವಿ
ಚೊಕ್ಕ ಮುದ್ದೀನ ಸಾರ ಬಗಸೀ ಜೋಕುಮಾರ ‖
ಕರನೋಳ ಕೊಮರ ಕೆರಿಯಾಲಿ ನೋಡಾಲಿ ಹೋದ
ಕರಿದು ಕರಬಾನ ಮಳಿಬಂದಾಃ ಜೋ ‖ ರೈತರ
ಕರೆದಚ್ಚಡಾ ಹೊಚ್ಯಾರ ಜೋಕುಮಾರ ‖
ಕೆಂಚ ನನಕೊಮರ ಬೆಂಚಿ ನೋಡಲಿ ಹೋದ
ಮಿಂಚಿಯಾ ತಾರಾ ಮಳಿಬಂದಾ ಜೋ ‖ ರೈತರಾ
ಕರೆದಚ್ಚಡಾ ಹೊಚ್ಯಾರ ಜೋಕುಮಾರ ‖

ಹಾ ಸ್ವಾಸಿ ಮಳಿ ಬದ್ದು ಬೀಸ್ಸೀಸಿ ಕೆರಿ ತುಂಬಿ
ಬಾಸಿಂಗದಂತ ತೆನಿಬಾಗಿ ಜೋ ‖ ರೈತರ
ರಾಸಿಯ ಮ್ಯಾಲಿ ಸಿರಿ ಬಂದ ಜೋಕುಮಾರ ‖
ಹಣ್ಣೆಲಿ ಆಸಿಗೆ ಬಣ್ಣಾದ ತಲಿಗುಂಬ
ಸಣ್ಣಕ್ಯಾದೀಗಿ ಎಳಿನಿದ್ದೀ ಜೋ ‖ ತೊಟ್ಲದ್ದಾನ
ಚಿನ್ನಾಪ್ನ ನಿದ್ದಿ ತಿಳಿಯಾವಾ ಜೋಕುಮಾರ ‖
ಹಸಿರೆಲೆ ಆಸಿಗೆ ಕುಸಲಾದ ತೆಲಿಗುಂಬ
ಯಸಳ ಮಲ್ಲಿಗೀ ಯಳಿನಿದ್ದೀ ಜೋ ‖ ತೊಟ್ಲುದಾನ
ಸಿಸುವಿನ ನಿದ್ದಿ ತಿಳಿಯಾವ ಜೋಕುಮಾರ ‖
ಹಾಲಬೇಡಿ ಅತ್ತಾನ ಕೂಳಬೇಡಿ ಕುಣದಾನ
ಮೊಸರ್ಬೇಡಿ ಕೆಸರ ಕುಣದಾನ ಜೋ ‖ ಕೊಮರಾನ
ಕುಸುರಾನ ಗೆಜ್ಜೆ ಕೆಸರಾಗಿ ಜೋಕುಮಾರ ‖
ಹಾಗಲ ಹೂವ ಹಾರೆತ್ತೂರಲಿಟ್ಟ
ಹಾರೂರ ಓಣಿ ಒಳಗೆಲ್ಲ ಜೋ ‖ ನನಕೊಮರ
ಹಾರೂರ ಹೆಂಡ್ರ ತನಗೆಂದ ಜೋಕುಮಾರ ‖
ಎಕ್ಕೀಯ ಹೂವೊಪ್ಪಿ ತೂರಾಯಿ ನೆಟ್ಟ
ವಕ್ಕಲಿಗೇರೋಣಿ ಒಳಗೆಲ್ಲ ಜೋ ‖ ನನ ಕೊಮರ
ವಕ್ಕಲಿಗೇರ್ಣ ಹೆಂಡ್ರ ತನಗೆಂದ ಜೋಕುಮಾರ ‖
ಕುಂಬಳ ಹೂವ ತುಂಬಿ ತೂರಾಯಿನೆಟ್ಟು
ಕುಂಬಾರ ಓಣಿ ಒಳಗೆಲ್ಲ ಜೋ ‖ ನನಕೊಮರ
ಕುಂಬಾರ ಹೆಂಡ್ರ ತನಗೆಂದ ಜೋಕುಮಾರ ‖
ಅಗಸೀಯ ಹೂವ ಸೊಗಸಿನ ತೂರಾಯಿನೆಟ್ಟು
ಅಗರಸರ ಓಣಿ ಒಳಗೆಲ್ಲ ಜೋ ‖ ನನಕೊಮರ
ಅಗಸರ ಹೆಂಡ್ರ ತನಗೆಂದ ಜೋಕುಮಾರ ‖
ಕರದೊಂದು ಉಟ್ಟಾನ ಕರದೊಂದ ಹೊದ್ದಾನ
ಕರದೆಲೆ ಸೆರಗ ಮರಿಮಾಡಿ ಜೋ ‖ ನನಕೊಮರ
ಕಲ್ಬುರ್ಗಿ ಹೆಣ್ಣ ತರುಹೋದಾ ಜೋಕುಮಾರ ‖
ಬಿಳಿದೊಂದ ಉಟ್ಟಾನ ಬಿಳಿದೊಂದಾ ಹೊದ್ದಾನ
ಬಿಳಿದೆಲ ಸೆರಗ ಮರಿಮಾಡಿ ಜೋ ‖ ನನಕೊಮರ
ಬೀಳಗಿ ಹೆಣ್ಣ ತರುಹೋದ ಜೋಕುಮಾರ ‖
ಕೆಂಪೊಂದ ಉಟ್ಟಾನ ಕೆಂಪೊಂದಾಃ ಹೊದ್ದಾನ
ಕೆಂಪಿನ ಸೆರಗ ಮರಿಮಾಡಿ ಜೋ ‖ ನನ ಕೊಮರ
ಕೆಂಪುಲಿ ಹೆಣ್ಣ ತರುಹೋದ ಜೋಕುಮಾರ ‖

ಜೋಕುಮಾರ ಹುಟ್ಟಲಿ ಲೋಕೆಲ್ಲಾ ಬೆಳಿಯಾಲಿ
ಆಕಳ ಹಾಲ ಕರಿಯಾಲೀ ಜೋ ‖ ಈ ಮನೆಯ
ದತ್ತಾರ ಪುತ್ರ ಹೆತ್ತಾಲಿ ಜೋಕುಮಾರ ‖
ಉಟ್ಟಾನ ಉಟ್ಟಾನ ತೊಟ್ಟಲಾ ಕಟ್ಟಾನ
ಬಾಲಗನ್ನೇರಿ ನೆರೆದಾರಾ ಜೋ ‖ ನೆರೆದು ತಾ ಹಾಡ್ಯಾರ
ಬಾಲ ನಿಮ್ಮ ರಾಜ ಜಯ ಜಯ ಜೋಕುಮಾರ ‖
ಹಾಗೀಯ ಹೋಗಿಹೊಳಿ ಕೂಗಿ ಕರಿಯುತ್ಯಾರ
ನೀಲಗಣ್ಣಮ ನಿಜವಂತಾ ಜೋ ‖ ನನ ಕೊಮರ
ಕೂಗ್ಯಾಡಿ ಮಳಿಯ ಕರೆದಾನಾ ಜೋಕುಮಾರ ‖
ಹಚ್ಚನ್ನ ಮಾಡಾಗಿ ಹವಳದಾ ಈ ಊರ
ಸುಕ್ರಪ್ಪ ಗಾಳಿ ಸುಳಿಗಾಳೀ ಜೋ ‖ ಬಿಟ್ಯಾರ
ಸುಕ್ರಾತಿ ಹಾದಿ ಹಿಡದಾಽನಾ ಜೋಕುಮಾರ ‖
ಹೆಜ್ಜೆ ಹೆಜ್ಜಾಗಿ ಮಳಿಯಾಗಿ ದೊಡ್ಡ ದೊಡ್ಡ ಕೆರಿ ತುಂಬಿ
ಮಡುಗಳೆಲ್ಲ ಹಸುರಾಗಿ ಜೋ ‖ ನನ ಕೊಮರ
ಕೂಗ್ಯಾಡಿ ಮಳೆಯ ಕರೆದಾಽನೊ ಜೋಕುಮಾರ ‖
ಎತ ನನ ಕೊಮರ ಎತ್ತ ಕಾಯಾಗ ಲೋಗ್ಯಾನ
ಎತ್ತಿಂದ ಬಂದ ಜಡಿ ಮಳಿಯಾ ಜೋ ‖ ರೈತರ
ಹೊಸ ಅಚ್ಚಡ ಹೊದಿಸ್ಯಾರಾ ಜೋಕುಮಾರ ‖
ಹೊಸ ಅಚ್ಚಡ ಹೊದಿಸ್ಯಾರಾ ಬಾಸಿಂಗದಂಗೆ
ಬೆಳಿ ಬಾಗಿ ರೈತರಽ ಜೋ‖ ನನ ಕೊಮಾರ
ಕರದಚ್ಚಡಾ ಹೊದಿಸ್ಯಾರಾ ಜೋಕುಮಾರ ‖

ಹಾಡಿದವರು : ಮಲ್ಲಮ್ಮ ಯಮುನಪ್ಪ ಬಾರಿಕೇರ, ಶಾಂತವ್ವಲಕ್ಷ್ಮಣ ಬಾರಿಕೇರ, ಸುಮಿತ್ರಾ ದ್ಯಾಮಣ್ಣ ಬಾರಿಕೇರ, ನೆಕ್ರಗುಂದ, ಬಾಗಲಕೋಟ (ತಾ) (ಜಿ)

ಏಳದಿನಕಾ ಪಟ್ಟಣಾ ತಿರುಗ್ಯಾನ
ದಿಷ್ಣಾದೇವಿ ನಿನ ಮಗಾ ಕೊಮರಾಗ
ಕೊಟ್ಟಾರ ಏಳದಿನಗಳಾ ಜೋಕುಮಾರ ‖
ಅಡ್ಡಡ್ಡ ಮಳಿ ಬಂದು ದೊಡ್ಡೊಡ್ಡ ತೆನಿಯಾಗಿ
ಗೊಡ್ಡುಗಳೆಲ್ಲ ಹೈನಾಗಿ ಜೋ ‖ ಗೌಡರ
ಸೆಡ್ಡೇದ ಮ್ಯಾಲೆ ಸಿರಿ ಬಂದಾ ಜೋಕುಮಾರ ‖

ಹಾಡಿದವರು : ಮಾದೇವಿ ಚೆನ್ನಪ್ಪ ಕೋಳಿ ತಳವಾರ, ಸತ್ಯಮ್ಮ ಗುಂಡಪ್ಪ ತಳವಾರ, ಜಮಖಂಡಿ, ಬಿಜಾಪೂರ (ಜಿ)

ಅಡ್ಡಡ್ಡ ಮಳಿ ಬಂದು ದೊಡ್ಡ ದೊಡ್ಡ ಕೆರಿ ತುಂಬಿ
ಗೊಡ್ಡುಗಳೆಲ್ಲ ಹೈನಾಗಿ ಗೌಡರ

ಸೆಡ್ನೇದ ಮ್ಯಾಲೆ ಸಿರಿ ಬಂದು ಜೋಕುಮಾರ ||
ಸೆಡ್ನೇದ ಮ್ಯಾಲೆ ಸಿರಿ ಬಂದ ರೈತರಾs
ರಾಸಿಯ ಮ್ಯಾಲಿ ಜೋ || ನನ ಕೊಮರ
ರಾಸಿಯ ಮ್ಯಾಲಿ ಹುಲುಸಾಗೀ ಜೋಕುಮಾರ ||
ಕೊಬ್ಬರಿ ಬೇಡಿ ಬೇಡಿ ಅಳುತಾsನ
ಗಗ್ಗುರಿಗಟ್ಟಿ ಇಳಿವೊಲ್ಲ ಜೋ || ಮನಿಯವ್ವ
ಕೊಬ್ಬರಿ ಕೊಡು ನನ ಕೊಮರಾಗೆ ಜೋಕುಮಾರ ||
ಹೋಳಿಗಿ ಬೇಡಿ ಬೇಡಿ ಹೊಳ್ಳೊಳ್ಳಿ ಅಳುತಾsನ
ಮ್ಯಾಳಿಗೀ ಬಿಟ್ಟು ಇಳಿವೊಲ್ಲ ಜೋ || ಮನಿಯವ್ವ
ಹೋಳಿಗೀ ಕೊಡು ನನ ಕೊಮರಾಗೆ ಜೋಕುಮಾರ ||
ರೊಟ್ಟೀಯ ಬೇಡಿ ಬೇಡಿ ಹೊಟ್ಟೆಟ್ಟಿ ಬಡುಕೊಂಡು
ಕಟ್ಟೀಯ ಬಿಟ್ಟು ಇಳಿವೋಲ್ಲ ಜೋ || ಮನಿಯವ್ವ
ರೊಟ್ಟೀ ಕೊಡು ನನ ಕೊಮರಾಗೇ ಜೋಕುಮಾರ ||
ಬೆಣ್ಣೀಯ ಬೇಡಿ ಬೇಡಿ ಬಾಯಿ ಬಾಯಿ ಬಡ್ಕಂಡು
ಬಾಗಲs ಬಿಟ್ಟು ಸರಿವೊಲ್ಲ ಜೋ || ಮನಿಯವ್ವ
ಬೆಣ್ಣೆಕೊಂಡು ನನ ಕೊಮರಾಗೇ ಜೋಕುಮಾರ ||
ಅಕ್ಕೀಯ ಬೇಡಿ ಬೇಡಿ ಹಾದ್ಯಾಗ ನಿಂತಾನ
ಹಾದೀಯ ಬಿಟ್ಟು ಸರಿವೋಲ್ಲ ಜೋ || ಮನಿಯವ್ವ
ಹಾಲ್ಗಡಗ ಕೊಂಡು ಕೊಡುಬಾರ ಜೋಕುಮಾರ ||
ತುಪ್ಪಾವ ಬೇಡಿ ಬೇಡಿ ತಿಪ್ಯಾಗ ನಿಂತಾನ
ತಿಪ್ಪೀಯ ಬಿಟ್ಟು ಸರಿವೋಲ್ಲ ಜೋ || ಮನಿಯವ್ವ
ಹಿಪ್ಪಾಲಿ ಮೊರವ ಕೊಡಕೋಡ ಜೋಕುಮಾರ ||
ಮಜ್ಜೀಗಿ ಬೇಡಿ ಬೇಡಿ ಮಜ್ಜೀಗಿ ಗಡಗಿ ಹಿಡಿದ
ಮಜ್ಜೀಗಿ ಬಿಟ್ಟು ಸರಿವೋಲ್ಲ ಜೋ|| ಮನಿಯವ್ವ
ಗೆಜ್ಜೆ ಉಡುದಾರ ಕೊಂಡುಕೋಡs ಜೋಕುಮಾರ ||
ಮೊಸರಾವ ಬೇಡಿ ಬೇಡಿ ಕೆಸರಾಗ ನಿಂತಾsನ
ಕೆಸರಾವ ಬಿಟ್ಟು ಸರಿವೋಲ್ಲ ಜೋ || ಮನಿಯವ್ವ
ಕುಸುಲಾವ ಅಂಗಿ ಹೊಲಿಸ್ಯಾರಾ ಜೋಕುಮಾರ ||
ಬೆಣ್ಣೀಯ ಬೇಡಿ ಬೇಡಿ ಬೆಣ್ಣೀಯ ಗಡಗಿ ಹಿಡ್ದ
ಬೆಣ್ಣೀಯ ಬಿಟ್ಟು ಸರಿವೋಲ್ಲ ಜೋ || ಮನಿಯವ್ವ
ಬಣ್ಣದ ಕುಂಚಿಗಿ ಹೊಲಿಸ್ಯಾಳ ಜೋಕುಮಾರ ||

ಹಾಡಿದವರು : ಶಾಂತವ್ವ ಈರಪ್ಪ ಸುಣ್ಣಗಾರ್, ಪಾರವ್ವ ಬಸಪ್ಪ ದಿಂಡ್ವಾರ್, ಲಕ್ಷ್ಮಿ ಪರಶುರಾಮ್
ಲಲಿತ ಹುಲಿಗೇಂದ್ರ, ಬಿಜಾಪುರ

ಅಷ್ಟಡ್ಡ ಮಳಿ ಬಂದು ದೊಡ್ಡ ದೊಡ್ಡ ಕೆರಿ ತುಂಬಿ
ಗೊಡ್ಡುಗಳೆಲ್ಲ ಹೈನಾಗಿ ಗೌಡರ
ಸೆಡ್ಡೀಯ ಮ್ಯಾಲಿ ಸಿರಿ ಬರಲಿ ಜೋಕುಮಾರ ||
ಎಣ್ಣಯ್ಯ ಮನಿಗಿ ಹೋದಾನ ಕಣ್ಣಿಗಿ ಕೋಲ ಅಡನಿಟ್ಟ
ಕಣ್ಣಿಗಿ ಕೋಲ ಅಡನಿಟ್ಟ ಕೇಳ್ಯಾನ
ಹೆಣ್ಣ ನೀಯಾರ ಮಗಳೆಂದ ಜೋಕುಮಾರ ||
ನನ್ನ ಕೇಳಲ್ಯಾಕ ನೀ ಯಾರ ಮಗನಯ್ಯ
ನಿಂದೊಂದ ಕಣ್ಣ ಕಿತ್ತಿಸ್ಯಾನ ಜೋ || ಹೊಲಿಯಾರ
ಬಂಡೀಗಿ ತಲೆಯ ಒಡಿಸ್ಯಾನ ಜೋಕುಮಾರ ||
ಹಳ್ಳಿ ಹಳ್ಳಿಗುಂಟ ಹರದ ಚೆಂಡ್ಯಾಡ್ಯಾನ
ಹರದೀಯ ಮಗ ನನ ಕೊಮರಯ್ಯ ಜೋ || ನನ ಕೊಮರ
ಚೆಂಡಾಡಿದಲ್ಲಿ ಗೋದಿ ಕಾಳುಗಳು ಬೆಳಿಯಾಲಿ ಜೋಕುಮಾರ ||
ಕಬ್ಬಿಣ ತೊಟ್ಲಕ ಜಗ್ಗಲಿ ತೂಗಾಡಿ
ಇಬ್ರು ತೂಗಿದರ ಮಲಗವ್ನ ಜೋ || ಮಲಸಿರಿ ಬಳಕವ್ವ
ಅಭ್ರಲೀ ಮಗನ್ನೊಂದ ಹಡದವ್ಳೆ ಜೋಕುಮಾರ ||

ಹಾಡಿದವರು : ನೀಲಮ್ಮ ಹೊನ್ನಪ್ಪ ತಳವಾರ್, ಶಾರವ್ವ ನಿಂಗಪ್ಪ ತಳವಾರ್, ಕಸ್ತೂರಿ ಬಾಯಿ ಮಲ್ಲಪ್ಪ ತಳವಾರ್, ಸಾತವ್ವ ಭೀಮಣ್ಣ ತಳವಾರ್ ರುಕ್ಮವ್ವ ರಾವುತಪ್ಪ ತಳವಾರ್ ದೇವರ ಹಿಪ್ಪರಗಿ, ಸಿಂದಗಿ(ತಾ), ಬಿಜಾಪುರ(ಜಿ)

ಕಥೆಗಳು

ಯಾವುದೇ ಭಾಷೆಯ ಜನಪದ ಸಾಹಿತ್ಯಕ್ಕೆ ತನ್ನದೇ ಆದ ಅನನ್ಯತೆಯಿರುತ್ತದೆ. ಅಂದರೆ C.A.ಫಾಟರ್ ಎನ್ನುವ ವಿದ್ವಾಂಸರು ಹೇಳುವಂತೆ "Folklore is lively Fossil which refuses to die" ಜಾನಪದವು ಅವಿನಾಶಿ, ಜೀವಂತ ಪಳೆಯುಳಿಕೆ. ಅದು ಸಾವನ್ನು ಬಯಸುವುದೂ ಇಲ್ಲ. ಜನಪದ ಕಥೆಗಳು ಇಂದು ಜಗತ್ತಿನಾದ್ಯಂತ ಪಸರಿಸಿವೆ. ಕಥನ ಕಲೆ ಮನುಷ್ಯನ ಸಹಜವಾದ ಪ್ರವೃತ್ತಿಯಾಗಿರುತ್ತದೆ. ಜನಪದರು ಹೇಳುವ ಕಥೆಗಳು ವಾಸ್ತವ ಘಟನೆಗಳಾಗಿರಬಹುದು. ಗತಕಾಲದಲ್ಲಿ ಜರುಗಿ ಹೋದ ಐತಿಹ್ಯಗಳನ್ನೇ ಹೇಳಬಹುದು. ಸುಳ್ಳುಗಳ ಸರಮಾಲೆಯೇ ಆಗಿರಬಹುದು. ಅಥವಾ ಕಟ್ಟುಕಥೆಗಳೇ ಆಗಿರಬಹುದು. ಜನರು ಕಥೆಗಳನ್ನು ಕೇಳಲು ಮುಗಿಬೀಳುವ ಸಂಗತಿ ನಮ್ಮೆಲ್ಲರಿಗೂ ಗೊತ್ತಿದೆ. ಅಲ್ಲಿ ಘಟನೆಗಳು ನಡೆದದ್ದು ಸತ್ಯವೇ? ಇಲ್ಲ ಮಿತ್ಯವೆ? ಎಂದು ಯಾರೂ ಪ್ರಶ್ನಿಸುವುದಿಲ್ಲ. ಅಂತಹ ಕಥೆಗಳು ನಮ್ಮನ್ನು ಕಲ್ಪನಾ ಲೋಕಕ್ಕೆ ಕರೆದುಕೊಂಡು ಹೋಗುತ್ತವೆ. ಕಥೆಗಳನ್ನು ಕೇಳುವುದರಿಂದ ನಮಗೆ ಮನರಂಜನೆಯ ಜತೆಗೆ, ಸಾಹಸ ಗುಣವೂ, ಧರ್ಮಬುದ್ಧಿಯೂ ಮುಂತಾದ ಕೆಲವು ವಿಷಯಗಳು

ತಿಳಿಯಬಹುದು ಒಂದಲ್ಲ ಒಂದು ರೀತಿಯಲ್ಲಿ ಇವುಗಳು ಪುರಾತನ ಮಾನವನ ಜ್ಞಾನ ಸಂಗ್ರಹಾಲಯವೂ ಆಗಿರುತ್ತವೆ. ಅಲ್ಲದೇ ಸಾಂಸ್ಕೃತಿಕ ಸಂಗ್ರಹಾಲಯವೂ ಆಗಿರಬಹುದು.

"ಈ ಮೌಖಿಕ ಕಥನ ಕಲೆ ಪ್ರಾಯಶಃ ಅತ್ಯಂತ ಪ್ರಾಚೀನವಾದುದಾಗಿರಬೇಕು. ಕತೆಗಾರ ಹುಟ್ಟಿ ಪ್ರಬುದ್ಧಾವಸ್ಥೆಯನ್ನು ಮುಟ್ಟಿದಾಗಲೂ ಚರಿತ್ರಕಾರ ಹುಟ್ಟಿರಲಿಲ್ಲ. ಕಥೆಗಳ ವಸ್ತು ಮತ್ತು ಉದ್ದೇಶ ಕಾಲ ದೇಶ ಪರಿಸರಗಳಿಗನುಗುಣವಾಗಿ ವ್ಯತ್ಯಸ್ತವಾದರೂ ಅವುಗಳ ಸಾಮಾಜಿಕ ಹಾಗೂ ವೈಯಕ್ತಿಕ ಅವಶ್ಯಕತೆಗಳ ಮೂಲಭೂತ ಗುಣ ಮಾತ್ರ ಬದಲಾಯಿಸಿಲ್ಲ. ವೈಜ್ಞಾನಿಕ ಹಾಗೂ ತಾಂತ್ರಿಕ ಸಂಸ್ಕೃತಿ ದಟ್ಟವಾಗಿ ಹರಡಿರುವ ಸಮಾಜ ವಿನಾ ಉಳಿದೆಡೆಗಳಲ್ಲಿ ಇಂದಿಗೂ ಕಾಲ್ಪನಿಕ ಕಥೆಗಳ ಬಗೆಗೆ ಕುತೂಹಲ ತೀವ್ರವಾಗಿದೆ. ಪೂರ್ವಾರ್ಜಿತ ಆಸ್ತಿಯಂತಿರುವ ಕಥಾಕೋಶ, ಅದರಿಂದ ಅಭಿವ್ಯಕ್ತಗೊಳ್ಳುವ ಜಾನಾಂಗಿಕ ಗುಣಮಹಿಮೆಗಳಿಂದ ಅದರ ವಾರಸುದಾರರಿಗೆ ಹೆಮ್ಮೆಯುಂಟಾಗಬಹುದು. ಇತಿಹಾಸ ಪೂರ್ವಕಾಲದ ಮಾನವನ ಇತಿಹಾಸವನ್ನು ತಿಳಿಯಲಿರುವ ಅಮೂಲ್ಯ ಸಾಧನಗಳಿವು. ವೀರಗತೆಗಳು, ಕಾರಣ ಕಾರ್ಯ ಕಥೆಗಳು ಮತ್ತು ಪ್ರಾಣಿಕಥೆಗಳು ಇಂದಿಗೂ ಶ್ರೋತೃಗಳ ಕುತೂಹಲವನ್ನು ಕೆರಳಿಸಬಹುದು."೧

'ಜನಪದ ಕಥೆಗಳು ಮೂಲತಃ ಮಾನವನ ವೈಯಕ್ತಿಕ ಹಾಗೂ ಸಾಮಾಜಿಕ ಅವಶ್ಯಕತೆಯ ಫಲಗಳು, ಮುಖ್ಯವಾಗಿ ಪುರಾತನ ಸಂಸ್ಕೃತಿ ಮತ್ತು ಪರಂಪರೆಯ ಮೇಲೆ ಹೆಚ್ಚು ಬೆಳಕು ಚೆಲ್ಲುತ್ತವೆ. ಹೊಸ ಸಂಸ್ಕೃತಿಯ ನಿರ್ಮಾಣಕ್ಕೆ ಯುಕ್ತ ಹಿನ್ನೆಲೆಯನ್ನು ಒದಗಿಸುತ್ತವೆ.

ಕಥೆಗಳನ್ನು ಹೇಳುವ ಮತ್ತು ಕೇಳುವ ಮಾನವ ಪ್ರವೃತ್ತಿ ಮಾನವ ಸಮಾಜದಷ್ಟೆ ಪುರಾತನವಾದದ್ದು. ನಿತ್ಯದ ದುಡಿಮೆಯ ಶ್ರಮವನ್ನು ಮರೆಯಲು, ಬಿಡುವಿನ ವೇಳೆಯನ್ನು ನಿರಾಳವಾಗಿ ಕಳೆಯಲು, ಏಕತಾನದ ಬದುಕಿಗೆ ರಂಜನೆಯನ್ನು ದೊರಕಿಸಿಕೊಳ್ಳಲು -ಹೀಗೆ ನಾನಾ ಉದ್ದೇಶಗಳ ಹಿನ್ನೆಲೆಯಲ್ಲಿ ಮನುಷ್ಯ ಕಥೆ ಹೇಳುವ ಕಲೆಯನ್ನು ರೂಢಿಸಿಕೊಂಡ.

ಕಥಾ ನಿರೂಪಕನ ಕಲ್ಪನೆ ಶ್ರೋತೃಗಳ ಕುತೂಹಲವನ್ನು ಒಂದೇ ಸಮನಾಗಿ ಒಟ್ಟೊಟ್ಟಾಗಿ ಸಾಗಿಬರುವಂತೆ ಮಾಡುವ ವಿಶಿಷ್ಟ ಮೌಖಿಕ ಪ್ರಕಾರವೇ ಜನಪದಕಥೆ. ಇದನ್ನು ನಿರೂಪಿಸುವ ನಿರೂಪಕ ಇಂದಿಗೂ ಇದನ್ನು ಗುರುತಿಸುವುದು 'ಅಜ್ಜಿಕಥೆ' ಎಂತಲೇ. ಏಕೆಂದರೆ ಕಥೆ ಹೇಳುವ ವಿಷಯದಲ್ಲಿ ಅಜ್ಜಿಯರನ್ನು ಮೀರಿಸುವವರಿಲ್ಲ. ಆದರೂ ಕಥೆ ಹೇಳಲು ಮತ್ತು ಕೇಳಲು ಪುರುಷರು, ಮಹಿಳೆಯರು, ವೃದ್ಧರು, ಬಾಲಕರು ಎನ್ನುವ ಭೇದವೇನಿಲ್ಲ. ಜಗತ್ತಿನಲ್ಲಿ ಮನುಷ್ಯರಿರುವ ಕಡೆಯಲ್ಲೆಲ್ಲಾ ಈ ಕ್ರಿಯೆ ಏಕ ಪ್ರಕಾರವಾಗಿ ಕಂಡು ಬಂದಿದೆ. ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಪ್ರಚಲಿತವಿರುವ ಜನಪದ ಕಥೆಗಳಲ್ಲಿ ಏಕರೂಪತೆ ಇರುವಂತೆ ಭಿನ್ನರೂಪಗಳೂ ಇವೆ. ಮೌಖಿಕವಾಗಿ ಸಾಗಿ ಬಂದಿರುವುದರಿಂದ ಅದು ನಿರಂತರವಾಗಿ ಬದಲಾವಣೆಗೊಳಗಾಗುತ್ತಲೇ ಇರುತ್ತವೆ. ಅವು ಬೇರೆ ಬೇರೆಕಾಲ ಮತ್ತು

ಪ್ರದೇಶಗಳಲ್ಲಿ ಬದುಕ ಬೇಕಾದ್ದರಿಂದ ಭೌಗೋಳಿಕವಾಗಿ ವ್ಯತ್ಯಾಸಕ್ಕೊಳಗಾಗುವುದು ಸರ್ವೇಸಾಮಾನ್ಯ. ವರ್ಷಗಳುರುಳಿದಂತೆ ಚಾರಿತ್ರಿಕ ವ್ಯತ್ಯಾಸಕ್ಕೂ ಗುರಿಯಾಗಬಹುದು. ಈ ಕಾರಣಗಳಿಂದಾಗಿ ಕಥೆಗಳು ರೂಪದಲ್ಲಿ, ವೈವಿಧ್ಯವನ್ನು ಭೌಗೋಳಿಕವಾಗಿ, ಚಾರಿತ್ರಿಕವಾಗಿ ವಿಸ್ತೃತ ವ್ಯಾಪ್ತಿಯನ್ನು ಪಡೆದುಕೊಂಡಿವೆ. ಮಾನವನ ಸಾಂಸ್ಕೃತಿಕ ವಿಕಾಸದ ವಿವಿಧ ಘಟ್ಟಗಳನ್ನು ಅಭ್ಯಾಸ ಮಾಡಲು ಕಥೆಗಳು ವಿಪುಲ ಸಾಮಗ್ರಿಯನ್ನೊದಗಿಸುತ್ತವೆ.

ಮೌಖಿಕ ಸಾಹಿತ್ಯದಲ್ಲಿ ಜನಪದ ಕಥೆಗಳೇ ಹೆಚ್ಚು ಜನಪ್ರಿಯವಾದ ಪ್ರಕಾರ, ಕಥೆಗಳ, ವಿಶಿಷ್ಟ ಲಕ್ಷಣವೆಂದರೆ ಸಾಂಪ್ರದಾಯಿಕತೆ ಬಲ್ಲವರಿಂದ ಕಥೆಯನ್ನು ಕೇಳಿಯಾದ ಮೇಲೆ ಅದನ್ನು ಹೇಳುವ ಸಂದರ್ಭ ಪ್ರಾಪ್ತವಾದಾಗ ಅದನ್ನು ಹೇಗೆ ನೆನಪಿನಲ್ಲುಳಿಸಿಕೊಳ್ಳಲಾಗಿರುತ್ತದೊ ಅಂತೆಯೇ ಅದನ್ನು ಪುನರುಚ್ಚರಿಸಲಾಗುತ್ತದೆ. ಈ ಪುನರುಚ್ಚಾರಣೆ ಆಯಾ ಕಥೆಗಾರನ ನೆನಪಿನ ಶಕ್ತಿ, ಕಲ್ಪನಾ ಸಾಮರ್ಥ್ಯ, ಅನುಭವಗಳಿಗನುಗುಣವಾಗಿ ಬೆಳೆಯುತ್ತಾ ಸಾಗುತ್ತದೆ. ಈ ಸಂದರ್ಭದಲ್ಲಿ ಮೂಲ ಕಥೆಯಲ್ಲಿದ್ದಿರಬಹುದಾದ ಕೆಲವು ಅಂಶಗಳು ಕೈಬಿಟ್ಟು ಹೋಗಲೂಬಹುದು. ಹೊಸ ಅಂಶಗಳು ಸೇರಿಕೊಳ್ಳಲೂಬಹುದು."[೨]

ಜೋಕುಮಾರನ ಬಗ್ಗೆ ಕಥೆಗಳು

ಜನಪದ ಸಾಹಿತ್ಯದಲ್ಲಿ ಪ್ರಸ್ತುತ ಸಂದರ್ಭಗಳಲ್ಲಿ ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿ ಜೀವಂತವಾಗಿರುವ ಜೋಕುಮಾರನ ಹುಟ್ಟು-ಸಾವು, ಕಥೆ, ನಂಬಿಕೆ, ಆಚಾರ-ವಿಚಾರಗಳು ಎಷ್ಟು ಕುತೂಹಲಕಾರಿಯಾಗಿರುತ್ತವೆ ಎಂಬುದನ್ನು ಅನೇಕ ಬಗೆಯ ಕಥೆಗಳ ಮೂಲಕ ತಿಳಿಯಬಹುದಾಗಿದೆ.

ಈ ಅಂಶಗಳನ್ನು ಗಮನಿಸಿದ ನಂತರ ಜೋಕುಮಾರನ ಬಗ್ಗೆ ಇರುವ ಅನೇಕ ಕಥೆ, ಪುರಾಣ ಕಥೆ, ಆವನ ಕುರಿತಾದ ತಾತ್ವಿಕ ಕಲ್ಪನೆ ಇವುಗಳ ಬಗ್ಗೆ ವಿವರಿಸುತ್ತೇನೆ.

೧. ಸಪ್ತ ಋಷಿಗಳಿಗೆ ಜೋಕ ಎಂಬುವನು ನಂಬಿಕೆಯ ಸೇವಕನಿರುತ್ತಾನೆ. ಒಂದು ದಿನ ಅವರು ಭೂಲೋಕದ ಜನರ ವೈಭವವನ್ನು ಕುರಿತು ತಮ್ಮಲ್ಲೆ ಮಾತನಾಡಿಕೊಳ್ಳುತ್ತಾರೆ. ದೇವರುಗಳು ಅಮೃತವನ್ನು ಉಣ್ಣುತ್ತಾರೆಯೇ ಹೊರತು, ಬೇರೆ ಏನನ್ನೂ ಅವರು ಸೇವಿಸುವುದಿಲ್ಲ, ಆದರೆ ನರಮನುಷ್ಯರು ಪರಮಾನ್ನ, ಮೃಷ್ಟಾನ್ನ, ಪಂಚಭಕ್ಷ್ಯಗಳನ್ನು ಸೇವಿಸುತ್ತಾರೆ. ಅವರು ಜಿಹ್ವಾಲಂಪಟರು, ವಿಷಯ ಲೋಲಪರು.... ಮುಂತಾಗಿ ಮಾತನಾಡಿಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ಅಲ್ಲಿಗೆ ಬಂದ ಜೋಕನು ಇವರಾಡಿದ ಮಾತುಗಳನ್ನು ಕೇಳಿಸಿಕೊಳ್ಳುತ್ತಾನೆ. ಅವನಿಗೆ ಒಮ್ಮೆ ಭೂಲೋಕಕ್ಕೆ ಹೋಗಿ ನರಮನುಷ್ಯರನ್ನು, ಅವರ ಜೀವನ ಕ್ರಮವನ್ನು ನೋಡಿಕೊಂಡು ಬರಬೇಕೆಂಬ ಬಯಕೆ ಉಂಟಾಗುತ್ತದೆ.

ಆದರಂತೆ ತನ್ನ ಬಯಕೆಯನ್ನು ಆ ಸಪ್ತಋಷಿಗಳಿಗೆ ತಿಳಿಸುತ್ತಾನೆ. ಅವರು ಕೆಲವು ಷರತ್ತುಗಳನ್ನು ವಿಧಿಸುತ್ತಾರೆ.

ಆ ಷರತ್ತುಗಳನ್ನು ಚಾಚೂ ತಪ್ಪದೆ ಪಾಲಿಸಿದರೆ ಮಾತ್ರ ಭೂಲೋಕಕ್ಕೆ ಹೋಗಿ ಬರಬಹುದು ಎನ್ನುತ್ತಾರೆ. ಜೋಕನು ಆಷರತ್ತುಗಳಿಗೆ ಒಪ್ಪಿಕೊಳ್ಳುತ್ತಾನೆ. ಎರಡು ಷರತ್ತುಗಳು ಈ ಕೆಳಕಂಡಂತಿವೆ.

೧. ಯಾವುದೇ ತರಹದ ಮೃಷ್ಟಾನ್ನ ಭೋಜನವನ್ನು ಮುಂದಿಟ್ಟರೂ ಊಟ ಮಾಡಬಾರದು.

೨. ಯಾವ ಸುಂದರ ತರುಣಿಯರಿಗೂ ಮನಸೋಲಬಾರದು. ಹಾಗೆಯೇ ಹಿಂದಿರುಗಬೇಕೆಂದು ಬುದ್ಧಿ ಮಾತು ಹೇಳುತ್ತಾರೆ.

ನಂತರ ಜೋಕ ಋಷಿಯು ಭೂಮಿಗೆ ಇಳಿದು ಬರುತ್ತಾನೆ. ಅಷ್ಟರಲ್ಲಿ ಕತ್ತಲೆಯಾಗುತ್ತದೆ. ರಾತ್ರಿ ವಸತಿಗೆ ಜಾಗ ಹುಡುಕುತ್ತಿರಲು ಅಲ್ಲಿ ಒಂದು ಮಾರಮ್ಮನ ಗುಡಿಯು ಕಾಣಿಸುತ್ತದೆ. ಅಲ್ಲಿಗೆ ಹೋಗಿ ತಂಗುತ್ತಾನೆ. ನಂತರ ತಾನು ತೆಗೆದುಕೊಂಡು ಬಂದ ಅಮೃತವನ್ನು ಸೇವಿಸುತ್ತಾನೆ. ತನ್ನ ಸುಶ್ರಾವ್ಯ ಕಂಠದಿಂದ, ಮನೋಹರವಾಗಿ ಸಪ್ತರಾಗಗಳಲ್ಲಿ ಹಾಡುತ್ತಾನೆ. ಇವನ ಕಂಠಸಿರಿಯಿಂದ ಹೊರಹೊಮ್ಮಿದ ಹಾಡುಗಳನ್ನು ಗುಡಿಯಲ್ಲಿದ್ದ ಮಾರಿದೇವತೆಯು ಕೇಳಿ ಇವನಿಗೆ ಮನಸೋಲುತ್ತಾಳೆ. ಒಂದು ಚಿನ್ನದ ಬಟ್ಟಲಿನಲ್ಲಿ ಮೃಷ್ಟಾನ್ನ ಭೋಜನವನ್ನು ತಂದು ಅವನಿಗೆ ಊಟ ಮಾಡಲು ಕೊಡುತ್ತಾಳೆ. ಜೋಕ ಮಹರ್ಷಿಯ ರೂಪ-ಲಾವಣ್ಯಗಳಿಗೆ ಮನಸೋಲುತ್ತಾಳೆ. ಜೋಕಮಹರ್ಷಿಗೆ ಸಪ್ತಋಷಿಗಳು ಕೊಟ್ಟ ಎಚ್ಚರಿಕೆಯ ಮಾತುಗಳು ನೆನಪಾಗುತ್ತವೆ. ಒಂದು ಕಡೆಗೆ ಮೃಷ್ಟಾನ್ನ ಭೋಜನದ ಸುವಾಸನೆ. ಮತ್ತೊಂದು ಕಡೆ ಸುಂದರವಾಗಿರುವ ಹೆಣ್ಣಿನ ಆಕರ್ಷಣೆ. ಇವೆಲ್ಲವಕ್ಕೂ ಮಿಗಿಲಾಗಿ ಗುರುಗಳ ಆಜ್ಞೆ. ಈ ಮೂರರಲ್ಲಿ ಅವನು ಯಾವುದಕ್ಕೆ ಮಣಿಯಬೇಕೆಂದು ಗೊತ್ತಾಗುವುದಿಲ್ಲ. ನಂತರ ಕಡೆಗೆ ಧೈರ್ಯ ಮಾಡಿ ಮೃಷ್ಟಾನ್ನ ಭೋಜನದ ಸವಿ ನೋಡುತ್ತಾನೆ. ನಂತರ ಮಾರಿಯ ಮುಖವನ್ನು ತದೇಕಚಿತ್ತದಿಂದ ಗಮನಿಸುತ್ತಾನೆ. ಅವಳ ಸೌಂದರ್ಯಕ್ಕೆ ಮಾರು ಹೋಗುತ್ತಾನೆ. ಇಂತಹ ಸುರದ್ರೂಪಿಯಾದ ನೀನು ಯಾರೆಂದು? ಪ್ರಶ್ನಿಸುತ್ತಾನೆ. ಆಗ ಅವಳು ತಾನು 'ಮಾರಿ' ಎಂದು ಹೇಳಿ, ಅವನಿಗೆ ತಾಂಬೂಲವನ್ನು ಕೊಡುತ್ತಾಳೆ. ಇದೇ ಸಮಯಕ್ಕಾಗಿ ಕಾದುಕುಳಿತ ಮನ್ಮಥನು ತನ್ನ 'ಕಾಮಬಾಣ'ವನ್ನು ಪ್ರಯೋಗಿಸುತ್ತಾನೆ. ಜೋಕಮಹರ್ಷಿಯು ಮಾರಿಗೆ ಮನಸೋಲುತ್ತಾನೆ. ಅವರಿಬ್ಬರಲ್ಲಿ ಪ್ರೇಮ ಅಂಕುರಿಸುತ್ತದೆ. ಸ್ವಲ್ಪ ಸಮಯದ ನಂತರ ಅವನಿಗೆ ತಪ್ಪಿನ ಅರಿವಾಗುತ್ತದೆ. ತಾನು ಗುರುಗಳ ಎಚ್ಚರಿಕೆಯ ಮಾತುಗಳನ್ನು ಪಾಲಿಸದೇ ಹೋದನಲ್ಲಾ ಎಂದು ಮಮ್ಮಲ ಮರುಗುತ್ತಾನೆ.

ಆದರೆ ಎಲ್ಲವೂ ಜರುಗಿರುತ್ತವೆ. ದೇವಲೋಕಕ್ಕೆ ಹೋಗಿ ಸಪ್ತಋಷಿಗಳ ಕಾಲಿಗೆ ಬಿದ್ದು, ತನ್ನ ತಪ್ಪನ್ನು ಮನ್ನಿಸಬೇಕೆಂದು ಕೇಳಿಕೊಳ್ಳುತ್ತಾನೆ. ಅವರು ಇವನನ್ನು ಕಾಲಿನಿಂದ ಒದೆಯುತ್ತಾರೆ. ಆಗ

ಜೋಕ ಋಷಿಯು ಗುರುಗಳಿಗೆ ಮಾನ್ಯರೆ, ನಿಮ್ಮ ಪಾದಗಳು ನನ್ನನ್ನು ಸೋಂಕಿದವು. ನಾನು ಮಾಡಿದ ಪಾಪಗಳೆಲ್ಲವೂ ಬಗೆಹರಿದವು ಎಂದು ತಿಳಿಯುತ್ತೇನೆ. ನಿಮಗೆ ಅನಂತ, ಅನಂತ ಪ್ರಣಾಮಗಳು ಎಂದು ವಿನಮ್ರ ಪೂರ್ವಕವಾಗಿ ಬೇಡಿಕೊಳ್ಳುತ್ತಾನೆ. ತಕ್ಷಣ ಅವರು ತಮ್ಮೊಳಗೆ ಹಸನ್ಮುಖಿಗಳಾಗಿ, ಏಳು ದಿನ ಸುಮ್ಮನಿರು ನೀನು ನಮ್ಮಲ್ಲಿಗೆ ಬಂದು ಸೇರುತ್ತೀ ಎಂಬುದಾಗಿ ಹೇಳುತ್ತಾರೆ.

ಭೂಲೋಕದಲ್ಲಿ ಮಾರಿ ಮತ್ತು ಜೋಕಋಷಿಯ ಸಂಬಂಧದಿಂದಾಗಿ ಮಾರಿಯು ಒಬ್ಬ ದೃಢಕಾಯನಾದ, ಸುಂದರವಾಗಿರುವ ಮಗನಿಗೆ ಜನ್ಮ ನೀಡುತ್ತಾಳೆ. ಆ ಮಗು ಹುಟ್ಟಿದ ಕೂಡಲೆ ಮಾತನಾಡಲು ತೊಡಗುತ್ತದೆ. ಹಾಗೂ ತಾಯಿಗೆ ತನ್ನ ತಂದೆ ಯಾರೆಂದು ಕೇಳುತ್ತದೆ. ಅವಳು ತನಗೇನೂ ತಿಳಿದಿಲ್ಲ. ಆದರೆ ಅವನು ಒಬ್ಬ ದೇವತಾಪುರುಷನು, ಅವನು ಎಲ್ಲಿಗೆ ಹೋದನೋ ತನಗೆ ತಿಳಿದಿಲ್ಲವೆಂದು ಹೇಳುತ್ತಾಳೆ. ಆಗ ಮಗನು ಹಾಗಾದರೆ ತನ್ನ ತಂದೆ ಯಾರೆಂದು ಹುಡುಕಿಕೊಂಡು ಬರುತ್ತೇನೆ ಎಂದು ಹೇಳಿ ಹೊರಡುತ್ತಾನೆ.

ಆ ಬಾಲಕನು ಹುಟ್ಟಿದ ದಿನವು ಭಾದ್ರಪದ ಶುದ್ಧ ಅಷ್ಟಮಿಯ ದಿನ ಆಗಿರುತ್ತದೆ. ತನ್ನ ತಂದೆಯನ್ನು ಹುಡುಕುತ್ತ, ಹೋಗುತ್ತಿರುವಾಗ ಗಂಗಾಮತಸ್ಥರು ಭಾದ್ರಪದ ಹುಣ್ಣಿಮೆಯ ದಿನ ಗಂಗಾಮಾತೆಯನ್ನು ಪೂಜಿಸುತ್ತಿದ್ದರು. ಆ ಸಮಯದಲ್ಲಿ ಮಡಿವಾಳರು ತಾವು ಬೇಡಿ ತಂದ ಆಹಾರವನ್ನು ಸೇವಿಸುವ ಸಂದರ್ಭದಲ್ಲಿ ತಮ್ಮ ಕತ್ತೆಗಳನ್ನು ಕಾಯಲು ಒಬ್ಬ ಸುಂದರ ಹುಡುಗಿ 'ಸುಕರ್ಣಿಕ' ಎಂಬುವಳನ್ನು ನೇಮಿಸಿದ್ದರು. ಜೋಕ ಋಷಿ ಹಾಗೂ ಮಾರಿಯರಿಗೆ ಜನಿಸಿದ ಈ ಬಾಲಕನು ತನ್ನ ತಂದೆ ಯಾರೆಂದು ತಿಳಿಯುವುದಕ್ಕೋಸ್ಕರ ಕುದುರೆಯ ಮೇಲೆ ಈ ಮಾರ್ಗವಾಗಿ ಬರುತ್ತಾನೆ. ಅವನು ಆ ಸುಂದರ ಹುಡುಗಿ 'ಸುಕರ್ಣಿಕ'ಳನ್ನು ನೋಡಿ, ಅವಳನ್ನು ಪೀಡಿಸಿ, ಕಾಡಿಸುತ್ತಾನೆ. ಅವಳು ಹೆದರಿ, ಕಂಗಾಲಾಗಿ, ಕೂಗಿಕೊಳ್ಳುತ್ತಾಳೆ. ಅಲ್ಲಿ ನೆರೆದಿರುವ ಎಲ್ಲಾ ಮಡಿವಾಳರು ಓಡಿ ಬಂದು ಅವನ್ನು ಹೊಡೆದುಕೊಲ್ಲುತ್ತಾರೆ. ನಂತರ ಅವನ ಮೃತ ಶರೀರವನ್ನು ತಾವು ಬಟ್ಟೆ ಒಗೆಯುವ ಕಲ್ಲಿನ ಅಡಿಯಲ್ಲಿ ಹೂಳುತ್ತಾರೆ. ಮಾರಿಯ ಸಂಪರ್ಕದಿಂದ ಜೋಕುಮಾರನಿಗೆ ಸಂಭವಿಸಿದ ಶಾಪವು ಅಲ್ಲಿಗೆ ಮುಕ್ತಾಯವಾಗುತ್ತದೆ. ಜೋಕ ಮಹರ್ಷಿಯ ಅಂಶದಿಂದ ಹುಟ್ಟಿದ ಆ ಬಾಲಕನಿಗೆ 'ಜೋಕುಮಾರ' ಎಂಬ ಹೆಸರು ಬರುತ್ತದೆ.

೨. ಜೋಕಋಷಿ ಮತ್ತು ಎಳೆಗೌರಿ ದಂಪತಿಗಳಿಗೆ ಮಕ್ಕಳಿರುವುದಿಲ್ಲ. ಅವರು ಶಿವನನ್ನು ಕುರಿತು ತಮಗೆ ಮಕ್ಕಳ ಭಾಗ್ಯವನ್ನು ಕರುಣಿಸು ಎಂಬುದಾಗಿ ಪ್ರಾರ್ಥಿಸುತ್ತಾರೆ. ಅವರ ಕೋರಿಕೆಯನ್ನು ಶಿವನು ಪರಿಗಣಿಸುತ್ತಾನೆ. ಕೇವಲ ಏಳುದಿನಗಳ ಆಯುಷ್ಯವುಳ್ಳ ಒಬ್ಬ ಕುಮಾರನನ್ನು ಅನುಗ್ರಹಿಸುತ್ತಾನೆ. ಇವನು ಶಿವನ ವರಪುತ್ರನಾಗಿರುವುದರಿಂದ ಹುಟ್ಟಿದ ಕೂಡಲೇ ಎಲ್ಲರಂತೆ ಮಾತನಾಡಲು ತೊಡಗುತ್ತಾನೆ.

ಮಳೆ ಇಲ್ಲದೆ, ಭೀಕರ ಬರಗಾಲವು ಬರುತ್ತದೆ. ಆಗ ಜನರು ಹಾಹಾಕಾರದಿಂದ ತಿನ್ನಲು ಏನೂ ಸಿಗದೆ ಪರಿತಪಿಸುತ್ತಿರುತ್ತಾರೆ. ಆಗ ಜೋಕುಮಾರನು ತನ್ನ ನಿಲುಗುದುರೆಯನ್ನೇರಿ ಸುತ್ತಲೂ ಸಂಚರಿಸುತ್ತಾನೆ. ಅವನು ಶಲ್ಯವನ್ನು ಬೀಸಿ ತನ್ನಲ್ಲಿರುವ ವಿಶಿಷ್ಟವಾದ ಶಕ್ತಿಯಿಂದ ದೊಡ್ಡ ಪ್ರಮಾಣದ ಮಳೆಯನ್ನು ಬರಿಸುತ್ತಾನೆ. ಕೆರೆ, ಬಾವಿ, ಹಳ್ಳ, ಕೊಳ್ಳಗಳು ತುಂಬಿ ಹರಿಯುತ್ತವೆ. ಇದರಿಂದ ಸಂತೋಷಗೊಂಡ ಜೋಕುಮಾರನು ಹೊಲದಲ್ಲಿ ಚೆಂಡಾಟವಾಡುತ್ತಾನೆ. ಇವನು ಬಾಲ್ಯದಿಂದಲೂ ಅತಿಕಾಮಿಯಾಗಿರುವುದರಿಂದ, ಒಂದು ದಿನ ಒಬ್ಬ ಮಡಿವಾಳರ ಹೆಣ್ಣನ್ನು ಮೋಹಿಸುತ್ತಾನೆ. ಅವನನ್ನು ಹೆಣ್ಣಿನ ತಂದೆಕೊಂದು ರುಂಡವನ್ನು ಹೊಳೆಯಲ್ಲಿ ಹಾಕುತ್ತಾನೆ. ಅಲ್ಲಿ ಮೀನುಗಾರರಿರುತ್ತಾರೆ. ಅವರು ಆ ದೃಶ್ಯವನ್ನು ನೋಡಿ ಭಯಪಟ್ಟು ರುಂಡವನ್ನು ಅಗಸರು ಬಟ್ಟೆ ಒಗೆಯುವ ಕಲ್ಲಿನ ಕೆಳಗೆ ತುರುಕುತ್ತಾರೆ. ಅದನ್ನು ಮಡಿವಾಳರು ದೇವರೆಂದು ಪೂಜಿಸುತ್ತಾರೆ. ತಮಗೆ ಮಳೆ ಬೆಳೆ ಕೊಡಬೇಕೆಂದು ಪ್ರಾರ್ಥಿಸುತ್ತಾರೆ. ಅಂದಿನಿಂದ ಜೋಕುಮಾರನ ಹಬ್ಬ ಜಾರಿಗೆ ಬಂದಿರಬೇಕೆಂಬ ಪ್ರತೀತಿಯಿದೆ. ಭಾದ್ರಪದ ಅಷ್ಟಮಿಯ ದಿನ ಹುಟ್ಟಿ ಹುಣ್ಣಿಮೆಯ ದಿನ ಸಾಯುತ್ತಾನೆ. ಆದ್ದರಿಂದ ಆ ಹುಣ್ಣಿಮೆಯನ್ನು ಜೋಕುಮಾರನ ಹುಣ್ಣಿಮೆ ಎಂತಲೂ ಕರೆಯುತ್ತಾರೆ.

೩. ಜೋಕುಮಾರನ ಹಬ್ಬವು ಭಾದ್ರಪದ ಮಾಸದಲ್ಲಿ ಗೌರಿ ಹಬ್ಬದ ನಂತರ ಬರುತ್ತದೆ. ಇವನಿಗಿಂತ ಮೊದಲು ಭೂಲೋಕದಲ್ಲಿ ಹುಟ್ಟಿ ಬಂದ ಗಣಪತಿಯು ತನಗೆ ಒಳ್ಳೆಯ ಊಟೋಪಚಾರಗಳು ದೊರೆತವು. ನಾನು ಆನಂದದಿಂದ ಭೂಲೋಕದಲ್ಲಿ ಇದ್ದು ಬಂದೆನು ಎಂದು ತಂದೆಗೆ ತಿಳಿಸುತ್ತಾನೆ.

ಆ ನಂತರ ಹುಟ್ಟಿ ಬಂದ ಜೋಕುಮಾರನು ಜನರು ಮಳೆ ಬೆಳೆ ಇಲ್ಲದೆ ಪರಿತಪಿಸುತ್ತಿದ್ದಾರೆ. ಅಂಬಲಿ, ನುಚ್ಚಂಬಲಿಗಳನ್ನು ಊಟ ಮಾಡುತ್ತಾರೆ. ಅವರನ್ನು ಕಂಡು ತನಗೆ ನೋವಾಯಿತೆಂದು, ಶಿವನಿಗೆ ಮಳೆ ಸುರಿಸಲು ಹೇಳುತ್ತಾನೆ.

೪. ಜೋಕುಮರನು ಕಾಮದ ಸ್ವಭಾವದವನಾಗಿರುತ್ತಾನೆ. ಅವನು ಹುಟ್ಟಿದ ಕೂಡಲೇ ತನ್ನ ತಾಯಿ ಮಾರಿಯನ್ನು ಮೋಹಿಸುತ್ತಾನೆ. ಆಗ ಆಕೆಗೆ ಕೋಪಬರುತ್ತದೆ. ಮಗನ ತಲೆಯನ್ನು ಕಡಿಯುತ್ತಾಳೆ. ಜೋಕುಮಾರನ ಹಾಡುಗಳಲ್ಲಿ ವ್ಯಕ್ತವಾಗಿರುವ ಹಾಗೆಯೇ

ಹುಟ್ಟಿದೇಳು ದಿವಸಕೆ ಪಟ್ನಾವ ತಿರುಗ್ಯಾನ
ದಿಷ್ಟಾದೇವಿ ನಿನಮಗನ | ಕೊಮರಾಯ
ಕೊಟ್ಟಾ ಏಳು ದಿನಗಳನು ||

ದಿಷ್ಟಾ ದೇವಿಯ ಮಗನೆಂದು ಕರೆಯುವರೆಂದು ಹೇಳಿದೆ. ಕೆಲವು ಹಾಡುಗಳ ಪ್ರಕಾರ ಜೇಷ್ಟದೇವಿಯ ಮಗನೆಂದು ಹೇಳುವ ಹಾಡುಗಳೂ ಸಹ ಇವೆ.

ಹುಟ್ಟಿದೇಳು ದಿನಕೆ ತಿರಿಗ್ಯಾನೇ ನಿನ್ನ ಮಗ |
ಜೇಷ್ಠ್ಯಾದೇವಿ ನಿನ್ನ ಮಗ ಕೊಮರಾಗೆ |
ಕೊಟ್ಟಾರೆ ಏಳ ದಿನಗಳ |
ಆರೇಳು ದಿನಕೆ ಆಳಿದಾನೆ ರಾಜ್ಯವ |
ಜೇಷ್ಠ್ಯಾದೇವಿ ನಿನ್ನ ಮಗ ಕೊಮರಾಗೆ
ಕೊಟ್ಟಾರೆ ಏಳು ದಿನಗಳ ||

ಇಲ್ಲಿ ಜೇಷ್ಠ್ಯಾದೇವಿಯೇ ಉತ್ತರ ಕರ್ನಾಟಕದ 'ಶಟವಿ', ಶಟಗೆವ್ವಾ, 'ಶೆಟಗಿ' ಎಂಬ ಗ್ರಾಮದೇವತೆ ಇರಬಹುದು.

೫. ಒಬ್ಬ ತಾಯಿಗೆ ಐದು ಜನ ಮಕ್ಕಳಿರುತ್ತಾರೆ. ಗಣಪತಿ, ಜೋಕುಮಾರ, ಚಂದಪ್ಪ (ಚಂದ್ರ) ಸೂರ್ಯ, ಹಾಗೂ ಕಾಮ. ಇವರೆಲ್ಲರೂ ಒಟ್ಟಾಗಿ ಒಂದು ದಿನ ಶ್ರೀಮಂತನೊಬ್ಬನ ಮನೆಗೆ ಊಟಕ್ಕೆ ಹೋಗುತ್ತಾರೆ. ಆಗ ತಾಯಿಯು ತನಗೆ ಏನನ್ನಾದರೂ ಸ್ವಲ್ಪ ಆಹಾರವನ್ನು ತನ್ನಿರಿ ತಂದು ಹೇಳುತ್ತಾಳೆ. ಎಲ್ಲರೂ ಹಾಯಾಗಿ, ಹೊಟ್ಟೆ ತುಂಬ ಊಟವನ್ನು ಮಾಡುತ್ತಾರೆ. ಊಟ ಮಾಡುವಾಗ ತಾಯಿಯ ನೆನಪು ಚಂದಪ್ಪನ (ಚಂದ್ರ) ಹೊರತು ಯಾರಿಗೂ ಆಗುವುದಿಲ್ಲ. ಆದ್ದರಿಂದ ಚಂದಪ್ಪನು ತಾಯಿಗೆ ಹೇಗೆ ಊಟ ಒಯ್ಯಬೇಕೆಂದು ಯೋಚಿಸುತ್ತಾನೆ. ತನ್ನ ಕೈಯಲ್ಲಿರುವ ಉಗುರುಗಳೊಳಗೆ ಎಲ್ಲಾ ಆಹಾರವನ್ನು ಇಟ್ಟುಕೊಂಡು ಬರುತ್ತಾನೆ.

ಮನೆಗೆ ಬಂದ ನಂತರ ತಾಯಿಯು ಎಲ್ಲರಿಗೂ 'ಏನೇನು ತಂದಿರಿ ನನಗೆ' ಎಂದು ಕೇಳಿದಾಗ, ಎಲ್ಲರೂ ಮುಖವನ್ನು ಕೆಳಗೆ ಹಾಕಿ ನಿಲ್ಲುತ್ತಾರೆ. ಚಂದಪ್ಪನು ತಾಯಿಗೆ ಒಂದು ತಟ್ಟೆಯನ್ನು ತೆಗೆದುಕೊಂಡು ಬರಲು ಹೇಳುತ್ತಾನೆ. ಆ ತಟ್ಟೆಯಲ್ಲಿ ತಾನು ಉಗುರುಗಳೊಳಗೆ ತಂದಿರುವ ಎಲ್ಲಾ ಆಹಾರವನ್ನು ಹಾಕುತ್ತಾನೆ. ತಾವು ಊಟ ಮಾಡಿದ ಎಲ್ಲ ಮೃಷ್ಟಾನ್ನ ಭೋಜನವು ಅಲ್ಲಿ ಇರುತ್ತದೆ. ತಾಯಿ ಖುಷಿಯಿಂದ ಊಟ ಮಾಡಿ ತನ್ನ ಎಲ್ಲಾ ಮಕ್ಕಳಿಗೆ ಈ ರೀತಿಯಲ್ಲಿ ಹರಸುತ್ತಾಳೆ.

೧. ಚಂದಪ್ಪನಿಗೆ - ನೀನು ತಂಪೊತ್ತಿನಲ್ಲಿ ಹೋಗಿ ತಂಪೊತ್ತಿನಲ್ಲಿ ಬಾ.

೨. ಸೂರ್ಯನಿಗೆ - ನೀನು ಉರಿದುಕೊಂಡು ಹೋಗಿ, ಉರಿದು ಕೊಂಡು ಬಾ

೩. ಗಣಪತಿಗೆ - ೫ ದಿನ ಹೊಟ್ಟೆ ತುಂಬಾ ಮೋದಕ ತಿಂದು ನಂತರ ನೀರಿನಲ್ಲಿ ಬಿದ್ದು ಸಾಯು.

೪. ಕಾಮಣ್ಣನಿಗೆ - ಹುಣ್ಣಿಮೆಯ ದಿನ ಹುಟ್ಟಿ ಮರುದಿನ ಸುಟ್ಟುಕೊಂಡು ಸಾಯು.

೫. ಹುಟ್ಟಿದ ಏಳು ದಿನಗಳವರೆಗೆ ಬೇಕಾದ ಹಾಗೆ ಮೆರಿ, ಏಳು ದಿನಗಳ ನಂತರ ಅಗಸರ ಕಲ್ಲಿನ ಕೆಳಗೆ ತಲೆ ಒಡೆಸಿಕೊಂಡು ಸಾಯು ಎಂದು ಜೋಕುಮಾರನಿಗೆ ಹೇಳುತ್ತಾಳೆ. ಈ ಜನಪದ

ಕಥೆಯ ತಾತ್ಪರ್ಯ ಈ ಐದೂ ಜನ ದೇವರ ಜನ್ಮ-ಮರಣ ಸಂಬಂಧವನ್ನು, ತಾಯಿ ಶಾಪಕೊಟ್ಟ ಪ್ರಸಂಗವನ್ನೂ ಆಯಾ ಮಕ್ಕಳ ಗುಣಸ್ವಭಾವಗಳನ್ನು ಇಂತಹ ಕಥೆಗಳು ಅನಾವರಣಗೊಳಿಸುತ್ತವೆ.

ಆರು ಋತುಗಳು

ಪ್ರತಿಯೊಂದು ಋತುವಿನಲ್ಲಿ ಎರಡು ಮಾಸಗಳು ಬರುತ್ತವೆ.

ವಸಂತ : ಚೈತ್ರ, ವೈಶಾಖ

ಗ್ರೀಷ್ಮ : ಜೇಷ್ಠ, ಆಷಾಢ

ವರ್ಷ : ಶ್ರಾವಣ, ಭಾದ್ರಪದ

ಶರದ್ : ಆಶ್ವಯುಜ(ಆಶ್ವೀಜ), ಕಾರ್ತೀಕ

ಹೇಮಂತ್ : ಮಾರ್ಗಶಿರ, ಪುಷ್ಯ

ಶಿಶಿರ : ಮಾಘ, ಪಾಲ್ಗುಣ



ನಂಬಿಕೆಗಳು

ಮಾನವನ ಜೀವನದಲ್ಲಿ ನಂಬಿಕೆಗಳು ಅತ್ಯಂತ ಗಾಢವಾದ ಪರಿಣಾಮವನ್ನು ಬೀರುತ್ತವೆ. ಜನಪದರ ಜೀವನ ಇಂತಹ ನಂಬಿಕೆಗಳ ತಳಹದಿಯ ಮೇಲೆ ನಿಂತಿರುತ್ತದೆ. ಜನಪದ ನಂಬಿಕೆಯು ಪರಂಪರಾನುಗತವಾಗಿ ಅಂಗೀಕೃತವಾದಂತಹ ಒಂದು ಪರಿಕಲ್ಪನೆ. ಮಾನವನ ಬದುಕಿಗೂ ನಂಬಿಕೆಗೂ ಬೇರ್ಪಡಿಸಲಾಗದ ಸಂಬಂಧ. ಜನಪದರ ಕೆಲಸ, ಆಲೋಚಿಸುವ ಪರಿ, ರೂಢಿ, ಜೀವನಕ್ರಮ, ಸಂಪ್ರದಾಯ, ಆಚರಣೆಗಳೆಲ್ಲವೂ ಮೂಲಭೂತವಾಗಿ ನಂಬಿಕೆಗಳಿಂದ ಪ್ರೇರಿತವಾಗಿರುತ್ತವೆಂದೇ ಹೇಳಬಹುದು. ಯಾವುದೇ ನಂಬಿಕೆಯೊಂದು ಸಂಪ್ರದಾಯ, ಆಚರಣೆಗಳೊಂದಿಗೆ ಅಂತರ್ ಸಂಬಂಧವನ್ನು ಹೊಂದಿರುತ್ತದೆ. ಆ ನಂತರ ಕ್ರಿಯಾರೂಪವನ್ನು ತಾಳುತ್ತದೆ.

ಆರ್.ಎಸ್.ಬಾಗ್ಸ್ ಅವರು ಜಾನಪದ ವರ್ಗೀಕರಣದಲ್ಲಿ ನಂಬಿಕೆಗಳನ್ನು ವೈಜ್ಞಾನಿಕ ಬಗೆಯಾಗಿ ವಿವರಿಸಿದ್ದಾರೆ. ಜನಪದರ ಬದುಕಿನಲ್ಲಿ ಯಾವುದೋ ಒಂದು ಆಕಸ್ಮಿಕವಾದ ಘಟನೆ ಅಥವಾ ವಸ್ತುಸಂಗತಿ ಪುನಃ ಪುನರಾವರ್ತನೆಗೊಂಡಾಗ ಅದು ನಂಬಿಕೆಯಾಗಿ ಪರಿಣಮಿಸುತ್ತದೆ. ನನ್ನ ಆಲೋಚನೆಯಂತೆ ಅರ್ಥೈಸುವುದಾದರೆ ಯಾವುದೋ ಒಂದು ದಿನ, ವಾರ, ಅಥವಾ ವರ್ಣದ ಹರಳು ಅದೃಷ್ಟದ ಸಂಕೇತವಾಗಿರಬಹುದು. ಬೆಕ್ಕು, ವಿಧವೆ, ಹೆಣ, ಒಂಟಿಬ್ರಾಹ್ಮಣ ನಮ್ಮೆದುರಿಗೆ ಬಂದರೆ ಅಪಶಕುನ ಎನ್ನುವ ನಂಬಿಕೆಗಳು. ಮನುಷ್ಯನ ಬದುಕಿಗೂ ಪ್ರಾಕೃತಿಕ ವ್ಯಾಪಾರಕ್ಕೂ ನಡುವೆಯಿರುವ ಕಾರ್ಯಕಾರಣ ಸಂಬಂಧವೂ ಇಂತಹ ನಂಬಿಕೆಯೊಂದರ ಹಿಂದೆ ಕೆಲಸ ಮಾಡುತ್ತದೆ. ಉದಾಹರಣೆಗೆ ಶುಭ ಕಾರ್ಯಕ್ಕೆಂದು ಹೊರಟಾಗ ಖಾಲಿ ಕೊಡವನ್ನು ಹಿಡಿದು ಯಾರಾದರೂ ಎದುರಿಗೆ ಬಂದರೆ

ಅಶುಭ. ಹಾಗೆಯೇ ಕಟ್ಟಿಗೆಯ ಹೊರೆಯನ್ನು ಹೊತ್ತುಕೊಂಡು ಎದುರಿಗೆ ಬಂದರೆ ಅಪಶಕುನ. ಬೆಳಗಿನ ಜಾವ ಬಿದ್ದ ಸ್ವಪ್ನಗಳು ನಿಜವಾಗುತ್ತವೆ. ನರಿಯ ಮುಖ ನೋಡಿದರೆ ಅದೃಷ್ಟ, ಗೂಬೆ ಮನೆಯ ಮೇಲೆ ಕುಳಿತರೆ ಅಶುಭ. ಗುಬ್ಬಚ್ಚಿ ಮಣ್ಣಿನಲ್ಲಿ ಆಡಿದರೆ ಮಳೆಬಂದೇ ಬರುತ್ತದೆಂದು ಜನಪದರ ತಿಳುವಳಿಕೆ. ಹಲ್ಲಿ ಲೊಚಗುಟ್ಟಿದರೆ ಶುಭ ಶಕುನದಂತಹ ನಂಬಿಕೆಗಳು ಈ ನೆಲೆಯವುಗಳು.

ಮೂಲತಃ ವೈಯಕ್ತಿಕ ನೆಲೆಯಲ್ಲಿ ಕಾಲ್ಪನಿಕ ಆಲೋಚನೆಯೊಂದು ಹುಟ್ಟಿಕೊಳ್ಳುತ್ತದೆ. ನಂತರ ಅದು ಸಮೂಹದಲ್ಲಿ ಸಾಮೂಹಿಕ ಮಾನ್ಯತೆಯನ್ನು ಪಡೆದುಕೊಂಡಾಗ ಅದು ನಂಬಿಕೆಯಾಗುತ್ತದೆ. ತೆಂಗಿನಕಾಯಿ ತಿಂದರೆ ಮದುವೆಯಲ್ಲಿ ಮಳೆ ಬರುತ್ತದೆ. ಆರತಿಯ ದೀಪ ಆರಿದರೆ ಅಪಶಕುನ. ಉತ್ತರಾಯಣ ಪುಣ್ಯಕಾಲದಲ್ಲಿ ಸತ್ತರೆ ಸ್ವರ್ಗ ಪ್ರಾಪ್ತವಾಗುತ್ತದೆ. ಅಮವಾಸ್ಯೆಯಲ್ಲಿ ಸತ್ತವರು ಭೂತಗಳಾಗುತ್ತಾರೆ. ಆಷಾಢ ಮಾಸದಲ್ಲಿ ಅತ್ತೆ-ಸೊಸೆ ಒಂದೇ ಬಾಗಿಲಲ್ಲಿ ಓಡಾಡಬಾರದು... ಇತ್ಯಾದಿ. ನಂಬಿಕೆಗಳನ್ನು ನಂಬಿಕೆ-ಮೂಢನಂಬಿಕೆ ಎಂದು ವರ್ಗೀಕರಿಸಿಕೊಂಡು ಅಧ್ಯಯನ ಮಾಡುವುದು ನಡೆದಿದೆ. ಆದರೆ ಇಂತಹ ವರ್ಗೀಕರಣ ಎಷ್ಟರ ಮಟ್ಟಿಗೆ ಸಮಂಜಸ? ಏಕೆಂದರೆ ನಂಬಿಕೆಯೊಂದು ಕಾಲ, ದೇಶ, ವ್ಯಕ್ತಿಯೊಂದಿಗೆ ಸಾಪೇಕ್ಷ ಸಂಬಂಧ ಹೊಂದಿರುವಂತಹದು. ಒಬ್ಬನಿಗೆ ಒಂದು ನಂಬಿಕೆಯಾಗಿದ್ದರೆ, ಇನ್ನೊಬ್ಬರಿಗೆ ಅದು ಮೂಢನಂಬಿಕೆಯಾಗಿರಬಹುದು. ಅಲ್ಲದೇ ಆ ವ್ಯಕ್ತಿಗೇ ಸ್ವಲ್ಪ ಕಾಲದ ನಂತರ ಅದು ಮೂಢ ನಂಬಿಕೆ ಎನಿಸಬಹುದು.

ಉದಾಹರಣೆಗೆ 'ವಿಧವೆ' ಅಪಶಕುನ ಎನ್ನುವ ಭಾರತೀಯರ ನಂಬಿಕೆ ಪಾಶ್ಚಾತ್ಯರಿಗೆ ಮೂಢನಂಬಿಕೆ ಎನಿಸುತ್ತದೆ. ಅಲ್ಲದೆ ಭಾರತದಲ್ಲಿರುವ ವಿಚಾರವಾದಿಗಳಿಗೆ ಅದು ಮೂಢನಂಬಿಕೆಯೇ ಆಗಿದ್ದಿರಬಹುದು. ಮಾನವ ಬದುಕಿನ ಎಲ್ಲ ಆಯಾಮಗಳನ್ನು ಸುತ್ತುವರೆದಿರುವ ಈ ನಂಬಿಕೆಗಳು ಜನಪದ ಪ್ರಕಾರಗಳೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿರುತ್ತವೆ.

ನಂಬಿಕೆಗಳ ಹಿಂದಿರುವ ಗಾದೆ, ಕಥೆ, ಐತಿಹ್ಯ, ಪುರಾಣಗಳನ್ನು, ಈ ನೆಲೆಯಿಂದ ಅಧ್ಯಯನ ಮಾಡಬೇಕಿರುತ್ತದೆ. ಒಂದು ರೀತಿಯಲ್ಲಿ ನಂಬಿಕೆಗಳ ಅಧ್ಯಯನಗಳ ಮೂಲಕ ಜನಪದ ಲೋಕದೃಷ್ಟಿಯನ್ನು ಅರ್ಥೈಸಲು ಮತ್ತು ಕಟ್ಟಿಕೊಡಲು ಸಾಧ್ಯವಿದೆ. ನಂಬಿಕೆಗಳು ಜನಪದರು ಪ್ರಕೃತಿ, ಬದುಕು ಹಾಗೂ ಬದುಕಿನಾಚೆಗಿನ ಬಗ್ಗೆ ಪ್ರತಿಕ್ರಿಯಿಸಿದ ಬಗೆ ಮತ್ತು ಅವುಗಳೊಳಗಿನ ಸಂಬಂಧವನ್ನು ಪ್ರಕಟಿಸುತ್ತವೆ.

"ಮಾನವನ ಬದುಕು ನಂಬಿಕೆಗಳನ್ನು ಆಧರಿಸಿಯೇ ರೂಪುಗೊಂಡಿರುತ್ತದೆ. ವ್ಯಕ್ತಿಯಿಂದ ವ್ಯಕ್ತಿಗೆ, ಜನಾಂಗದಿಂದ ಜನಾಂಗಕ್ಕೆ ಕೆಲಸ ಮಾಡುವ ವಿಧಾನ, ಗ್ರಹಿಕೆ ಕಲ್ಪನಾ ಶಕ್ತಿ, ಆಲೋಚನಾ ಕ್ರಮಗಳ ಆಧಾರದ ಮೇಲೆ ಭಿನ್ನ ಭಿನ್ನವಾದ ನಂಬಿಕೆಗಳು ಆಚರಣೆಯಲ್ಲಿರುತ್ತವೆ. ಸಮಷ್ಠಿ ಅಭಿವ್ಯಕ್ತಿಯ ಮಾಧ್ಯಮಗಳ ನಂಬಿಕೆಗಳು ಸಮಾಜದ ಕನಿಷ್ಠ ಘಟಕವಾಗಿರುವ ವ್ಯಕ್ತಿಯ ಮನಸ್ಸನ್ನು

ಪ್ರಜ್ಞಾವಸ್ಥೆಯಲ್ಲಿಯೋ ಅಥವಾ ಅಪ್ರಜ್ಞಾವಸ್ಥೆಯಲ್ಲಿಯೋ ಪ್ರವೇಶಿಸಿರುತ್ತವೆ. ಒಂದು ಜನಾಂಗವು ಹಲವಾರು ವಿಧಾನಗಳ ಮೂಲಕ ತನ್ನ ಒಡಲಲ್ಲಿರುವ ನಂಬಿಕೆಗಳನ್ನು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾಯಿಸುತ್ತದೆ. ಅದರ ಪಾಲನೆಗೆ ಒತ್ತಡವನ್ನು ಹೇರುತ್ತದೆ. ಸಂಪ್ರದಾಯ ನಿಷ್ಠ ಜನರು, ಅವುಗಳ ವಾಹಕರು ಮತ್ತು ಪಾಲಕರೂ ಆಗಿರುತ್ತಾರೆ. ಮಾನವನ ಆಸೆ, ಆಕಾಂಕ್ಷೆ, ಭೀತಿ ಮೊದಲಾದವುಗಳು, ನಂಬಿಕೆಗಳ ಉಗಮ ಮತ್ತು ಬೆಳವಣಿಗೆಗೆ ಕಾರಣವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ನಂಬಿಕೆಗಳು ಜನಸಮುದಾಯದಲ್ಲಿ ಬೇರುಬಿಟ್ಟಿರುವ ಜನಪದ ಪ್ರಕಾರವಾಗಿದೆ."[೩]

ನಂಬಿಕೆಗಳೆಂದರೇನು? ಎಂಬುದನ್ನು ಸೂತ್ರೀಕರಿಸಿ ಹೇಳುವುದು ಕಷ್ಟ. ಅಲೆಕ್ಸಾಂಡರ್ ಮೋಯಿರ್ ಪ್ರಕಾರ "ನಂಬಿಕೆಯೆನ್ನುವುದು ವಿಶ್ವಾಸಾತ್ಮಕವಾದ ಮನಸ್ಥಿತಿ. ತನ್ನ ಅನುಭವಗಳೇ ವಾಸ್ತವ, ಅರ್ಥಪೂರ್ಣ ಎನ್ನುವ ಮನೋಧರ್ಮ" (Encyclopaedia of Religion and Ethics, V-II, 1909) ಮತ್ತೊಬ್ಬ ವಿದ್ವಾಂಸರು ನಂಬಿಕೆಯನ್ನು ಹೀಗೆ ಅರ್ಥೈಸಿದ್ದಾರೆ. "ಪುನರಾವೃತ್ತವಾಗುವ ಸಾಮೂಹಿಕ ವೀಕ್ಷಣೆಯ ಫಲವಾಗಿ ಮೂಡುವ ಕಾರ್ಯಕಾರಣ ಸಂಬಂಧವುಳ್ಳದ್ದಾಗಿರುವ ಸಾಂಪ್ರದಾಯಿಕ ಭಾವನೆಯೇ ನಂಬಿಕೆ." (Encyclopaedia of Folklore Mythology and Legend, Pp.1146)

ವಿದ್ವಾಂಸರ ಈ ವ್ಯಾಖ್ಯಾನಗಳು ಜನಾಂಗದಲ್ಲಿ ಪ್ರಚಲಿತವಿರುವ ನಂಬಿಕೆಗಳ ಬಗೆಗೆ ಒಂದು ಸ್ಪಷ್ಟ ಚಿತ್ರಣವನ್ನು ಕಟ್ಟಿಕೊಡುತ್ತವೆ. ನಂಬಿಕೆಗಳನ್ನು ವಿಚಾರ ಹೀನವೆಂದೂ, ಅವಾಸ್ತವವೆಂದೂ ಸಾರಾಸಗಟಾಗಿ ತಿರಸ್ಕರಿಸುವವರೂ ಇದ್ದಾರೆ. ಆದರೆ ಜನಪದ ವಿದ್ವಾಂಸರು ನಂಬಿಕೆಗಳು ಅವಾಸ್ತವ ಎಂಬುದನ್ನು ಒಪ್ಪುವುದಿಲ್ಲ. ಏಕೆಂದರೆ ನಂಬಿಕೆಗಳು ಆದಿಯಿಂದಲೂ ಜನಾಂಗದ ಅನುಭವ, ಜ್ಞಾನ, ಸೃಜನಶೀಲತೆ ಮೊದಲಾದ ಅನೇಕ ವಿಷಯಗಳನ್ನು ತನ್ನೊಳಗೆ ತುಂಬಿಕೊಂಡು ಬಂದವುಗಳಾಗಿರುತ್ತವೆ. "ವಿಶಾಲವಾದ ಅರ್ಥದಲ್ಲಿ ನಂಬಿಕೆಗಳೆಂದರೆ ಜ್ಞಾನವೇ ಹೊರತು ಬೇರೆಯಲ್ಲ"[೪] ಎಂಬ ವಿದ್ವಾಂಸರ ಮಾತು ಪ್ರಸ್ತುತವೆನಿಸುತ್ತದೆ. ತಲೆ ತಲಾಂತರದ ಅನುಭವಗಳ ಸಾರವಾಗಿರುವ ನಂಬಿಕೆಗಳು ಆಯಾ ಜನಾಂಗದ ಜ್ಞಾನಕೋಶಗಳೇ ಆಗಿವೆ.

ಪ್ರಸ್ತುತ ಸಂದರ್ಭದಲ್ಲಿ ನಂಬಿಕೆ ಎಂಬುದನ್ನು Belief ಎಂಬ ಆಂಗ್ಲಭಾಷೆಯ ಪದ ಸಮಾನಾರ್ಥದಲ್ಲಿ ಸ್ವೀಕರಿಸಿ ಪರಿಶೀಲಿಸಲಾಗಿದೆ. ನಂಬಿಕೆಗಳ ಜಗತ್ತು ವಿಶಾಲವಾದುದು ಮತ್ತು ವೈವಿಧ್ಯಮಯವಾದುದು. ಅಷ್ಟೇ ಸಂಕೀರ್ಣವಾದುದೂ ಕೂಡ, ಆದುದರಿಂದ ಇವುಗಳ ವಿಭಾಗ ಕ್ರಮ ಸುಲಭ ಸಾಧ್ಯವಲ್ಲ. ಆರ್.ಎಸ್.ಬಾಗ್ಸ್ ಅವರು standard Dictionary of Folklore, mythology and legendನಲ್ಲಿ ನಂಬಿಕೆಗಳನ್ನು ಪ್ರಮುಖವಾಗಿ ಆರುಭಾಗಗಳಾಗಿ ವಿಂಗಡಿಸಿ ಅಧ್ಯಯನ ಮಾಡಿದ್ದಾರೆ.

೧. ಪೌರಾಣಿಕ

೨. ಐತಿಹಾತ್ಮಕ

೩. ಪಾದ್ಧಾತಿಕ

೪. ಮಂತ್ರಾತ್ಮಕ

೫. ವೈದ್ಯಕೀಯ

೬. ಜ್ಯೋತಿಷ್ಯಾತ್ಮಕ... ಇತ್ಯಾದಿ

ನಮ್ಮ ವರ್ಣಾಶ್ರಮ ಪದ್ಧತಿಯಲ್ಲಿ ಉಚ್ಚಕುಲ-ನೀಚಕುಲವೆನ್ನುವ ಪರಿಕಲ್ಪನೆ ಸಾಮಾನ್ಯವಾಗಿ ಬಂದಿರುತ್ತದೆ. ಅಂತೆಯೇ ನಾವು ಪೂಜೆಮಾಡುತ್ತಿರುವ ದೇವರುಗಳೂ ಸಹ ಕೀಳುಮಟ್ಟದವೆಂಬ ಕಲ್ಪನೆ ನಿಮ್ನ ವರ್ಗದ ಜನರಲ್ಲಿ ಇದ್ದಿರಬಹುದು. ಹೀಗಾಗಿ ಅವರು ತಮ್ಮ ದೇವರುಗಳ ಆರಾಧನೆಯನ್ನು ವೈಭವಯುತವಾಗಿ ಮಾಡದೆ ಇರುವುದು ಕಂಡುಬರುತ್ತದೆ. ಈ ರೀತಿಯ ದೇವರಲ್ಲಿ ಜೋಕುಮಾರನೂ ಒಬ್ಬ. ಇವನು 'ಬೆದೆಬಡುಕ' ಎಂಬ ಪ್ರತೀತಿ ಇದೆ. ಇಂತಹ ದೇವರನ್ನು ಆರಾಧಿಸುವ ತಮ್ಮನ್ನೂ ಅಂತಹವರೆಂದು ಜನ ತಿಳಿದಾರು ಎನ್ನುವ ದೃಷ್ಟಿ ಇವರಲ್ಲಿಯೂ ಮೂಡತೊಡಗಿದ್ದರಿಂದ ಹಿಂದಿನ ವೈಭವ ಇವತ್ತು ಕಾಣುತ್ತಿಲ್ಲ. ಮೇಲ್ವರ್ಗದ ಜನ ಇಂತಹ ದೇವರುಗಳನ್ನು ಪೂಜಿಸುವುದಕ್ಕಾಗಲೀ, ಪಡಿ ಪದಾರ್ಥಗಳನ್ನು ಕೊಟ್ಟು ಸಂಪ್ರೀತಗೊಳಿಸುವುದಕ್ಕಾಗಲೀ ಬಹು ಮುಖ್ಯವಾಗಿ ಎರಡು ಕಾರಣಗಳಿರಬೇಕು.

೧. ಆ ದೇವರುಗಳು ಕ್ಷುದ್ರವೆಂಬ ಕಲ್ಪನೆಯಿದ್ದುದರಿಂದ ತಮಗೆ ಏನಾದರೂ ತೊಂದರೆ ಕೊಡಬಹುದೆಂದು, 'ದುರ್ಜನಂ ಪ್ರಥಮಂ ವಂದೇ' ಎನ್ನುವಂತೆ ಅವುಗಳನ್ನು ಪೂಜಿಸುವುದು.

೨. ನಿಮ್ನ ವರ್ಗದ ಜನರನ್ನು ತಮ್ಮ ಅಂಕಿತದಲ್ಲಿಟ್ಟುಕೊಳ್ಳಬೇಕಾದರೆ ಅವರ ದೇವರುಗಳನ್ನು ಪೂಜಿಸಿ, ತಮ್ಮ ಮೇಲೆ ಅವರಿಗೆ ವಿಶ್ವಾಸ ಹುಟ್ಟಿಸುವಂತೆ ಮಾಡುವುದು.

ಆದರೆ ಪ್ರಸ್ತುತ ಸಂದರ್ಭದಲ್ಲಿ ಇವರಿಬ್ಬರ ನಡುವೆ ಉತ್ತಮ ತಿಳಿವಳಿಕೆ ಮೂಡುತ್ತಿರುವುದರಿಂದ ಸಮಾಜದಲ್ಲಿ ಹಿಂದಿದ್ದ ನಂಬಿಕೆಗಳು ಪರಿವರ್ತನೆಯಾಗಿ, ಇವನ ಬಗೆಗಿರುವ ನಂಬಿಕೆಗಳೂ ಸಹ ಬಹುಮಟ್ಟಿಗೆ ಕ್ವಚಿತ್ ಆಗಿವೆ.

ಜೋಕುಮಾರನನ್ನು ಬೆದೆಬಡುಕ, ಅತಿಕಾಮಿ, ಮಕ್ಕಳನ್ನು ಕೊಡುವ ದೇವರು ಎಂಬ ತಿಳಿವಳಿಕೆಗನುಸರಿಸಿಯೇ ನಂಬಿಕೆಗಳಲ್ಲಿಯೂ ಈ ಎರಡು ಪ್ರಕಾರಗಳು ಕಂಡುಬರುತ್ತವೆ. ಕಾಮುಕತೆಯನ್ನು ಬಿಂಬಿಸುವಂತಹವು ಬಹುಮಟ್ಟಿಗೆ ಅಶ್ಲೀಲವಾಗಿಯೇ ಇವೆ. ಅವುಗಳನ್ನು ಜನಪದರು ಈ ಕೆಳಗಿನಂತೆ ಉದಾಹರಿಸಿದ್ದಾರೆ.

೧. ಬಗ್ಗಿ ನಮಾಜು ಮಾಡುತ್ತಿದ್ದ ಗಂಡನಿಗೆ ಜೋಕುಮಾರನು ಮಾಡುತ್ತಿದ್ದ ಕೆಲಸವನ್ನು ನೋಡಲಾಗದೆ ಮುಸ್ಲಿಂ ಹೆಂಗಸು ಬುರುಕಿ ಹಾಕಿಕೊಂಡಳಂತೆ.

೨. ಇವನ ಕಾಮಕ್ಕೆ ಹೆದರಿದ ಜೈನ ಮಹಿಳೆ ಕಚ್ಚೆ ಹಾಕಿಕೊಂಡಳು.

೩. ಕಾಮಾಂಧನಾದ ಜೋಕುಮಾರನು ಬೆಂಡೆಕಾಯಿ ಬೆಳೆಯಲ್ಲಿ ತಿರುಗಾಟ ಮಾಡಿದ್ದರಿಂದ ಅವನ ರೇತಸ್ಸು ಅಲ್ಲಿ ಬಿದ್ದುದರಿಂದ ಇವತ್ತಿಗೂ ಅದು ಲೋಳೆಯಾಗಿದೆ.

ಅಲ್ಲದೆ ಇವನು ಮಕ್ಕಳನ್ನು ಕರುಣಿಸುವ ದೇವರು ಎಂಬ ನಂಬಿಕೆಗಳು ಅರ್ಥಪೂರ್ಣವಾಗಿವೆ, ತರ್ಕಬದ್ಧವಾಗಿವೆ ಹಾಗೂ ವೈಜ್ಞಾನಿಕವಾಗಿವೆ.

೧. ಜನನೇಂದ್ರಿಯವೇ ಎದ್ದು ಕಾಣುವುದರಿಂದ, ಅತಿಕಾಮಿಯೆಂದು ತಿಳಿಯುತ್ತದೆ. ಅಲ್ಲದೆ ಅವನು ಶಾಂತನಾಗಿರಬೇಕೆಂಬಂತೆ ಅವನ ಬಾಯಿಗೆ ಬೆಣ್ಣೆಯನ್ನು ಹಚ್ಚುತ್ತಾರೆ. ಅದನ್ನು ಕಣ್ಣಿಗೆ ಲೇಪಿಸಿಕೊಂಡರೆ ಕಣ್ಣು ಬೇನೆ ಬರುವುದಿಲ್ಲವೆಂಬ ಪ್ರತೀತಿ. ಇದು ವೈಜ್ಞಾನಿಕವಾಗಿಯೂ ಸತ್ಯವಿರಬಹುದು. ಬೆಣ್ಣೆ ತಂಪಾಗಿರುವುದರಿಂದಲೂ ಔಷಧವಾಗಿರುವುದರಿಂದಲೂ ಕಣ್ಣುಬೇನೆ ಬರದಿರುವುದು ಸಾಧ್ಯವಿದೆ.

೨. ಇವನನ್ನು ಹೊತ್ತುಕೊಂಡು ಪ್ರತಿಮನೆಯ ಮುಂದೆ ಬಂದಾಗ ಅಂಬಲಿ, ನುಚ್ಚನ್ನು, ನೈವೇದ್ಯವಾಗಿ ಅರ್ಪಿಸುವುದರಿಂದ ಅವನು ಸಾಮಾನ್ಯರ ಅದರಲ್ಲೂ ಒಕ್ಕಲಿಗರ ದೇವನೆಂಬುದು ಸಾರ್ವಕಾಲಿಕ ಸತ್ಯವಾಗಿದೆ. ಇಂತಹ ಅಂಬಲಿ, ನುಚ್ಚನ್ನು ರೈತಾಪಿ ವರ್ಗದವರು ಪ್ರಸಾದ ರೂಪದಲ್ಲಿ ಸ್ವೀಕರಿಸಿ ತಂತಮ್ಮ ಹೊಲದಲ್ಲಿ ಒಯ್ದು ಚರಗ ಚೆಲ್ಲುತ್ತಾರೆ. ಹೀಗೆ ಮಾಡುವುದರಿಂದ ತಮ್ಮ ಹೊಲದಲ್ಲಿನ ಪೈರುಗಳು ಸಮೃದ್ಧಿಯಾಗಿ ಬೆಳೆದು ಉತ್ತಮವಾದ ಫಸಲನ್ನು ನೀಡುತ್ತವೆ ಎಂಬುದರ ಸಂಕೇತ ಹುಲುಸು ಬರುತ್ತದೆ ಎಂಬ ನಂಬಿಕೆ ಎಲ್ಲೆಡೆ ಇದೆ.

೩. ಇವನಿಗೆ ದವಸ-ಧಾನ್ಯಗಳನ್ನು ಕಾಣಿಕೆಯಾಗಿ ಕೊಟ್ಟಾಗ ಜೋಕುಮಾರನನ್ನು ಹೊರುವ ಮಹಿಳೆಯರು ಬೇವಿನ ಸೊಪ್ಪನ್ನು ಕೊಡುತ್ತಾರೆ. ಇದು ಕಹಿಯಾಗಿದ್ದು, ಕೀಟನಾಶಕವೂ ಆಗಿರುತ್ತದೆ. ಇದರಿಂದ ಬಿತ್ತನೆ ಬೀಜದಲ್ಲಿರುವ ಕ್ರಿಮಿಗಳು ನಾಶವಾಗುತ್ತವೆ.

೪. ಮನೆಯಲ್ಲಿರುವ ತಗಣೆ, ಚಿಕ್ಕಾಡು... ಮುಂತಾದ ಪರಾವಲಂಬಿ ಜೀವಿಗಳನ್ನು (ಕೀಟ) ಜೋಕುಮಾರನ ಪುಟ್ಟಿಯೊಳಗೆ ಹಾಕುತ್ತಾರೆ. ಇದರಿಂದ ಅವುಗಳು ಕ್ಷೀಣಿಸುತ್ತವೆ ಇಲ್ಲವೇ ನಾಶವಾಗುತ್ತವೆ ಎಂಬ ನಂಬಿಕೆ ಎಲ್ಲೆಡೆ ಸಾಮಾನ್ಯವಾಗಿದೆ.

೫. ಇವನು ಸತ್ತಾಗ ಅಗಸರು ಮೂರು ದಿವಸ ಬಟ್ಟೆ ಒಗೆಯುವುದನ್ನು ನಿಲ್ಲಿಸುತ್ತಾರೆ. ಅವನು ಮರಣ ಹೊಂದಿದ ಮೇಲೆ ದಿನಕರ್ಮ ಮಾಡಿ, ಆನಂತರ ತಮ್ಮ ದೈನಂದಿನ ಕೆಲಸ-ಕಾರ್ಯಗಳಿಗೆ ತೊಡಗುತ್ತಾರೆ.

ಒಟ್ಟಾರೆಯಾಗಿ ಹೇಳುವುದಾದರೆ ಇವನು ಅಲ್ಪಾಯುಷಿ, ಮಕ್ಕಳನ್ನು ಕೊಡುವ ದೇವರಾಗಿದ್ದಾನೆ.

ನಿಷೇಧಗಳು

೧. ಜೋಕುಮಾರನ ಆಳಲನ್ನು ಆಚರಿಸುವ ಸಂದರ್ಭದಲ್ಲಿ ಯಾವುದೇ ಶುಭಕರವಾದ ಮಂಗಳ ಕಾರ್ಯಗಳನ್ನು ಮಾಡುವಂತಿರುವುದಿಲ್ಲ.

೨. ಅತ್ತೆ ಸೊಸೆ (ಹೊಸದಾಗಿ ಬಂದ ಸೊಸೆ)ಯರು ಒಂದೇ ಮನೆಯಲ್ಲಿ ಇರುವಂತಿಲ್ಲ. ಅಥವಾ ಒಂದೇ ಬಾಗಿಲಿನಲ್ಲಿ ಓಡಾಡುವಂತಿಲ್ಲ.

೩. ಹೊಸ ಸೊಸೆಯನ್ನು ಈ ಅವಧಿಯಲ್ಲಿ ತವರಿಗೆ ಕಳುಹಿಸಲಾಗುತ್ತದೆ.

೪. ಕೊಡು, ಕೊಳ್ಳುವ ಯಾವುದೇ ಹೆಣ್ಣು-ಗಂಡಿನ ವ್ಯವಹಾರ ಮಾಡುವಂತಿಲ್ಲ.

೫. ಅಷ್ಟೇ ಅಲ್ಲದೆ ಇಂತಹ ವಿಷಯ ಮಾತನಾಡುವಂತೆಯೂ ಇಲ್ಲ.

೬. ಹೊಲೆ-ಮಾದಿಗ ಜೋಕುಮಾರನ ಪಂಥದ ಈ ವ್ಯಾಪಕವಾದ ಪ್ರಭಾವ ಹೊಲೆ-ಮಾದಿಗ ಸಂಸ್ಕೃತಿಯ ಮಹತ್ವದ ಅಧ್ಯಾಯವಾಗಿದೆ. "ಈ ಪ್ರಜನನದ ಮನೋಭಾವ (Fertility) ಜನಪದರಲ್ಲಿ ಎಷ್ಟು ಗಾಢವಾಗಿ ಬೇರೂರಿದೆ ಎಂದರೆ, ಚೈತ್ರ, ವೈಶಾಖ, ಜೇಷ್ಠ ಮಾಸಗಳಲ್ಲಿ ಮದುವೆಯಾದ ಹೆಣ್ಣುಗಂಡುಗಳಿಗೆ 'ಪ್ರಸ್ತ'(ಶೋಭನ, ನಿಷೇಕ) ಮಾಡಿಕೊಡುವುದು ಮಾತ್ರ ಗೌರಿಹಬ್ಬದಲ್ಲಿ ಎಂಬುದನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು. ಕಾಮಾಂಧ ಜೋಕುಮಾರ ಈ ಅವಧಿಯಲ್ಲಿ ಹುಟ್ಟುವುದು, ಭೂಮಿ ತಾಯಿ ಹೊಡೆ ಹೊಡೆಯಲು ತಯಾರಾಗಿರುವುದು, ಹೆಣ್ಣು ಗಂಡಿಗೆ ಪ್ರಸ್ತ ಮಾಡಿಕೊಂಡುವುದು ಈ ಅವಧಿಯ ಹಂಗಾಮನ್ನು(season) ಸೂಚಿಸುವಂತೆ ಕಾಣುತ್ತದೆ."[೫]

ಜಾನಪದ ರೂಢಿ, ಸಂಪ್ರದಾಯ ಹಾಗೂ ನಂಬಿಕೆಗಳು

೧. ಜೋಕುಮಾರನು ಬಿತ್ತಿದ ಹೊಲದಲ್ಲಿ ಹೋಗಿ ಚೆಂಡಾಟ ಆಡುತ್ತಾನೆ.

೨. ಜನರು ಕೇಳಿದ್ದನ್ನು ದಯಪಾಲಿಸುತ್ತಾನೆ.

೩. ಸಂತಾನ ಇಲ್ಲದವರಿಗೆ ಸಂತಾನ ಭಾಗ್ಯವನ್ನು ಕೊಡುತ್ತಾನೆ.

೪. ಜೋಕುಮಾರನಿಗೆ ಬೆಣ್ಣೆ ಬಲು ಪ್ರಿಯ.

೫. ಅವನ ಆಯುಷ್ಯ ಏಳು ದಿನ ಮಾತ್ರ.

೬. ಅವನು ಅತಿಕಾಮಿ, ಅವನ ಶಿಶ್ನವು ದೊಡ್ಡದಾಗಿರುತ್ತದೆ.

೭. ಗರ್ಭಿಣಿಯರು ಬಯಕೆಯಿಂದು ಬಳ್ಳೊಳ್ಳಿ ಹೆಚ್ಚಾಗಿ ತಿಂದದ್ದರಿಂದ ಅತಿ ಕಾಮಿಯಾದನು ಎಂಬ ನಂಬಿಕೆ ಅನೇಕ ಭಾಗದಲ್ಲಿದೆ.

೮. ಹುಟ್ಟಿದ ಏಳು ದಿನಗಳಲ್ಲಿ ರಾಜ್ಯ ಆಳಿದ, ಎಲ್ಲ ಪಟ್ಟಣ ತಿರುಗಿದ.

೯. ಬಾಯಿಯ ಬೆಣ್ಣೆ, ಬೇವಿನ ಎಲೆಯನ್ನು ಕೂಡಿಸಿ ನೋವಾದಲ್ಲಿ ಹಚ್ಚಿದರೆ ಕಡಿಮೆಯಾಗುತ್ತದೆ.

೧೦. ಬಂಜೆಯರು ಬುಟ್ಟಿ ಎತ್ತಿ ಭವಿಷ್ಯ ಕೇಳುತ್ತಾರೆ.

೧೧. ಹೊಲೆಯರು ಒನಕೆಯಿಂದ ಹೊಡೆದು ಕೊಲ್ಲುತ್ತಾರೆ.

೧೨. ಹಗೆಯಲ್ಲಿ ಬೇವಿನ ಎಲೆ ಹಾಕಿದರೆ ಜೋಳ ಕೆಡುವುದಿಲ್ಲ.

ಪಡೆನುಡಿಗಳು

ಇಂದಿಗೂ ಸಹ ಜೋಕುಮಾರನಿಗೆ ಹೋಲಿಸಿ ಬಳಸುವ ಜಾನಪದ ಪಡೆನುಡಿಗಳು ಉತ್ತರ ಕರ್ನಾಟಕದ ಕೆಲವು ಗ್ರಾಮಗಳಲ್ಲಿವೆ.

೧. ಊರಾಗ ಜೋಕುಮಾರನ ಆಗ್ಯಾನ

೨. ಜೋಕುಮಾರನ ಹಾಂಗ ಬೇವಿನ ಎಲಿಯಾಗ ಹೋಗಿ ನೋಡ.

೩. ಅಷ್ಟಮಿ ದಿನ ಹುಟ್ಟ್ಯಾನ ನನ್ನ ಕೊಮರಾ ಜೇಷ್ಠಾದೇವಿ ನಿನ್ನ ಮಗಾ ಜೋಕುಮಾರ

೪. ಜೋಕುಮಾರನ ಹಂಗಾ ಮೆರಿಬ್ಯಾಡ ಊರಾಗಾs.

೫. ಅಬಬಾ ಇವನ ಏನ ಡೌಲು - ಜೋಕುಮಾರ ಆಗ್ಯಾನs ಜೋಕುಮಾರ.

೬. ಹೆಡಕು ಮುರಿಸಿಕೊಂಡಿ ಹೆಡಕು ಆ ಜೋಕುಮಾರನ ಹಾಂಗ.

ಟಿಪ್ಪಣಿಗಳು

೧. ಡಾ.ದೇ.ಜವರೇಗೌಡ, ಜಾನಪದ ಅಧ್ಯಯನ, ಚೇತನ ಬುಕ್‌ಹೌಸ್, ಮೈಸೂರು, ೧೯೯೧, ಪು.೯೬

೨. ಡಾ.ಎಚ್.ಜೆ.ಲಕ್ಕಪ್ಪಗೌಡ(ಪ್ರ.ಸಂ), ಜಾನಪದ ಕೈಪಿಡಿ, ಜನಪದಕಥೆ, ಲೇ.ಅಂಬಳಿಕೆ ಹಿರಿಯಣ್ಣ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೭, ಪು.೧೩೪ ೧೩೫

೩. ಡಾ.ಸಣ್ಣರಾಮ, ಲಂಬಾಣಿ ಸಂಸ್ಕೃತಿ, ಪಿಎಚ್.ಡಿ.ಮಹಾಪ್ರಬಂಧ(ಪ್ರಕಟಿತ), ಶಿವಮೊಗ್ಗ, ೧೯೯೯, ಪು.೧೮೫-೧೮೬

೪. ಡಾ.ದೇ.ಜವರೇಗೌಡ, ಜಾನಪದ ವಾಹಿನಿ, ೧೯೮೬, ಪು.೧೦೩

೫. ಎಸ್.ಎಸ್.ಹಿರೇಮಠ, ಜಾತ್ರೆಗಳು, ಸಮತಾಪ್ರಕಾಶನ, ಹೊಸಪೇಟೆ, ೧೯೯೩, ಪು.೨೧೬

ಅಧ್ಯಾಯ ೬

ಮೌಖಿಕ ಚರಿತ್ರೆ ಮತ್ತು ಜೋಕುಮಾರ

೬

ಮೌಖಿಕ ಚರಿತ್ರೆ ಮತ್ತು ಜೋಕುಮಾರ

ಸಮಕಾಲೀನತೆ, ಸ್ಥಿತ್ಯಂತರ

ಜಾನಪದ ಪರಂಪರೆ ತುಂಬಾ ಶ್ರೀಮಂತವಾದುದು. ಜನಪದರು ಇಂದಿಗೂ ಸಹ ಜಾನಪದ ಪರಂಪರೆಯನ್ನು ಮೆಲುಕು ಹಾಕುವುದರೊಂದಿಗೆ ತಮ್ಮ ಜೀವನವನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಅಂದರೆ ಅದು ಅವರ ಜೀವನದಲ್ಲಿ ಅವಿಭಾಜ್ಯ ಅಂಗವಾಗಿ ಉಳಿದು, ಬೆಳೆದುಕೊಂಡು ಬಂದಿದೆ. ಯಾವುದೇ ಪುರಾಣ, ಮಹಾಕಾವ್ಯ ಅಥವಾ ಐತಿಹ್ಯಗಳಿಗೆ ತನ್ನದೇ ಆದ ಮೌಖಿಕ ಚರಿತ್ರೆ ಎಂಬುದೊಂದು ಇರುತ್ತದೆ.

ಮೌಖಿಕ ಚರಿತ್ರೆ ಶಿಷ್ಟ ಚರಿತ್ರೆಗಳಿಗಿಂತ ವಿಭಿನ್ನವಾಗಿರುತ್ತದೆ. ಆರಂಭ ಮತ್ತು ಅಂತ್ಯದಲ್ಲಿ ನಿರೂಪಣಾ ವಿಧಾನದಲ್ಲಿ ಸಾಕಷ್ಟು ವ್ಯತ್ಯಾಸಗಳೂ ಆಗಬಹುದು. ಅಂದರೆ ಶಿಷ್ಟ ಸಾಹಿತ್ಯದಲ್ಲಿ ನಿರೂಪಿಸುವ ರೀತಿಗಿಂತ ಮೌಖಿಕ ಚರಿತ್ರೆಯಲ್ಲಿ ವಿಷಯದ ಜೋಡಣೆಯಲ್ಲಿನ ವ್ಯತ್ಯಾಸಗಳು, ನಿರೂಪಿಸುವ ಶೈಲಿ ಎಲ್ಲವೂ ಬದಲಾಗುವ ಸಾಧ್ಯತೆ ಹೆಚ್ಚಿರುತ್ತದೆ. ಇದರಲ್ಲಿ 'ಇದಮಿತ್ಥಂ' ಎಂಬಂತೆ ಇರುವುದಿಲ್ಲ. ಅಂದರೆ ಜನಪದರು ನಿರೂಪಿಸುವ ಶೈಲಿಯಂತೆ ಯಾವುದೇ ಕಾವ್ಯ, ಮಹಾಕಾವ್ಯ ಅಥವಾ ಕಥೆಗಳು, ಐತಿಹ್ಯಗಳು ಎಲ್ಲಿಂದಲೋ ಆರಂಭವಾಗಿ ಎಲ್ಲಿಗೋ ಮುಕ್ತಾಯವಾಗುತ್ತವೆ.

ಇದರರ್ಥ ಇಷ್ಟೇ. ಅವರು ನಿರೂಪಿಸುವ ಕ್ರಿಯೆ ಮುಖ್ಯವಾಗಿರುತ್ತದೆ. ಶಿಷ್ಟ ಸಾಹಿತ್ಯದಲ್ಲಿ ಒಂದು ಕ್ರಮಬದ್ಧವಾದ ನಿರೂಪಣೆಯಿರುತ್ತದೆ. ಆದರೆ ಮೌಖಿಕದಲ್ಲಿ ಇವೆಲ್ಲ ಸಂಕೀರ್ಣವಾಗಿ ಬೆರೆತುಹೋಗಿರುತ್ತವೆ. ಅಲ್ಲಿ ಬರುವ ಎಲ್ಲಾ ಪಾತ್ರಗಳೂ ಸಹ ಮುಖ್ಯವಾಗಿರುತ್ತವೆ. ಪ್ರತಿಯೊಂದು ಕಾವ್ಯ ಮಹಾಕಾವ್ಯಕ್ಕೆ, ಅಥವಾ ಚರಿತ್ರೆಗೆ ತನ್ನದೇ ಆದ ಅನನ್ಯತೆಯಿರುತ್ತದೆ. ಯಾವುದೇ ದೇಶದ Oral-tradition, oral history ಅನ್ನು ಗಮನಿಸಿದಾಗ ಅಲ್ಲಿ ಪ್ರಾದೇಶಿಕತೆಯ ಸೊಗಡು ಆಯಾ ದೇಶ, ಭಾಷೆಗಳ ಮೇಲೆ ತೀವ್ರವಾದ ಪರಿಣಾಮವನ್ನು ಬೀರಿರುತ್ತದೆ. ಆಯಾ ಸಮುದಾಯಗಳ ನಂಬಿಕೆಗಳ ರೂಢಿ, ಆಚರಣೆ ಮತ್ತು ಸಂಪ್ರದಾಯಗಳ ಮೇಲೆ ಅದು ಬೆಳಕನ್ನು ಚೆಲ್ಲುತ್ತದೆ. ಮೌಖಿಕ ಚರಿತ್ರೆಗಳನ್ನು ಅಭ್ಯಸಿಸಿದಾಗ ಮಾತ್ರ ಅದರ ಇಂಗಿತ ನಮಗೆ ತಿಳಿಯುತ್ತದೆ.

ಮೌಖಿಕ ಎಂದರೆ ಜನಪದರ ನಿರೂಪಣಾ ಶೈಲಿ. ಅಲ್ಲಿ ಎಲ್ಲವೂ ಪ್ರಾಮುಖ್ಯ. ಅದು ಶಿಷ್ಟಕ್ಕಿಂತ ವಿಭಿನ್ನ. ತನ್ನದೇ ಆದ ತಂತ್ರ ಹಾಗೂ ಮಹತ್ವವನ್ನು ಪಡೆದಿರುತ್ತದೆ. ಅದು ಒಬ್ಬರಿಂದ ಮತ್ತೊಬ್ಬರಿಗೆ ಕರ್ಣಾಕರ್ಣಿಕೆಯಾಗಿ ಪ್ರವಹಿಸಿ ಬಂದಿರುತ್ತದೆ. ಹೀಗೆ ಬರುವಾಗ ವಿಷಯದ ನಿರೂಪಣೆಯಲ್ಲಿ ಸಾಕಷ್ಟು ಏರು ಪೇರುಗಳಾಗುತ್ತವೆ. ಪ್ರತಿಯೊಂದು ಊರಿನಲ್ಲಿ ಮೌಖಿಕ ಕಥನ ಕಾವ್ಯಗಳನ್ನು ಹಾಡುವಾಗ ಪಠ್ಯದಲ್ಲಿ ಸಾಕಷ್ಟು ಬದಲಾವಣೆಯಾಗುವುದರಲ್ಲಿ ಸಂದೇಹವಿಲ್ಲ. ಅಲ್ಲಿ ಬರುವ ಪಾತ್ರಗಳೂ ಸಹ ಸಾಕಷ್ಟು ಏರಿಳಿತಗಳಿಂದ ಕೂಡಿರುತ್ತವೆ. ಏಕೆಂದರೆ ಮೌಖಿಕ ಸಂಪ್ರದಾಯದಲ್ಲಿ ಜನಪದದ ಯಾವುದೇ ಪ್ರಕಾರಗಳನ್ನು ಅಭಿವ್ಯಕ್ತಿಸುವಾಗ ಏಕತಾನತೆ ಕಂಡುಬರುವುದಿಲ್ಲ. ಕಥೆಗಳನ್ನು ಹೇಳುವಾಗ ಆಗಲೀ, ಹಾಡನ್ನು ಹೇಳುವಾಗ ಆಗಲೀ ತನಗೆ ಸರಿ ದೋರಿದಂತೆ ನಿರೂಪಕನು ಅಭಿವ್ಯಕ್ತಪಡಿಸುತ್ತಾನೆ. ಶಿಷ್ಟ ಕಾವ್ಯಕ್ಕೂ, ಜನಪದ ಕಾವ್ಯಕ್ಕೂ ಅನೇಕ ವ್ಯತ್ಯಾಸಗಳು ನಮಗೆ ಕಂಡುಬರುತ್ತವೆ.

ಜೋಕುಮಾರನ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಕ್ಷೇತ್ರಕಾರ್ಯದಲ್ಲಿ ನನಗೆ ದೊರೆತ ಪ್ರಥಮ ಮಾಹಿತಿ ಆಕರದಲ್ಲಿ ಇವನ ಬಗ್ಗೆ ಸಾಕಷ್ಟು ವಿಚಾರಗಳು ಬೆಳಕಿಗೆ ಬಂದವು. ಶಿಷ್ಟ ಕಾವ್ಯದಲ್ಲಿ ಜೋಕುಮಾರನು ಮಾರಿದೇವತೆಯ ಮಗನೆಂದೂ, ಜೇಷ್ಠಾ ದೇವಿಯ ಮಗನೆಂದೂ ಉಲ್ಲೇಖವಾಗಿದೆ. ಆದರೆ ಜನಪದರ ಬಾಯಲ್ಲಿ ಜೇಷ್ಠಾದೇವಿ, ದಿಟ್ಟಾದೇವಿ ಎಂಬುದಾಗಿ ಬಳಕೆಯಲ್ಲಿ ಬಂದಿರಬಹುದು.

ಜೋಕುಮಾರನನ್ನು ಹೊರುವ ಗಂಗಾಮತಸ್ಥರು ಅವರಲ್ಲಿ ಕೆಲವರಿಗೆ ಮಾತ್ರ ಇವನ ವಿಷಯದ ಬಗ್ಗೆ ಸ್ವಲ್ಪ ಮಾಹಿತಿ ಇದೆ. ಬಿಟ್ಟರೆ ಇನ್ನುಳಿದ ಜನರಿಗೆ ಅಷ್ಟಾಗಿ ತಿಳಿದಿಲ್ಲ. ಸಾಕಷ್ಟು ಜನರು ಏನೋ ನಮ್ಮ ಹಿಂದಿನ ತಲೆಮಾರಿನವರು ನಡೆಸಿಕೊಂಡು ಬಂದ ಈ ಪದ್ಧತಿಯನ್ನು ಮಧ್ಯದಲ್ಲಿ ಬಿಡಬಾರದು. ಒಂದು ವೇಳೆ ಬಿಟ್ಟರೆ ತಮಗೆ ಜೀವನದಲ್ಲಿ ಎಡರು-ತೊಡರು ಸಂಭವಿಸುತ್ತವೆ. ಇದರ ಬಗ್ಗೆ ನಮಗೆ ಏನೂ ಗೊತ್ತಿಲ್ಲವೆಂದು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳುತ್ತಾರೆ.

ಜನಪದರ ಕಲ್ಪನೆಯ ಮೂಸೆಯಿಂದ ಮೌಖಿಕ ಚರಿತ್ರೆಯು ಜನ್ಮ ತಳೆಯುತ್ತದೆ. ಅಂದರೆ ತಮಗೆ ತಿಳಿದ ರೀತಿಯಲ್ಲಿ ಈ ಚರಿತ್ರೆಯನ್ನು ಅವರು ಕಥೆ, ಹಾಡು, ಪುರಾಣೇತಿಹಾಸ... ಮುಂತಾದವುಗಳಲ್ಲಿ ಸಮ್ಮಿಳಿತಗೊಳಿಸುತ್ತಾರೆ.

ಯಾವುದೇ ಪ್ರದೇಶದಲ್ಲಿ, ನಿರ್ದಿಷ್ಟ ವಿಷಯಕ್ಕೆ ಸಂಬಂಧಪಟ್ಟಂತೆ ತನ್ನದೇ ಆದ ವೈಶಿಷ್ಟ್ಯದಿಂದ ಕೂಡಿದ ಒಂದು ಇತಿಹಾಸ ಇದ್ದೇ ಇರುತ್ತದೆ. ಕೆಲವೊಮ್ಮೆ ಇಲ್ಲದಿರಬಹುದು. ಸಾರಾಸಗಟಾಗಿ ನಾವು ಸೂಕ್ಷ್ಮವಾಗಿ ಅವಲೋಕಿಸಿದಾಗ ಮಾತ್ರ ಇದು ಬೆಳಕಿಗೆ ಬರುತ್ತದೆ. ಮೌಖಿಕ ರೂಪದಲ್ಲಿ ಲಭ್ಯವಿರುವ ಎಲ್ಲಾ ವಿವರಗಳನ್ನು ಆಧರಿಸಿ ರಚಿಸುವ ಇತಿಹಾಸವನ್ನು 'ಮೌಖಿಕ ಚರಿತ್ರೆ' ಎಂದು ಕರೆಯುತ್ತೇವೆ.

ಇದಕ್ಕೆ ಪರ್ಯಾಯವಾಗಿರುವ ಇತಿಹಾಸವೇ ಲಿಖಿತ ಚರಿತ್ರೆ. ಲಿಖಿತ ಇತಿಹಾಸವು ತನಗೆ ಆಧಾರವಾಗಿ ಶಾಸನಗಳನ್ನು ವೀರಗಲ್ಲುಗಳನ್ನು, ಮಾಸ್ತಿಕಲ್ಲುಗಳನ್ನು, ಬಂಡೆಯ ಮೇಲಿನ ಚಿತ್ರಗಳನ್ನು ಕಡತ ಮತ್ತಿತ್ತರ ನಿಖರವಾದ ದಾಖಲೆಗಳನ್ನು ಅಳವಡಿಸಿಕೊಂಡಿರುತ್ತದೆ.

ಇಂತಹ ದಾಖಲೆಗಳನ್ನು ಬಳಸಿ ಚರಿತ್ರೆಯನ್ನು ಬರೆಯುವ ಕ್ರಮವು ಹಿಂದಿನಿಂದಲೂ ಬೆಳೆದು ಬಂದಿರುವುದರಿಂದ ಇದನ್ನು ಇತಿಹಾಸ ಬರೆಯುವ ಸಾಂಪ್ರದಾಯಿಕ ವಿಧಾನ ಎಂದು ಕರೆಯಬಹುದು. ಇಂತಹ ಈ ವಿಧಾನವು ಬರೆಹದ ರೂಪಗಳನ್ನು ಆಧರಿಸಿಯೇ ಬೆಳೆಯುತ್ತವೆ. ಇದರಲ್ಲಿ ನಮಗೆ ಬರೆಹಬಲ್ಲವರ ಜೀವನ ವೃತ್ತಾಂತ ಮಾತ್ರ ದೊರೆಯುತ್ತದೆ. ಇನ್ನು ಶಾಸನಗಳ ಬಗ್ಗೆ ಹೇಳುವುದಾದರೆ ಅವುಗಳು ರಾಜರ ವೈಭವ, ಯುದ್ಧವರ್ಣನೆ, ದಾನ ಪ್ರಶಂಸೆಗೆ ಮಾತ್ರ ಸೀಮಿತವಾಗಿರುತ್ತವೆ. ಆಳುವವರ ಆರ್ಥಿಕ ವ್ಯವಸ್ಥೆಯ ವರ್ಣನೆಗೆ ಅಕ್ಷರ ಮಾಧ್ಯಮ ಸೀಮಿತವಾಗಿರುತ್ತವೆ. ಹಾಗಾಗಿ ಅವನ್ನು ಆಧರಿಸಿ ಬರೆದ ಚರಿತ್ರೆಯೂ ಪಾರ್ಶ್ವಿಕ ಸತ್ಯವನ್ನು ಪ್ರಕಟಣೆ ಮಾಡುವುದಲ್ಲದೆ, ಆಳುವ ವರ್ಗದ ಪರವಾದ ಧೋರಣೆಯನ್ನು ಪ್ರಕಟಿಸುತ್ತಾ ಬಂದಿತು.

ಇಲ್ಲಿ ಹಳ್ಳಿಗಾಡಿನ ಜನರು ಅಂದರೆ ಅನಕ್ಷರಸ್ಥರು ಚರಿತ್ರೆಯ ದಾಖಲಾತಿಯಿಂದ ದೂರ ಉಳಿದರು. ಅಂದರೆ ಇವರಿಗೆ ಚರಿತ್ರೆ ಇಲ್ಲ ಎಂಬರ್ಥ ಅಲ್ಲ. ಸಾಂಪ್ರದಾಯಿಕ ಇತಿಹಾಸ ರಚನೆಕಾರರಿಂದ ಇಂತಹವರ ಚರಿತ್ರೆ ದೂರ ಉಳಿಯಿತೆಂದೇ ಹೇಳಬೇಕಾಗುತ್ತದೆ.

ಇಂತಹ ಲೋಪಗಳ ಕಡೆಗೆ ಬೊಟ್ಟುಮಾಡಿ ತೋರಿಸಿಕೊಟ್ಟ ಕೀರ್ತಿ ರಿಚರ್ಡ್ ಡಾರ್ಸನ್ನರಿಗೆ ಸಲ್ಲುತ್ತದೆ. ಜನಸಾಮಾನ್ಯರ ಮೌಖಿಕ ನಿರೂಪಣೆಗಳ ಮೂಲಕ ಹೊಸ ಚರಿತ್ರೆಯನ್ನು ಹೇಗೆ ಬರೆಯಬಹುದೆಂಬುದನ್ನು ತೋರಿಸಿಕೊಟ್ಟರು. ಅವರು ಇತಿಹಾಸ ರಚನೆಯಲ್ಲಿ ಮೂರು ಪ್ರಭೇದಗಳನ್ನು ಗುರುತಿಸುತ್ತಾರೆ. ಅವುಗಳೆಂದರೆ ರಾಜಮಹಾರಾಜರುಗಳು, ಸಾಮ್ರಾಜ್ಯಗಳು, ಅಧಿಕಾರಿಗಳು, ಯುದ್ಧಗಳೇ ಕೇಂದ್ರವಾಗಿರುವ ರಾಷ್ಟ್ರೀಯ ಇತಿಹಾಸ, ಜನಸಾಮಾನ್ಯರ ದೃಷ್ಟಿಕೋನದಿಂದ ಸಿಗುವ ಮಾಹಿತಿಗಳನ್ನು ರಾಷ್ಟ್ರೀಯ ಇತಿಹಾಸದೊಂದಿಗೆ ಹೊಂದಿಸಿ ಬರೆಯುವ ಪ್ರತಿಷ್ಠಿತಾವಾದಿ ಇತಿಹಾಸ ಅಲ್ಲದೆ, ರಾಷ್ಟ್ರದ ಅರಿವಿಲ್ಲದೆ, ಸಾಂಪ್ರದಾಯಿಕ, ಇತಿಹಾಸದ ತರಬೇತಿಯೂ ಇಲ್ಲದೆ ಇರುವ ಜನಪದ ಇತಿಹಾಸ. ಕೊನೆಯದಾದ ಜನಪದ ಇತಿಹಾಸಕ್ಕೆ ತನ್ನದೇ ಆದ ದೃಷ್ಟಿಕೋನವಿರುತ್ತದೆ. ಅದು ರಾಷ್ಟ್ರೀಯ ಚರಿತ್ರೆಗೆ ಪರ್ಯಾಯವಾಗಿರುತ್ತದೆ ಎಂದು ಅವರು ಅಭಿಪ್ರಾಯ ಪಡುತ್ತಾರೆ. (Dorson ೧೯೭೨ : ೨೪೩) ಈ ಅಂಶಗಳಿಂದ ಅವಲೋಕಿಸಿದಾಗ ಮೌಖಿಕ ಇತಿಹಾಸಕ್ಕೆ ರಾಷ್ಟ್ರೀಯ ಇತಿಹಾಸದ ಹಂಗಿಲ್ಲದಿರುವ ಅಂಶ ಎದ್ದು ಕಾಣುತ್ತದೆ. ಮೌಖಿಕ ಚರಿತ್ರೆಯ ಪರಿಕಲ್ಪನೆಯಲ್ಲಿ ಕಾಣುವ ದೇಶವೇ ಬೇರೆ. ರಾಷ್ಟ್ರೀಯ ಇತಿಹಾಸದ ಪರಿಕಲ್ಪನೆಯಲ್ಲಿ ಕಾಣುವ ರಾಷ್ಟ್ರವೇ ಬೇರೆ. ಇವೆರಡಕ್ಕೂ ಬೇರೆ ಬೇರೆಯೇ ಆದ ಓದುಗ

ಅಥವಾ ಕೇಳುಗ ವರ್ಗವಿರುತ್ತದೆ. ಇದು ಈ ಎರಡು ರೀತಿಯ ಇತಿಹಾಸದ ಸೈದ್ಧಾಂತಿಕ ನೆಲೆಗಳ ನಡುವೆ ಇರುವ ವ್ಯತ್ಯಾಸ ಅತವಾ ಅಂತರವನ್ನು ಸಂಕೇತಿಸುತ್ತದೆ.

ಕಂಠಸ್ಥ ಅಥವಾ ಮೌಖಿಕ ನಿರೂಪಣೆಗಳನ್ನು ಆಧರಿಸಿ, ಇತಿಹಾಸವನ್ನು ಹೇಗೆ ಬರೆಯಬಹುದೆಂಬ ಪ್ರಶ್ನೆಯನ್ನು ಆಗಾಗ ಕೇಳಿದಾಗ, ಇದಕ್ಕೆ ನಾವು ಕೊಡುವ ಉತ್ತರ ಇತಿಹಾಸವೆಂದರೇನು ಎಂಬುದನ್ನು ನಾವು ತಿಳಿದುಕೊಂಡಿರುವುದನ್ನು ಅವಲಂಬಿಸಿದೆ. ಲಿಖಿತ ಇತಿಹಾಸಕಾರರು ತಮ್ಮ ಬರವಣಿಗೆಯನ್ನು ಸಾಮಾನ್ಯವಾಗಿ 'ವಸ್ತುನಿಷ್ಠ' ಎಂದು ಕರೆದುಕೊಳ್ಳುತ್ತಾರೆ. ಆದರೆ ಇದು ಪೂರ್ಣ ಸತ್ಯವಲ್ಲ. ಪ್ರತಿಯೊಬ್ಬರು ತಮಗೆ ದೊರಕಿದ ದಾಖಲೆಗಳ ಆಧಾರದಿಂದ ಚರಿತ್ರೆಯನ್ನು ರಚಿಸುತ್ತಾರೆ. ಇತಿಹಾಸವನ್ನು ನಿರೂಪಿಸಲು ತಮಗಿರುವ ಅಧಿಕಾರವನ್ನು ಉಪಯೋಗಿಸಿ, ಓದುಗರಲ್ಲಿ 'ವಸ್ತುನಿಷ್ಠ' ಎಂಬ ಭ್ರಮೆಯನ್ನು ಮೂಡಿಸುತ್ತಾರೆ. ಬರವಣಿಗೆಯ ಒಳಗಿರುವ ತರ್ಕವು ಚರಿತ್ರೆಯ ಕಟ್ಟುಕತೆಯಲ್ಲ ಎಂಬ ಭಾವನೆಯನ್ನು ಓದುಗನಲ್ಲಿ ಮೂಡಿಸುತ್ತದೆ.

ಈ ರೀತಿಯ ಮಾತು ಮೌಖಿಕ, ನಿರೂಪಣೆಗಳಿಗೂ ಅನ್ವಯಿಸುತ್ತದೆ. ಅದರ ನಿರೂಪಕನ ತಿಳುವಳಿಕೆಯ ಪರಿಧಿಯೊಳಗೆ, ಆತ ನಿರೂಪಿಸುತ್ತಿರುವುದೆಲ್ಲ 'ಸತ್ಯವೇ' ಆಗಿರುತ್ತದೆ. ಅವನ ಪ್ರಕಾರ ತಾನು ಏನನ್ನು ಹೇಳುತ್ತಿದ್ದಾನೋ ಅವೆಲ್ಲ ಹಿಂದೆ ನಡೆದ ಘಟನೆಗಳೇ ಆಗಿರುತ್ತವೆ. ಅದಕ್ಕೆ ಆ ವ್ಯಕ್ತಿ ತನ್ನದೇ ಆದ ಆಧಾರಗಳನ್ನು ಕೊಡುತ್ತಾನೆ. ಇರುವ ವ್ಯತ್ಯಾಸವೆಂದರೆ ಲಿಖಿತ ಇತಿಹಾಸ ಮತ್ತು ಮೌಖಿಕ ಇತಿಹಾಸದ ಗ್ರಾಹಕರು ಬೇರೆ ಬೇರೆ ಎಂಬುದು. ಲಿಖಿತ ರೂಪವು ಸದಾ ಹೇಳುಗನ ಸ್ಥಾನದಲ್ಲಿದ್ದು ಓದುಗನನ್ನು ಸಂಬೋಧಿತನ ಸ್ಥಾನದಲ್ಲಿರಿಸುತ್ತದೆ. ಆದರೆ ಮೌಖಿಕದಲ್ಲಿ ಸಂಭಾಷಣೆಯ ಸಾಧ್ಯತೆ ಹೆಚ್ಚಿರುತ್ತದೆ. ಲಿಖಿತ ಪಠ್ಯದಲ್ಲಿ ಲಿಖಿತ ಕ್ರಿಯೆ ಮತ್ತು ಓದುವ ಕ್ರಿಯೆಗಳು ಎರಡು ಭಿನ್ನ ನೆಲೆಗಳಲ್ಲಿರುತ್ತವೆ. ಇವುಗಳ ನಡುವೆ ನೇರ ಸಂಬಂಧವಿರುವುದಿಲ್ಲ. ಅಂದರೆ ಲೇಖನ ಕ್ರಿಯೆಯಲ್ಲಿ ಓದುಗನೂ ಓದುವ ಕ್ರಿಯೆಯಲ್ಲಿ ಲೇಖಕನೂ ಮುಖಾಮುಖಿಯಾಗುವುದಿಲ್ಲ. ಆದ್ದರಿಂದ ಲೇಖಕನ ಗೈರುಹಾಜರಿಯಲ್ಲಿ ಪಠ್ಯ ಓದುಗ ಸಂಬಂಧ ಸುಲಲಿತವಾಗಿರುತ್ತದೆ. ಆದರೆ ಮೌಖಿಕ ಇತಿಹಾಸ ನಿರೂಪಣೆಯಲ್ಲಿ ಹೇಳುವವರು-ಕೇಳುವವರು ಪರಸ್ಪರ ಹತ್ತಿರದಲ್ಲಿರುತ್ತಾರೆ. ಹಾಗಾಗಿ ಎಷ್ಟನ್ನು ನಿರೂಪಿಸುತ್ತಾನೋ, ಅಷ್ಟು ಮಾತ್ರ ಮೌಖಿಕ ಇತಿಹಾಸದ ಭಾಗವಾಗಿರುತ್ತದೆ. ಆ ವ್ಯಕ್ತಿಯ ನಿರೂಪಣೆಯೂ ಸಂದರ್ಭೋಚಿತ ಅಭಿವ್ಯಕ್ತಿಯನ್ನು ಮಾತ್ರ ಪಡೆಯುತ್ತದೆ.

ಮೌಖಿಕ ಇತಿಹಾಸವು ವರ್ತಮಾನದಲ್ಲಿ ಮಾತ್ರ ನಿರೂಪಿಸಲ್ಪಡುವುದರಿಂದ, ಅದಕ್ಕೆ ವರ್ತಮಾನದ ಹಂಗು ಅನಿವಾರ್ಯವಾಗಿರುತ್ತದೆ. ಹಾಗಾಗಿ ಅದು ಚರಿತ್ರೆಗೆ ಮಾತ್ರ ಅಂಟಿಕೊಳ್ಳದೆ ಸಂಸ್ಕೃತಿ, ರಾಜಕಾರಣ, ಸಮಾಜ ಮತ್ತಿತರ ವಿಷಯಗಳನ್ನು ಒಳಗೊಂಡಿರುತ್ತದೆ. ಈ ಎಲ್ಲಾ ಕಾರಣಗಳಿಂದ ಮೌಖಿಕ ಇತಿಹಾಸದ ಅಧ್ಯಯನ ವಿಧಾನವು ಲಿಖಿತ ಇತಿಹಾಸದ ವಿಧಾನದಿಂದ ತೀರ ಬೇರೆಯದಾಗಿರುತ್ತದೆ.

ಪ್ರಸಿದ್ಧ ವಿದ್ವಾಂಸರೂ, ಜಾನಪದ ತಜ್ಞರೂ ಆಗಿರುವ ಬಿ.ಎ.ವಿವೇಕ ರೈ ಅವರು 'ಇತಿಹಾಸ ಮತ್ತು ಜಾನಪದ' ಎಂಬ ಲೇಖನದಲ್ಲಿ ಕಂಠಸ್ಥ ಪರಂಪರೆಯ ಇತಿಹಾಸವು ಲಿಖಿತ ಇತಿಹಾಸಕ್ಕಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ಪಾಡ್ದನವೊಂದರ ಆಧಾರದಿಂದ ವಿಶ್ಲೇಷಿಸಿದ್ದಾರೆ.(೧೯೮೫ : ೬೮-೮೧)

"ಇತಿಹಾಸ ರಚನೆಯಲ್ಲಿ ಲಿಖಿತ ಪರಂಪರೆಯನ್ನೇ ಅವಲಂಬಿಸಿ ಬಹುಸಂಖ್ಯಾತ ಜನ ಸಮುದಾಯದ ಭಾವನೆಗಳನ್ನೂ ಸಂಪೂರ್ಣ ಕಡೆಗಣಿಸಿ ನಾವು ಸಾಕಷ್ಟು ತಪ್ಪುಗಳನ್ನು ಮಾಡಿದ್ದೇವೆ. ನಮ್ಮ ಲಿಖಿತ ಇತಿಹಾಸಗಳು ಅಪರಿಪೂರ್ಣ, ಪಾರ್ಶ್ವಿಕ, ಅರ್ಧಸತ್ಯಗಳನ್ನು ಒಳಗೊಂಡ 'ಬಾಕಿ ಇತಿಹಾಸ'ವಾಗಿ ಉಳಿದು ಬಂದಿರುವುದು ಇಂದು ನಮ್ಮೆಲ್ಲರ ಗಮನಕ್ಕೆ ಬಂದಿದೆ. ಕಠಸ್ಥ ಪರಂಪರೆಯ ಸಾಮಗ್ರಿಗಳಲ್ಲಿ ಕಾಲ್ಪನಿಕತೆ ಸೇರಿಕೊಂಡಿರಬಹುದು. ಘಟನೆಗಳು ಕಾಲದ ಅಂತರವನ್ನು ಮರೆತು ಒಂದಾಗಿರಬಹುದು. ವ್ಯಕ್ತಿಗಳ ಸ್ಥಳಗಳ ಹೆಸರುಗಳು ವ್ಯತ್ಯಾಸಗೊಂಡಿರಬಹುದು. ಕಾಲದ ಬೆಳವಣಿಗೆಯ ಮೂಲದ ತಿರುಳಿನ ಸುತ್ತ ಕವಚಗಳ ಪದರುಗಳನ್ನು ಪೇರಿಸಿರಬಹುದು. ಆದರೆ ಬಹುಜನರ ನೋವು ನಲಿವುಗಳು, ಆಸೆ ಆಕಾಂಕ್ಷೆಗಳು ಬೇರೆ ಬೇರೆ ರೂಪಗಳಲ್ಲಿ ದಾಖಲಾಗಿ ಪ್ರಸರಿಸುತ್ತ ಇಂಥ ಕಂಠಸ್ಥ ಪರಂಪರೆಯಾಗಿದೆ ಎನ್ನುವುದನ್ನು ಮರೆಯಲಾಗದು. ಇಂತಹ ಕಂಠಸ್ಥ ಪರಂಪರೆಯ ಸಾಮಗ್ರಿಗಳನ್ನು ಬಳಸಿಕೊಂಡು ಇತಿಹಾಸ ರಚನೆ ಮಾಡಿದಾಗ ಸಂಭವಿಸಬಹುದಾದ ತಪ್ಪುಗಳು ಲಿಖಿತ ಪರಂಪರೆಯ ಇತಿಹಾಸ ರಚನೆಯಲ್ಲಿ ಆಗಬಹುದಾದ ತಪ್ಪುಗಳಷ್ಟು ಘೋರವಾಗಿರುವುದಿಲ್ಲ, ಅಮಾನವೀಯವಾಗಿರುವುದಿಲ್ಲ. ಪ್ರಜಾಪ್ರಭುತ್ವ ವಿರೋಧಿಯಾಗಿರುವುದಿಲ್ಲ ಎನ್ನುವುದನ್ನು ನಾವು ಮನಗಂಡಷ್ಟು ಒಳ್ಳೆಯದು."(೧೯೮೫ : ೮೦-೮೧) ಇಂತಹ ಮಾತುಗಳು ಭಾರತೀಯ ಸಂದರ್ಭದಲ್ಲಿ ಮೌಖಿಕ ಇತಿಹಾಸದಲ್ಲಿ ಇರುವ ಪ್ರಾಮುಖ್ಯತೆಯನ್ನು ಸೂತ್ರೀಕರಿಸಿ ಹೇಳಿದಂತೆ ಚೆನ್ನಾಗಿ ಮನವರಿಕೆ ಮಾಡಿಕೊಡುತ್ತವೆ.

ಜೋಕುಮಾರನ ಮೌಖಿಕ ಚರಿತ್ರೆಗೆ ಸಂಬಂಧಪಟ್ಟಂತೆ ಜನಪದರಿಂದ ಅವನು ಕೇವಲ ಒಂದು ವಾರ ಮಾತ್ರ ಪೂಜಿಸಿಕೊಂಡು ಆನಂತರ ಕೆಳವರ್ಗದವರ ಕೈಯಲ್ಲಿ ಸಿಕ್ಕು ತನ್ನ ಪ್ರಾಣವನ್ನು ಕಳೆದುಕೊಳ್ಳುತ್ತಾನೆ. ಜನಸಾಮಾನ್ಯರ ಬಾಯಲ್ಲಿ ಇವನ ಚರಿತ್ರೆ ಹೀಗೆ ವ್ಯಕ್ತವಾಗುತ್ತದೆ.

೧. ಮೊತ್ತ ಮೊದಲಿಗೆ ಅವನು ಅಲ್ಪಾಯುಷಿ : ಜೋಕುಮಾರನಿಗೆ ಕೇವಲ ಏಳು ದಿನಗಳು ಮಾತ್ರ ಆಯುಷ್ಯವಿರುತ್ತದೆ ಎಂಬ ಅಂಶಗಳನ್ನು ವಕ್ತೃಗಳು ಹಾಡಿದ ಹಾಡುಗಳಲ್ಲಿ ಬಿಂಬಿತವಾಗುತ್ತದೆ.

ಹುಟ್ಟಿದಾ, ಏಳ್ದಿನಕೆ ಪಟ್ಟಾವ ತಿರಗ್ಯಾನ
ದಿಟ್ಟಾದೇವಿ ನಿನಮಗ| ಕೊಮರಾಗ
ಬರೆದಾಳ ಸೆಟವಿ ಏಳ್ದಿನ ||
ಆರೇಳು ದಿನಕೆ ಆಳಿದನೆ ರಾಜ್ಯವ
ದಿಟ್ಟಾದೇವಿ ನಿನ್ನ ಮಗ | ಕೊಮರಾಗ

ಕೊಟ್ಟಾರ ಏಳು ದಿನಗಳು ||
ಆಳವುತ ಸಿರಿತಾನು ಬಳಲುತಲಿ ಬಂದಾಳು
ಆಳಕದಂಬಲಿ ತಡೆದಾವು | ನಮಕೊಮರ
ಕಳೆದೇಳು ದಿನಕ ಮರಣವ್ವ ||

ಕೇವಲ ಏಳು ದಿನಗಳಲ್ಲಿ ಅವನು ಪಟ್ಟಣಗಳನ್ನು ಸುತ್ತುತ್ತಾನೆ. ರಾಜ್ಯವನ್ನಾಳುತ್ತಾನೆ. ಇವನ ಸಾವಿನಿಂದ ಸಿರಿದೇವತೆ ದುಃಖಪಡುತ್ತಾಳೆ. ಅಂದರೆ ಜೋಕುಮಾರನು ಸಿರಿ-ಸಂಪತ್ತಿಗೆ ಒಡೆಯನಾಗಿರುತ್ತಾನೆಂದು ವಕ್ತೃಗಳ ಅಂಬೋಣ. ಆರು ದಿನಗಳಲ್ಲಿ ಅವನು ಮಾಡಬೇಕಿರುವ ಎಲ್ಲಾ ಕಾರ್ಯಗಳನ್ನು ಮಾಡಿ ಮುಗಿಸುತ್ತಾನೆ. ಏಳನೆಯ ದಿನ ಅವನಿಗೆ ಮರಣವು ಪ್ರಾಪ್ತವಾಗುತ್ತದೆ. ಅಂದರೆ ಕೇವಲ ಒಂದು ವಾರದಲ್ಲಿ ಸೃಷ್ಟಿ, ಸ್ಥಿತಿ, ಲಯಗಳು ನಡೆಯುತ್ತವೆ ಎಂಬುದನ್ನು ಇಲ್ಲಿ ಸಾಂಕೇತಿಕವಾಗಿ ನೆನಪಿಸಿಕೊಳ್ಳಲು ಸಾಧ್ಯವಾಗುತ್ತದೆ.

೨. ಹುಟ್ಟು-ಬಾಲ್ಯ : ಇವನನ್ನು ಹಡೆಯುವಾಗ ಅವನ ತಾಯಿಗೆ ಬಯಕೆಯಾಗುತ್ತದೆ. ಇಂಥ ಬಯಕೆಯು ಮುಂದೆ ಜನನವಾಗಲಿರುವ ಮಗನ ಗುಣ-ಸ್ವಭಾವವನ್ನು ತಿಳಿಸುವುದೆನ್ನುವುದು ಒಂದು ಬಗೆಯ ನಂಬಿಕೆ ಶ್ರೀ ಸಾಮಾನ್ಯರಲ್ಲಿ ಮನೆ ಮಾಡಿಕೊಂಡಂತಿದೆ. ಅವನ ಅಮ್ಮನಿಗೆ

ಪುಂಡಿಯ ಪಲ್ಲೆ ನಂಜು ಕೊಂಡ ತಾನುಣಲಿಲ್ಲ
ದಂಡನಾಳವನ ಬಂಕ್ಯಾಗ | ನಮದೇವಿ
ಹೊಂಬಳಿಸರವ ಬಗಿಸ್ಯಾಳ ||
ಚಕ್ಕೋಚಿ ರಸಪಲ್ಲೆ, ಇಕ್ಕೊಂಡು ಉಣಲಿಲ್ಲ
ದಿಕ್ಕನಾಳವನ ಬಂಕ್ಯಾಗ | ನಮದೇವಿ
ಚೊಕ್ಕ ಮುತ್ತಿನ ಸರಬಗಿಸೆ ||

ಪುಂಡಿಯ(ಸೊಪ್ಪು) ಪಲ್ಲೆ, ಚಕ್ಕೋಚಿ ಇವುಗಳನ್ನು ಉಣ್ಣಲಿಲ್ಲ; ಬಯಸಲಿಲ್ಲ. ಆದರೆ ಹೊಂಬಳಿಸರ ಮತ್ತು ಮುತ್ತಿನ ಸರಗಳನ್ನು ಬಯಸಿದ್ದಾಳೆ. ಹೊಂಬಳಿಸರವನ್ನಾಗಲಿ, ಮುತ್ತಿನ ಸರವನ್ನಾಗಲಿ ಬಯಸುವುದು ಮುಂದೆ ಹುಟ್ಟಲಿರುವ ಮಗುವಿನ ಸ್ವಭಾವವನ್ನು ಬಿಂಬಿಸುತ್ತದೆ. ಅವನು ಜನ್ಮ ತಳೆದಿರುವಾಗ,

ಆರ್ಹರವಿ ನೀರ್ಹಾಕಿದರೆ ಆರು ಹರದಾರಿ ಹರದಾವು
ರಾಣಿಯ ಸೀರೆ ಉಡಕೊಟ್ಟು | ದೇವಿಯು
ರಾಜಕೊಮರಾನ ಹಡೆದಾಳೆ ||

ತನ್ನ ಹಡೆದವ್ವಳಿಗೆ ಆರು ಬಿಂದಿಗೆ ನೀರು ಹಾಕಿ, ರಾಣಿಯರು ಉಡುವಂತಹ ಸೀರೆಯನ್ನು ಉಡಿಸುತ್ತಾನೆ. ರಾಜಕುಮಾರನು ತನ್ನ ತಾಯಿಗೆ ಮಾಡುವ ಕೆಲಸಗಳಲ್ಲಿ ಇದೂ ಒಂದು

ಬಾಲ ಹುಟ್ಟಿದನಂತ ಬನಕ ತೊಟ್ಟಿಲ ಕಟ್ಟಿ
ಬಾಲಗನ್ನೇರು ನೆರದಾರ | ಹಾಡುತಲಿ
ಕೋಲೆನ್ನು ಜನಕ ಜಯಜಯವೊ||

ಈ ರೀತಿಯಲ್ಲಿ ಹಾಡಿ ಬನಕೆ ತೊಟ್ಟಿಲು ಕಟ್ಟಿ, ಕನ್ನೆಯರು ಜಯಕಾರ ಮಾಡಿ ಹರಸುತ್ತಾರೆ. ಈ ಮಗು

ಹಾಲ್ಬೇಡಿ ಹಲುಬ್ಯಾನ ಕೆನೆಬೇಡಿ ಕುಣಿದಾನ
ಮೊಸರ್ಬೇಡಿ ಕೆಸರ ತುಳಿದಾನ | ಕೊಮರಾನ
ಮೊಸರ್ಬೇಡಿ ಕೆಸರ ತುಳಿದಾನ | ಕೊಮರಾನ
ಕುಸುರಾದ ಗೆಜ್ಜೆ ಕೆಸರಾಗ್ಯೊ ||

ಈ ರೀತಿಯಲ್ಲಿ ಅವನು ಆಟ ಆಡುತ್ತಾನೆ. ಬಾಲಗನ್ನೆಯರು ಬನಕೆ ತೊಟ್ಟಿಲನ್ನು ಕಟ್ಟಿ ಹಾಡಿದಾಗ, ತಾಯಿ,

ಕಾಜಿನ ಕಂಬಕ ಕಟ್ಟಿದಳವ್ವಾ ತೊಟ್ಟಿಲ
ಕಾಳಿಂಗರಾಯನ ಮಿಣೆಮಾಡಿ | ನಮದೇವಿ
ರಾಜಕೊಮರಾನ ತೂಗ್ಯಾಳ ||

ಕಾಜಿನ ಕಂಬಕ್ಕೆ ತೊಟ್ಟಿಲನ್ನು ಕಟ್ಟಿ, ಕಾಳಿಂಗರಾಯನ ಮಿಣೆ ಮಾಡಿ ತೂಗುತ್ತಾಳೆ. ಇದು ಜೋಕುಮಾರನ ಪೌರುಷವನ್ನು ಬಿಂಬಿಸುತ್ತದೆ.

'ಬೆಳೆಯುವ ಪೈರು ಮೊಳಕೆಯಲ್ಲಿ ನೋಡು' ಎಂಬ ನಾಣ್ಣುಡಿಯಂತೆ ಅವನ ಜನನವಾಗುತ್ತದೆ. ಜನಪದರು ಅದನ್ನು ಹೀಗೆ ಹಾಡುತ್ತಾರೆ.

ಹಡೆದಾಳೆ ನಮದೇವಿ ಕುಡಿದಾಳೆ ಕಾರಾವ
ಕುಡುಗೋಲ ಬೇವ ಹಡೆದಾಳೆ | ನಮದೇವಿ
ಸೂರ್ಯನ ಕಡಿಗೆ ಕೈಮುಗಿದ ||
ಎದ್ದಾಳೆ ನಮ ದೇವಿ ಕುಡಿದಾಳೆ ತುಪ್ಪಗಳ
ಹಿಡಿದಾಳ ಸೊಪ್ಪು ಬೇವುಗಳ | ನಮದೇವಿ
ಶುಕ್ರನಿಗೆಂದು ಕೈಮುಗಿದು ||
ಕಬ್ಬುಳ್ಳ ತ್ವಾಟದಾಗ ಇಬ್ಬನಿ ವರದ್ಯಾಂಗ
ಇಬ್ಬರು ತೂಗಲು ಮಲಗ್ಯಾನ | ನಮದೇವಿ
ಹೆಬ್ಬುಲಿ ಮಗನ ಹಡೆದಾಽಳ ||

ಇಲ್ಲಿ ಸಾಂಕೇತಿಕವಾಗಿ ಕುಡುಗೋಲು ವ್ಯವಸಾಯವನ್ನೂ, ಬೇವು ಔಷಧವನ್ನು ಸೂಚಿಸುತ್ತದೆ. ಇವತ್ತಿಗೂ ಹಡೆದಾಗ ಬೇವನ್ನು ಉಪಯೋಗಿಸುವ ರೂಢಿ, ಹೆಬ್ಬುಲಿ ಮಗನನ್ನು ಹಡೆದಿರುವುದು ಅವನ ಶೌರ್ಯವನ್ನು ತೋರಿಸುತ್ತದೆ.

ಅಕ್ಕ ಪಕ್ಕದವರು ಇವನನ್ನು ನೋಡಿ ಆಶ್ಚರ್ಯಗೊಳ್ಳುತ್ತಾರೆ. ಅವನ ರೂಪ-ಲಾವಣ್ಯವನ್ನು ವರ್ಣಿಸಿ ತಾಯಿಗೆ ಅವನ ಹೆಸರನ್ನು ಹೇಳಲು ಕೇಳಿದಾಗ,

ಕುಂತಾಡು ಮಗನಿಗೆ ಕುಂಚಿಗೆ ಕುಲಾಯ
ಜೋಡಿ ಮುತ್ತವನ ಕಿವಿಯಾಗೆ | ಗೌರವ್ವ ನಿನ್ನ
ಓಡ್ಯಾಡು ಮಗನ ಹೆಸರೇಳ ||
ಓಡ್ಯಾಡು ಮಗನಿಗೆ ಮಾಗಾಯಿ ಸೀಲಾಯಿ
ಒಂಟಿ ಮುತ್ತವ್ನ ಕಿವಿಯಾಗ | ಗೌರವ್ವ ನಿನ್ನ
ಓಡ್ಯಾಡು ಮಗನ ಹೆಸರ್ಹೇಳ ||

ಅವರ ಈ ಕೇಳಿಕೆಗೆ ತಕ್ಕಂತೆ ತಾಯಿ ಉತ್ತರಿಸುತ್ತಾಳೆ.

ಜೋ ಎಂದ ಮುದ್ದಿಗೆ ಜೋ ಎಂದ ಕಂದಗ
ಜೋ ಎಂದು ಹೇಳಿ ಕರದೇನ | ಕೊಮರಗ
ಜೋಕುಮಾರನೆಂಬ ಹೆಸರನ್ನ ||

ಜೋಕುಮಾರನನ್ನು ಗೌರವ್ವ ಹಡೆದಿದ್ದಾಳೆ. ಅವಳ ತಮ್ಮ ನೋಡಲು ಬರುತ್ತಾನೆ. ಆಗ ಅವಳು

ಅಕ್ಕ ಹಡೆದರೆ ಏನು ತಂದಿದಿ ಪದುಮಣ್ಣ
ಮುತ್ತಿನ ಚೆಂಡು ಮುಗಿಲಬಾಣ | ಕತ್ತಿಗೆ
ತಂದೀನಿ ಅರಳೆಲೆ ಜೋಕುಮಾರ ||

ಏನೇನು ತಂದಿದ್ದೀಯೆ ಎಂದು ಕೇಳಿದಾಗ, ಮುತ್ತಿನ ಚೆಂಡು, ಮುಗಿಲಬಾಣ, ಅರಳೆಲೆ ಎಂದು ಹೇಳುತ್ತಾನೆ. ಇವೆಲ್ಲವುಗಳು ತನಗೆ ಅಲ್ಲ ಎಂಬುದು ಅವಳಿಗೂ ಗೊತ್ತಿರುತ್ತದೆ. ಆಗ ಅವಳು

ಮುತ್ತಿನ ಚೆಂಡು ಅಳಿಯನಿಗಾಯಿತು
ನನಗೇನು ತಂದೆ ನನ ತಮ್ಮ |

ಎಂದು ಕೇಳಿದಾಗ ಅದಕ್ಕೆ ಅವನು

ಆಕ ಹೂವಿನ ಸಿರಿ ಮೂರ ಹೂವಿನ ಕುಬಸ
ನಿನಗೆ ತಂದೀನಿ ಹಿರಿಯಕ್ಕ |

ಎಂದು ಅಕ್ಕನಿಗೆ ತಂದ ಸೀರೆ-ಕುಪ್ಪಸಗಳನ್ನು ವರ್ಣನೆ ಮಾಡಿ ಅವಳಿಗೆ ಕೊಡುತ್ತಾನೆ.

ಗಂಜಿಯ ಸೀರೆ ಉಟ್ಟು ಗಂಧದ ಬೊಟ್ಟು ಇಟ್ಟು
ಅಂಗಳದಾಗ ಸುಳಿದಾಡೆ |

ಅಕ್ಕ ಇವೆಲ್ಲವನ್ನು ಧರಿಸಿ ಮನೆಯ ಅಂಗಳದಲ್ಲಿ ಓಡಾಡುತ್ತಾಳೆ. ತನ್ನ ತವರು ಮನೆಯ ಬಗ್ಗೆ ಅವಳಿಗೆ ಅಭಿಮಾನ ಮೂಡುತ್ತದೆ. ಇದನ್ನು ನೋಡಿದ ಅಕ್ಕಪಕ್ಕದ ಜನರು ಪರಿಹಾಸ್ಯ ಮಾಡುತ್ತಾರೆ.

ಅಂಗಳದಾಗ ಸುಳಿದಾಡು ತಾಯಿ ನೀನು
ಅಂಗಿಯ ತಾ ನಮ್ಮ ಕೊಮರಗ ||
ಪಟವಾಳ ಸೀರೆಯುಟ್ಟು ಮುತ್ತಿನ ಬೊಟ್ಟಿಟ್ಟು
ಪಡಸಾಲೆಗೆ ಓಡಾಡು ತಾಯಿ ನೀನು | ಗೌರವ್ವ
ಟೊಪ್ಪಿಗೆ ತಾ ನಮ್ಮ ಕೊಮರಗ ||

ಕುಮಾರನಿಗಾಗಿ ಅಂಗಿ, ಟೊಪ್ಪಿಗೆಯನ್ನು ಕೇಳುತ್ತಾರೆ. ಅಕ್ಕ-ತಮ್ಮ ಇವರ ನಡುವೆ ವಾತ್ಸಲ್ಯ. ಆ ಮಗುವಿನ ಮೇಲಿರುವ ನೆರೆಹೊರೆಯವರ ಅಕ್ಕರೆ ಇಲ್ಲಿ ವ್ಯಕ್ತವಾಗುತ್ತದೆ.

ಅನುಕಂಪ : ಇವನು ಎಲ್ಲರಿಗೂ ಮೆಚ್ಚಿನವನಾಗುತ್ತಾನೆ. ಜೋಕುಮಾನ ಮೇಲೆ ಎಲ್ಲರಿಗೂ ಅನುಕಂಪವಿದೆ. ಅದಕ್ಕೋಸ್ಕರ

ಹಾದ್ಯಾಗ ಅಳುವೋನೆ ಬೀದ್ಯಾಗ ಅಳುವೋನೆ
ಹೋಗೋರ ಕಂಡು ಅಳುವೋನೆ | ನಿಮ್ಮವ್ವ
ಬಾಳೆಯ ಹಣ್ಣು ಕಳುವ್ಯಾಳ ||
ಹಟ್ಯಾಗ ಅಳುವೋನೆ ಬಟ್ಯಾಗ ಅಳುವೋನೆ
ಹೋಗೋರ ಕಂಡು ಅಳುವೋನೆ | ನಿಮ್ಮವ್ವ
ಕಿತ್ತಳಿ ಹಣ್ಣು ಕಳುವ್ಯಾಳ ||

ಎಂಬುದಾಗಿ ಹಣ್ಣುಕೊಟ್ಟು ಅಳುತ್ತಿರುವ ಅವನನ್ನು ಸಮಾಧಾನ ಮಾಡುತ್ತಾರೆ. ಗೌಡರು ಅವನಿಗಾಗಿಯೇ ಅಂಬಲಿಯನ್ನು ನೀಡುತ್ತಾರೆ.

ಅಂಬಲಿ ಉಂಡಾನ ಗೊಂಗಡಿ ಹೊದ್ದಾನ
ಅಂಬೆಗಾಲ್ಹಚ್ಚಿ ನಡದಾನ | ಗೌಡರ
ನಾಣ್ಯೇರು ನೀಡಿ ಕಳಿವ್ಯಾರ ||

ತಾರುಣ್ಯ : ಅವನ ರೂಪು ಸುಂದರವಾಗಿದೆ. ಹಾಗಾಗಿ ಅವನು

ಹಳ್ಳಕ್ಕ ತಾ ಹೋಗಿ ಸಣ್ಣವ್ನ ಇಟ್ಯಾನ
ಕನ್ನಡಿ ತೆಗೆದು ಮೊಕ ನೋಡೋ | ಕೊಮರಾಮ

ಕಣ್ಣು ಮೂಗಿಲೆ ಕರಚಲುವ ||

ಪರಾಕ್ರಮಿ

ಕಾದಾನೆ ಮಳಲಾಗೆ ಕತ್ತಿಯ ನೆಲಸಾಕಿ
ಹೊಕ್ಕರಲ್ಲವ್ವ ರಣದಾಗೆ | ಗೌರವ್ವ
ಒಪ್ಪುವ ಮಗನ ಕರತಾರೆ ||
ಜೋಕುಮಾರನೆಂಬುವನು ಚಂದಗೇಡಿ ಸಿರಿಗೇಡಿ
ದಂಡಿನ್ಯಾಗ ನಮ್ಮ ಬಿಟ್ಟು ಬಂದ | ಮಾದಿಗರ
ಹರಳಯ್ಯ ಹೋಗಿ ಕರೆತಂದ ||

ಈ ರೀತಿಯಾಗಿ ಅವನು ರಣರಂಗದಲ್ಲಿ ಪ್ರವೇಶ ಮಾಡುತ್ತಾನೆ. ದಂಡಿನಲ್ಲಿ ಹೋಗಿ ಬರುವುದು ಅವನ ಶೌರ್ಯವನ್ನು ತೋರಿಸುತ್ತದೆ. ಅಲ್ಲದೆ ಅವನು

ಆರೇಳು ದಿನಕೇನೆ ಆಳಿದನೆ ರಾಜ್ಯವ
ದಿರ್ನದೇವಿ ನಿನಮಗ | ಕೊಮರಾಗೆ
ತೋರ್ಯಾರೆ ಏಳ ದಿನಗಳ ||

ಕೇವಲ ಏಳು ದಿನಗಳಲ್ಲಿ ರಾಜ್ಯವನ್ನಾಳುತ್ತಾನೆ. ಜೋಕುಮಾರನು ವೀರನಾಗಿದ್ದನೆಂಬುದನ್ನು ಸೂಚಿಸುತ್ತದೆ.

ಕಾಮಾಂಧ (ಬೆದೆಬಡುಕ)

ನಿಂಬೆಯ ಹಣ್ಣನ್ನ ಅಂಬರಕೆ ಈಡಾಡುತ
ತುಂಬಿದ ತೋಳ ತಿರುಗುತ | ಜೋಕುಮಾರ
ರಂಬೆಯರ ಮನೆಗೆ ನಡೆ ತಂದ ||
ಬಾಳೆಯ ಹಣ್ಣನ್ನ ಬಾಜಾರಕ ಈಡಾಡುತ
ಬಾಗೀದ ತೋಳ ತಿರುಗುತ | ಜೋಕುಮಾರ
ಬಾಲೆಯರ ಮನೆಗೆ ನಡೆ ತಂದ ||

ಅವನು ರಂಬೆಯರ (ಬಾಲೆ) ಮನೆಗೆ ಹೋಗುತ್ತಾನೆ. ಅವನ ಉಪಟಳ ಹೆಚ್ಚಾಗುತ್ತದೆ. ಅದಕ್ಕಾಗಿ ಅವನ ತಾಯಿಗೆ

ಹಾಗಲಾ ಬಳ್ಳಿಯು ಬಾಗಲಿಗೆ ಎದ್ದಾವು
ನಾರಿ ಗೌರವ್ವ ಇವನೋಡ | ನಿನಮಗ
ಹಾಗಲ್ಕಾಯಿಗೆ ಗುರಿಯಿಟ್ಟ ||
ಕುಂಬಳ ಬಳ್ಳಿ ಅಂಗಳಕೆ ಎದ್ದಾವು

ರಂಬೆ ಗೌರವ್ವ ಇವನೊಡೆ | ನಿನಮಗ
ಕುಂಬಳ ಕಾಯಿಗೆ ಗುರಿಯಿಟ್ಟ ||

ಎಂದು ದೂರು ಕೊಡುತ್ತಾರೆ. ಜನಪದ ಸಾಹಿತ್ಯದಲ್ಲಿ ಇವು ಉತ್ತಮ ನಿದರ್ಶನಗಳಾಗಿವೆ. ಇವನ ಕಾಮುಕತೆಯ ಬಗ್ಗೆ ಅನೇಕ ಹಾಡುಗಳಿವೆ.

ಜೋಕುಮಾರನೆಂಬುವನು ಗೌರವ್ವ ಮಗನವ್ವ
ಹುಟ್ಟುತ್ಲೆ ತಾಯ ಭ್ರಮಿಸ್ಯಾನೆ | ಗೌರವ್ವ
ಎತ್ಹಾಕಿ ಕೊರಳ ಮುರಿದಾಳ ||
ಎತ್ಹಾಕಿ ಕೊರಳ ಮುರಿದಾಳ ಗೌರವ್ವ
ಬಿಟ್ಟಾಳ ಹರಿವ ನೀರಿಗೆ | ಜೋಕುಮಾರ
ಸಿಕ್ಕ ನಂಬಿಗರ ಬಲಿಯಾಗ ||
ಜೋಕುಮಾರನೆಂಬುವನು ಕುಕುಬಡ್ಡೆ ಮಗ ಕಾಣೆ
ಉಕ್ಕರಿಸಿ ತಾಯ ಹೆಡಕೊಂಡ | ಗೌರವ್ವ
ಲೋಕ್ದಂತ ಮಗನ ಹಡಿಲಿಲ್ಲ ||

ತಾಯಿಯನ್ನೇ ಮೋಹಿಸುವಷ್ಟರ ಮಟ್ಟಿಗೆ ಅವನ ಕಾಮುಕತೆ ಮುಂದುವರೆಯುತ್ತದೆ. ಹೀಗಾಗಿ ತಾಯಿಯು ಕೋಪಗೊಂಡು ಆ ಮಗನನ್ನು ಕುತ್ತಿಗೆ ಹಿಸುಕಿ, ಸಾಯಿಸಿ ಹೊಳೆಯಲ್ಲಿ ಹಾಕುತ್ತಾಳೆ. ಆ ಮಗು ಬೆಸ್ತರಿಗೆ ದೊರೆಯುತ್ತದೆ. ಅಂದಿನಿಂದ ಇವರು ಜೋಕುಮಾರನನ್ನು ಪೂಜಿಸುತ್ತಿದ್ದಾರೆ. ಜೋಕುಮಾರನಿಗೂ ಗುಳ್ಳವ್ವಗೂ ಸಂಬಂಧವನ್ನು ಕಲ್ಪಿಸಿ ಕೆಲವು ಪದ್ಯಗಳು ದೊರೆಯುತ್ತವೆ.

ಅಳಕುತ ಬಳಕುತ ಬಂದಾಳ ಗುಳಕವ್ವ
ಬಂದ ನಿಂತಾಳ ಅಗಸ್ಯಾಗ | ಗೌಡರು
ತಂದು ಇಳಿಸ್ಯಾರ ಸೆಳಿಮಂಚ ||
ಕೊಮರ ತಾಬರ್ತಾನಂತ ಕೋಣೇಯ ಸಾರಿಸಿ
ಜಣ ಚಕ್ಕಲಗಿತ್ತಿ ಚದರೀಯ | ಮನಿಯಾಗ
ಒಂದಾರ ಜಾವ ಇರಲಿಲ್ಲ ||

ಇಂತಹ ಹಾಡುಗಳಿಂದ ಇವರಿಬ್ಬರ ಸಂಬಂಧ ತಿಳಿದುಬರುತ್ತದೆ. 'ಗುಳ್ಳವಂದ ಹರದರೇನು ಜೋಕುಮಾರಂದ ಮುರದರೇನು'' ಎಂಬ ನಾಣ್ಣುಡಿ ಜನಪದರ ಬಂಢಾರದಲ್ಲಿದೆ.

ಮಳೆಯ ಅಧಿದೈವ : ಒಂದು ಬದಿಗೆ ಇವನು ಕಾಮುಕನಾಗಿ ಕಂಡುಬಂದರೆ ಮತ್ತೊಂದೆಡೆಗೆ ಅವನು ಮಳೆಯನ್ನು ಹಾಗೂ ಸಿರಿಯನ್ನು ತರುವ ದೇವನಾಗಿದ್ದಾನೆ. ಈ ವಿಷಯವನ್ನು ಕುರಿತಂತೆ ಅನೇಕ

ಹಾಡುಗಳು ನಮಗೆ ದೊರಕಿವೆ. ಮಳೆ ಬಾರದೇ ಬರಬಂದಿರುತ್ತದೆ. ಜನರು ಅನ್ನನೀರಿಗಾಗಿ ಹಾಹಾಕಾರ ಮಾಡುತ್ತಾರೆ.

ಮಾಡಿದ ಪೈರು ಬಾಡಿ ಹೋಗುತಾವೆ
ತಾಯವ್ವ ಹಿಟ್ಟು ಕೊಡವಳ್ಳ | ಶಿವರಾಯ
ಉತ್ತರಿ ಮಳೆಯ ಕರುಣಿಸೊ ||
ಬಿತ್ತಿದ ಪೈರು ಬತ್ತಿ ಹೋಗುತಾವೆ
ಹೆತ್ತವ್ವ ಹಿಟ್ಟು ಕೊಡವಳ್ಳು | ಶಿವರಾಯ
ಅರಿದ್ರಾ ಮಳೆಯ ಕರುಣಿಸೊ ||

ಎಂದು ಜನರು ಮೊರೆಯಿಡುತ್ತಾರೆ. ಈ ಆಕ್ರಂದನವನ್ನು ಕೇಳಿದ ಜೋಕುಮಾರನು

ಕಟ್ಟೆಯ ಹತ್ಯಾನೆ ಹೊತ್ತುಗಳ ನೋಡ್ಯಾನೆ
ಹತ್ಯಾನೆ ನೀಲಗುದುರೆಯ ನಮ | ಕೊಮರ
ಕೈಬೀಸಿ ಮಳೆಯ ಕರೆದಾನೆ ||
ಏರಿಯ ಹತ್ಯಾನೆ ಯಾಳ್ಕೇವ ನೋಡ್ಯಾನೆ
ಏರ್ಯಾನೆ ನೀಲ ಕುದುರೆಯ | ನಮಕೊಮರ
ಶಲ್ಯೇವ ಬೀಸಿ ಕರೆದಾನೆ ||

ಈ ರೀತಿಯಾಗಿ ಮಳೆಯನ್ನು ಸುರಿಸುತ್ತಾನೆ. ಇದರಿಂದ ಹಳ್ಳ-ಕೊಳ್ಳಗಳು ತುಂಬಿ ಹರಿಯುತ್ತವೆ. ಇದನ್ನು ನೋಡಲು ಜೋಕುಮಾರನು ಹೋಗುತ್ತಾನೆ. ಈ ಸಂದರ್ಭದಲ್ಲಿ

ಕರುಣುಳ್ಳ ಕೊಮರಾವ ಕೆರೆನೋಡ ಹೋದರ
ಕರದು ಕಾರ್ಗಾಲ ಮಳೆ ಬಂದ | ಗೌಡರು
ಕರೆದು ಹಚ್ಚಡ ಹೊಚ್ಯಾರ ||
ಕೆಂಚ ನಮ ಕೊಮರಾಮ ಬೆಂಚೀಯ ನೋಡ ಹ್ವೋದ
ಮಿಂಚ್ಯಾವ ಕಾರಮಳೆ ಬಂದ | ಗೌಡರು
ಕೆಂಪು ಹಚ್ಚಡ ಹೊಚ್ಯಾರ ||

ಇನ್ನೂ ಪ್ರಬಲವಾಗಿ ಮಳೆಬರುತ್ತದೆ. ಊರಿನ ಗೌಡರು ಅದರಿಂದ ರಕ್ಷಿಸಿಕೊಳ್ಳಲು ಹಚ್ಚಡವನ್ನು ಹೊದಿಸುತ್ತಾರೆ. ಆ ಮಳೆ

ಇದ್ದಲಿ ಮಸಿಯಂಗೆ ಎದ್ದರ ಮಳಿ ಮಾಡ
ಗದ್ದರಿಸಿ ಮೂರೇ ಹರಿಮಿಂಚು || ರಾಯರ
ಗದ್ದೆಯ ಹೊಲಕ ಹದಮಳೆ ||

ಕಟ್ಟೆಯ ಹೊಲನವ್ವ ಬುಟ್ಟನ ತೆನೆಯವ್ವ
ಯಾವ ಶೆಟ್ಟರ ಹೊಲನವ್ವ | ಗೌಡರ
ಗೋದಿಯ ಹೊಲಕ ಹದಮಳೆ ||

ಈ ರೀತಿಯಿಂದ ಗದ್ದೆ ಹೊಲಗಳಲ್ಲಿ ಮಳೆ ಬಂದು ಸಮೃದ್ಧಿಯನ್ನು ತರುತ್ತದೆ. ಇದರಿಂದಾಗಿ

ಅಡ್ಡಡ್ಡ ಮಳೆ ಬಂದ ದೊಡ್ಡೊಡ್ಡ ಕೆರಿತುಂಬಿ
ಗೊಡ್ಡಗೊಳೆಲ್ಲ ಹೈನಾಗಿ | ಗೌಡರ
ಸೆಡ್ಡೆದ ಮ್ಯಾಲ ಸಿರಿ ಬಂದ ||
ಹಾಸ್ಹಾಸಿ ಮಳಿಬಡದ ಬೀಸ್ಬೀಸಿ ಕೆರಿತುಂಬಿ
ಬಾಸಿಂಗದಂತ ತೆನಿಬಾಗಿ | ಗೌಡರ
ರಾಸಿಯ ಮ್ಯಾಲ ಸಿರಿಬಂದ ||

ಎಲ್ಲೆಲ್ಲೂ ಸಮೃದ್ಧಿ ನೆಲೆಸುತ್ತದೆ. ಅವನು ಎಲ್ಲೆಲ್ಲಿ ಆಡುತ್ತಾನೋ ಅಲ್ಲಿ ಸಿರಿ ತುಂಬಿ ತುಳುಕುತ್ತದೆ.

ಬಿತ್ತಿದ ಹೊಲದಾಗ ಹೊಕ್ಕ ಚಂಡಡ್ಯಾನ
ನಿಸ್ತ್ರೇರ ಮಗನ ಕೊಮರಯ್ಯ | ಚೆಂಡಾಡಿ
ಬತ್ತ ಸಾವಿರವೆ ಬೆಳೆದಾವೆ ||
ಹಾರೂರ ಕೇರ್ಯಾಗ ಹಾರಿ ಚೆಂಡಾಡ್ಯಾನ
ನಾರಿ ನಿನಮಗ ಕೊಮರಯ್ಯ | ಚೆಂಡಾಡಿ
ಊರ ಭೂಮೆಲ್ಲ ಬೆಳಿಬಂದ ||
ಒಕ್ಕಲಗೇರಿ ತಾ ಹೊಕ್ಕು ಚೆಂಡಾಡ್ಯಾನ
ಅಕ್ಕನ ಮಗನು ಕೊಮರಯ್ಯ | ಆಡಿದರ
ಅಕ್ಕಿ ನಾಡೆಲ್ಲ ಬೆಳದಾವ ||

ಈ ಎಲ್ಲಾ ದೃಷ್ಟಿಕೋನದಿಂದ ನೋಡಿದಾಗ ಇವನು ಕುಂಬಾರರ ಮನೆಯ ಕುಂಭದಲ್ಲಿ ಹುಟ್ಟುವುದು, ಅಂಬಿಗರಿಂದ ಉರುಕೇರಿಗಳಲ್ಲಿ ತಿರುಗುವುದು, ಕೊನೆಗೆ ಅಗಸರ ಕಲ್ಲಿನ ಕೆಳಗೆ ಸಾಯುವುದು ಕಂಡುಬರುತ್ತದೆ. ಸಂತಾನೋತ್ಪತ್ತಿ (ಪ್ರಜನನ ದೇವ) ದೇವರು : ಪುರುಷ ಜನನೇಂದ್ರಿಯವೇ ಎದ್ದು ಕಾಣುವಂತಿರುವ ಇವನು ಮಕ್ಕಳನ್ನು ಕೊಡುತ್ತಾನೆ. ಬಂಜೆಯರು ಇವನಿಗೆ ಹರಕೆಯನ್ನು ಕಟ್ಟುತ್ತಾರೆ.

ಪುಂಡಿಯ ಸೊಪ್ಪಿಗೆ ಹೋದಾಳೆ ಹನುಮವ್ವ
ಕುಂಡಿಲ್ಲವಂತ ಅಳತಾಳ | ನಮಕೊಮರ
ಕುಂಡಿ ಮಾಡಿ ಮನಿಗೆ ಕಳುವ್ಯಾನ ||
ಬಸಲಿಕ್ಕ ಸೊಪ್ಪಿಗೆ ಹೋದಾಳ ಹನುಮವ್ವ

ಬಸುರಿಲ್ಲವಂತ ಅಳತಾಳ | ನಮಕೊಮರ
ಬಸರ್ಮಾಡಿ ಮನಿಗೆ ಕಳುವ್ಯಾನ ||

ಈ ಮೇಲಿನ ಹಾಡುಗಳು ನಿದರ್ಶನವಾಗಿವೆ. ಇವು ಅಶ್ಲೀಲ ಎಂದು ತೋರಿದರೂ ಸಹ ಇವನು ಫಲದೇವರು ಎನ್ನುವುದಕ್ಕೆ ಸಾಕ್ಷೀ ಭೂತವಾಗಿವೆ.

ಕೋರಿಕೆ : ಜೋಕುಮಾರನನ್ನು ಹೊತ್ತು ತಿರುಗುವ ಹೆಣ್ಣುಮಕ್ಕಳು ಮನೆ-ಮನೆಯಲ್ಲಿ ಮಾಡಿಕೊಳ್ಳುವ ವಿಜ್ಞಾಪನೆ ಈ ರೀತಿಯಾಗಿದೆ.

ಜಂಗಮ ನಾವಲ್ಲ ಜೋಗಯ್ಯ ನಾವಲ್ಲ
ತಿಂಗಳ್ಗೆ ಬರುವ ತಿರುಕಲ್ಲ | ತಾಯವ್ವ
ತುಂಬಿ ಮೊರಜೋಳ ನೀಡವ್ವ ||
ಗಂಜಿ ನೀಡು ನನ್ನ ಬಂದಿಯ ಕೈಯವ್ವ
ಗಂಜಿ ಹಚ್ಚಡದ ಗೌಡಗೆ | ಕೊಮರಾಗೆ
ಗಂಜಿ ನೀಡಿ ಕಳುಹವ್ವ ||
ಬೆಣ್ಣೆಯ ತಾಮುದ್ದಿ, ಕಣ್ಮಳ್ಳ ಕೊಮರಾಗ
ಹೊನ್ನ ಮಾಳಿಗೆಯ ಮನೆಯವ್ವ | ಕೆನೆಮೊಸರ
ಬಿನ್ನಾಯ ಹೇಳ ಕೊಮರಾಗ ||
ವೀಳ್ಯೇವ ಕೊಡು ನನ್ನ ಬಾಲಾಕೊಮರಾಗ
ಕೆಲ ಮಾಳಿಗೆಯ ಮನೆಯವ್ವ | ತಾಯವ್ವ
ವೀಳ್ಯೇವ ಕೊಟ್ಟು ಕಳುಹವ್ವಾ ||
ಹಳಲ ಅಂಬಲಿ ಬಾರೇ ಬಳಲ ಕೋಟ್ರೇ ಬಾರೇ
ಸುಳಿ ಬಾಳಿದೆಲೆಯ ಕೊಯ್ಯಾರೆ | ತಾಯವ್ವ
ಬಾಲಯ್ಯಗ್ಹೊಸ್ತ ಎಡಿಮಾಡ ||

ಇವನು ಸಾಮಾನ್ಯನಲ್ಲ. ಇವನಿಗೆ ಮೊರದ ತುಂಬ ದವಸ-ಧಾನ್ಯ ನೀಡುವಂತೆ ಕೇಳಿಕೊಳ್ಳುವ ವಾಡಿಕೆ. ಅವರೆಲ್ಲರ ನೋಟದಲ್ಲಿ ಇವನು ಗೌಡ; ಕಣ್ಮುಳ್ಳವ, ಅವರ ಬೇಡಿಕೆ ಫಲಪ್ರದವಾಗುತ್ತದೆ. ಆ ಮುತ್ತೈದೆ

ಕಲ್ಲಳಿಗಿ ಕಬ್ಬಿಣದ, ಮೆಟ್ಟಿತ್ತಿ ಏರ್ಯಾಳ
ಬಳುಕುತ ಬಳತ ತೆಗೆದಾಳ | ತಾಯವ್ವ
ಬಿಳಿಯೆಳ್ಳು ತುಂಬಿ ನೀಡ್ಯಾಳ ||

ಹೀಗೆ ದವಸ-ಧಾನ್ಯ ಪಡೆದುಕೊಂಡು ಕೃತಜ್ಞರಾಗುತ್ತಾರೆ. ಆಗ ಅವರು

ಹಾಲ ತಾ ಮಗಿತುಂಬಿ ಬಾಲನಮ್ಮ ಕೊಮರಾಗ
ಮೇಲ ಮಾಳಿಗೆ ಮನೆಯವ್ವ | ನೀ ಕೊಟ್ರ
ಮೇಲಾಗಿ ಬೆಳಿಲಿ ನಿಂಭೂಮಿ

ಎಂದು ಹರಸುತ್ತಾರೆ. ಅವರ ಭೂಮಿಯಲ್ಲಿ ಸಮೃದ್ಧವಾದ ಪೈರುಗಳು ಬರಲಿ ಎಂದು ಬೇಡುತ್ತಾರೆ.

ಅವಸಾನ : ಇವನ ಉಡಾಳತನಕ್ಕೆ ಜನರು ಹೆದರಿದ್ದಾರೆ. ಅವನಿಂದ ರೋಸಿ ಹೋಗಿ ಅವನನ್ನು ಕೊಲ್ಲುತ್ತಾರೆ. ನಂತರ ಅಗಸರು ಬಟ್ಟೆ ತೊಳೆಯುವ ಬಂಡೆಯ ಕೆಳಗೆ ಹೂಳುತ್ತಾರೆ.

ಪುಂಡನ ಪುಂಡಾಟ್ಕ ಹೆಂಡಮಂದಿ ಕೂಡ್ಯಾರ
ಕಂಡಲ್ಲಿ ಕಲ್ಲ ಬಡಿದಾರ | ರಾತ್ರ್ಯಾಗ
ಅಗಸರ ಕಲ್ಲಾಗ ಒಗದಾರ ||

ಅವನು ಅಲ್ಲಿ ನರಳಿ ನರಳಿ ಸಾಯುತ್ತಾನೆ. ಇವನ ನರಳುವಿಕೆಯನ್ನು ಕೇಳಿ ಮಡಿವಾಳರು ಬಟ್ಟೆ ಒಗೆಯುವುದನ್ನು ನಿಲ್ಲಿಸುತ್ತಾರೆ.

ಇಷ್ಟೆಲ್ಲಾ ಅವನ ಬಗ್ಗೆ ಒಳ್ಳೆಯ-ಕೆಟ್ಟ ಗುಣಗಳಿದ್ದರೂ, ಜನರು ಅವನನ್ನು ಪೂಜಿಸುತ್ತಾರೆ. ಕೊನೆಯದಾಗಿ ಈ ರೀತಿಯಲ್ಲಿ ಹಾಡುತ್ತಾರೆ.

ಜಯ ಜಯ ಕೊಮರಾಗ ಜಯಜಯ ಹಾಡೀರೆ
ಜಯ ಜಯ ಭೂಮಿ ಬೆಳಸಿಗೆ | ಹಡದವ್ವ
ಜಯ ಜಯ ಇರಲಿ ಜಗದಾಗ |
ಜೋಕುಮಾರ ಹುಟ್ಟಲಿ ಲೋಕವು ಬೆಳಿಯಲಿ
ಆಕಳ ಹಾಲ ಕರೆಯಲಿ | ಹರಿಯಾಗ
ತಾತೆದ್ದು ಮಸರ ಕಡೆಯಲಿ ||

ಸಮಕಾಲೀನತೆ ಸ್ಥಿತ್ಯಂತರ

ಇವತ್ತಿನ ಸಂದರ್ಭಕ್ಕೆ ತಕ್ಕಂತೆ ಹೇಳುವುದಾದರೆ ಜೋಕುಮಾರನ ಆಚರಣೆಯಲ್ಲಿ ಸಾಕಷ್ಟು ಬದಲಾವಣೆಗಳು ಆಗಿವೆ. ಅಂದರೆ ಹಿಂದಿನ ದಿನಗಳಲ್ಲಿ ಇರುವ ಸಂತೋಷ-ಸಡಗರಗಳು ಬರುಬರುತ್ತಾ ಕಡಿಮೆಯಾಗುತ್ತಿರುವುದು ನಮ್ಮೆಲ್ಲರಿಗೆ ಗೊತ್ತಿರುವ ಸಂಗತಿ. ಕಾಲವೂ ಇದರಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಅಂದರೆ ಇವತ್ತಿನ ಬದುಕು ಸಂಕೀರ್ಣವಾದದ್ದು, ಸಂಕೀರ್ಣ ಬದುಕಿನೊಂದಿಗೆ ಮಾನವ ತನ್ನ ವ್ಯಾಪಾರ, ವಹಿವಾಟನ್ನು ಮುಂದುವರೆಸಿಕೊಂಡು ಬರುತ್ತಿದ್ದಾನೆ. ಜಾಗತೀಕರಣ ಮಟ್ಟದಲ್ಲಿಯೂ ನಮ್ಮ ಅನೇಕ ಸಂಪ್ರದಾಯಗಳೂ ಕಣ್ಮರೆಯಾಗುತ್ತಿವೆ. ಕಾರಣ ಜನರಿಗೆ ನಮ್ಮ ಹಿಂದಿನ ಪರಂಪರೆಗಳ ಬಗ್ಗೆ ಕಾಳಜಿ ಇಲ್ಲದಿರುವುದು. ಮತ್ತೊಂದೆಡೆಗೆ ಯಾರಿಗೆ ಬೇಕು ಈ ರೀತಿಯ

ಆಚರಣೆಗಳು ಎಂಬ ನಕಾರಾತ್ಮಕ ಧೋರಣೆಯೂ ಇದ್ದಿರಬಹುದು. ಜೋಕುಮಾರನನ್ನು ಹೊತ್ತು ತಿರುಗುವ ಈ ನಿರ್ದಿಷ್ಟ ಸಮುದಾಯದವರು ಹೇಳುವಂತೆ ನಮಗೂ ಸಹ ಇಂತಹ ವಿಚಾರಗಳು ಬಂದಿವೆ. ಅದಕ್ಕೆ ಕಾರಣವನ್ನು ತಿಳಿಸುವುದು ಕಷ್ಟಸಾಧ್ಯ ಎನ್ನುತ್ತಾರೆ. ಹಿಂದಿನ ದಿನಗಳಲ್ಲಿ ಜನರು ಅತ್ಯಾನಂದದಿಂದ ಈ ಎಲ್ಲ ಬಗೆಯ ಜನಪದ ಪ್ರಕಾರಗಳನ್ನು ಮನಪೂರ್ವಕವಾಗಿ, ವಿಜೃಂಭಣೆಯಿಂದ ಆಚರಿಸುವ ಪದ್ಧತಿಯನ್ನಿಟ್ಟುಕೊಂಡಿದ್ದರು.

ಕಾಲಕ್ರಮೇಣ ಇಂತಹ ಆಚರಣೆಗಳು, ಸಂಪ್ರದಾಯಗಳು ಜನಮಾನಸದಿಂದ ದೂರವಾಗಹತ್ತಿದವು. ಕಾರಣ ಹತ್ತುಹಲವಾರು ಒಂದು ಏನೋ ನಮ್ಮ ಪೂರ್ವಜರು ಮಾಡಿಕೊಂಡುಬಂದಿರುವ ಇಂತಹವುಗಳನ್ನು ನಾವು ಮುನ್ನಡೆಸಿಕೊಂಡು ಬರಬೇಕು ಎಂಬ ಹಂಬಲ. ಇನ್ನೊಂದೆಡೆ ಇಪ್ಪತ್ತೊಂದನೆಯ ಶತಮಾನದಲ್ಲಿ ಅದರಲ್ಲಿಯೂ ವೈಜ್ಞಾನಿಕ ಯುಗದಲ್ಲಿಯೂ ಸಹ ಇವುಗಳನ್ನು ನಂಬಬಹುದೆ? ಎನ್ನುವಂತಹ ತಾರ್ಕಿಕ ಪ್ರಶ್ನೆಗಳೂ ಸಹಜವಾಗಿ ಉದ್ಭವಿಸುತ್ತವೆ. ಒಟ್ಟಿನಲ್ಲಿ ಇಂಥ ಎಲ್ಲ ಆಚರಣೆಗಳು, ಸಂಪ್ರದಾಯಗಳು ಬೆಳೆದು ಬಂದಿರುವ ಇವೆಲ್ಲವುಗಳನ್ನು ನಾವು ಮುಕ್ತ ಮನಸ್ಸಿನಿಂದ ಆಹ್ಲಾದಿಸುವ ಜತೆಗೆ ಅವುಗಳನ್ನು ಹೃದಯ ಶ್ರೀಮಂತಿಕೆಯಿಂದ ಉಳಿಸಿ ಬೆಳೆಸಿಕೊಂಡು ಬರಬೇಕು. ಅಂದಾಗ ಮಾತ್ರ ಎಲ್ಲ ಬಗೆಯ ಜನಪದ ಮಟ್ಟುಗಳು ಜೀವಂತವಾಗಿ ಉಳಿಯಲು ಸಾಧ್ಯ. ಅಂದರೆ ಎಲ್ಲಾ ಬಗೆಯ ಆಚರಣೆಗಳು, ಸಂಪ್ರದಾಯಗಳು, ಕಾಲದಿಂದ ಕಾಲಕ್ಕೆ ಬದಲಾವಣೆ ಹೊಂದುತ್ತಿರುತ್ತವೆ. ಚಲನಶೀಲ ಸಮಾಜದಲ್ಲಿ ಅವೂ ಸಹ ತಮ್ಮೊಳಗೆ ಬದಲಾವಣೆಯಾಗುತ್ತವೆ. ಕಾರಣ ಒಂದು, ಮನುಷ್ಯ ತನ್ನ ದೈನಂದಿನ ಬದುಕಿನೊಂದಿಗೆ, ತನಗೆ ಸಿಗುವ ಅತ್ಯಲ್ಪ ಸಮಯದಲ್ಲಿ ಎಷ್ಟು ಪ್ರಮಾಣದಲ್ಲಿ ಇಂಥವುಗಳನ್ನು ಉಳಿಸಿ, ಬೆಳೆಸುವ ಪ್ರಯತ್ನ ಮಾಡುತ್ತಾನೆ ಎನ್ನುವ ಪ್ರಶ್ನೆ ಸಹಜವಾಗಿ ನಮ್ಮ ಮುಂದೆ ಬರುತ್ತದೆ. ಅತ್ಯಾಧುನಿಕ, ಯಾಂತ್ರಿಕ ಜಗತ್ತಿನಲ್ಲಿ ಇಂಥ ಎಲ್ಲಾ ರಿಚ್ಯುಯಲ್‌ಗಳು ಕ್ರಮೇಣವಾಗಿ ಕ್ಷೀಣಿಸುತ್ತಿವೆ ಎಂಬ ಮಾತು ಸಾರ್ವಕಾಲಿಕ ಸತ್ಯ. ಮತ್ತೊಂದು ವರ್ಗದ ಜನರಿದ್ದಾರೆ. ಅವರು ಇಂಥ ವೈಜ್ಞಾನಿಕ ಯುಗದಲ್ಲಿಯೂ ಸಹ ಈ ಬಗೆಯ ಅರ್ಥಹೀನ ಸಂಪ್ರದಾಯದಿಂದ ಕೂಡಿದ ಆಚರಣೆಗಳನ್ನು ಮಾಡುವುದಾದರೂ ಏತಕ್ಕೆ? ಇದರಿಂದ ಆಗುವ ಪ್ರಯೋಜನವಾದರೂ ಏನು? ಎಂದು ಪ್ರಶ್ನಿಸುತ್ತಾರೆ.

ಆದರೆ ನಮ್ಮ ಪೂರ್ವಜನರು ಸುಮ್ಮನೆ ಇವೆಲ್ಲವುಗಳನ್ನು ಮುಂದುವರೆಸಿಕೊಂಡು ಬಂದಿಲ್ಲ. ಅವುಗಳ ಹಿಂದಿರುವ ಉದ್ದೇಶ, ಆಶಯ ಮತ್ತು ಪ್ರಯೋಜನವನ್ನು ಸಮಾಜದಲ್ಲಿರುವ ಎಲ್ಲ ಸ್ತರಗಳಲ್ಲಿರುವ ಜನರು ಪಡೆದುಕೊಳ್ಳಬೇಕು ಎಂಬ ಕಳಕಳಿ ಅವರದ್ದಾಗಿತ್ತು.

"ಸಂಪ್ರದಾಯ ಎಂದರೇನು? ಅದು ಬದಲಾಗದ ಬ್ರಹ್ಮ ಶಾಸನವೇನಲ್ಲ. ಅದು ಕೂಡ ಚಲನಶೀಲವಾಗಿರಬೇಕು. ಓಬೀರಾಯನ ಕಾಲದ ಅರ್ಥಗಳಿಂದ ಹೊರಬಂದು ಹೊಸ ಹೊಸ ಮಜಲುಗಳನ್ನು ಕಾಣಬೇಕು ಇದೇ ಕಾಲ ಧರ್ಮ."[9]

ಹಳ್ಳಿಗಾಡಿನಲ್ಲಿರುವ ಜನಸಾಮಾನ್ಯರ ಬದುಕನ್ನು ಸಮಸ್ತವಾಗಿ ವ್ಯಾಪಿಸಿರುವಂಥದು ಬೇಸಾಯ ಆಗಿದೆ. ಕೃಷಿಕರು ಮಾಡುವ ಎಲ್ಲ ಬಗೆಯ ಕಾರ್ಯಗಳೂ, ಅವರು ಆಡುವ ಪ್ರತಿಯೊಂದು ನುಡಿಯು ಒಂದಲ್ಲ ಒಂದು ಬಗೆಯಲ್ಲಿ ಕೃಷಿಯ ಜೊತೆಗೆ ಅವಿನಾಭಾವ ಸಂಬಂಧ ಹೆಣೆದುಕೊಂಡಿದೆ. ಅದರಲ್ಲಿ ವಿಶೇಷವಾಗಿ ಪರಿಣಿತನಾಗಲು ಅವನ ದೈನಂದಿನ ಪರಿಸರ ಶಿಕ್ಷಣವನ್ನು ನೀಡುತ್ತಾ ಬರುತ್ತದೆ. ಹಾಗಾಗಿ ಕೃಷಿಕನು ಆಚರಿಸುವ ಎಲ್ಲ ಹಬ್ಬ ಹರಿದಿನಗಳು ವ್ಯವಸಾಯ ಸಂಬಂಧಿಯಾದ ಅವನ ಬದುಕಿನ ವೇಳಾಪಟ್ಟಿಯ ಜೊತೆಗೆ ನೋವು, ನಲಿವುಗಳ ಪ್ರತಿರೂಪವಾಗಿವೆ.

ಈ ನಿಟ್ಟಿನಲ್ಲಿ ನಾವು ಆಲೋಚಿಸಿದಾಗ ಮಾತ್ರ ಇಂತಹ ಬೆಳವಣಿಗೆಗಳನ್ನು ಗಮನಿಸಲು ಸಾಧ್ಯವಾಗುತ್ತದೆ. ಅಲ್ಲದೆ ಬರೀ ನೆಪಕ್ಕೆ ಮಾತ್ರ ಎಂಬಂತೆ ಇವುಗಳು ಆಗಬಾರದು. ಕಾರಣವಿಷ್ಟೆ ನೂರಾರು ವರುಷಗಳಿಂದ ಬಂದಂತಹ ಸತ್‌ಸಂಪ್ರದಾಯಗಳು ಆದಷ್ಟು ಮಟ್ಟಿಗೆ ನಮಗೆ ಒಂದಲ್ಲ ಒಂದು ರೀತಿಯಲ್ಲಿ ಒಳಿತನ್ನೇ ಬಯಸುತ್ತವೆ. ಇವು ಮಾನವನ ಸರ್ವತೋಮುಖ ಬೆಳವಣಿಗೆಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನೆರವಾಗುವುದರಲ್ಲಿ ಸಂದೇಹವಿಲ್ಲ. ಯಾವುದೋ ಒಂದು ಕಾಲದಲ್ಲಿ ಇದ್ದಂತಹ ಈ ಎಲ್ಲ ಬಗೆಯ ಸಂಪ್ರದಾಯ, ಆಚರಣೆಗಳು ಅಂದಂದಿನ ಸಮಾಜಕ್ಕೆ, ಕಾಲಧರ್ಮಕ್ಕೆ ತಕ್ಕಂತೆ ಅವು ಉಳಿದು ಬೆಳೆದುಕೊಂಡು ಬಂದಿವೆ.

ಎಲ್ಲ ಬಗೆಯ ಸಂಪ್ರದಾಯಗಳು ಉಚ್ಛ್ರಾಯ ಸ್ಥಿತಿಯಲ್ಲಿವೆ ಎಂದು ಹೇಳಲು ಬರುವುದಿಲ್ಲ. ಕಾರಣ ನಮ್ಮ ತಾತ್ಸಾರದಿಂದಲೋ, ಅಜ್ಞಾನದಿಂದಲೋ, ಕೆಲವೊಮ್ಮೆ ಅವು ವಿನಾಶದ ಅಂಚನ್ನು ತಲುಪಿರಬಹುದು. ಯಾವುದನ್ನೂ 'ಇದಮಿತ್ಥಂ' ಎಂದು ಹೇಳಲು ಅಸಾಧ್ಯ. ಏಕೆಂದರೆ ಸಮಾಜದಲ್ಲಿರುವ ಎಲ್ಲಾ ವರ್ಗದ ಜನರು ಮುಕ್ತ ಮನಸ್ಸಿನಿಂದ ಪ್ರೋತ್ಸಾಹಿಸಿದರೆ ಮಾತ್ರ ಆಚರಣೆಯಲ್ಲಿ ಉಳಿಯಲು ಸಾಧ್ಯ.

ಇಂದು ನಮ್ಮ ನಡುವೆ ಆಚರಣೆಗಳಿವೆ ಎಂಬ ಮಾತು ಸತ್ಯ. ಅವು ಉಳಿದು ಬೆಳೆದುಕೊಂಡು ಬಂದಿರುವುದು ಪ್ರತಿಶತ ತೊಂಬತ್ತರಷ್ಟು ಹಳ್ಳಿಗಾಡಿನ ಜನರಿಂದ. ಅಂದಮಾತ್ರಕ್ಕೆ ಪಟ್ಟಣದ ಜನರು ಇವುಗಳ ಬಗ್ಗೆ ನಕಾರಾತ್ಮಕ ಧೋರಣೆಯನ್ನು ಅನುಸರಿಸುತ್ತಿದ್ದಾರೆ ಎಂಬ ಮಾತನ್ನು ಹೇಳುತ್ತಿಲ್ಲ. ದೈನಂದಿನ ಹಾಗೂ ಜಂಜಾಟಗಳ ನಡುವೆ ಅವರ ಬದುಕು ಸಂಕೀರ್ಣತೆಯಿಂದ ಕೂಡಿರುವುದು ಒಪ್ಪಿಕೊಳ್ಳುವ ವಿಚಾರವಾಗಿದೆ. ಏನೇ ಆದರೂ ನಾನು ಗಮನಿಸಿದಂತೆ ಹಾಗೂ ಕ್ಷೇತ್ರಕಾರ್ಯ ಮಾಡಿದ ಸಂದರ್ಭದಲ್ಲಿ, ವಕ್ತೃಗಳು ಕೊಟ್ಟ ಮಾಹಿತಿಯಂತೆ ಜನರ ಅಸಡ್ಡೆ ಮನೋಭಾವವೂ ಒಂದು.

ಯಾವುದೇ ಸಂಪ್ರದಾಯವಾಗಿರಲಿ ಅಥವಾ ಆಚರಣೆಯಾಗಿರಲಿ ಅದು ಜನರಿಂದಲೇ ಉಳಿಯಬೇಕು. ಜನರಿಂದಲೇ ಅಳಿಯಬೇಕು. ಅಂಥವುಗಳು ತಮ್ಮ ಅಸ್ತಿತ್ವಕ್ಕಾಗಿ ತೀವ್ರವಾಗಿ ತುಡಿಯುತ್ತಿರುತ್ತವೆ. ಇಂತಹ ಕೆಲವು ಆಚರಣೆಗಳನ್ನು ನಾವು ಸಾಂದರ್ಭಿಕ ಸಿದ್ಧಾಂತ(contextual theory)ದ ಹಿನ್ನೆಲೆಯನ್ನು

ಅವಲೋಕಿಸಬೇಕಾಗುತ್ತದೆ. ಏಕೆಂದರೆ ಆಯಾ ಸಂದರ್ಭಕ್ಕೆ ತಕ್ಕಂತೆ ಅವು ಆಚರಣೆಯಲ್ಲಿ ಗೋಚರಿಸುತ್ತವೆ. ಅಂದರೆ ಅವುಗಳಿಗೆ ನಿರ್ದಿಷ್ಟವಾದ ಕಾಲ ಇದ್ದೇ ಇರುತ್ತದೆ.

'ಯಾವುದೇ ಜಾನಪದ ಪ್ರಕಾರ ಒಂದನ್ನು ಅದು ನಿಜವಾಗಿ ಬಳಕೆಗೊಳ್ಳುವ ವಿಶಿಷ್ಟ ಸಾಮಾಜಿಕ ಸಂದರ್ಭದ ಹಿನ್ನೆಲೆಯಲ್ಲಿ ಗ್ರಹಿಸುವುದು ಹಾಗೂ ಅದರ ಸಂದರ್ಭ ಮತ್ತು ಕ್ರಿಯೆಗಳ ನಡುವಿನ ಭಿನ್ನತೆಯನ್ನು ಗುರುತಿಸಿ ಅಭ್ಯಸಿಸುವುದು ಈ ಸಿದ್ಧಾಂತದ ಕೆಲಸ. 'ಪ್ಯಾರಿ-ಲಾರ್ಡ್' ಅವರ ಮೌಖಿಕ ಸೂತ್ರಾತ್ಮಕ ಸಿದ್ಧಾಂತವು ಮೊದಲ ಬಾರಿಗೆ ಜಾನಪದ ಪಠ್ಯಗಳ ಸಂದರ್ಭದತ್ತ ಗಮನ ಹರಿಸಿತು. ಅದೇ ಸುಮಾರಿಗೆ ಮಲಿನೋಸ್ಕಿಯಂತಹ ಮಾನವ ಶಾಸ್ತ್ರಜ್ಞರು ಟ್ರೋಬ್ರಿಯಾಂಡ್ ದ್ವೀಪವಾಸಿಗಳ ಬಗೆಗೆ ನಡೆಸಿದ ಅಧ್ಯಯನದ ಸಂದರ್ಭದಲ್ಲಿ ಆ ದ್ವೀಪವಾಸಿಗಳು ಜನಪದ ಕತೆಗಳನ್ನು ಕೆಲವು ಋತುಗಳಲ್ಲಿ ದಿನದ ನಿಗದಿತ ಸಮಯದಲ್ಲಿ ಹಾಗೂ ಕೆಲವೊಂದು ಸಾಮಾಜಿಕ ಸಂದರ್ಭದಲ್ಲಿ ಮಾತ್ರ ನಿರೂಪಿಸುವುದನ್ನು ಗುರುತಿಸಿದ್ದಾರೆ. (claus, Korom 1991) ಹೀಗೆ ಮಲಿನೋಸ್ಕಿಯವರು ಒಂದು ಜನಪದ ಪ್ರಕಾರಕ್ಕೂ ಅದು ಪ್ರಕ್ರಿಯಾತ್ಮಕಗೊಳ್ಳುವ ಸಂದರ್ಭಕ್ಕೂ ಸಂಬಂಧವನ್ನು ಕಲ್ಪಿಸಿದರು. ಪ್ರದರ್ಶನವೊಂದು ಸಾಕಾರಗೊಳ್ಳುವ ಸಂದರ್ಭವನ್ನು ಸೂಕ್ಷ್ಮವಾಗಿ ಗಮನಿಸದೆ ನಡೆಸುವ ಪಠ್ಯ ಸಂಗ್ರಹ ನಿರ್ಜೀವವಾಗಿರುತ್ತದೆ ಎಂಬ ತಿಳುವಳಿಕೆ ಗಟ್ಟಿಗೊಂಡಿರುತ್ತದೆ. ಯಂಗ್ ಟರ್ಕ್ಸ್ ಎಂದು ಕರೆಯಲಾಗುತ್ತಿದ್ದ ಅಮೆರಿಕನ್ ತರುಣ ವಿದ್ವಾಂಸರಾದ ರೋಜರ್ ಅಬ್ರಾಹಾಂ, ಡಾನ್ ಬೆನ್ ಅಮೋಸ್ , ಅಲೆನ್ ಡಂಡೆಸ್, ರಾಬರ್ಟ್ ಜಾರ್ಜಸ್, ಕೆವೆತ್ ಗೋಲ್ಡ್ ಸ್ಟೀನ್ ಮುಂತಾದವರನ್ನು ಈ ಹೊಸ ಆಲೋಚನೆ ಒಂದು ಗೂಡಿಸಿತು. ಇವರು ತಮ್ಮ ಹಿಂದಿನವರಂತಲ್ಲದೆ ಸಂಸ್ಕೃತಿಗಳ ಅಖಂಡ ಸತ್ಯಗಳಿಂದ ನಿರ್ದೇಶಿತರಾಗಿ ತಮಗೆ ಮುಕ್ತವೆನಿಸಿದ ಎಲ್ಲವನ್ನು ಪೂರಕ ಶಾಸ್ತ್ರ, ಶಿಸ್ತುಗಳ ಅಧ್ಯಯನ, ವಿಧಾನಗಳಿಂದ ಗ್ರಹಿಸಿದರು. ಮಾನವಶಾಸ್ತ್ರ, ಭಾಷಾವಿಜ್ಞಾನ, ಮನೋವಿಜ್ಞಾನ ಹಾಗೂ ಸಮಾಜಶಾಸ್ತ್ರಗಳ ಪರಿಕಲ್ಪನೆಗಳನ್ನು ಎರವಲಾಗಿ ಪಡೆದು ಅವನ್ನು ಜಾನಪದ ಪರಂಪರೆಗೆ ಅನ್ವಯಿಸಲು ನೋಡಿದರು. ಇದರ ಫಲವಾಗಿ ಜಾನಪದರಲ್ಲಿ ಸ್ಥಿರ ಪಠ್ಯದ ಕಲ್ಪನೆ ಸಾಧುವಲ್ಲವೆಂದೂ ಅದು ಸಮಯ, ಸಂದರ್ಭ, ಪ್ರದರ್ಶಕ, ಹಾಗೂ ಪ್ರೇಕ್ಷಕರಿಗೆ ಹೊಂದಿಕೊಂಡು ಭಿನ್ನ ರೂಪವನ್ನು ತಾಳುತ್ತದೆ ಎಂಬ ನಿಲುವು ಪ್ರಕಟವಾಯಿತು. ಈ ಆಲೋಚನೆಯೇ ಸಾಂದರ್ಭಿಕ ಸಿದ್ಧಾಂತಕ್ಕೆ ಪ್ರೇರಕವಾಯಿತು."[೨]

ಇವತ್ತಿನ ಪ್ರಸ್ತುತ ಸಂದರ್ಭದಲ್ಲಿ ವಿವರಿಸುವುದಾದರೆ ಎಲ್ಲ ಜನಪದ ಪ್ರಕಾರಗಳು ತಮ್ಮೊಳಗೇ ಅನೇಕ ಮಾರ್ಪಾಡುಗಳನ್ನು ಹೊಂದಿವೆ ಎಂದರೆ ಇದರರ್ಥ, ಹಿಂದಿನ ದಿನದಲ್ಲಿದ್ದ ಸಂಪ್ರದಾಯ, ಆಚರಣೆಗೂ ಸಮಕಾಲೀನ ಸಂದರ್ಭದ ಆಚರಣೆಗೂ ಸಾಕಷ್ಟು ಅಜಗಜಾಂತರವಿರುತ್ತದೆ.

ನಮ್ಮ ಪೂರ್ವಜರು ಯಾವುದೋ ಒಂದು ಒಳ್ಳೆಯ ಆಶಯದಿಂದ, ಪರೋಪಕಾರಾರ್ಥವಾಗಿ, ಲೋಕಕಲ್ಯಾಣಕ್ಕಾಗಿ ಇಂಥವುಗಳನ್ನು ಪೋಷಿಸಿಕೊಂಡು ಬರುತ್ತಿದ್ದರು. ಅವರಲ್ಲಿ ಅಂತಹ ಅನನ್ಯ ಕಾಳಜಿ

ಇತ್ತು. ಆದರೆ ಜನರು ನಾಜೂಕಾದಂತೆಲ್ಲ ಇಂತಹ ಗೊಡ್ಡು ಸಂಪ್ರದಾಯಗಳಿಂದ ಆಗುವ ಪ್ರಯೋಜನವಾದರೂ ಏನು? ಎಂಬಿತ್ಯಾದಿ ಅಂಶಗಳನ್ನು ಹೊಂದುವುದರ ಜತೆಗೆ ತೀರಾ ಅಸಡ್ಡೆ ಮನೋಭಾವವನ್ನು ಹೊಂದಿದ್ದಾರೆ ಎಂಬ ಅಂಶವನ್ನು ನಾನು ಇಲ್ಲಿ ಪ್ರಸ್ತಾಪಿಸುತ್ತೇನೆ.

ಏಕೆಂದರೆ ಇಂದಿನ ಸುಶಿಕ್ಷಿತ ಜನರಿಗೆ ಇವು ಯಾವುವು ಬೇಕಾಗಿಲ್ಲ. ಅವರಿಗೆ ಇವೆಲ್ಲ ಮೌಢ್ಯ, ಅರ್ಥಹೀನ ಆಚರಣೆಗಳೆಂದು ಪರಿಗಣಿಸಿರುವುದು ವಿಪರ್ಯಾಸವೇ ಸರಿ. 'ನೈಸರ್ಗಿಕ ಶಕ್ತಿಯನ್ನು ವೃದ್ಧಿಗೊಳಿಸುವ, ನಿಸರ್ಗದೊಡನೆ ಗೆಳೆತನ ಬೆಳಸುವ ಉದ್ದೇಶದಿಂದ ವಿಧಿ ಕ್ರಿಯೆಗಳು ಉಗಮಗೊಳ್ಳುತ್ತವೆ. ಬಿತ್ತನೆ, ಕಟಾವು, ಒಕ್ಕಣೆ ಋತುಮಾನ ಸಾರಿಯಾದ್ದರಿಂದ ಅವು ವಿಧಿಕ್ರಿಯೆಗಳಾಗವು. ಆ ಕೃಷಿ ಕರ್ಮಗಳಿಗೆ ಸಂಬಂಧಿಸಿದ ಕುಣಿತ, ಹಾಡು, ಹಬ್ಬ, ಹರಿದಿನಗಳು ವಿಧಿ ಕ್ರಿಯೆಗಳಾಗುತ್ತವೆ. ಮುಂದೆ ಅವೇ ಸಂಪ್ರದಾಯಗಳಾಗುತ್ತವೆ.”[೩]

“ಒಂದು ಸಂಪ್ರದಾಯ ಉತ್ತಮ, ಮತ್ತೊಂದು ಅಧಮ ಎಂದು ಹೇಳುವುದು ಸರಿಯಲ್ಲ. ಒಬ್ಬನಿಗೆ ಹಿತವಲ್ಲದುದು ಮತ್ತೊಬ್ಬನಿಗೆ ಹಿತವಾಗಿ ಕಾಣಬಹುದು. ಸರಿತಪ್ಪುಗಳು ಸಾಪೇಕ್ಷವಾದುವು. ಯಾವೊಂದು ಸಮಾಜವೇ ಆಗಲಿ ತನ್ನಲ್ಲಿ ರೂಢಿಯಲ್ಲಿರುವ ಸಂಪ್ರದಾಯ ಸರಿ ಎಂದರೆ ಸರಿ ತಪ್ಪೆಂದರೆ ತಪ್ಪು. ಸಮಾಜವಿರೋಧಿ ಪದ್ಧತಿಗಳು ಯಾವಾಗಲೂ ತ್ಯಾಜ್ಯವೆಂದೇ ಹೇಳಬೇಕು. ಅಷ್ಟೇ ಅಲ್ಲ ಆದಿಮಾನವನ ಅನೇಕ ಸಂಪ್ರದಾಯಗಳು ಇಂದಿಗೂ ನಾಗರಿಕ ಸಮಾಜದಲ್ಲಿ ಜೀವಂತವಾಗಿವೆ. ಇವು ಪ್ರಾಚೀನತೆ ಮತ್ತು ನೂತನತೆಗಳನ್ನು ಬೆಸೆಯುವ ಸೇತುಶಕ್ತಿಗಳಾಗಿವೆ; ಜತೆಗೆ ಸಮಾಜದಲ್ಲಿ ಭಾವುಕತೆಯನ್ನು ಪ್ರೇರಿಸುವ ಸ್ಫೂರ್ತಿ ಶಕ್ತಿಗಳಾಗಿವೆ. ಈ ದೃಷ್ಟಿಯಿಂದಲೂ ಮೇಲು ಕೀಳುಗಳ ಭಾವನೆಯನ್ನು ತಿರಸ್ಕರಿಸಬೇಕಾಗುತ್ತದೆ.”[೪] ಕೃಷಿ ಸಂಸ್ಕೃತಿ ಪ್ರಧಾನವಾಗಿರುವ ಸಮಾಜದಲ್ಲಿ ಕೃಷಿಗೆ ಸಂಬಂಧಿಸಿದ ಆಚರಣೆಗಳು ಅನಿವಾರ್ಯ. ಅನೇಕ ಗ್ರಾಮೀಣ ಧಾರ್ಮಿಕ ಸಂಪ್ರದಾಯಗಳು ಮತ್ತು ಆಚರಣೆಗಳು ನಿಸರ್ಗ ಮೂಲವಾದವುಗಳು.

'ಕೃಷಿಯ ಬೆಳವಣಿಗೆಗೂ ಹಳ್ಳಿ ಹಾಗೂ ಹಳ್ಳಿಯ ದೇವತೆಗಳ ಹುಟ್ಟಿಗೂ ತೀರಾ ಹತ್ತಿರದ ಸಂಬಂಧವಿದೆಯೆಂಬುದು ಸುಸಷ್ಟ. ದಕ್ಷಿಣ ಇಂಡಿಯಾದ ಹಲವಾರು ದೇವತೆಗಳು ಸಾಮಾನ್ಯವಾಗಿ ಸ್ತ್ರೀಯರೆಂಬುದನ್ನು ಮರೆಯುವಂತಿಲ್ಲ. ಫಲಶಕ್ತಿ ಹಾಗೂ ಸಂತಾನಾಭಿವೃದ್ಧಿಗೆ ಸ್ತ್ರೀಯರೇ ಮುಖ್ಯ ಕಾರಣರಾದ್ದರಿಂದ, ಇಡೀ ಜಗತ್ತಿನಲ್ಲೆಲ್ಲ ಭೂಮಿ ಹಾಗೂ ಕೃಷಿ ದೇವತೆಗಳನ್ನು ಸ್ತ್ರೀಯರೆಂದೇ ಪರಿಗಣಿಸಲಾಗಿದೆ. ಆದಿ ಮಾನವ ಜನಾಂಗಗಳಲ್ಲಿ ಕೃಷಿ ಸ್ತ್ರೀಯರ ಉದ್ಯೋಗವಾಗಿದ್ದುದರಿಂದ ಕೃಷಿ ದೇವತೆಗಳೆಲ್ಲರೂ ಸ್ತ್ರೀಯರೇ ಆಗಿರಬೇಕೆಂದು ತೋರುತ್ತದೆ.'[೫]

ಇಂದಿನ ಸಂಕೀರ್ಣ ಬದುಕಿನಲ್ಲಿ ಎಲ್ಲವೂ ಬರೀ ನೆಪಕ್ಕೆ ಎನ್ನುವಂತೆ ಕೇವಲ ರೂಢಿಯಲ್ಲಿ ಉಳಿದಿವೆ. ಆದರೆ ಬರುಬರುತ್ತಾ ಅನೇಕ ವರ್ಷಗಳು ಗತಿಸಿದ ಮೇಲೆ ಇಂತಹ ಎಲ್ಲಾ ಸಂಪ್ರದಾಯಾಚರಣೆಗಳು

ನಶಿಸಿ ಹೋಗಬಹುದು. ಇವುಗಳು ನಶಿಸಿ ಹೋಗದಂತೆ ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಂಡು ಬರುವ ಕಾಳಜಿ ನಮ್ಮೆಲ್ಲರ ಗುರುತಿನ ಜವಾಬ್ದಾರಿಯಾಗಿದೆ. ಬರೀ ಏಕ ವ್ಯಕ್ತಿಯಿಂದ ಅಥವಾ ಯಾವುದೋ ಒಂದು ನಿರ್ದಿಷ್ಟ ಸಮುದಾಯದವರಿಂದ ಮಾತ್ರ ಸಾಧ್ಯವಿರುವುದಿಲ್ಲ. ಸಮಾಜದಲ್ಲಿರುವ ಎಲ್ಲ ವರ್ಗಗಳ ಜನರಿಂದ ಮಾತ್ರ ಇಂತಹ ಕೆಲಸಗಳು ನಡೆಯುತ್ತವೆಯೆಂದು ಹೇಳಬಹುದು. ಆದರೆ ಜನರೇ ನಿರ್ಲಕ್ಷ್ಯ ಮನೋಭಾವವನ್ನು ತೋರಿದರೆ ಯಾರನ್ನು ದೂಷಿಸುವುದು?! ಅಲ್ಲವೆ? ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕನೂ ಸಹ ಎಚ್ಚೆತ್ತುಕೊಳ್ಳಬೇಕು. ಆದರೆ ಇತ್ತೀಚಿನ ಸುಶಿಕ್ಷಿತ ಸಮಾಜದಲ್ಲಿರುವ ಜನರು ತಳೆದಿರುವ ಅನಾದರಣೀಯ ಧೋರಣೆ ಇಂದು ನಮಗೆ ಸಾರ್ವತ್ರಿಕವಾಗಿ ಕಂಡುಬರುತ್ತದೆ. ಏನಾದರೂ ಸರಿ ಇವುಗಳನ್ನು ಉಳಿಸಿ ಹಾಗೂ ಬೆಳೆಸಿಕೊಂಡು ಬರುವ ಪರಿಪಾಠವನ್ನು ಇಟ್ಟುಕೊಂಡು ಬಂದಿರುವ ಜನರು ಒಂದೆಡೆಯಾದರೆ, ಅವುಗಳನ್ನು ಸಂರಕ್ಷಿಸುವ ಮಾತಿರಲಿ. ಅವುಗಳಿಂದ ದೂರ ಉಳಿಯುವ ಜನರು ಅನೇಕರಿದ್ದಾರೆ.

ಇಂತಹ ವೈರುಧ್ಯಗಳ ನಡುವೆ ಇವು ತಮ್ಮ ಅಸ್ತಿತ್ವಕ್ಕಾಗಿ ತೀವ್ರ ಪ್ರಯತ್ನವನ್ನು ಮಾಡಬೇಕಿರುತ್ತದೆ. ಇಲ್ಲದಿದ್ದರೆ ಇವು ಅವಸಾನ ಹೊಂದುವುದು ಖಚಿತ. ಕೇವಲ ನಮ್ಮ ಅನುಕೂಲಕ್ಕಾಗಿ ಅವುಗಳನ್ನು ನೋಡದೆ, ಸಾರ್ವತ್ರಿಕವಾಗಿ ಅವುಗಳ ಮಹತ್ವ ಮತ್ತು ಪ್ರಯೋಜನಗಳ ಉದ್ದೇಶದಿಂದ ನೋಡಬೇಕು. ಅಂದಾಗ ಮಾತ್ರ ಇಂತಹ ಸಂಪ್ರದಾಯ, ಆಚರಣೆಗಳಿಗೆ ಮಹತ್ವ ಸಿಗುತ್ತದೆ.

ಇಪ್ಪತ್ತೊಂದನೆಯ ಶತಮಾನದಲ್ಲಿ ನಾವಿದ್ದರೂ ಸಹ ಇಂಥ ಆಚರಣೆಗಳನ್ನು ಮಾಡಬಹುದೆ? ಇವೆಲ್ಲ ಗೊಡ್ಡು ಸಂಪ್ರದಾಯಗಳು ಮೌಢ್ಯ ಕಂದಾಚಾರಗಳು ಎಂಬಿತ್ಯಾದಿ ಅಂಶಗಳು ನಮ್ಮ ಸಮಾಜದಲ್ಲಿ ಗೋಚರಿಸುತ್ತವೆ. ಅದು ಸಹಜವೂ ಕೂಡ. ಆದರೆ ಸ್ವಾಸ್ಥ್ಯ ಸಮಾಜದಲ್ಲಿ ಇವೆಲ್ಲವುಗಳು ಜನರ ಮನಸ್ಸಿನಲ್ಲಿ ಆಳವಾಗಿ ಬೇರೂರಿರುತ್ತವೆ. ನಂಬಿಕೆಗಳೇ ಜೀವನಕ್ಕೆ ಮೂಲಾಧಾರ. ನಂಬಿಕೆಯಿಲ್ಲದೆ ಹೋದರೆ ಜೀವನ ಅರ್ಥರಹಿತವಾಗುತ್ತದೆ.

ಟಿಪ್ಪಣಿಗಳು

೧. ಜಿ.ಕೆ.ಗೋವಿಂದರಾವ್ ಸಂಪ್ರದಾಯ ಉಲ್ಲಂಘನೆಯೇ ಕರ್ತವ್ಯ, ಪ್ರಜಾವಾಣಿ, ಶುಕ್ರವಾರ, ೭ನೇ ಜುಲೈ, ೨೦೦೬, ಪು.೬

೨. ಎ.ವಿ.ನಾವಡ, ಸಾಂದರ್ಭಿಕ ಸಿದ್ಧಾಂತ, *ಜಾನಪದ ಕೈಪಿಡಿ,* ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.೫೨೦

೩. ಡಾ.ದೇ.ಜವರೇಗೌಡ, ಜಾನಪದ ಅಧ್ಯಯನ, ಚೇತನ ಬುಕ್‌ಹೌಸ್, ಮೈಸೂರು, ೧೯೯೧, ಪು.೩೭೨

೪. ಅದೇ, ಪು.೩೭೩

೫. Villiage gods of South India white head, Pp.150

ಅಧ್ಯಾಯ ೭

ಸಮಾರೋಪ

೭

ಸಮಾರೋಪ

ಕೃಷಿಯಾಧಾರಿತ ನಮ್ಮ ನಾಡಿನಲ್ಲಿ ಕೃಷಿಗೆ ಸಂಬಂಧಪಟ್ಟಂತೆ ಅನೇಕ ಬಗೆಯ ಸಂಪ್ರದಾಯಗಳು, ಆಚರಣೆಗಳು ರೂಢಿಯಲ್ಲಿವೆ. ಪ್ರತಿ ವರುಷವೂ ರೈತರು ಅವುಗಳನ್ನು ಚಾಚೂ ತಪ್ಪದೇ ಪಾಲಿಸಿಕೊಂಡು ಬಂದಿರುತ್ತಾರೆ. ಅವುಗಳನ್ನು ಆಚರಣೆಗೆ ತರುವಲ್ಲಿ ಸಾಕಷ್ಟು ಪರಿಶ್ರಮವನ್ನು ಪಟ್ಟಿರುತ್ತಾರೆ. ನೀರು ಸಕಲ ಜೀವಿಗಳಿಗೂ ಮೂಲಾಧಾರ ಅದಿಲ್ಲದೆ ಹೋದರೆ ಇಡೀ ಜಗತ್ತೇ ಹಾಹಾಕಾರದಿಂದ ತುಂಬಿ ತುಳುಕುತ್ತದೆ. ಪ್ರತಿವರುಷವೂ ಕಾಲಕ್ಕೆ ತಕ್ಕಂತೆ ಮಳೆಬರಬೇಕು, ಮಳೆ ಬಾರದೇ ಹೋದರೆ ಇದರ ವ್ಯತಿರಿಕ್ತ ಪರಿಣಾಮ ರಾಜ್ಯ, ದೇಶದ ಮೇಲೆ ಬೀಳುತ್ತದೆ. ರೈತಾಪಿ ವರ್ಗದವರು ಮಳೆಗಾಗಿ ಆಚರಿಸುವ ಆಚರಣೆಗಳ ಮೊರೆ ಹೋಗುತ್ತಾರೆ.

ಆದರೆ ವರುಷಗಳು ಗತಿಸಿದಂತೆ ಮಳೆಗಾಲವೂ ಸಹ ರೈತನ ಜತೆ ಜೂಜಾಟವಾಡುತ್ತಿದೆ. ಒಮ್ಮೆ ಅತಿವೃಷ್ಟಿ, ಮತ್ತೊಮ್ಮೆ ಅನಾವೃಷ್ಟಿ ಹೀಗಾದಾಗ ರೈತರು ಒಕ್ಕಲುತನದಿಂದ ಹೇಗೆ ಜೀವನ ನಿರ್ವಹಣೆಯನ್ನು ಮಾಡಿಯಾರು? ಅವರು ಜೀವನದಲ್ಲಿ ಅನುಭವಿಸುವ ಕಷ್ಟ ಹೇಳತೀರದು. ಇವೆಲ್ಲವುಗಳಿಂದ ಮುಕ್ತವಾಗಬೇಕಾದರೆ ಮಳೆರಾಯನಿಗೆ ಮೊರೆ ಹೋಗುವುದೊಂದೇ ದಾರಿ. ಮಳೆ ರೈತನಿಗೆ ಬೇಕೇ ಬೇಕು. ಆದ್ದರಿಂದ ಅದು ಬರದಿದ್ದಾಗ, ಮಳೆ ಬರುವಂತೆ ಮಾಡಲು ಅವಿರತ ಪ್ರಯತ್ನಿಸುತ್ತಾನೆ. ದೇವರನ್ನು ಪ್ರಾರ್ಥಿಸುತ್ತಾನೆ. ಪೂಜಿಸುತ್ತಾನೆ. ಮರೆತು ಹೋಗಿರುವ ಅನೇಕ ದೇವರುಗಳನ್ನು ಪೂಜೆ ಮಾಡುತ್ತಾನೆ. ಹಿಂದಿನಿಂದಲೂ ಅವ್ಯಾಹತವಾಗಿ ನಡೆಸಿಕೊಂಡು ಬಂದಿರುವ ಸಂಪ್ರದಾಯಬದ್ಧ ಆಚರಣೆಯಲ್ಲಿ ತೊಡಗುತ್ತಾನೆ. ಮಾನವಶಾಸ್ತ್ರಜ್ಞರ ಪ್ರಕಾರ "ಇಂತಹ ಆಚರಣೆಗಳು 'ಮಂತ್ರವಿದ್ಯೆ' ಎಂದು ಕರೆಸಿಕೊಳ್ಳುತ್ತದೆ. ಪ್ರಾಚೀನ ಮಾನವನಿಗೆ ತನ್ನದೊಂದು ಕೆಲಸ ಸಾಧಿಸಿಕೊಳ್ಳಲು ಮಂತ್ರವಿದ್ಯೆಗೆ ತೊಡಗಬೇಕು, ಶರಣಾಗಬೇಕು ಎಂಬ ಭರವಸೆಯಿತ್ತು. ಆ ವಿದ್ಯೆಯು ನಿರೀಕ್ಷಿತ ಫಲ ಕೊಡುತ್ತದೆಂಬ ನಂಬಿಕೆಯಿತ್ತು." (Beals and Hoijer- An Introduction to Anthropology 1971, Pp.461)

"ಯಾಕೆ ಹೋದವು ಮಳೆಗಳು
ಲೋಕ ಸಾಕಲಾರುದಕೆ ಹೋದವು |

ಪುಣ್ಯವಿಲ್ಲದ ನಾರಿ ಪುರುಷನ ಬೈದರೆ
ಅನ್ಯಾಯಕೆ ಮಳೆ ಹೋದವು |
ಒಕ್ಕಲುತನ ಮಕ್ಕಳಂತೆ ತಾವು ತಮ್ಮ
ಮಕ್ಕಳುನ ಮಾರ್ಯಾರಂತೆ |
ನಂದಿಯೇರಿಕೊಂಡು ಬಂದಂಥ
ಮಳೆರಾಯ ಹಿಂದಕೆ ಹೋದನಂತೆ |"[೧]

ಕಾಲಕ್ಕೆ ತಕ್ಕಂತೆ ಮಳೆ ಬಾರದಿದ್ದಾಗ ರೈತಾಪಿ ವರ್ಗದ ಹೆಂಗಳೆಯರ ಬಾಯಲ್ಲಿ ಬರುವ ಹಾಡುಗಳ ತುಣುಕುಗಳು ಈ ಸಾಲುಗಳು. ಮಳೆ ಬರದಿದ್ದರೆ ಬೆಳೆಯನ್ನು ಪಡೆಯಲು ಸಾಧ್ಯವಿಲ್ಲ. ಬೆಳೆಯಿಲ್ಲದೆ ಹೋದರೆ ಬದುಕು ಅತಂತ್ರಸ್ಥಿತಿಗೆ ಬರುತ್ತದೆ. ಎಲ್ಲಾ ವರ್ಗದ ಜನರು ನೆಮ್ಮದಿ, ಸುಖ ಸಮೃದ್ಧಿಯಿಂದ ಬಾಳಬೇಕೆಂದರೆ ಮಳೆ ಬರಲೇಬೇಕು. ಒಂದು ವೇಳೆ ಮಳೆ ಬರದಿದ್ದರೆ ಜನಪದರು ನಾನಾ ವಿಧದಲ್ಲಿ ಕಾರಣವನ್ನು ಹುಡುಕಿಕೊಳ್ಳುತ್ತಾರೆ. 'ಲೋಕ ಸಾಕಲಾರದ್ದಕ್ಕಾಗಿ ಮಳೆ ಹೋದವು' ಎಂದು ಭಾವಿಸಿಕೊಂಡರೆ, ಮತ್ತೊಮ್ಮೆ ಪುಣ್ಯವಿಲ್ಲದ ನಾರಿ ಪುರಷನ ಬೈದ ಅನ್ಯಾಯಕ್ಕಾಗಿ ಮಳೆ ಹೋದವು' ಎಂದು ಹಪಹಪಿಸುತ್ತಾರೆ. ರೈತಾಪಿ ವರ್ಗದವರು ಸಕಾಲಕ್ಕೆ ತಕ್ಕಂತೆ ಮಳೆ ಬಾರದಿರುವುದರಿಂದ ತಮ್ಮ ಮಕ್ಕಳನ್ನು ಮಾರುವ ಹಂತಕ್ಕೆ ಬಂದಿದ್ದಾರೆ ಎನ್ನುವ ದುರಂತ ಜೀವನವನ್ನು ನೆನೆಯುತ್ತಾರೆ. ಜನಪದರ ಬಾಳುವೆ ಅಥವಾ ಬದುಕು ಹಸನಾಗಬೇಕೆಂದರೆ ಮಳೆ ಬಂದೇ ತೀರಬೇಕು. ಇದು ಕೃಷಿಕರೆಲ್ಲರಿಗೂ ಸಂಜೀವಿನಿ ಆಗಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಎರಡನೆಯ ನಾಗವರ್ಮ ಹೇಳುವಂತೆ "ಸರ್ವಭೂತಾಧಾರಂ ಮಳೆಯುಂ"

ಅದಕ್ಕೋಸ್ಕರ ಮಳೆಗಾಗಿ ಪರಿತಪಿಸುವ, ಹಂಬಲಿಸುವ, ಅನೇಕ ಆಚರಣೆಗಳು, ಸಂಪ್ರದಾಯಗಳು ಜನರ ಮನಸ್ಸಿನಲ್ಲಿ ಆಳವಾಗಿ ಬೇರುಬಿಟ್ಟಿರುತ್ತವೆ. ಇವೆಲ್ಲವುಗಳನ್ನು ಆಯಾ ಋತುಮಾನ, ಸಂದರ್ಭಕ್ಕೆ ತಕ್ಕಂತೆ ಆಚರಣೆಗೆ ತರುವಲ್ಲಿ ಇವುಗಳಿಗೆ ಜೀವಕಳೆ ನೀಡಬೇಕು. ಶೈಕ್ಷಣಿಕ ಪ್ರಗತಿಯಾದಂತೆಲ್ಲಾ ತಮ್ಮ ಹಳೆಯ ಆಚರಣೆ ಮತ್ತು ಜೀವನ ವಿಧಾನಗಳ ಬಗ್ಗೆ ಜುಗುಪ್ಸೆ ಹುಟ್ಟುವುದು ಸಹಜ. ಆದರೆ ಪರಿಣಾಮವಾಗಿ ಹೊಸ ತಲೆಮಾರಿನವರಲ್ಲಿ ತಮ್ಮ ಜನಾಂಗದ ಪರಂಪರಾಗತ ನಂಬಿಕೆ, ಆಚರಣೆ, ಮೌಲ್ಯಗಳನ್ನು ಕಾಣಲಾಗುವುದಿಲ್ಲ.

ಇತ್ತೀಚಿನ ದಿನಗಳಲ್ಲಿ ಆಧುನಿಕತೆಯ ಗಾಳಿ ಪಸರಿಸಿ ಗಮನಾರ್ಹ ಬದಲಾವಣೆಗಳಿಗೆ ಕಾರಣವಾಗಿದೆ. ಸಹಸ್ರಾರು ವರುಷಗಳಿಂದ ಅನೂಚಾನವಾಗಿ ನಡೆದುಬಂದ ಆಚರಣೆ, ನಂಬಿಕೆ, ಜೀವನಶೈಲಿ ಮುಂತಾದವು ಒಮ್ಮಿಂದೊಮ್ಮೆಲೇ ಆಧುನಿಕತೆಯ ಹೊಡೆತಕ್ಕೆ ಸಿಕ್ಕಿ ಕುಸಿಯುತ್ತಿವೆ. ಸುಧಾರಣೆಯ ಹೆಸರಿನಲ್ಲಿ ಸಾಂಸ್ಕೃತಿಕ ಬೇರುಗಳನ್ನು ನಿರ್ಮೂಲನಗೊಳಿಸುವ ಪ್ರಕ್ರಿಯೆಗಳು ನಡೆದಿವೆ.

ಆಯಾ ಸಮುದಾಯದವರು ತಮ್ಮದೇ ಆದ ನಿರ್ದಿಷ್ಟ ಪರಿಧಿಯೊಳಗೆ ಎಲ್ಲಾ ರಿಚ್ಯುಯಲ್‌ಗಳನ್ನು ಬಳಕೆಗೆ ತರುತ್ತಾರೆ. ಅನೇಕ ತಲೆಮಾರುಗಳಿಂದ ಇವು ಅವ್ಯಾಹತವಾಗಿ ಓತಪ್ರೋತವಾಗಿ ಯಾವುದೇ ಅಡಚಣೆಯಿಲ್ಲದೆ ಸಾಗಿ ಬಂದಿರುತ್ತವೆ. ಸಂಬಂಧಪಟ್ಟ ಸಮುದಾಯದವರೂ ಸಹ ಅವನ್ನು ಜತನದಿಂದ ಪಾಲಿಸಿಕೊಂಡು ಬಂದಿರುವುದು ಸಾಮಾನ್ಯ ಸಂಗತಿ. ಇವತ್ತಿನ ಸಂದರ್ಭದಲ್ಲಿ ಹೇಳಬೇಕೆಂದರೆ ಪ್ರತಿಯೊಂದು ಆಚರಣೆಗಳೂ ಸಹ ಅವನತಿಯ ಹಾದಿಯನ್ನಿಡಿದಿವೆ. ಇದಕ್ಕೆಲ್ಲ ಹೊಣೆಯಾರು? ಇಂತಹ ಪ್ರಶ್ನೆಗಳಿಗೆ ಉತ್ತರಿಸುವುದು ಜಟಿಲವೆಂದೇ ಹೇಳಬೇಕಾಗುತ್ತದೆ. ಯಾರನ್ನೂ ದೂಷಿಸಲು ಬಾರದು. ಬದಲಾಗುತ್ತಿರುವ ಜನಕ್ಕೆ ತಕ್ಕಂತೆ ಎಲ್ಲವೂ ಅನಿವಾರ್ಯವಾಗಿ ಒಗ್ಗಿಕೊಂಡು ಹೋಗಬೇಕು. ಬರಿಯ ಆಚರಣೆಗಳಷ್ಟೆ ಅಲ್ಲ. ಜಾನಪದದ ಎಲ್ಲ ಪ್ರಕಾರಗಳು ಇಂದು ರುಣ್ಣಾವಸ್ಥೆಯನ್ನು ತಲುಪಿದೆ. ಕಾರಣ ಆಧುನಿಕ ಮನರಂಜನಾ ಮಾಧ್ಯಮಗಳು. ಇವುಗಳು ಜನರಿಗೆ ಎಷ್ಟು ಪ್ರೇರಕವಾಗಿವೆಯೋ ಅದರ ಎರಡರಷ್ಟು ಮಟ್ಟಿಗೆ ಮಾರಕವಾಗಿ ಪರಿಣಮಿಸಿವೆ. ಹಿಂದಿದ್ದ ಜನಪದರ ಆಶಯ ಇಂದು ಕ್ವಚಿತ್ ಆಗುತ್ತಿರುವುದು ವಿಪರ್ಯಾಸ.

ಟಿಪ್ಪಣಿ

೧. ಡಾ.ಎಂ.ಜಿ.ಈಶ್ವರಪ್ಪ ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಪು.೧೬೯

ಅನುಬಂಧಗಳು

೧. ನಕ್ಷೆಗಳು


೨. ವಕ್ರಗಳು

೩. ಗ್ರಂಥಋಣ

೪. ಛಾಯಾಚಿತ್ರಗಳು


೧. ನಕ್ಷೆಗಳು

ಧಾರವಾಡ ಜಿಲ್ಲೆ




೧. ಬಂಕಾಪುರ
೨. ಸಂಕ್ಲೀಪುರ
೩. ಹರ್ಲಾಪುರ
೪. ಕಳಸ
೫. ಶಿಶುವಿನಹಾಳ
೬. ಕುಂದಗೋಳ
೭. ಅದರಗುಂಚಿ
೮. ಬಾಡ
೯. ಸಲಿಕಿನಕೊಪ್ಪ
೧೦. ಮನ್ಸೂರು

ಹಾವೇರಿ ಜಿಲ್ಲೆ




೧. ಸವಣೂರು
೨. ಯಲವಿಗಿ

ಗದಗ ಜಿಲ್ಲೆ




೧. ಲಕ್ಷ್ಮೇಶ್ವರ
೨. ಶಿರಹಟ್ಟಿ
೩. ಶಿಗ್ಲಿ
೪. ಕಳಸ
೫. ಬೆಳ್ಳಟ್ಟಿ
೬. ಮುಳಗುಂದ
೭. ಲಕ್ಕುಂಡಿ
೮. ಅಬ್ಬಿಗೇರಿ

ಬಿಜಾಪುರ ಜಿಲ್ಲೆ




೧. ಬಿಜಾಪುರ
೨. ಮದುಬಾಯಿ
೩. ದೇವರಹಿಪ್ಪರಗಿ
೪. ಸಾತೀಹಾಳ
೫. ದಿಂಡ್ವಾರ
೬. ಹೂವಿನಹಿಪ್ಪರಗಿ
೭. ಡವಳಗಿ
೮. ಜಾವಡಗಿ

ಬಾಗಲಕೋಟೆ ಜಿಲ್ಲೆ



೧. ಲೋಕಾಪುರ
೨. ಕೆರೂರ
೩. ಬಾದಾಮಿ
೪. ಕಮತಗಿ
೫. ಅಮ್ಮಿನಗಡ
೬. ಸುಳೇಬಾವಿ
೭. ಶಿರೂರ
೮. ಬೆನಕಟ್ಟಿ
೯. ಅನಗವಾಡಿ
೧೦. ತುಂಬ್ರಯಟ್ಟಿ
೧೧. ನೆಕ್ರಗುಂದ
೧೨. ಸೂರಕೊಪ್ಪ
೧೩. ಜಮಖಂಡಿ

ಬೆಳಗಾವಿ ಜಿಲ್ಲೆ



೧. ಕಿತ್ತೂರು
೨. ಇಟಗಿ
೩. ಗಂದಿಗವಾಡ
೪. ಬೈಲಹೊಂಗಲ
೫. ಮುರಗೋಡು
೬. ಮರಕುಂಬಿ
೭. ಮುನವಳ್ಳಿ
೮. ಯರಗಟ್ಟಿ
೯. ಧೂಪದಾಳ
೧೦. ಸುರೇಬಾನ
೧೧. ಮುಳ್ಳೂರ
೧೨. ಕಡ್ಲಿಕೊಪ್ಪ

೨. ವಕ್ತೃವಿವರ

ವಕ್ತೃಗಳ ಹೆಸರು	ವಯಸ್ಸು	ವೃತ್ತಿ	ವಿದ್ಯಾಭ್ಯಾಸ
		ಲಕ್ಷ್ಮೇಶ್ವರ ಶಿರಹಟ್ಟಿ(ತಾ) ಗದಗ(ಜಿ)	
ನಾಗಪ್ಪ ಬಸವಣ್ಣಪ್ಪಕುಂಬಾರ್	೫೩	ಕುಂಬಾರ	೭ನೆಯ ತರಗತಿ
ನೀಲಮ್ಮ ಸುಣ್ಣಗಾರ್	೬೩	ಸುಣ್ಣಗಾರಿಕೆ	ಅನಕ್ಷರಸ್ತರು
ನೀಲಪ್ಪ ಸುಣ್ಣಗಾರ್	೭೩	ಸುಣ್ಣಗಾರಿಕೆ	ಅನಕ್ಷರಸ್ತರು
ಪ್ರೊ.ಬರಿಗಾಲಿ	೬೪	ವಿಶ್ರಾಂತಜೀವನ	ಎಂ.ಕಾಂ
		ಶಿಗ್ಲಿ, ಶಿರಹಟ್ಟಿ(ತಾ)	
ಲಕ್ಷ್ಮವ್ವಯಲ್ಲಪ್ಪತಳವಾರ್	೪೮	ಕೂಲಿ	ಅನಕ್ಷರಸ್ಥರು
ಫಕೀರವ್ವ ಹಾಲಪ್ಪ	೭೩	,,	,,
ಗಂಗಮ್ಮ ರಾಮಣ್ಣ	೩೩	,,	,,
ಶಾಂತಮ್ಮ ಕಲ್ಲಪ್ಪ ತಳವಾರ್	೫೩	,,	,,
ರಾಮಣ್ಣ ಯಮುನಪ್ಪ ತಳವಾರ್	೫೩	,,	,,
ಫಕೀರಮ್ಮ ಯಮುನಪ್ಪ	೮೩	,,	,,
ಗುರಪ್ಪಕರಿಬಸಪ್ಪ ಕುಂಬಾರ್	೬೧	ನಿವೃತ್ತಶಿಕ್ಷಕರು	ಟಿ.ಸಿ.ಎಚ್.
		ಶಿರಹಟ್ಟಿ	
ದ್ಯಾವಕ್ಕ ಹನುಮಪ್ಪ	೪೩	,,	,,
ಬಸವಣ್ಣೆವ್ವ ಹನುಮಂತಪ್ಪ	೪೦	,,	,,
ಸಾವಕ್ಕ ದ್ಯಾಮಣ್ಣ	೩೧	,,	,,
ಹನುಮವ್ವ ದ್ಯಾಮಪ್ಪ	೩೩	,,	,,
		ಸಂಕ್ಲೀಪುರ ಕುಂದಗೋಳ(ತಾ) ಧಾರವಾಡ(ಜಿಲ್ಲೆ)	
ತಿಪ್ಪವ್ವ ದ್ಯಾಮಪ್ಪ ಬಾರಿಕೇರ	೬೩	ಕೂಲಿ	ಅನಕ್ಷರಸ್ತರು

ವಕ್ತೃಗಳ ಹೆಸರು	ವಯಸ್ಸು	ವೃತ್ತಿ	ವಿದ್ಯಾಭ್ಯಾಸ
ಲಕ್ಷ್ಮವ್ವ ನಿಂಗಪ್ಪ	೪೮	,,	,,
ಸರಸವ್ವ ನಾಗಪ್ಪ	೪೩	,,	,,
ದ್ಯಾಮಕ್ಕ ಸಂಗಪ್ಪ	೪೩	,,	,,
	ಹರ್ಲಾಪುರ, ಕುಂದಗೋಳ(ತಾ) ಧಾರವಾಡ(ಜಿ)		
ಚನ್ನವ್ವ ತಳವಾರ (ವಾಲಿಕಾರ)	೬೩	ಕೂಲಿ	ಅನಕ್ಷರಸ್ತರು
ದ್ಯಾವಕ್ಕ	೪೮	,,	,,
ಸಿದ್ದಮ್ಮ	೫೩	,,	,,
	ಕಳಸ, ಕುಂದಗೋಳ(ತಾ) ಧಾರವಾಡ(ಜಿ)		
ಶಾಂತವ್ವ ಬಾರಿಕೇರ	೩೮	ವ್ಯವಸಾಯ	ಅನಕ್ಷರಸ್ತರು
ಗಂಗವ್ವ ಬಾರಿಕೇರ	೩೭	,,	,,
ಗೌರವ್ವ ಅಂಬಿಗೇರ	೪೫	,,	,,
ಗಂಗವ್ವ ಕಂಬ್ರೊಳ್ಳಿ	೪೩	,,	,,
	ಶಿಸುವಿನಹಾಳ, ಶಿಗ್ಗಾಂವಿ(ತಾ) ಹಾವೇರಿ(ಜಿ)		
ನೀಲವ್ವ ಬಾರಿಕೇರ	೫೮	ಕೂಲಿ	ಅನಕ್ಷರಸ್ತರು
ರೇಣಕ್ಕ	೩೮	,,	,,
ಬಸವರಾಜ	೧೯	,,	,,
	ಸವಣೂರು		
ಬಸಮ್ಮ	೫೮	,,	,,
ರತ್ನವ್ವ	೩೮	,,	,,
ಚನ್ನವ್ವ	೨೮	,,	,,
ನಿರ್ಮಲ	೨೫	,,	,,
	ಮುಳುಗುಂದ, ಗದಗ (ತಾ.ಜಿ)		
ಚನ್ನಬಸವ್ವಮಲ್ಲಪ್ಪ ಹಿತ್ತಲಮನಿ	೪೮	ವ್ಯವಸಾಯ, ಸುಣ್ಣಗಾರಿಕೆ	,,
ನೀಲವ್ವ ಶೇಖರಪ್ಪ	೩೧	ಸುಣ್ಣಗಾರಿಕೆ	,,
ಗಂಗವ್ವ ಭರಮಪ್ಪ ಹಿತ್ತಲಮನಿ	೫೩	,,	,,

ವಕ್ತೃಗಳ ಹೆಸರು	ವಯಸ್ಸು	ವೃತ್ತಿ	ವಿದ್ಯಾಭ್ಯಾಸ
ಮಲ್ಲವ್ವ ಬಸಪ್ಪ ಹೊಂಬಳ	೨೯	,,	,,
ಅಕ್ಕವ್ವ ಮಹದೇವಪ್ಪ ಹಿತ್ತಲಮನಿ	೩೮	,,	,,
ಶಿವಗಂಗವ್ವ ಶಂಕ್ರಪ್ಪ	೬೩	,,	,,
	ಅಣ್ಣಿಗೇರಿ, ಗದಗ(ಜಿ)		
ನಿಂಗವ್ವ ಯಲ್ಲಪ್ಪ ದಿವಟರ್	೬೮	ಕೂಲಿ	,,
ರೇಖಾ ಅಮೃತಪ್ಪ	೩೩	,,	,,
ಮಾದೇವಿ ರಮೇಶ	೩೧	,,	,,
	ಲಕ್ಕುಂಡಿ, ಗದಗ(ತಾ.ಜಿ)		
ಲಕ್ಷ್ಮವ್ವ ದೇವಪ್ಪಬಾರಿಕೇರ	೩೮	,,	,,
ಚನ್ನವ್ವ ನಿಂಗಪ್ಪ ಬಾರಿಕೇರ	೪೮	ಕೂಲಿ	ಅನಕ್ಷರಸ್ಥರು
ನೀಲವ್ವ ಮಲ್ಲಪ್ಪ	೪೩	,,	,,
ಶಿವಮ್ಮ ಉಡುಚಪ್ಪ	೫೮	,,	,,
	ಕುಂದಗೋಳ (ತಾ) ಧಾರವಾಡ(ಜಿ)		
ಶಂಕ್ರಮ್ಮ ರಾಮಪ್ಪ ದಿವಟರ	೬೦	,,	,,
ಮಹದೇವಿ ಅಡಿವೆಪ್ಪ ಸುಣ್ಣಗಾರ್	೨೭	,,	,,
ಸಾವಿತ್ರಿ	೧೯	,,	ಎಸ್.ಎಸ್.ಎಲ್.ಸಿ
ಕಮಲವ್ವ ಬಸಪ್ಪ	೩೮	,,	ಅನಕ್ಷರಸ್ತರು
ಯಲ್ಲಪ್ಪ ಭೀಮ್‌ಶಿ	೪೩	,,	,,
	ಅದರಗುಂಚಿ, ಹುಬ್ಬಳ್ಳಿ (ತಾ) ಧಾರವಾಡ (ಜಿ)		
ನಾಗವ್ವ ಮರ್ತ್ಯಪ್ಪ ಬಾರಿಕೇರ	೪೩	ಕೂಲಿ	,,
ದೊಡ್ಡಮ್ಮ ದೊಡ್ಡೇಶಪ್ಪ	೫೩	,,	,,
ಅನಸೂಯ ಅಡಿವೆಪ್ಪ	೩೧	,,	,,
	ಸಲುಕಿನ ಕೊಪ್ಪ, ಧಾರವಾಡ (ತಾ.ಜಿ)		
ರುಕ್ಮವ್ವ ಬಾರಿಕೇರ	೩೪	,,	,,
ನಿಂಗವ್ವ	೪೬	,,	,,

ವಕ್ತೃಗಳ ಹೆಸರು	ವಯಸ್ಸು	ವೃತ್ತಿ	ವಿದ್ಯಾಭ್ಯಾಸ
ಮಲ್ಲವ್ವ	೫೩	,,	,,
	ಕಿತ್ತೂರು, ಬೈಲಹೊಂಗಲ(ತಾ) ಬೆಳಗಾವಿ ಜಿಲ್ಲೆ.		
ಗಂಗವ್ವ ಮಹದೇವಪ್ಪ	೪೭	ಸುಣ್ಣಗಾರಿಕೆ	ಅನಕ್ಷರಸ್ತರು
ಮಲ್ಲವ್ವ ಬಸಪ್ಪ ಕಕ್ಕೇರಿ	೪೭	,,	,,
ಗಂಗವ್ವ ಬಿಟ್ಟಪ್ಪ ಸುಣ್ಣಗಾರ್	೪೨	,,	,,
ಗಂಗವ್ವ ಬಸಪ್ಪ	೪೦	,,	,,
	ಗಂದಿಗವಾಡ, ಖಾನಪುರ(ತಾ) ಬೆಳಗಾವಿ(ಜಿ)		
ರುದ್ರವ್ವ ಮಾರುತಿ	೪೭	ಸುಣ್ಣಗಾರಿಕೆ	ಅನಕ್ಷರಸ್ಥರು
ಕಾಶವ್ವ ಹನುಮಂತಪ್ಪ	೪೫	,,	,,
ಶಾಂತವ್ವ ರಾಯಪ್ಪ	೫೨	,,	,,
ಭೀಮವ್ವ ಭಗವಂತ	೪೭	,,	,,
ಬಸವ್ವ ಭೀಮಪ್ಪ	೬೦	,,	,,
	ಬೈಲಹೊಂಗಲ		
ಸಂಗವ್ವ ಶಂಕ್ರಪ್ಪ	೪೭	ವ್ಯವಸಾಯ	೪ನೇ ತರಗತಿ
ಸೋಮವ್ವಸಿದ್ದಿಗಪ್ಪಕೋಲ್ಕಾರ	೫೦	,,	,,
ಕಾಶವ್ವ ತಿಪ್ಪಣ್ಣರಾಜೇಂದ್ರ ಕೋಲ್ಕಾರ	೫೦	,,	,,
ನಿಂಗವ್ವ ನಾಗಪ್ಪ ಕೋಲ್ಕಾರ	೬೨	,,	,,
	ಮರಕುಂಬಿ, ಸೌಂದತ್ತಿ (ತಾ)		
ನಾಗವ್ವ ಪೂಜಾರಿ	೫೭	ವ್ಯವಸಾಯ	೩ನೇ ತರಗತಿ
ಶಾಂತವ್ವ ಪೂಜಾರಿ	೪೭	ವ್ಯವಸಾಯ	ಅನಕ್ಷರಸ್ತರು
ಫಕೀರವ್ವ ಪೂಜಾರಿ	೬೨	,,	೪ನೇ ತರಗತಿ
ಫಕೀರವ್ವ ಪೂಜಾರಿ	೪೭	,,	ಅನಕ್ಷರಸ್ತರು
ಸಾವಮ್ಮ ಕಲ್ಲಪ್ಪ	೧೭	,,	,,
	ಮುಳ್ಳೂರ, ರಾಮದುರ್ಗ(ತಾ) ಬೆಳಗಾವಿ(ಜಿ)		
ದೊಡ್ಡಹನುಮವ್ವ ತಳವಾರ	೭೮	ವ್ಯವಸಾಯ	,,

ವಕ್ತೃಗಳ ಹೆಸರು	ವಯಸ್ಸು	ವೃತ್ತಿ	ವಿದ್ಯಾಭ್ಯಾಸ
ಯಲ್ಲವ್ವ ತಳವಾರ	೭೮	,,	,,
ಪಾರವ್ವ	೪೮	,,	,,
ಶಾಂತವ್ವ	೬೩	,,	,,
ಶೈಲ	೪೩	,,	,,
ಸಣ್ಣಹನುಮವ್ವ ತಳವಾರ (ರೋಡಿಕೊಪ್ಪ)	೪೬	,,	,,
		ಲೋಕಾಪುರ ಮುಧೋಳ(ತಾ)	
ಹನುಮವ್ವ ವಿಠ್ಠಲ	೫೩	ವ್ಯವಸಾಯ	ಅನಕ್ಷರಸ್ತರು
ಮುಗುತಾಬಾಯಿ ವೆಂಕಣ್ಣ	೬೮	,,	,,
		ಕೆರೂರ, ಬದಾಮಿ(ತಾ) ಬಾಗಲಕೋಟೆ(ಜಿ)	
ರುಕ್ಮವ್ವ ಫಕೀರವ್ವ ಅಂಬಿಗೇರ	೪೮	ವ್ಯವಸಾಯ	ಅನಕ್ಷರಸ್ತರು
ಭರಮವ್ವ ಶಿವಲಿಂಗಪ್ಪ	೪೮	ವ್ಯವಸಾಯ	ಅನಕ್ಷರಸ್ತರು
ಶಿವಗಂಗವ್ವ ಶಿವಪ್ಪ	೪೩	,,	,,
ನಿಂಗವ್ವ ಯಲ್ಲಪ್ಪ	೬೩	,,	,,
ಗೌರವ್ವ ದ್ಯಾವಪ್ಪ	೭೦(೭೩)	,,	,,
ಮಲ್ಲವ್ವ ಮಲ್ಲಪ್ಪ	೭೩	,,	,,
ಯಮುನವ್ವ ಭರ್ಮಪ್ಪ	೩೬	,,	,,
		ಬದಾಮಿ	
ಅನಸೂಯ ಕ್ಯಾನಪ್ಪಬಾರಿಕೇರ	೪೩	ಕೂಲಿ	೭ನೇ ತರಗತಿ
ಸರಸ್ವತವ್ವ ಬಾಳಪ್ಪ	೪೩	,,	೫ನೇ ತರಗತಿ
ರತ್ನವ್ವ ಕ್ಯಾನಪ್ಪ	೩೩	,,	೫ನೇ ತರಗತಿ
ಶಾರದವ್ವ ಬಾಳಪ್ಪ	೪೩	,,	ಅನಕ್ಷರಸ್ತರು
		ಕಮತಗಿ, ಹುನುಗುಂದ(ತಾ)	
ಶಂಕ್ರವ್ವ ಚಂದಪ್ಪ ಬಾರಿಕೇರ	೪೩	ವ್ಯವಸಾಯ	ಅನಕ್ಷರಸ್ಥರು
ಬಸವ್ವ ನಾಗಪ್ಪ	೭೩	,,	,,

ವಕ್ತೃಗಳ ಹೆಸರು	ವಯಸ್ಸು	ವೃತ್ತಿ	ವಿದ್ಯಾಭ್ಯಾಸ
ನಾಗಮ್ಮ ಅಡಿವೆಪ್ಪ	೭೮	,,	,,
ಮಲ್ಲಮ್ಮ ರಂಗಪ್ಪ	೪೩	,,	,,
ರಾಮವ್ವ ರಂಗಪ್ಪ	೫೩	,,	,,
	ಅಮ್ಮಿನಗಡ		
ಸಂಗವ್ವ ಬಾರಿಕೇರ	೬೮	ವ್ಯವಸಾಯ	ಅನಕ್ಷರಸ್ತರು
ಯಲ್ಲವ್ವ	೬೮	,,	,,
ಪಾರ್ವತವ್ವ	೬೮	,,	,,
	ಸುಳೆಬಾವಿ		
ನಿಂಬವ್ವ ಅಂಬಿಗೇರ	೫೮	ವ್ಯವಸಾಯ	ಅನಕ್ಷರಸ್ತರು
ರೇಣಕ್ಕ ದ್ಯಾಮಣ್ಣ ಅಂಬಿಗೇರ	೪೩	,,	,,
ಮಂಗಳವ್ವ ಅರವಿಂದಪ್ಪ	೫೦	,,	,,
ಗುಂಡವ್ವ ಪರಶಪ್ಪ	೩೮	,,	,,
ಶಿರೂರ, ಬೆನಕಟ್ಟಿ			
ಲಕ್ಷ್ಮಿ ಬಾಯಿಮಹದೇವಪ್ಪ ಬಾರಿಕೇರ	೫೮	,,	,,
ಯಲ್ಲವ್ವ ಯಂಕಪ್ಪ	೪೩	,,	,,
ಈರಮ್ಮ ರಾಯಪ್ಪ	೪೩	,,	,,
ಹನುಮವ್ವ ರಾಯಪ್ಪ	೭೩	,,	,,
	ನೆಕ್ರಗುಂದ, ಬೀಳಗಿ (ತಾ)		
ಮಲ್ಲಮ್ಮ ಯಮುನಪ್ಪ ಬಾರಿಕೇರ	೪೧	,,	,,
ಶಾಂತವ್ವ ಲಕ್ಷ್ಮಣ	೩೮	,,	,,
ಸುಮಿತ್ರ ದ್ಯಾಮಣ್ಣ	೩೫	,,	,,
	ಜಮಖಂಡಿ		
ಮಾದೇವಿ ಚನ್ನಪ್ಪಕೋಳಿ ತಳವಾರ	೬೮	,,	,,
ಸತ್ಯಮ್ಮ ಗುಂಡಪ್ಪ ತಳವಾರ	೭೦	,,	,,

ವಕ್ತೃಗಳ ಹೆಸರು	ವಯಸ್ಸು	ವೃತ್ತಿ	ವಿದ್ಯಾಭ್ಯಾಸ
		ಬಿಜಾಪುರ	
ಶಾಂತವ್ವ ಈರಪ್ಪ ಸುಣ್ಣಗಾರ	೬೩	ಕೂಲಿ	,,
ಪಾರವ್ವ ಬಸಪ್ಪ ದಿಂಡ್ವಾರ್	೭೩	,,	,,
ಲಕ್ಷ್ಮೀ ಪರಶುರಾಮ್	೨೧	,,	,,
ಲಲಿತ ಹುಲಿಗೇಂದ್ರ	೩೩	,,	,,
		ಮುದುಬಾವಿ, ಬಿಜಾಪುರ(ತಾ)	
ಸಿದ್ದವ್ವ ನಿಂಗಪ್ಪ ದಳವಾಯಿ	೫೩	ಕೂಲಿ	,,
ಶರಣವ್ವ ಸಿದ್ದಪ್ಪ	೬೩	,,	,,
		ದೇವರ ಹಿಪ್ಪರಗಿ, ಸಿಂದಗಿ(ತಾ), ಬಿಜಾಪುರ(ಜಿ)	
ನೀಲಮ್ಮ ಹೊನ್ನಪ್ಪ ತಳವಾರ	೪೩	ಬೇಸಾಯ	ಅನಕ್ಷರಸ್ತರು
ಶಾರವ್ವ ನಿಂಗಪ್ಪ	೪೩	,,	,,
ಕಸ್ತೂರಿಬಾಯಿ ಮಲ್ಲಪ್ಪ	೪೮	,,	,,
ಸಾತವ್ವ ಭೀಮಣ್ಣ ತಲವಾರ್	೭೩	,,	,,
ರುಕ್ಮವ್ವ ರಾವುತಪ್ಪ ತಳವಾರ್	೭೩	,,	,,
		ಸಾತೀಹಾಳ ಬಾಗೇವಾಡಿ(ತಾ)	
ನೀಲಮ್ಮ ಮಹದೇವಪ್ಪ ಕೋಲ್ಕಾರ	೫೩	ವ್ಯವಸಾಯ	ಅನಕ್ಷರಸ್ತರು
ಸಂಗಮ್ಮ ಕಲ್ಲಪ್ಪ ಅಂಬಿಗೇರ	೩೫	,,	೫ನೇ ತರಗತಿ
ಕಸ್ತೂರಿ ಬಾಯಿಗೊಲ್ಲಾಳ ಹೊಸ್ಮನಿ	೪೮	,,	ಅನಕ್ಷರಸ್ತರು
		ಹೂವಿನ ಹಿಪ್ಪರಿಗಿ	
ದುಂಡವ್ವ ಯಮುನಪ್ಪ ಕೋಲ್ಕಾರ್	೬೩	,,	,,
ಲಕ್ಕವ್ವ ಯಮುನಪ್ಪ	೬೫	,,	,,
ಲಲಿತವ್ವ ಶಿವಣ್ಣ	೪೩	,,	,,
		ಸಾತೀಹಾಳ ಬಾಗೇವಾಡಿ (ತಾ)	
ನೀಲಮ್ಮ ಮಹದೇವಪ್ಪ ಕೋಲ್ಕಾರ	೫೩	ವ್ಯವಸಾಯ	ಅನಕ್ಷರಸ್ತರು
ಸಂಗಮ್ಮ ಕಲ್ಲಪ್ಪ ಅಂಬಿಗೇರ	೩೫	ವ್ಯವಸಾಯ	೫ನೇ ತರಗತಿ

ಕಸ್ತೂರಿಬಾಯಿ ಗೊಲ್ಲಾಳ ಹೊಸ್ಮನಿ	೪೮	ವ್ಯವಸಾಯ	ಅನಕ್ಷರಸ್ತರು

ಹೂವಿನ ಹಿಪ್ಪರಗಿ

ದುಂಡವ್ವ ಯಮುನಪ್ಪ ಕೋಲ್ಕಾರ	೬೩	ವ್ಯವಸಾಯ	ಅನಕ್ಷರಸ್ತರು
ಲಕ್ಕವ್ವ ಯಮುನಪ್ಪ ಕೋಲ್ಕಾರ	೬೫	ವ್ಯವಸಾಯ	೫ನೇ ತರಗತಿ
ಲಲಿತವ್ವ ಶಿವಣ್ಣ	೪೩	ವ್ಯವಸಾಯ	ಅನಕ್ಷರಸ್ತರು

೩. ಗ್ರಂಥಋಣ

೧. ಅಂಬಳಿಕೆ ಹಿರಿಯಣ್ಣ, 'ಜಾನಪದ ಪ್ರಕ್ರಿಯೆ : ಹಾಂಕೊದೃಷ್ಟಿ', ೨೦೦೦, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

೨. ತೀ.ನಂ.ಶಂಕರನಾರಾಯಣ (ಸಂ) 'ಜಾನಪದ ಮೈಲಿಕಲ್ಲುಗಳು' ೧೯೭೦ ತೀ.ನಂ.ಶ್ರೀ. ಸ್ಮಾರಕ ಪ್ರಕಾಶನ ಮೈಸೂರು

೩. ಎಚ್.ಜೆ.ಲಕ್ಕಪ್ಪಗೌಡ (ಪ್ರ.ಸಂ) ಬಸವರಾಜ ನೆಲ್ಲಿಸರ 'ಮಲ್ಲಿಗೆ ಮೊಗ್ಗು ಸುರಿದಾವೆ' ೧೯೯೩ ಚೈತ್ರಶ್ರೀ ಪ್ರಕಾಶನ, ತರೀಕೆರೆ ಚಿಕ್ಕಮಗಳೂರು(ಜಿ)

೪. ಎಂ.ಎಂ.ಕಲಬುರ್ಗಿ(ಸಂ) ಮಾರ್ಗ-೨, ೧೯೯೫, ಕರ್ನಾಟಕ ಬುಕ್ ಏಜೆನ್ಸಿ, ಗಾಂಧಿನಗರ, ಬೆಂಗಳೂರು

೫ ಶಾಂತಾದೇವಿ ಮಾಳವಾಡ, 'ಜಾನಪದ ಸಾಹಿತ್ಯದಲ್ಲಿ ಶರಣರು' ೨೦೦೦, ಕದಳಿ ಮಹಿಳಾ ವೇದಿಕೆ, ಬೆಂಗಳೂರು

೬. ಆರ್.ಎನ್.ನಾಯಕ್, 'ಜಾನಪದ ಸಿಂಹಾವಲೋಕನ', ೧೯೮೫, ಜಾನಪದ ಪ್ರಕಾಶನ, ಹೊನ್ನಾವರ (ಉ.ಕ)

೭. ಬರಗೂರು ರಾಮಚಂದ್ರಪ್ಪ, 'ಸಂಸ್ಕೃತಿ ಉಪಸಂಸ್ಕೃತಿ' ೧೯೯೪, ಭೂಮಿ ಬಳಗ ಮೈಸೂರು

೮. ದೇ.ಜವರೇಗೌಡ 'ಜಾನಪದ ಅಧ್ಯಯನ' ೧೯೯೧, ಚೇತನ ಬುಕ್ ಹೌಸ್ ಮೈಸೂರು -೨೮

೯. ನಂ. ತಪಸ್ವೀಕುಮಾರ್, ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ, ಪಿಎಚ್.ಡಿ. ಪ್ರಬಂಧ (ಪ್ರಕಟಿತ) ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೦. ಜೀ.ಶಂ. ಪರಮಶಿವಯ್ಯ, 'ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು', ಪಿಎಚ್.ಡಿ. ಪ್ರಬಂಧ (ಪ್ರಕಟಿತ), ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೧೧. ಬಸವರಾಜ ಸಬರದ, 'ಹೊಸದಿಕ್ಕು', ೧೯೯೦, ಪಲ್ಲವಿ ಪ್ರಕಾಶನ ಬೀದರ್

೧೨. ಹಾ.ಮ.ನಾಯಕ ಜಾನಪದ ಸ್ವರೂಪ ಮತ್ತು ಸಾಹಿತ್ಯ

೧೩. ಜೀ.ಶಂ.ಪರಮಶಿವಯ್ಯ 'ಜಾನಪದ ಸಾಹಿತ್ಯ ಸಮೀಕ್ಷೆ', ೧೯೭೭ ಮೋಹನ ಪ್ರಕಾಶನ, ಮೈಸೂರು.

೧೪. ಅಂಬಳಿಕೆ ಹಿರಿಯಣ್ಣ 'ಜಾನಪದ ಕೆಲವು ವಿಚಾರಗಳು' ೧೯೮೪, ಪ್ರಜ್ವಲ ಪ್ರಕಾಶನ ಮೈಸೂರು.

೧೫. ಶಾಂತಾದೇವಿ ಮಾಳವಾಡ, 'ಜಾನಪದ ಸಾಹಿತ್ಯದಲ್ಲಿ ಶರಣರು', ಕದಳಿ ಮಹಿಳಾ ವೇದಿಕೆ, ಬೆಂಗಳೂರು

೧೬. ಸಂಸ್ಕೃತಿ ಉಪಸಂಸ್ಕೃತಿ

೧೭. ಕಾಳೇಗೌಡ ನಾಗವಾರ, 'ಕಾಡುಗೊಲ್ಲರ ಜಾನಪದ ಒಂದು ಅಧ್ಯಯನ', ಪಿಎಚ್.ಡಿ. ಪ್ರಬಂಧ (ಅಪ್ರಕಟಿತ)

೧೮. ಅಂಬಳಿಕೆ ಹಿರಿಯಣ್ಣ, ಸೈದ್ಧಾಂತಿಕ ಜಾನಪದ, ೧೯೯೨, ಪ್ರಜ್ವಲ ಪ್ರಕಾಶನ ಮೈಸೂರು

೧೯. ಆರ್.ಸುನಂದಮ್ಮ, 'ದಾಸಸಾಹಿತ್ಯದಲ್ಲಿ ಜಾನಪದ ಅಂಶಗಳು ಒಂದು ಅಧ್ಯಯನ, ೧೯೯೪, ಲಾವಣ್ಯ ಮುದ್ರಣ, ಬನಶಂಕರಿ ೧ನೆಯ ಹಂತ ಬೆಂಗಳೂರು-೫೦

೨೦. ಜಿ.ಎಸ್ .ಭಟ್ಟ(ಸಂ) 'ಜಾನಪದ' ೧೯೯೧, ಕಲ್ಯಾಣ ಕರ್ನಾಟಕ ಜನಪದ ಸಾಹಿತ್ಯ, ಡಾ.ಬಸವರಾಜ ಸಬರದ

೨೧. ವಿವಿಧ ಲೇಖಕರು ಕನ್ನಡ ಶಿಷ್ಟ ಸಾಹಿತ್ಯದಲ್ಲಿ ಜಾನಪದ, ೧೯೯೩, ಕನ್ನಡ ಸಾಹಿತ್ಯ ಪರಿಷತ್ತು

೨೨. ಮಂದಾಕಿನಿ ಭೀಮ್ ಸೇನರಾವ್ ತವಗ 'ಕನ್ನಡ ಮಹಾಕಾವ್ಯಗಳಲ್ಲಿ ಸೀತೆ ಪಾತ್ರ', ೧೯೯೫, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

೨೩. ಸಿ.ಕೆ.ನಾವಲಗಿ, ವಚನಸಾಹಿತ್ಯದಲ್ಲಿ ಜಾನಪದ ಅಂಶಗಳು, ೨೦೦೦, ಜ್ಞಾನೋದಯ ಪ್ರಕಾಶನ ಬೆಂಗಳೂರು.

೨೪. ಆರ್ವಿಯಸ್ ಸುಂದರಂ, 'ಜನಪದ ಸಾಹಿತ್ಯದ ಮೂಲಭೂತತತ್ವಗಳು' ೧೯೭೬, ಅರ್ಕಾವತಿ ಪ್ರಕಾಶನ, ಮೈಸೂರು.

೨೫. ಬಿ.ಎಂ.ಶ್ರೀಕಂಠಯ್ಯ, ಕನ್ನಡ ಕೈಪಿಡಿ, ಸಂಪುಟ ೨, ೧೯೭೦, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ.

೨೬. ದೇ.ಜವರೇಗೌಡ, ಕನ್ನಡ ನುಡಿ, ಜೂನ್ ೧೬, ೧೯೭೭

೨೭. ನಿಂಗಣ್ಣ ಸಣ್ಣಕ್ಕಿ, 'ಗೊಂದಲಿಗರ ಸಂಸ್ಕೃತಿ' ೧೯೯೩ ಉಪಸಂಸ್ಕೃತಿ ಅಧ್ಯಯನ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.

೨೮. ಎಂ.ಎಸ್.ಸುಂಕಾಪುರ(ಸಂ) ಜಾನಪದ ಸಾಹಿತ್ಯದರ್ಶನ ಭಾಗ ೨, ೧೯೬೩ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೨೯. ಸಣ್ಣರಾಮ, **'ಲಂಬಾಣಿ ಸಂಸ್ಕೃತಿ',** ೧೯೯೫, ಕುವೆಂಪು ವಿಶ್ವವಿದ್ಯಾಲಯ, ಪಿ.ಎಚ್ .ಡಿ. ಪ್ರಬಂಧ

೩೦. ಪುರುಷೋತ್ತಮ ಬಿಳಿಮಲೆ, **ಕೂಡುಕಟ್ಟು,** ೧೯೯೭, ಆನಂದಕಂದ ಗ್ರಂಥಮಾಲೆ ಮಲ್ಲಾಡಿಹಳ್ಳಿ

೩೧. **ಕನ್ನಡ ರತ್ನಕೋಶ,** ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು, ೧೯೯೩

೩೨. ಎಸ್.ಎಸ್.ಭದ್ರಾಪೂರ, **ಜಾನಪದ ಸಾಹಿತ್ಯ ದರ್ಶನ** ೧೦, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೩೩. ಎಚ್.ಜೆ.ಲಕ್ಕಪ್ಪಗೌಡ(ಪ್ರ.ಸಂ), ಪುರುಷೋತ್ತಮ ಬಿಳಿಮಲೆ (ಪ,ಸಂ) **'ಜಾನಪದ ಕೈಪಿಡಿ'** ೧೯೯೭, ಪುಸ್ತಕ ಪ್ರಾಧಿಕಾರ ಬೆಂಗಳೂರು.

೩೪. ಎಂ.ಚಿದಾನಂದಮೂರ್ತಿ, **'ಗ್ರಾಮೀಣ'** ೧೯೭೭ ಬಾಪ್ಕೋ ಪ್ರಕಾಶನ, ಬೆಂಗಳೂರು ೧೮

೩೫. ಹಿ.ಚಿ.ಬೋರಲಿಂಗಯ್ಯ, ಎ.ಎಸ್.ಪ್ರಭಾಕರ(ಸಂ) ಬುಡಕಟ್ಟು ಅಧ್ಯಯನ ೨೦೦೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೩೬. ಎಂ.ಚಿದಾನಂದಮೂರ್ತಿ **'ಸಾಧನೆ',** ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೩೭. ಎ.ಎಸ್.ಪ್ರಭಾಕರ, **'ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು'** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

೩೮. ಎಸ್.ಎಸ್.ಹಿರೇಮಠ **'ಜಾತ್ರೆಗಳು'** ೧೯೯೩, ಸಮತಾ ಪ್ರಕಾಶನ ಹೊಸಪೇಟೆ

೩೯. ಎಂ.ಜಿ.ಈಶ್ವರಪ್ಪ, **'ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ',** ೧೯೯೫, ಕನ್ನಡ ಸಾಹಿತ್ಯ ಪರಿಷತ್ತು.

೪೦. ಸಿ.ಕೆ.ಕುಮುದಿನಿ (ಅನು) **ಪ್ರಾಚೀನ ಭಾರತದಲ್ಲಿ ಬೇಸಾಯ,** ೧೯೮೭

೪೧. ಬಿ.ಎಸ್.ಗದ್ದಗಿಮಠ, **'ಕನ್ನಡ ಜಾನಪದ ಗೀತೆಗಳು,** ೧೯೬೮, ಪಿಎಚ್.ಡಿ.ಮಹಾಪ್ರಬಂಧ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪೨. ಬಿ.ಎಸ್.ಗದ್ದಗಿಮಠ, **ಗದ್ದಗಿ ಮಠರ ಬರಹಗಳು,** ೧೯೮೮, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೪೩. ಆರ್ವಿಯಸ್ ಸುಂದರಂ (ಅನು) ಆಂಧ್ರ ಪ್ರದೇಶದ ಜಾನಪದ ೧೯೮೭ (ಮೂಲ ರಾಮರಾಜು) ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ಹೊಸದೆಹಲಿ

೪೪. ಕವಲಿ ಜೆ.ಎ., **ಭಾರತೀಯ ಹಬ್ಬಗಳು,** ೧೯೬೧, ರಾಮಾಶ್ರಯ ಬುಕ್ ಡಿಪೋ, ಧಾರವಾಡ.

೪೫. ಕ್ಯಾತನಹಳ್ಳಿ ರಾಮಣ್ಣ **'ಜಾನಪದ ವಿಹಾರ ಸಂಪುಟ ಎರಡು'** ೧೯೮೫, ದಿನಕರ ಪ್ರಕಾಶನ,

ಬನಶಂಕರಿ ಬೆಂಗಳೂರು ೮೫

೪೬. ಕೆರಿಮನಿ ಸಿ.ವಿ. ಭಾರತೀಯ ಹಬ್ಬಗಳು ೧೯೭೧, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

೪೭. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಹಳ್ಳಿಯ ಹಾಡುಗಳು ೧೯೭೩, ಶಾರದಾ ಮಂದಿರ, ಮೈಸೂರು

೪೮. ಗೋರೂರು ರಾಮಸ್ವಾಮಿ ಅಯ್ಯಂಗಾರ್, ಹಳ್ಳಿಯ ಬಾಳು ೧೯೪೩, ಕಾವ್ಯಾಲಯ, ಮೈಸೂರು

೪೯. ಗೊ.ರು.ಚನ್ನಬಸಪ್ಪ, ಹೊನ್ನಬಿತ್ತೇವ ಹೊಲಕೆಲ್ಲ, ೧೯೬೭, ಜನಪದ ಸಾಹಿತ್ಯ ಸಮ್ಮೇಳನ ತರೀಕೆರೆ

೫೦. ಚಂದ್ರಶೇಖರ ಕಂಬಾರ "ದೇಶೀಯ ಚಿಂತನ", ೨೦೦೪, ಅಂಕಿತ ಪುಸ್ತಕ ಬಸವನಗುಡಿ, ಬೆಂಗಳೂರು

೫೧. ಚಲುವೇಗೌಡ ತ.ಚಿ, 'ಕೆಲವು ಜನಪದ ಸಂಪ್ರದಾಯಗಳು', ೧೯೭೮, ತಳಗವಾದಿ ಪ್ರಕಾಶನ ತೊಣಚಿಕೊಪ್ಪಲು ಮೈಸೂರು.

೫೨. ರಂಗಸ್ವಾಮಿ, ಡಿ.ಟಿ., ಭಾರತದ ಹಬ್ಬಹರಿದಿನಗಳು, ೧೯೬೧, ಹೊರಕೆರೆ ದೇವರಪುರ

೫೩. ಜಿ.ಎಸ್.ಶಿವರುದ್ರಪ್ಪ(ಸಂ), ಕರ್ನಾಟಕ ಜಾನಪದ ೧೯೮೧, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ

English Books

1. Ananth Krishna Iyer K. and Nanjundaiah H.V., **The Mysore Tribes and Castes,** University of Mysore, Mysore

2. Arnold, Mathew, **Culture and anarchy,** Cambridge University Press, London, 1869

3. Abbe J.A.Dubois, **Hindu Customs and Ceremonies,** Clarendon Press, Oxford

4. Frazer J.G., **Golden Bough,** MacMillian & Co. Ltd, London Part V, Vol.I and II

5. Beals & Hoijer, **An Introduction to Anthropology,** The MacMillian Company, Newyork

6. Krapee Alexandar H., **The Science of Folklore,** Methuen and Co. Ltd, London, 1965

7. Richard M. Dorson(Ed), **Peasant Customs and Savage Myths,** 2 Vols, R & Paul, London, 1968

8. Thompson Stith, **Motiff Index of Folk Literature,** 6 Vols, Indian University press, Bhoomington, 1955



ಕುಂಬಾರನು ಜೋಕುಮಾರನನ್ನು ತಯಾರಿಸುತ್ತಿರುವುದು (ಲಕ್ಷ್ಮೇ





ತಯಾರಾಗಿರುವ ಜೋಕುಮಾರನ ಮೂರ್ತಿಗಳು.



ಜೋಕುಮಾರನನ್ನು ಹೊತ್ತ ಮಹಿಳೆಗೆ ನೀರು ಹಾಕುತ್ತಿರುವುದು.



ಜೋಕುಮಾರನನ್ನು ಹೊತ್ತ ಮಹಿಳೆಗೆ ನೀರು ಹಾಕುತ್ತಿರುವುದು (ಶಿರಹಟ್ಟಿ)





ಜೋಕುಮಾರನಿಗೆ ಪೂಜೆ ಮಾಡುತ್ತಿರುವ ಮಹಿಳೆಯರು.



ದವಸ- ಧಾನ್ಯಗಳನ್ನು ಹಂಚಿಕೊಳ್ಳುತ್ತಿರುವುದು.



ಗಂಡಿಗವಾಡ (ಖಾನಾಪುರ ತಾ.) ಜೋಕುಮಾರನ ಮೂರ್ತಿ



ಜೋಕುಮಾರನನ್ನ ಹೊರುವ ಮಹಿಳೆಯರು



ಜೋಕುಮಾರ, ಬೈಲಹೊಂಗಲ ಬೆಳಗಾವಿ ಜಿಲ್ಲೆ



ರೈತರಿಗೆ ನೀಡಿರುವ ಕಪ್ಪು– ಬೇಟಿನ ಎಲೆ





ಪ್ರತಿ ಮನೆ ಮನೆಗೂ ಜೋಕುಮಾರನನ್ನ ಹೊತ್ತೊಯ್ಯುತ್ತಿರುವ ಮಹಿಳೆಯರು (ಹೂವಿನ ಹಿಪ್ಪರಗಿ, ಸಿಂದಗಿ ತಾ.)



ರೈತರು ನೀಡಿರುವ ದವಸ-ಧಾನ್ಯಗಳು (ದೇವರ ಹಿಪ್ಪರಗಿ, ಸಿಂದಗಿ ತಾ.)



ಜೋಕುಮಾರ. ಕೆರೂರ, ಬದಾಮಿ (ತಾ)